ISSN 2321 - 3590

# ಇತಿಹಾಸ ದರ್ಪಣ

(ತ್ರೈಮಾಸಿಕ)

ಕನ್ನಡದ ಹೆಮ್ಮೆಯ ಇತಿಹಾಸ ಸಂಶೋಧನ ನಿಯತಕಾಲಿಕೆ

ಪುಸ್ತಕ 33–34 (ಸಂಯುಕ್ತ ಸಂಚಿಕೆ)
ಏಪ್ರಿಲ್ 2017 – ಸೆಪ್ಟೆಂಬರ್ 2017



# Itihasa Darpana (Kannada Quarterly)

*A Peer Reviewed Journal of Historical Research in Kannada*

Book 33-34 (Combined Issue)
April 2017 - September 2017

ISSN 2321 - 3590

ಕನ್ನಡದ ಹೆಮ್ಮೆಯ ಇತಿಹಾಸ ಸಂಶೋಧನ ನಿಯತಕಾಲಿಕೆ

# ಇತಿಹಾಸ ದರ್ಪಣ

(ತ್ರೈಮಾಸಿಕ)

A Peer Reviewed Journal of
Historical Research in Kannada

ಇತಿಹಾಸ ದರ್ಪಣ
(ತ್ರೈಮಾಸಿಕ)

ಪುಸ್ತಕ ೩೩–೩೪
(ಸಂಯುಕ್ತ ಸಂಚಿಕೆ)

ಏಪ್ರಿಲ್ – ಸೆಪ್ಟೆಂಬರ್ ೨೦೧೭

Itihasa Darpana
(Kannada Quarterly)

Book 33-34
(Combined Issue)

April - September 2017

ಸಂಪಾದಕರು
**ಹಂ.ಗು. ರಾಜೇಶ್**
**ಮೊ: ೭೮೨೯೪ ೦೪೦೬೩**

ಉಪ ಸಂಪಾದಕರು
**ಸುಂಕಂ ಗೋವರ್ಧನ**
**ರಶ್ಮಿ ಎಸ್.**
**ಶಿವಕುಮಾರಿ ಎಂ.ಎಸ್.**

ಪುಸ್ತಕ ವಿನ್ಯಾಸ
**ಶ್ವೇತ ಬಿ.ಎಸ್.**

Editor
**H.G. Rajesh**
Mob: 78294 04063

Sub Editors
**Sunkam Govardhan**
**Rashmi S.**
**Shivakumari M.S.**

ಓದುಗರ ಸಲಹೆ–ಸೂಚನೆಗಳನ್ನು 'ಇತಿಹಾಸ ದರ್ಪಣ'ವು ಮುಕ್ತವಾಗಿ ಸ್ವಾಗತಿಸುತ್ತದೆ.

***E-mail: itihasadarpana@gmail.com***

ಲೇಖನಗಳಲ್ಲಿ ವ್ಯಕ್ತವಾಗಿರುವ ಅಭಿಪ್ರಾಯಗಳು ಲೇಖಕರ ಅಭಿಪ್ರಾಯಗಳೇ ವಿನಃ ಪತ್ರಿಕೆಯ ಅಭಿಪ್ರಾಯವಲ್ಲ. –ಸಂ.

**"THE PUBLICATION OF THIS JOURNAL HAS BEEN FINANCIALLY SUPPORTED BY THE INDIAN COUNCIL OF HISTORICAL RESEARCH. THE RESPONSIBILITY FOR THE FACTS STATED ON OPINIONS EXPRESSED IS ENTIRELY OF THE AUTHOR AND NOT OF THE I.C.H.R."**

## ಪರಿವಿಡಿ. . .


1. ನುಡಿಗನ್ನಡಿ
– **ಹಂ.ಗು. ರಾಜೇಶ್ / 5**

2. ಗುಡೇಕೋಟೆ ಪರಿಸರದ ನವಶೋಧಿತ ಪ್ರಾಗಿತಿಹಾಸ ಕಾಲದ ವರ್ಣಚಿತ್ರಗಳು
– **ಮಂಜನಾಯ್ಕ ಆರ್. / 9**

3. ಬಾಹುಬಲಿಯ ಜೀವನ ಚರಿತ್ರೆ
– **ಅಪ್ಪಣ್ಣ ಎನ್. ಹಂಜೆ / 15**

4. ಕರ್ನಾಟಕದ ಜೈನಧರ್ಮದಲ್ಲಿ ಸಾಮರಸ್ಯ ಮತ್ತು ಕೆಲವು ವಿರಸ ಸನ್ನಿವೇಶಗಳು : ಒಂದು ವಿವೇಚನೆ
– **ಪಿ.ವಿ. ಕೃಷ್ಣಮೂರ್ತಿ / 33**

5. ಹತ್ತನೆಯ ಶತಮಾನದ ಕನ್ನಡ–ತೆಲುಗು ದ್ವಿಭಾಷಿಕ ಶಾಸನಗಳ ಸ್ವರೂಪ
– **ಮಂಜುನಾಥ ಟಿ / 41**

6. ಜಿನಧರ್ಮ ಪೋಷಕರಾದ ಅಂಬ್ವಣಶ್ರೇಷ್ಠಿಯ ಮನೆತನ
– **ಗಂಗಾಂಬಿಕೆ ಎಸ್. / 55**

7. ಕಾನಿಕಾರನಹಳ್ಳಿಯ ನಾಡಪ್ರಭುಗಳು
– **ಎಸ್.ಹೆಚ್. ಗೋವರ್ಧನ / 63**

8. ರೈತ್‌ವಾರಿ ಪದ್ಧತಿ – ದಕ್ಷಿಣ ಕನ್ನಡದಲ್ಲಿ ಕಂಪೆನಿ ರಾಜ್ ಸ್ಥಾಪನೆ
– **ಸತೀಶಗಟ್ಟಿ / 79**

9. ಕೆನರಾ–ಕೊಡಗು ರೈತ ಬಂಡಾಯ: ಚರಿತ್ರೆಯ ವಿವಿಧ ಒಳನೋಟಗಳು
– **ಪ್ರಭಾಕರ್ ನೀರ್‌ಮಾರ್ಗ / 89**

10. ಕರ್ನಾಟಕ ಏಕೀಕರಣ ಚಳವಳಿಯಲ್ಲಿ ಕಮ್ಯುನಿಸ್ಟರ ಪಾತ್ರ
– **ಪ್ರಕಾಶ್ ಕೆ. / 107**

11. ಗತ ಮತ್ತು ವರ್ತಮಾನವನ್ನು ಜೋಡಿಸುತ್ತಾ
– **ರಣ್‌ಬೀರ್ ಚಕ್ರವರ್ತಿ / ಪ್ರದೀಪ ಕುಮಾರ್ ಶೆಟ್ಟಿ ಕೈಂಚ್ಞೂರ್ / 121**

**ಆಕರ ವಿಭಾಗ**

12. ದೊಡ್ಡಬಳ್ಳಾಪುರ ತಾಲ್ಲೂಕಿನ ಮಾಡೇಶ್ವರ ಗ್ರಾಮದಲ್ಲಿ ದೊರೆತ ಹುಲುಕುಡಿ ನಾಡಪ್ರಭು ಬಯಿರಪ್ಪನಾಯಕರ ಅಪ್ರಕಟಿತ ಶಿಲಾಶಾಸನ
– **ಎಸ್. ವೆಂಕಟೇಶ್ / 141**

13. ಆತ್ಮೋಪದೇಶ ಶತಕ
– **ನಾರಾಯಣ ಗುರು / ವಿನಯ ಚೈತನ್ಯ / 145**

**ಪುಸ್ತಕ ವಿಭಾಗ**

14. ಸೋಮನಾಥ : ರೊಮಿಲಾ ಥಾಪರ್ ಅವರ ವಿಶ್ಲೇಷಣಾ ಕ್ರಮ
– **ಎಂ. ಕೆ. ಮಾಧವಿ / 163**

**ಪ್ರತಿಕ್ರಿಯೆ**

15. ತಾಳಗುಂದದಲ್ಲಿ ದೊರೆತಿರುವ ತುಂಡುತುಕಡಿ (*Mutilated Records*) ಶಾಸನಗಳ ಪಠ್ಯದ ಪುನರಾವಲೋಕನ ಆಗಬೇಕು
– **ಸೀತಾರಾಮ ಜಾಗೀರ್‌ದಾರ್ / 175**

# ‘ಇತಿಹಾಸ ದರ್ಪಣ’ಕ್ಕೆ ಪ್ರಬಂಧವನ್ನು ಕಳುಹಿಸುವ ಮುನ್ನ...

‘ಇತಿಹಾಸ ದರ್ಪಣ’ಕ್ಕೆ ಸಂಶೋಧನ ಪ್ರಬಂಧವನ್ನು ಕಳುಹಿಸುವವರು ಈ ಕೆಳಕಂಡ ಕ್ರಮಗಳನ್ನು ಪಾಲಿಸಬೇಕು.

- ಪ್ರಬಂಧವು ಅಪ್ರಕಟಿತವಾಗಿರಬೇಕು ಮತ್ತು ನವ ಶೋಧನೆ, ವಿನೂತನ ವಿಶ್ಲೇಷಣೆ, ಆಲೋಚನೆ ಹಾಗೂ ಸಂಶೋಧನಾ ವಿಧಾನಗಳಿಂದಾಗಿ ಹೊಸತನದಿಂದ ಕೂಡಿದ ಮತ್ತು ಚರಿತ್ರೆಯ ಅಧ್ಯಯನದ ಮೇಲೆ ಹೊಸ ಬೆಳಕು ಚೆಲ್ಲುವ ಪ್ರಬಂಧವಾಗಿರಬೇಕು.
- ಪ್ರಬಂಧವನ್ನು ‘ನುಡಿ’ ತಂತ್ರಾಂಶದಲ್ಲಿ ಬೆರಳಚ್ಚು ಮಾಡಿ ಇ–ಮೇಲ್ ಮಾಡುವುದು ಹೆಚ್ಚು ಸೂಕ್ತವಾಗಿರುತ್ತದೆ. ಉಲ್ಲೇಖದ ಟಿಪ್ಪಣಿಗಳನ್ನು ಉಲ್ಲೇಖ, ಹೆಚ್ಚಿನ ಮಾಹಿತಿ ಹಾಗೂ ಅಗತ್ಯ ವಿವರಣೆಗಳನ್ನು ಕೊನೆ ಟಿಪ್ಪಣಿಗಳ ರೂಪದಲ್ಲಿ ನೀಡಬೇಕು.
- ಕೊನೆ ಟಿಪ್ಪಣಿಗಳನ್ನು ನೀಡುವಾಗ ಲೇಖಕರ ಹೆಸರು, ಪ್ರಕಟಣಾ ವರ್ಷ, ಕೃತಿಯ ಶೀರ್ಷಿಕೆ (ಇಟ್ಯಾಲಿಕ್‌ನಲ್ಲಿ), ಸ್ಥಳ, ಪ್ರಕಾಶಕರು ಮತ್ತು ಪುಟಗಳ ವಿವರಗಳನ್ನು ಮೊದಲ ಬಾರಿ ನೀಡಬೇಕು. ಪುನರುಕ್ತಗೊಳ್ಳುವಾಗ ಲೇಖಕರ ಹೆಸರು, ವರ್ಷ ಬರೆದು ‘ಪೂರ್ವೋಕ್ತ’ ಎಂದು ಕೃತಿಯ ಹೆಸರ ಸ್ಥಳದಲ್ಲಿ ನಮೂದಿಸಿ ಪುಟಗಳ ಸಂಖ್ಯೆ ಸೂಚಿಸಬೇಕು. ತತ್ಕೂಡಲೇ ಉಲ್ಲೇಖಿಸುವ ಸಂದರ್ಭದಲ್ಲಿ ‘ಇಲ್ಲೇ’ ಎಂದು ನಮೂದಿಸಿ ಪುಟಗಳ ಸಂಖ್ಯೆ ಸೂಚಿಸಬೇಕು.
- ಲೇಖನಗಳನ್ನು ಉಲ್ಲೇಖಿಸುವಾಗ– ಲೇಖಕನ ಹೆಸರು, ಪ್ರಕಟಣಾ ವರ್ಷ, ಲೇಖನದ ಶೀರ್ಷಿಕೆ (‘ ’ ಈ ಚಿಹ್ನೆಯಲ್ಲಿ ಕೊಡುವುದು), ಈ ಲೇಖನ ಪ್ರಕಟವಾದ ನಿಯತಕಾಲಿಕೆ ಹೆಸರು (ಇಟ್ಯಾಲಿಕ್‌ನಲ್ಲಿ), ಸಂಚಿಕೆ, ಸಂಪುಟ, ವರ್ಷ, ಪ್ರಕಟವಾಗುತ್ತಿರುವ ಸ್ಥಳ ಮತ್ತು ಪುಟಗಳ ವಿವರ ಸೂಚಿಸುವುದು.
- ಸಂಪಾದಿತ ಕೃತಿಯಲ್ಲಿನ ಲೇಖನವನ್ನು ಉಲ್ಲೇಖಿಸುವಾಗ– ಲೇಖಕನ ಹೆಸರು, ಪ್ರಕಟಣಾ ವರ್ಷ, ಲೇಖನದ ಶೀರ್ಷಿಕೆ (‘ ’), ಸಂಪಾದಕರ ಹೆಸರು, ಕೃತಿಯ ಶೀರ್ಷಿಕೆ (ಇಟ್ಯಾಲಿಕ್‌ನಲ್ಲಿ), ಸ್ಥಳ, ಪ್ರಕಾಶಕರು, ಪುಟಗಳ ವಿವರ ಸೂಚಿಸುವುದು.
- ಪ್ರಬಂಧಕ್ಕೆ ಪೂರಕವಾದ ಚಿತ್ರಗಳನ್ನು ಕಳುಹಿಸಿಕೊಡಬಹುದು. ಅವುಗಳಿಗೆ ಕಡ್ಡಾಯವಾಗಿ ಚಿತ್ರ ಶೀರ್ಷಿಕೆಗಳನ್ನು ನೀಡಿರಬೇಕು.
- ಇತಿಹಾಸ ದರ್ಪಣ ಚಂದಾದಾರರಾಗಿರುವವರಿಗೆ ಮೊದಲ ಆದ್ಯತೆ.
- ಪ್ರಕಟಣೆಗೆ ಬರುವ ಪ್ರಬಂಧಗಳನ್ನು ಪೂರ್ವಾವಲೋಕನಕ್ಕಾಗಿ ತಜ್ಞರಿಗೆ ಕಳುಹಿಸಿ ಕೊಡಲಾಗುವುದು. ಆಯ್ಕೆಯಾದ ಪ್ರಬಂಧಗಳನ್ನು ಪ್ರಕಟಣಾ ಪೂರ್ವದಲ್ಲಿಯೇ ಲೇಖಕರಿಗೆ ತಿಳಿಸಲಾಗುವುದು.
- ಪ್ರಕಟವಾದ ಪ್ರಬಂಧಗಳಿಗೆ ಯಾವುದೇ ಸಂಭಾವನೆಯನ್ನು ನೀಡಲಾಗುವುದಿಲ್ಲ ಮತ್ತು ತಾವು ಕಳುಹಿಸಿಕೊಟ್ಟ ಲೇಖನ ಸಂಬಂಧ ಯಾವುದೇ ಪತ್ರ ವ್ಯವಹಾರ ಮತ್ತು ದೂರವಾಣಿ ಸಂಭಾಷಣೆಗೆ ಅವಕಾಶವಿರುವುದಿಲ್ಲ.
- ಪ್ರಬಂಧಗಳನ್ನು **‘itihasadarpana@gmail.com’**ಗೆ ಇ–ಮೇಲ್ ಮಾಡುವುದು.

**–ಸಂಪಾದಕರು**

# ನುಡಿಗನ್ನಡಿ

## ಚರಿತ್ರೆಗೆ ಬೇಕಿದೆ ಕಾಯಕಲ್ಪ !

ಚಾರಿತ್ರಿಕ ಅಂಶಗಳಾದ ಐತಿಹಾಸಿಕ ಸ್ಮಾರಕ, ಪುರಾತತ್ತ್ವಿಕ ಅವಶೇಷ, ಪ್ರಾಚೀನ ಕಟ್ಟಡ, ಪುರಾತನ ಭಗ್ನ ಕಲಾಕೃತಿ, ಪ್ರಾಚೀನ ಕಳೆಗುಂದಿದ ಭಿತ್ತಿಚಿತ್ರ ಮುಂತಾದವುಗಳಿಗೆ ಕಾಯಕಲ್ಪ ನೀಡುವುದನ್ನು ಕೇಳಿರುತ್ತೀರಿ. ಆದರೆ ಚರಿತ್ರೆಗೆ ಕಾಯಕಲ್ಪ ಕೊಡುವುದು ಎಂದರೆ ಆಶ್ಚರ್ಯವಾಗಬಹುದಲ್ಲವೆ? ಹೌದು, ಚರಿತ್ರೆಯ ವಿಷಯಕ್ಕೆ ಕಾಯಕಲ್ಪ ನೀಡಬೇಕಾದ ಪರಿಸ್ಥಿತಿ ನಿರ್ಮಾಣವಾಗಿ ಬಹುದಿನಗಳೇ ಕಳೆದಿವೆ. ಚರಿತ್ರೆಯು ಇಂದು ಬಹು ಅಂಗ ವೈಫಲ್ಯದಿಂದ ತೀವ್ರನಿಗಾ ಘಟಕದ ಶಯ್ಯೆಯಲ್ಲಿ ಆಮ್ಲಜನಕದ ಕವಾಟ ತೊಟ್ಟು ಮಲಗಿದೆ; ತನ್ನ ಕೊನೆಯದಿನಗಳ ಬರುವಿಕೆಗಾಗಿ ಕಾಯುತ್ತಿದೆ, ಎಂದರೆ ಅತಿಶಯೋಕ್ತಿಯಾಗಲಾರದು. ಚರಿತ್ರೆಯ ಹೆಸರಿನಲ್ಲಿ ಅನ್ನ ತಿನ್ನುತ್ತಿರುವ ಎಷ್ಟೋ ಮಂದಿ ಮಕ್ಕಳಿಗೆ ತನ್ನ ತಾಯಿಯ ಚಿಂತಾಜನಕ ಸ್ಥಿತಿಯ ಅರಿವಿಲ್ಲ. ಅಷ್ಟರ ಮಟ್ಟಿಗೆ ಹೃದಯಶೂನ್ಯರಾಗಿದ್ದಾರೆ ಅಥವಾ ಅವಿವೇಕಿಗಳಾಗಿದ್ದಾರೆ. ಅರಿವಿರುವ ಕೆಲವರು ಅಸಹಾಯಕರಾಗಿದ್ದಾರೆ. ಎಲ್ಲೋ ಅಲ್ಲೊಬ್ಬರು ಇಲ್ಲೊಬ್ಬರು ಉಳಿಸಿಕೊಳ್ಳಲೇಬೇಕೆಂಬ ಆಶಾವಾದದ ಕನಸನ್ನು ಹೊತ್ತು ಪರಿತಪಿಸುತ್ತಿದ್ದಾರೆ. ಸಹಜವಾಗಿ, ಇವರಿಗೆ ಉಳಿದವರ ದುರ್ವರ್ತನೆಯ ಬಗೆಗೆ ಸಾತ್ವಿಕ ಕೋಪವಿದೆ. ಇದನ್ನ ಹೊರತು ಬೇರೇನು ಮಾಡುವ ಸ್ಥಿತಿಯಲ್ಲಿಯೂ ಅವರಿಲ್ಲ. ಹೀಗಾಗಿ ಚರಿತ್ರೆಯು ಚರಿತ್ರೆ ಸೇರುವ ದಿನಗಳು ದೂರವಿಲ್ಲ. ಆದರೆ ದೂರವಿಲ್ಲದ ದಿನಗಳನ್ನು ದೂರಕ್ಕೆ ದೂಡುವ ಶಕ್ತಿ ಆಶಾವಾದಿಗಳ ಕೈಯಲ್ಲಿದೆ. ಆ ಮಟ್ಟಿಗೆ ಚರಿತ್ರೆಯೇ ಬದುಕುವ ದಿನಗಳನ್ನು ನವೀಕರಿಸಬಹುದಾಗಿದೆ. ಅದಕ್ಕಾಗಿ ಚರಿತ್ರೆಗೆ ಕಾಯಕಲ್ಪ ಬೇಕಿದೆ.

ಶ್ರದ್ಧೆಯಿಂದ ಚರಿತ್ರೆಯನ್ನು ಕಲಿಯುವವರ ಸಂಖ್ಯೆ ಮತ್ತು ಚರಿತ್ರೆಯನ್ನು ಆಯ್ದುಕೊಳ್ಳುವವರ ಸಂಖ್ಯೆ ದಿನೇ ದಿನೇ ಕ್ಷೀಣಿಸುತ್ತಿದೆ. ಉಪನ್ಯಾಸಕ ಮಿತ್ರರೊಬ್ಬರು ಹೇಳುವ ಪ್ರಕಾರ ಕಳೆದ ಏಳು ವರ್ಷಗಳ ಹಿಂದೆ ಬೆಂಗಳೂರು ನಗರದಲ್ಲಿ 68,000 ದ್ವಿತೀಯ ಪಿ.ಯು.ಸಿ ಇತಿಹಾಸ ವಿದ್ಯಾರ್ಥಿ/ನಿಗಳಿದ್ದರು. ಈಗ ಅವರ ಸಂಖ್ಯೆ 14,500ಕ್ಕೆ ಕುಸಿದಿದೆ. ಅಂದರೆ ಶೇಕಡಾ 450ಕ್ಕೂ ಅಧಿಕ ಪ್ರಮಾಣದ ಕುಸಿತ ಉಂಟಾಗಿದೆ. ಮುಂದಿನ ದಿನಗಳಲ್ಲಿ ಇದು ಯಾವ ಸ್ಥಿತಿ ತಲುಪಬಹುದು ಯೋಚಿಸಿ.

ಒಂದು ಕಾಲದಲ್ಲಿ ಕೆ.ಎ.ಎಸ್, ಐ.ಎ.ಎಸ್‌ನಂತಹ ಸ್ಪರ್ಧಾತ್ಮಕ ಪರೀಕ್ಷೆಯ ಆಕಾಂಕ್ಷಿಗಳ ಬಹುಯಶಸ್ಸಿನ ವಿಷಯ ಚರಿತ್ರೆಯಾಗಿತ್ತು. ಕಳೆದ ಏಳೆಂಟು ವರ್ಷಗಳಿಂದ ಅದು ಅತ್ಯಂತ ವೈಫಲ್ಯದ ವಿಷಯವಾಗಿದೆ. ಇತಿಹಾಸವನ್ನು ನಂಬಿ ವರ್ಷಗಟ್ಟಲೆ ಶಿಸ್ತಿನಿಂದ ಓದಿದವರ ಕನಸುಗಳೂ ಇಂದು ಭಗ್ನಗೊಳ್ಳುತ್ತಿವೆ. ಬದಲಿಗೆ ಕನ್ನಡ, ಉರ್ದು, ಗ್ರಾಮೀಣ

ಅಭಿವೃದ್ಧಿ, ಸಾರ್ವಜನಿಕ ಆಡಳಿತ, ತರ್ಕಶಾಸ್ತ್ರ ಇತ್ಯಾದಿಗಳು ಯಶಸ್ವಿ ವಿಷಯಗಳೆನಿಸಿಕೊಂಡಿವೆ. ಅದಕ್ಕೆ ಕಾರಣ ಆ ವಿಷಯಗಳ ಪಠ್ಯಕ್ರಮ ಮತ್ತು ಉದಾರ ಮೌಲ್ಯಮಾಪನ. ಅದಕ್ಕೆ ವ್ಯತಿರಿಕ್ತವಾಗಿ ಇತಿಹಾಸ ವಿಷಯದ ಪಠ್ಯಕ್ರಮ ಅತಿ ವಿಸ್ತಾರವಾಗಿದೆ. ಆದ್ದರಿಂದ ಅದನ್ನು ಅಧ್ಯಯನ ನಡೆಸಲು ದೀರ್ಘ ಸಮಯಬೇಕು. ಇತಿಹಾಸದಲ್ಲಿ ಸ್ನಾತಕೋತ್ತರ ಪದವಿ ಪಡೆದವರು, ಸ್ಲೆಟ್, ನೆಟ್ ಪರೀಕ್ಷೆಗಳಲ್ಲಿ ಯಶಸ್ವಿಯಾದವರು ಕೂಡ ಇಂದು ಇತಿಹಾಸ ವಿಷಯವನ್ನು ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ತೆಗೆದುಕೊಳ್ಳಲು ಹಿಂಜರಿಯುತ್ತಾರೆ. ಕಾರಣ, ಇತಿಹಾಸದಲ್ಲಿ ಉತ್ತಮ ಅಂಕಗಳನ್ನು ನೀಡುವುದಿಲ್ಲ ಎಂಬುದು ಅವರ ಆಕ್ಷೇಪ. ಈ ಬಗ್ಗೆ ಆತ್ಮೀಯ ಪ್ರಾಧ್ಯಾಪಕರೊಬ್ಬನ್ನು ಕೇಳಿದರೆ, 'ಥಾಲಾಕ್ಷ ಅಂತಹವರ ಪುಸ್ತಕಗಳನ್ನು ಓದಿ ಬರೆದರೆ ಹೇಗೆ ಸ್ಕೋರ್ ಆಗುತ್ತೆ?' ಎಂದು ಮರು ಪ್ರಶ್ನೆ ಎಸೆದರು. ಅದು ಸರಿ. ಆದರೆ, 'ನಮ್ಮ ವಿಶ್ವವಿದ್ಯಾಲಯಗಳಲ್ಲಿಯೇ ಥಾಲಾಕ್ಷ ಅವರ ಪುಸ್ತಕ ಹಿಡಿದು ತರಗತಿಯಲ್ಲಿ ಪಾಠ ಮಾಡುವ ಪ್ರಾಧ್ಯಾಪಕ/ಕಿಯರಿದ್ದಾರೆ ಎನ್ನುವುದಾದರೆ ಪರ್ಯಾಯ ಪುಸ್ತಕಗಳನ್ನು ವಿದ್ಯಾರ್ಥಿಗಳಿಗೆ ಪರಿಚಯಿಸುವವರಾರು?' ಎಂಬುದು ನನ್ನ ಪ್ರಶ್ನೆ. ಒಂದು ಕಡೆ ವಿಸ್ತಾರವಾದ ಸಿಲಬಸ್, ಮತ್ತೊಂದು ಕಡೆ ಸಂಕೀರ್ಣವಾದ ಪ್ರಶ್ನೆಗಳು, ಇನ್ನೊಂದು ಕಡೆ ಜಿಗುಟುತನದ ಮೌಲ್ಯಮಾಪನ. ಹೀಗೆ ಮಾಡಿದರೆ ಯಾರು ತಾನೆ ಇತಿಹಾಸವನ್ನು ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಮುಖ್ಯವಿಷಯವಾಗಿ ತೆಗೆದುಕೊಳ್ಳುತ್ತಾರೆ ಹೇಳಿ? ಇಂದು ಸ್ಪರ್ಧಾತ್ಮಕ ಪರೀಕ್ಷೆಗಳನ್ನೇ ಕನಸುಗಳಾಗಿ ಇಟ್ಟುಕೊಂಡು ತಮ್ಮ ಮಕ್ಕಳಿಗೆ ಕಲಾ ವಿಷಯಗಳನ್ನೇ ಕೊಡಿಸುವಂತಹ ದೂರದೃಷ್ಟಿಯುಳ್ಳ ಪೋಷಕರಿದ್ದಾರೆ. ಅವರಿಗೂ ಕೂಡ ಇತಿಹಾಸ ಬೇಕಿಲ್ಲ. ಕಾರಣ, ಅದು ಸಕ್ಸೆಸ್ಸೀವ್ ಸಬ್ಜೆಕ್ಟ್ ಅಲ್ಲ!

ಹಾಗಾದರೆ, ಒಂದು ವಿಷಯವನ್ನು ಯಶಸ್ವಿ ವಿಷಯವನ್ನಾಗಿ ರೂಪಿಸಬೇಕಾದವರು ಯಾರು? ನನ್ನ ಪ್ರಕಾರ ಉನ್ನತ ಶಿಕ್ಷಣದಲ್ಲಿ ಸೇವೆಸಲ್ಲಿಸುತ್ತಿರುವ ಪ್ರಾಧ್ಯಾಪಕರುಗಳು. ಇತಿಹಾಸವನ್ನು ಓದಿದ್ದರಿಂದ ನನ್ನ ಬದುಕು ಕಟ್ಟಿಕೊಳ್ಳಬಹುದು ಎಂಬ ಭರವಸೆಯನ್ನು ಇವರು ಸ್ಪರ್ಧಾಕಾಂಕ್ಷಿಗಳಲ್ಲಿ ಮೂಡಿಸಬೇಕಾದ ತುರ್ತು ಇದೆ. ಅದಕ್ಕಾಗಿ ಇತರ ವಿಷಯಗಳಂತೆ ಸೀಮಿತವಾದ ಸಿಲಬಸ್ ಇಟ್ಟು, ಉತ್ತಮ ಪರಾಮರ್ಶನ ಗ್ರಂಥಗಳನ್ನು ಸೂಚಿಸಿ, ಒಳ್ಳೆಯ ಪ್ರಶ್ನೆಪತ್ರಿಕೆಯನ್ನು ರೂಪಿಸಿ, ಉದಾರವಾಗಿ ಅಂಕಗಳು ಬರುವಂತಾದರೆ, ಸ್ಪರ್ಧಾತ್ಮಕ ಪರೀಕ್ಷಾಕಾಂಕ್ಷಿಗಳಲ್ಲಿ ಭರವಸೆಯನ್ನು ಮೂಡಿಸಲು ಸಾಧ್ಯ. ಆಗ ಮಾತ್ರ ಹೆಚ್ಚಿನ ಸಂಖ್ಯೆಯಲ್ಲಿ ಚರಿತ್ರೆಯ ವಿಷಯವನ್ನು ಬಹಳ ಆಸ್ಥೆಯಿಂದ ಓದುತ್ತಾರೆ. ಚರಿತ್ರೆಗೆ ಈ ರೀತಿಯ ಕಾಯಕಲ್ಪವೊಂದರ ಜರೂರತ್ತು ಈಗಿದೆ. ಇಲ್ಲವಾದರೆ, ಈಗ ರಾಜ್ಯದ ವಿವಿಧ ಭಾಗಗಳಲ್ಲಿ ಪದವಿಪೂರ್ವ ಮತ್ತು ಪದವಿ ಕಾಲೇಜುಗಳಲ್ಲಿ ಇತಿಹಾಸ ವಿಭಾಗಗಳು ಪ್ರತಿವರ್ಷ ಮುಚ್ಚಲ್ಪಡುತ್ತಿವೆ. ಇವುಗಳ ಪರಿಣಾಮವಾಗಿ ಮುಂದಿನ ದಿನಗಳಲ್ಲಿ ಒಂದೊಂದೇ ವಿಶ್ವವಿದ್ಯಾಲಯಗಳು ಕೂಡ ತಮ್ಮ ಚರಿತ್ರೆಯ ವಿಭಾಗಗಳನ್ನು ಮುಚ್ಚಬೇಕಾಗುತ್ತದೆ.

ಇಂದು ವಿಶ್ವವಿದ್ಯಾಲಯಗಳು ವಿಶ್ವವಿದ್ಯಾಲಯಗಳಾಗಿ ಉಳಿದಿಲ್ಲ; ಬದಲಿಗೆ ಜಿಲ್ಲಾ ವಿದ್ಯಾಲಯಗಳು ಅಥವಾ ತಾಲ್ಲೂಕು ವಿದ್ಯಾಲಯಗಳಾಗಿ ಮಾರ್ಪಟ್ಟಿವೆ. ಇಂದು ಎರಡು ಸಮಸ್ಯೆಗಳು ನಮ್ಮ ಮುಂದಿವೆ. **ಒಂದು:** ಗುಣಾತ್ಮಕ ಬೆಳವಣಿಗೆಗೆ ಬದಲು ಪ್ರಮಾಣಾತ್ಮಕ ಬೆಳವಣಿಗೆಯನ್ನೇ ಸುಧಾರಣೆ ಎಂದುಕೊಂಡಿರುವುದು. ಇದರಿಂದಾಗಿ ಇಂದು ಉನ್ನತ ಶಿಕ್ಷಣದಲ್ಲಿ ನಡೆಯಬೇಕಾದ ಇತಿಹಾಸ ಸಂಶೋಧನೆಗಳು ಸಮರ್ಪಕವಾಗಿ ನಡೆಯುತ್ತಿಲ್ಲ.

ಶಿಸ್ತುಬದ್ಧ ಸಂಶೋಧನೆಗಳಿಗಿಂತ ಕಾಟಾಚಾರದ ಅಥವಾ ಕೃತಿಚೌರ್ಯ ಮಾಡಿದ ಬರವಣಿಗೆಗಳೇ ಸಂಶೋಧನೆಗಳಾಗಿವೆ. ಸಂಶೋಧನಾ ವಿಧಾನದ ಗಂಧಗಾಳಿಯೂ ಗೊತ್ತಿಲ್ಲದ ಅನೇಕರು ತೊಳಲಾಡುತ್ತಿದ್ದಾರೆ. ಅವರಿಗೆ ಮಾರ್ಗದರ್ಶನ ಮಾಡಬೇಕಾದ ಕೆಲವು ಮಾರ್ಗದರ್ಶಕರಿಗೆ ಇನ್ನೂಕೂಡ ಸಂಶೋಧನಾ ಮಾರ್ಗದ ದರ್ಶನವಾಗಿಲ್ಲ! **ಎರಡು:** ಗುಲ್ಬರ್ಗಾ ವಿಶ್ವವಿದ್ಯಾಲಯದಲ್ಲಿ ನಿವೃತ್ತಿಯ ಪರಿಣಾಮವಾಗಿ ಯಾವೊಬ್ಬ ಖಾಯಂ ಪ್ರಾಧ್ಯಾಪಕರೂ ಇಲ್ಲ. ಇನ್ನು ಕೆಲವು ವಿಶ್ವವಿದ್ಯಾಲಯಗಳ ಪರಿಸ್ಥಿತಿ ಕೂಡ ಇದೇ ಹಾದಿಯಲ್ಲಿದೆ. ವಿಶ್ವವಿದ್ಯಾಲಯಗಳ ಚರಿತ್ರೆಯ ವಿಭಾಗದಲ್ಲಿಯೇ ಈ ಸ್ಥಿತಿ ನಿರ್ಮಾಣವಾಗಿದೆ ಎನ್ನುವುದಾದರೆ, ಜಿಲ್ಲೆ ಮತ್ತು ತಾಲ್ಲೂಕು ಕೇಂದ್ರಗಳಲ್ಲಿ ತೆರೆದಿರುವ ಅಧ್ಯಯನ ಕೇಂದ್ರಗಳಲ್ಲಿನ ಬೋಧಕ ವರ್ಗದ ಪರಿಸ್ಥಿತಿ ಮತ್ತೆಷ್ಟು ಗಂಭೀರವಾಗಿರಬಹುದು? ಬೋಧನೆಯೇ ಅತಂತ್ರವಾಗಿರುವಾಗ ಸಂಶೋಧನೆಯನ್ನು ಕೇಳಬೇಕೆ? ಹೀಗೆ ಉನ್ನತ ಶಿಕ್ಷಣದಲ್ಲಿ ಇತಿಹಾಸ ಸಂಶೋಧನೆಗಳು ನೆಲಕಚ್ಚುವ ಸ್ಥಿತಿ ತಲುಪಿರುವಾಗ, ಇತಿಹಾಸ ಸಂಶೋಧನೆಗೆ ಕಾಯಕಲ್ಪ ಬೇಡವೇ? ಖಂಡಿತ ಬೇಕು. ಹಾಗಾದರೆ, ಯಾವ ರೂಪದಲ್ಲಿ ಬೇಕು?

ರಾಷ್ಟ್ರಮಟ್ಟದಲ್ಲಿ 'ಇಂಡಿಯನ್ ಕೌನ್ಸಿಲ್ ಆಫ್ ಹಿಸ್ಟಾರಿಕಲ್ ರಿಸರ್ಚ್' (ಐ.ಸಿ.ಎಚ್.ಆರ್) ಎಂಬ ಸ್ವಾಯತ್ತ ಸಂಸ್ಥೆಯು ಪ್ರಸಿದ್ಧ ಇತಿಹಾಸಕಾರ ಆರ್.ಎಸ್. ಶರ್ಮ ಅವರ ಕನಸಿನ ಫಲವಾಗಿ 1972ರಲ್ಲಿ ಕೇಂದ್ರ ಮಾನವ ಸಂಪನ್ಮೂಲ ಇಲಾಖೆಯ ಅಡಿಯಲ್ಲಿ ಆರಂಭವಾಯಿತು. ಇದರ ಮೂಲ ಉದ್ದೇಶವೆಂದರೆ: ಇತಿಹಾಸಕಾರರನ್ನು ಒಂದೆಡೆ ಸೇರಿಸಿ, ತಮ್ಮ ದೃಷ್ಟಿಕೋನಗಳನ್ನು ವಿನಿಮಯ ಮಾಡಿಕೊಳ್ಳಲು ವೇದಿಕೆಯನ್ನು ಕಲ್ಪಿಸುವುದು. ವಸ್ತುನಿಷ್ಠ ಮತ್ತು ವೈಜ್ಞಾನಿಕ ಚರಿತ್ರೆಯ ಬರವಣಿಗೆ ಹಾಗೂ ಚರಿತ್ರೆಯನ್ನು ಅರ್ಥೈಸಲು ರಾಷ್ಟ್ರೀಯ ಮಾರ್ಗದರ್ಶನ ನೀಡುವುದು. ಸಂಶೋಧನಾ ತರಬೇತಿ ಕಾರ್ಯಗಾರಗಳನ್ನು ನಡೆಸುವುದು, ಸಂಶೋಧನೆಗೆ ಆರ್ಥಿಕ ನೆರವು ನೀಡುವುದು, ಮೂಲ ಆಕರ ಗ್ರಂಥಗಳನ್ನು ಸಿದ್ಧಪಡಿಸಿ ಪ್ರಕಟಿಸುವುದು ಇವೇ ಮೊದಲಾದ ಕಾರ್ಯಗಳನ್ನು ಮಾಡುತ್ತಾ ಬರುತ್ತಿದೆ. ಅದೇ ಮಾದರಿಯಲ್ಲಿ ತಿರುವನಂತಪುರದಲ್ಲಿ ಉನ್ನತ ಶಿಕ್ಷಣ ಇಲಾಖೆಯ ಅಡಿಯಲ್ಲಿ ಸ್ವಾಯತ್ತ ಸಂಸ್ಥೆಯಾಗಿ 'ಕೇರಳ ಕೌನ್ಸಿಲ್ ಆಫ್ ಹಿಸ್ಟಾರಿಕಲ್ ರಿಸರ್ಚ್' ದಕ್ಷತೆಯಿಂದ ಕಾರ್ಯನಿರ್ವಹಿಸುತ್ತಿದೆ. ಅದೇ ರೀತಿ ತಮಿಳುನಾಡಿನ 'ಪತ್ರಾಗಾರ ಮತ್ತು ಇತಿಹಾಸ ಸಂಶೋಧನೆ'ಯ ಅಂಗಸಂಸ್ಥೆಯಾಗಿ 1973ರಲ್ಲಿಯೇ 'ತಮಿಳುನಾಡು ಕೌನ್ಸಿಲ್ ಆಫ್ ಹಿಸ್ಟಾರಿಕಲ್ ರಿಸರ್ಚ್' ಆರಂಭಗೊಂಡಿದೆ. ಇವುಗಳ ಮಾದರಿಯಲ್ಲಿಯೇ 'ಕರ್ನಾಟಕ ಕೌನ್ಸಿಲ್ ಅಫ್ ಹಿಸ್ಟಾರಿಕಲ್ ರಿಸರ್ಚ್ ಅಥವಾ ಕರ್ನಾಟಕ ಇತಿಹಾಸ ಸಂಶೋಧನ ಪರಿಷತ್ತು' ಎಂಬ ಸ್ವಾಯತ್ತ ಸಂಶೋಧನಾ ಸಂಸ್ಥೆಯೊಂದರ ಜರೂರತ್ತು ಹಿಂದೆಂದಿಗಿಂತ ಇಂದು ಹೆಚ್ಚಿದೆ. ಈಗಾಗಲೇ ಐ.ಸಿ.ಎಚ್.ಆರ್. ಛೇರ್ಮೆನ್ ಆಗಿ, ಮತ್ತು ಕಾರ್ಯದರ್ಶಿಗಳಾಗಿ ಅಪಾರ ಅನುಭವವುಳ್ಳ ಕನ್ನಡಿಗರಿದ್ದಾರೆ. ಅಲ್ಲದೆ, ಸದಸ್ಯರಾಗಿ ಕಾರ್ಯನಿರ್ವಹಿಸಿದವರಿದ್ದಾರೆ. ಇವರಲ್ಲದೆ ಇನ್ನೂ ಅನೇಕ ಹಿರಿಯ ಇತಿಹಾಸಕಾರರು, ಸಂಶೋಧಕರು ನಮ್ಮ ನಡುವೆ ಇದ್ದಾರೆ. ಇವರೆಲ್ಲರ ಸಲಹೆ, ಮಾರ್ಗದರ್ಶನಗಳಲ್ಲಿ ಚರಿತ್ರೆಯನ್ನು ಉಳಿಸುವ ಮತ್ತು ಊರ್ಜಿತಗೊಳಿಸುವ ಧ್ಯೇಯೋದ್ದೇಶಗಳನ್ನುಳ್ಳ ಸಂಸ್ಥೆಯೊಂದನ್ನು ಸರ್ಕಾರ ಸ್ಥಾಪಿಸಬೇಕು. ಕಗ್ಗತ್ತಲೆಯಲ್ಲಿ ಮಿಣುಕು ಹುಳುಗಳಂತೆ

ಭರವಸೆಯನ್ನು ಮೂಡಿಸಿ ಕರ್ನಾಟಕದ ವಿವಿಧ ವಿಶ್ವವಿದ್ಯಾಲಯಗಳಲ್ಲಿ ಚರಿತ್ರೆಯ ಬಗೆಗೆ ಬದ್ಧತೆ ಮತ್ತು ಕಳಕಳಿಯನ್ನು ಇಟ್ಟುಕೊಂಡು ಪ್ರಾಮಾಣಿಕ ಸೇವೆ ಸಲ್ಲಿಸುತ್ತಿರುವ ದಕ್ಷ ಪ್ರಾಧ್ಯಾಪಕರನ್ನು ಎರವಲು ಸೇವೆಯ ಮೇಲೆ ಈ ಸಂಸ್ಥೆಯಲ್ಲಿ ಕೆಲವು ವರ್ಷಗಳ ಅವಧಿಗೆ ನೇಮಿಸುವಂತಾಗಬೇಕು. ಈ ಸಂಸ್ಥೆಯು ಕರ್ನಾಟಕದ ಇತಿಹಾಸ ಸಂಶೋಧನೆಯ ಮೂಲ ಆಕರಗಳನ್ನು ಸಂಕಲಿಸುವ ಮತ್ತು ಪ್ರಕಟಿಸುವ ಕೆಲಸ, ಸಂಶೋಧನಾ ವಿದ್ಯಾರ್ಥಿಗಳಿಗೆ ಕಾರ್ಯಗಾರಗಳ ಮೂಲಕ ಸಂಶೋಧನಾ ತರಬೇತಿ ನೀಡುವ, ಉಪನ್ಯಾಸಗಳನ್ನು ಏರ್ಪಡಿಸುವ ಮತ್ತು ವಿಚಾರ ಸಂಕಿರಣ, ವಿದ್ಯಾರ್ಥಿ ವೇತನ, ಪ್ರಕಟಣಾ ಧನ ಸಹಾಯ, ಸಂಶೋಧನೆಗೆ ಆರ್ಥಿಕ ನೆರವು ನೀಡುವ ಹಾಗೂ ಉತ್ತಮ ಗ್ರಂಥಾಲಯ, ನಿಯತಕಾಲಿಕೆಗಳನ್ನು ರೂಪಿಸುವ ಇವೇ ಮೊದಲಾದ ಉದ್ದೇಶಗಳನ್ನು ಒಳಗೊಂಡಿರಬೇಕು. ಅಲ್ಲದೆ, ಇತಿಹಾಸವನ್ನು ಜನಸಾಮಾನ್ಯರ ಬಳಿಗೂ ಕೊಂಡೊಯ್ಯುವ ಮೂಲಕ ತಮ್ಮ ಸುತ್ತಲ ಚಾರಿತ್ರಿಕ ಸ್ಮಾರಕ, ಅವಶೇಷಗಳನ್ನು ಸ್ವಯಂಪ್ರೇರಣೆಯಿಂದ ಸಂರಕ್ಷಿಸುವ ನಿಟ್ಟಿನಲ್ಲಿ ಜಾಗೃತಿ ಮೂಡಿಸುವಂತಾಗಬೇಕು.

ಸಾಹಿತ್ಯ ಮತ್ತು ಸಂಸ್ಕೃತಿಯ ಹೆಸರಿನಲ್ಲಿ ರಾಜ್ಯ ಸರ್ಕಾರ ಹತ್ತಾರು ಅಕಾಡೆಮಿ, ಪ್ರಾಧಿಕಾರಗಳನ್ನು ಸ್ಥಾಪಿಸಿದೆ. ಸಾಹಿತ್ಯ ಮತ್ತು ಸಂಸ್ಕೃತಿಯಷ್ಟೇ ಮಹತ್ವವುಳ್ಳ ಚರಿತ್ರೆಗೆ ಒಂದಾದರೂ ಸಂಸ್ಥೆ ಬೇಡವೇ? ಏಕೆಂದರೆ, ಇತಿಹಾಸದ ಕಣ್ಣೋಟದಿಂದ ಮಾತ್ರ ಸಂಸ್ಕೃತಿಯನ್ನು ಸರಿಯಾಗಿ ಗ್ರಹಿಸಲು ಸಾಧ್ಯ. ಆದ್ದರಿಂದ ಚರಿತ್ರೆಯಿಲ್ಲದ ಕರ್ನಾಟಕದ ಸಂಸ್ಕೃತಿ ಎಂಬುದು ಅಪೂರ್ಣ ಮತ್ತು ಅರ್ಥಹೀನ. ಐತಿಹಾಸಿಕ ವ್ಯಕ್ತಿಯನ್ನೋ ಅಥವಾ ವಿಷಯವನ್ನೋ ಹಿಡಿದು ಪರ ಮತ್ತು ವಿರೋಧಿ ಬಣಗಳ ಸಾಹಿತಿಗಳು ಹಗ್ಗಜಗ್ಗಾಡುವ ಮೂಲಕ ಸಾಂಸ್ಕೃತಿಕ ಪ್ರಕ್ಷುಬ್ದ ಪರಿಸ್ಥಿತಿ ನಿರ್ಮಾಣಗೊಳ್ಳುತ್ತಿರುತ್ತವೆ. ಇದಕ್ಕೆ ಕಾರಣ ಚರಿತ್ರೆ ಸಂಶೋಧನೆಗೊಂದು ಸಮರ್ಥ ಸಂಸ್ಥೆ ಇಲ್ಲದಿರುವುದು. ಅಂತಹ ಸಂದರ್ಭಗಳಲ್ಲಿ ಅಧಿಕೃತವಾಗಿ ಅಧ್ಯಯನ ನಡೆಸಿ, ವಸ್ತುನಿಷ್ಠ ಸಂಗತಿಯನ್ನು ಜನತೆಗೆ ತೆರೆದಿಡುವ ಸಂಸ್ಥೆಯೊಂದು ಬೇಕು ಎನ್ನುವ ಭಾವನೆ ಕೆಲವರ ಮನಸ್ಸಿನಲ್ಲಾದರೂ ಬಂದಿರಬಹುದು. ಆದರೆ, ಚರಿತ್ರೆಗೂ ಒಂದು ಅಕಾಡೆಮಿ ಅಥವಾ ಪ್ರಾಧಿಕಾರ ಮಾದರಿಯ ಸ್ವಾಯತ್ತ ಸಂಸ್ಥೆಯೊಂದು ಅಗತ್ಯವಿದೆ ಎಂದು ಇದುವರೆಗೆ ಯಾರೂ ಸರ್ಕಾರವನ್ನು ಒತ್ತಾಯಿಸಿದ ಕುರಿತು ನನಗೆ ಮಾಹಿತಿ ಇಲ್ಲ. ಈಗಲಾದರು ಕಾಲ ಸನ್ನಿಹಿತವಾಗಿದೆ. ಹಿರಿಯ ಇತಿಹಾಸಕಾರರು, ಸಂಶೋಧಕರು, ತಜ್ಞರು, ಇತಿಹಾಸ ಬೋಧಕರು ಮೊದಲಾದವರು ಎಚ್ಚೆತ್ತು, ನಮ್ಮ ಬದುಕನ್ನು ಕಟ್ಟಿಕೊಟ್ಟ ಚರಿತ್ರೆಯ ಬದುಕನ್ನು ಉಳಿಸಿಕೊಳ್ಳಲು 'ಕರ್ನಾಟಕ ಕೌನ್ಸಿಲ್ ಆಫ್ ಹಿಸ್ಟಾರಿಕಲ್ ರಿಸರ್ಚ್' ಅಂತಹ ಸಂಸ್ಥೆಯೊಂದನ್ನು ಸ್ಥಾಪಿಸುವ ಬಗೆಗೆ ಒಕ್ಕೊರಲಿನಿಂದ ರಾಜ್ಯ ಸರ್ಕಾರವನ್ನು ಒತ್ತಾಯಿಸಬೇಕು. ಇಂತಹ ಸಂಸ್ಥೆಯನ್ನು ಸ್ಥಾಪಿಸುವುದು ಸರ್ಕಾರದ ಸಾಂಸ್ಕೃತಿಕ ಹೊಣೆಗಾರಿಕೆ ಕೂಡ ಆಗಿದೆ.

ಈ ನಿಟ್ಟಿನಲ್ಲಿ ಮೇಲಿನ ಎರಡೂ ವಿಚಾರಗಳ ಬಗೆಗೆ ನಮ್ಮ ಪ್ರಜ್ಞಾವಂತ ಇತಿಹಾಸ ಪ್ರಾಧ್ಯಾಪಕರು ಮತ್ತು ಹಿರಿಯ ಇತಿಹಾಸ ತಜ್ಞರು ಗಂಭೀರವಾಗಿ ಚಿಂತಿಸಬೇಕಿದೆ.

**ಹಂ.ಗು. ರಾಜೇಶ್**
ಸಂಪಾದಕರು

# ಗುಡೇಕೋಟೆ ಪರಿಸರದ ನವಶೋಧಿತ ಪ್ರಾಗಿತಿಹಾಸ ಕಾಲದ ವರ್ಣಚಿತ್ರಗಳು

**ಮಂಜನಾಯ್ಕ ಆರ್.**
ಪುರಾತತ್ವ ಸಹಾಯಕರು
ಉಪ ನಿರ್ದೇಶಕರ ಕಛೇರಿ
ಪುರಾತತ್ವ, ಸಂಗ್ರಹಾಲಯಗಳು
ಮತ್ತು ಪರಂಪರೆ ಇಲಾಖೆ
ಕಮಲಾಪುರ. ಹೊಸಪೇಟೆ ತಾ
ಬಳ್ಳಾರಿ ಜಿಲ್ಲೆ–583221.
manjanaik12@gmail.com

ಗುಡೇಕೋಟೆಯು ಬಳ್ಳಾರಿ ಜಿಲ್ಲೆಯ ಕೂಡ್ಲಿಗಿ ತಾಲೂಕಿನಲ್ಲಿರುವ ಒಂದು ಗ್ರಾಮ. ಇದು ಹೋಬಳಿ ಕೇಂದ್ರವಾಗಿದ್ದು ಇದರಲ್ಲಿ 75 ಗ್ರಾಮಗಳಿವೆ. ಗುಡೇಕೋಟೆಯು ಕೂಡ್ಲಿಗಿಯಿಂದ ಪೂರ್ವಕ್ಕೆ 28 ಕಿ.ಮೀ. ದೂರದಲ್ಲಿದೆ. ಜಿಲ್ಲಾ ಕೇಂದ್ರ ಸ್ಥಳವಾದ ಬಳ್ಳಾರಿಯಿಂದ 65 ಕಿ.ಮೀ. ದೂರದಲ್ಲಿದೆ. ಗುಡೇಕೋಟೆ ಹೋಬಳಿಯ ಪೂರ್ವಕ್ಕೆ ಚಿತ್ರದುರ್ಗ ಜಿಲ್ಲೆಯ ಮೊಳಕಾಲ್ಮೂರು ತಾಲೂಕು ಗಡಿ ಪ್ರದೇಶವಿದ್ದರೆ, ಪಶ್ಚಿಮಕ್ಕೆ ತಾಲೂಕು ಕೇಂದ್ರ ಸ್ಥಳವಾದ ಕೂಡ್ಲಿಗಿ ಹೋಬಳಿ, ದಕ್ಷಿಣಕ್ಕೆ ಕಾನಹೊಸಹಳ್ಳಿ ಹೋಬಳಿ ಪ್ರದೇಶ ಮತ್ತು ಉತ್ತರಕ್ಕೆ ಸಂಡೂರು ತಾಲೂಕಿನ ಗಡಿ ಪ್ರದೇಶಗಳಿಂದ ಆವೃತ್ತವಾಗಿದೆ. ಗುಡೇಕೋಟೆ ಗ್ರಾಮವು ದೊರೆಗಳ ಗುಡ್ಡ, ಸೋಮೇಶ್ವರಗುಡ್ಡ, ಅಗಸರ, ಹರಿಜನ ಕೇರಿ ಗುಡ್ಡ, ಕರಡಿಗುಡ್ಡಗಳಿಂದ ಸುತ್ತಲೂ ಸುತ್ತುವರಿದಿದೆ.

ಇಂದಿನ ಗುಡೇಕೋಟೆಗೆ ಹಿಂದೇ ಬಾಣಾಸುರ ಪಟ್ಟಣವೆಂದು ಕರೆಯುತ್ತಿದ್ದರೆಂದು ಸ್ಥಳೀಯರ ವಾಡಿಕೆ. ಸುಮಾರು ವರ್ಷಗಳ ಹಿಂದೆ ಬಾಣಾಸುರ ಎಂಬ ಅರಸನು ಆಳುತ್ತಿದ್ದನಂತೆ. ಇವನು

ಶಿವಪಾರ್ವತಿಯರ ಪರಮಭಕ್ತ. ಈತನ ಭಕ್ತಿಗೆ ಮೆಚ್ಚಿದ ಆ ದೇವ ದಂಪತಿಗಳು ಈ ಪಟ್ಟಣದ ಮಹಾದ್ವಾರವನ್ನು ಸದಾಕಾಲ ಕಾಯುತ್ತಿರುವುದಾಗಿ ಅಭಯ ನೀಡಿದರೆಂಬ ಪ್ರತೀತಿ. ಈ ಗ್ರಾಮವು ಅರಸನ ಕಾಲದಲ್ಲಿ ಪಟ್ಟಣದಷ್ಟು ದೊಡ್ಡದಾಗಿದ್ದು, ಅರಸನ ಹೆಸರನ್ನೇ ಈ ಗ್ರಾಮವು ಹೊಂದಿತು. ಸಿ. ಡಿ. ಮ್ಯಾಕಲಿನ್ ಅವರು ತಮ್ಮ ಕೃತಿಯಲ್ಲಿ Goodi cottah Gudikotatal from (Gudi tal, Temple+kota, tal fort) ಎಂದು ಉಲ್ಲೇಖಿಸಿದ್ದಾರೆ.[1] ಚೋರನೂರು, ನಾರಾಯಣದೇವರಕೆರೆ ಶಾಸನಗಳಲ್ಲಿ ಗುಡೇಕೋಟೆಯನ್ನು ಗುಡಿಯ ಕೋಟೆ ಎಂದು ಉಲ್ಲೇಖಿಸಿದೆ.[2] ಗುಡೇಕೋಟೆಯ ಹೆಸರು ಕೈಫಿಯತ್ತುಗಳಲ್ಲಿ ಗುಡಿಕೋಟೆ ಎಂಬುದಾಗಿದೆ.[3] ಗಡಿಯಾಂಕ ಭೀಮನ ಪಟ್ಟಣವೆಂದು ಪೌರಾಣಿಕ ಪ್ರಸಂಗಗಳು ಹೇಳುತ್ತವೆ. ಕನ್ನಡ ನಿಘಂಟುಗಳಲ್ಲಿ ಬರುವ ಗುಡೇ ಎಂಬುದರ ಶಾಬ್ದಿಕ ಅರ್ಥವು ರಾಶಿ, ಸಮೂಹ, ಗುಂಪು ಎಂಬ ಪದಗಳನ್ನು ನಿರ್ದೇಶಿಸುತ್ತಿದ್ದು, ಈಗಲೂ ಗುಡೇಕೋಟೆ ಸುತ್ತಲೂ ಅನೇಕ ಗುಡ್ಡಗಳು ರಾಶಿ ರಾಶಿಯಾಗಿ ಹಬ್ಬಿರುವುದನ್ನು ನೋಡಲಾಗಿ ಅಲ್ಲಿಯ ಕೋಟೆಯನ್ನು ಸೂಚಿಸಲು ಅನ್ವರ್ಥಕವಾಗಿ ಗುಡೇ ಎಂಬ ವಿಶ್ಲೇಷಣೆಯನ್ನು ಸೇರಿಸಿಕೊಂಡಿರಬೇಕು. ಹಾಗಾಗಿ ಈ ಗ್ರಾಮಕ್ಕೆ ಗುಡೇಕೋಟೆ ಎಂಬ ಹೆಸರು ಪ್ರಾಪ್ತವಾಗಿರಬೇಕು.[4] ಈ ಗುಡೇಕೋಟೆ ಪರಿಸರದಲ್ಲಿರುವ ಗುಡ್ಡಗಳು 600 ರಿಂದ 700 ಮೀಟರ್‌ನಷ್ಟು ಎತ್ತರವಿದೆ.

ಗುಡೇಕೋಟೆಯ ಪ್ರಾಚೀನತೆಯನ್ನು ಪ್ರಾಗಿತಿಹಾಸ ಕಾಲದವರೆಗೆ ತಲುಪಿರುವ ಅವಶೇಷಗಳು ಈ ಗ್ರಾಮದ ಮತ್ತು ಸುತ್ತಮುತ್ತಲಿನ ಪರಿಸರದಲ್ಲಿ ಕಂಡುಬರುತ್ತವೆ. ಗುಡೇಕೋಟೆ ಗ್ರಾಮವು ಸೇರಿದಂತೆ ಇದರ ಸುತ್ತಮುತ್ತಲಿನ ಪರಿಸರವು ಭೌಗೋಳಿಕವಾಗಿ ಸಮೃದ್ಧವಾದುದು. ಈ ಪ್ರದೇಶದಲ್ಲಿ ದೊಡ್ಡ ದೊಡ್ಡ ಬಂಡೆಗಳನ್ನು ಹೊತ್ತ ಬೆಟ್ಟಗಳು, ನೈಸರ್ಗಿಕ ಗುಹೆಗಳು ಹಳ್ಳ ತೊರೆಗಳಿಂದ ಕೂಡಿದ ನೆಲೆಗಳು ಇಲ್ಲಿಯ ಫಲವತ್ತಾದ ಭೂ ಭಾಗಗಳು ಪ್ರಾಗಿತಿಹಾಸ ಕಾಲದಿಂದಲೂ ಮಾನವನ ತಾಣವಾಗಿ ಬೆಳೆದುಬರಲು ಸಾಧ್ಯವಾಗಿದೆ. ಗುಡೇಕೋಟೆ ಪರಿಸರದ ಸುತ್ತಲಿನ ಪ್ರದೇಶಗಳಾದ ಅಪ್ಪಯ್ಯನಹಳ್ಳಿ, ಪಂಚಲಿಂಗೇಶ್ವರ, ಜರ್ಮಲಿ, ಸಿಡೇಗಲ್ಲು, ಬೆಳಗಟ್ಟ, ರಾಮದುರ್ಗ, ಜುಮ್ಮೋಬನಹಳ್ಳಿ, ಸಂಡೂರು, ಹುಲಿಕುಂಟೆ, ಬ್ರಹ್ಮಗಿರಿ, ಜಟ್ಟಂಗರಾಮೇಶ್ವರ (ಚಿತ್ರದುರ್ಗ ಜಿಲ್ಲೆ) ಇನ್ನು ಮುಂತಾದ ಪ್ರದೇಶಗಳಲ್ಲಿ ಹಳೆಯ ಶಿಲಾಯುಗಕ್ಕೆ ಸೇರಿದ ಆಯುಧಗಳು ಸೂಕ್ಷ್ಮಶಿಲಾಯುಗ, ತಾಮ್ರಶಿಲಾಯುಗ, ನೂತನ ಶಿಲಾಯುಗ ಮತ್ತು ಬೃಹತ್ ಶಿಲಾಯುಗ ಕಾಲಘಟ್ಟಗಳಿಗೆ ಸೇರಿದ ಅನೇಕ ಪ್ರಾಚ್ಯಾವಶೇಷಗಳು ದೊರತಿವೆ. ವಿವಿಧ ಕಾಲಮಾನಕ್ಕೆ ಸೇರಿದ ಮನುಷ್ಯಾಕೃತಿಯ ವರ್ಣಚಿತ್ರಗಳು, ಪ್ರಾಣಿಗಳ ರೇಖಾಚಿತ್ರಗಳು ದೊರಕಿವೆ.

ಗುಡೇಕೋಟೆ ಊರಿನ ಹೊರವಲಯದಲ್ಲಿರುವ ಪಂಚಲಿಂಗ ಗುಹೆಯು ನೂರು ಅಡಿಗಳಿಗೂ ಉದ್ದವಾದ ಕಣ ಶಿಲೆಯ ವಿಶಾಲವಾದ ಬಂಡೆಗಲ್ಲಿನ ಕೆಳಭಾಗದಲ್ಲಿ ಬಿಳಿವರ್ಣದ ಮನುಷ್ಯರು ಕೈ ಕೈ ಹಿಡಿದಿರುವ ಚಿತ್ರಗಳು ಕಂಡುಬಂದಿವೆ. ಮತ್ತು ಇದೇ

ನೆಲೆಯ ಕೋಟೆಯ ಪ್ರದೇಶದಲ್ಲಿ ನೈಸರ್ಗಿಕ ಕಲ್ಮನೆಯಂತೆ ಕಾಣುವ ಕಲ್ಲಾಸರೆಯಲ್ಲಿ ಮಾನವ ಬೇಟೆಯಾಡುವ ದೃಶ್ಯವನ್ನು ಎರಡು ರೀತಿಯ ಬಣ್ಣದ ಚಿತ್ರಗಳು ಹಾಗೂ ಸರ್ವೋದಯ ಶಾಲೆಯ ಹಿಂಭಾಗದ ಗುಡ್ಡದಲ್ಲಿರುವ ಬಂಡೆಗಲ್ಲಿನಲ್ಲಿ ಕೆಂಪು ವರ್ಣದಿಂದ ಮೂಡಿಸಿದ ಆನೆ ಮತ್ತು ಸಿಂಹದ ವರ್ಣಚಿತ್ರಗಳನ್ನು ವಿದ್ವಾಂಸರುಗಳು ಈ ಹಿಂದೆ ಗುರುತಿಸಿದ್ದಾರೆ. ಆದರೆ ಇಲ್ಲಿ ಹೊಸದಾಗಿ ಶೋಧಿಸಿದ ಎರಡು ಬಂಡೆಗಲ್ಲಿನ ವರ್ಣಚಿತ್ರಗಳ ಕುರಿತು ವಿಶ್ಲೇಷಿಸುವುದೇ ಈ ಲೇಖನದ ಮುಖ್ಯ ಉದ್ದೇಶವಾಗಿದೆ.

**ವರ್ಣಚಿತ್ರ–1**

ಗುಡೇಕೋಟೆಯಿಂದ ಮೊಳಕಾಲ್ಮೂರುಗೆ ಹೋಗುವ ರಾಜ್ಯ ಹೆದ್ದಾರಿಯಲ್ಲಿ ಎರಡು ಕಿ.ಮೀ ದೂರದಲ್ಲಿ ರಸ್ತೆಯ ಬಲಬದಿಯಲ್ಲಿ ರಸ್ತೆಗೆ ಹೊಂದಿಕೊಂಡಿರುವ ಬಂಡೆಗಳುಳ್ಳ ಬೆಟ್ಟವಿದ್ದು ಈ ಬೆಟ್ಟದಲ್ಲಿರುವ ಮೂರು ಮುಂಚಾಚಿದ ಬಂಡೆಗಳುಳ್ಳ ಗವಿಯಿದ್ದು ಇದು ಪೂರ್ವಾಭಿಮುಖವಾಗಿದೆ. ಈ ಗವಿಯ ಬಂಡೆಗಳು ಮುಂಚಾಚಿದ್ದು ಅವುಗಳ ಬಲಭಾಗದಲ್ಲಿನ ಮುಂಚಾಚಿದ ಬಂಡೆಯ ಕೆಳಗೆ ಮತ್ತೊಂದು ಬಂಡೆಯಿದ್ದು ಈ ಬಂಡೆಯಲ್ಲಿ ಬಿಳಿ ವರ್ಣದಿಂದ ಮೂಡಿಸಿದ ವರ್ಣಚಿತ್ರದಲ್ಲಿ ಮನುಷ್ಯಕೃತಿಯ ಚಿತ್ರವು ಎರಡು ಕಾಲುಗಳನ್ನು ಸಮಾಂನತರದಲ್ಲಿ ಅಗಲಿಸಿ ಬಲಗೈಯನ್ನು ಮೇಲಕ್ಕೆ ಎತ್ತಿದ್ದು ಎಡಗೈಯನ್ನು ಕೆಳಗೆ ಇಳಿಬಿಟ್ಟಿದೆ ಹಾಗೂ ತಲೆಯನ್ನು ಸಣ್ಣದಾಗಿ ದುಂಡನೆಯ ರೀತಿಯಲ್ಲಿ ಚಿತ್ರಿಸಲಾಗಿದೆ. ಅದರ ಮೇಲ್ಭಾಗದಲ್ಲಿ ಕೆಂಪು ವರ್ಣದಿಂದ ಮೂಡಿಸಿದ ವಿವಿಧ ರೀತಿಯ ಚಿತ್ರಗಳಿವೆ. ಅವುಗಳಲ್ಲಿ ಮೀನು, ಕೊಂಬುಳ್ಳ ಜಿಂಕೆಯ ಚಿತ್ರಗಳೆಂದು ಗುರುತಿಸಬಹುದು. ಜಿಂಕೆಯು ಮುಂದೆ ನೆಗೆಯುವಂತಿದೆ ಹಾಗೂ ಇದೇ ಬಂಡೆಯ ಮತ್ತೊಂದು ಬದಿಯಲ್ಲಿ (ಪೂರ್ವಬದಿಯಲ್ಲಿ) ದೊಡ್ಡದಾದ ದೇಹವುಳ್ಳ ಮುಳ್ಳುಹಂದಿಯ ಚಿತ್ರವಿದ್ದು ಇದರ ನಾಲ್ಕು ಕಾಲುಗಳನ್ನು ಸಣ್ಣದಾಗಿ ತೋರಿಸಿದ್ದು ದೇಹವನ್ನು ಅಗಲವಾಗಿ ತೋರಿಸಲಾಗಿದೆ. ದೇಹದ ಮೇಲ್ಭಾಗ, ಕೆಳಭಾಗ ಮತ್ತು ಹಿಂಭಾಗದಲ್ಲಿ ಉದ್ದನೆಯ ಮುಳ್ಳಿನ ರೀತಿಯಲ್ಲಿ ಚಿತ್ರಿಸಲಾಗಿದೆ ಹಾಗೂ ಇದರ ಮುಂಭಾಗವು ಕಾಲನಹೊಡೆತಕ್ಕಾಗಿ ಮಸುಕಾಗಿದ್ದು ಪೂರ್ಣ ಪ್ರಮಾಣದಲ್ಲಿ ಗುರುತಿಸಲು ಸಾಧ್ಯವಾಗುತ್ತಿಲ್ಲ.

ಇದೇ ಗವಿಯ ಎಡಭಾಗದಲ್ಲಿರುವ ದಕ್ಷಿಣಾಭಿಮುಖವಾಗಿ ಮುಂಚಾಚಿರುವ ಬಂಡೆಯಲ್ಲಿ ಕೆಂಪು ವರ್ಣದಿಂದ ಮೂಡಿಸಿದ ವಿವಿಧ ರೀತಿಯ ಚಿತ್ರಗಳಿವೆ. ಅವುಗಳಲ್ಲಿ ಕೊಂಬುಳ್ಳ ಜಿಂಕೆಯ ಚಿತ್ರವಿದ್ದು ಇದು ಪಶ್ಚಿಮಾಭಿಮುಖವಾಗಿ ಮುಂದೆ ಚಲಿಸುವಂತ್ತಿದ್ದು ದೇಹ ಮತ್ತು ಕಾಲುಗಳನ್ನು ದಪ್ಪನಾಗಿ ಚಿತ್ರಿಸಲಾಗಿದೆ. ಇದರ ಮುಂಭಾಗದಲ್ಲಿನ ಹಾಸುಬಂಡೆಯಲ್ಲಿ ವಿವಿಧ ರೀತಿಯ ಬಿಳಿ ವರ್ಣದಿಂದ ಮೂಡಿಸಿದ ವಿವಿಧ ರೀತಿಯ ಚಿತ್ರಗಳಿದ್ದು ಕಾಲನಹೊಡೆತಕ್ಕಾಗಿ ಮಸುಕಾಗಿದ್ದು ಪೂರ್ಣ ಪ್ರಮಾಣದಲ್ಲಿ ಗುರುತಿಸಲು ಸಾಧ್ಯವಾಗುತ್ತಿಲ್ಲ. ಈ ಬಂಡೆಯ ಮುಂಭಾಗದಲ್ಲಿನ ಹಾಸುಬಂಡೆಯಲ್ಲಿ ನಂತರದ ದಿನಗಳಲ್ಲಿ ಒರಳು ಕಲ್ಲನ್ನು ಮಾಡಿರುತ್ತಾರೆ.

## ವರ್ಣಚಿತ್ರ-2

ಗುಡೇಕೋಟೆಯಿಂದ ಮಹಾದೇವಪುರಕ್ಕೆ ಹೋಗುವ ಮಾರ್ಗ ಮಧ್ಯೆ ಅಂದರೆ ಲಿಂಗನಹಳ್ಳಿ ತಾಂಡದ ಕ್ರಾಸ್‌ನ ಹತ್ತಿರದ ಬಸ್ ನಿಲ್ದಾಣಕ್ಕೆ (ರಸ್ತೆಗೆ ಹೊಂದಿಕೊಂಡ) ಅಭಿಮುಖವಾಗಿರುವ ಗ್ರಾನೈಟ್ ಗುಡ್ಡದಲ್ಲಿನ ಬೃಹತ್ ಚಾಚು ಬಂಡೆಯಲ್ಲಿ ಕೆಂಪು ವರ್ಣದಿಂದ ಮೂಡಿಸಿದ ಎರಡು ಪಾದದ ವರ್ಣಚಿತ್ರಗಳಿವೆ. ಈ ಪಾದಗಳ ವರ್ಣಚಿತ್ರದಲ್ಲಿ ಬೆರಳುಗಳು ಇರುವುದಿಲ್ಲ. ಇದರಲ್ಲಿ ಒಂದು ಪಾದವು ಸುಸ್ಥಿಯಲ್ಲಿದ್ದು ಇದು ಬಹುಶಃ ಸ್ತ್ರೀಯ ಪಾದವಾಗಿರಬಹುದು ಏಕೆಂದರೆ ಪಾದವು ಇನ್ನೊಂದು ಪಾದಕ್ಕಿಂತ ಸ್ವಲ್ಪ ಸಣ್ಣದಾಗಿದೆ. ಇದರಲ್ಲಿ ಅಂಕುಡೊಂಕಾದ ಗೆರೆಗಳನ್ನು ಬಿಡಿಸಿದ್ದು ಪಾದದಾಕಾರದ ಈ ವರ್ಣಚಿತ್ರದ ಕೊನೆಯಲ್ಲಿನ ಗೆರೆಯನ್ನು ದಪ್ಪವಾಗಿ ಮೂಡಿಸಲಾಗಿದೆ. ಇನ್ನೊಂದು ಪಾದದಾಕಾರದ ವರ್ಣಚಿತ್ರವು ಇದ್ದು ಇದರ ಅರ್ಧಭಾಗ ಮಾತ್ರ ಗೋಚರಿಸುತ್ತಿದ್ದು ಸ್ವಲ್ಪ ದೊಡ್ಡದಾಗಿದೆ. ಆದ್ದರಿಂದ ಇದು ಪುರುಷನ ಪಾದವಾಗಿರಬಹುದು ಆದರೆ ಇದರ ಅರ್ಧಭಾಗವು ಕಾಲನಹೊಡೆತಕ್ಕಾಗಿ ಮಸುಕಾಗಿದ್ದು ಪೂರ್ಣ ಪ್ರಮಾಣದಲ್ಲಿ ಗುರುತಿಸಲು ಸಾಧ್ಯವಾಗುತ್ತಿಲ್ಲ. ಹಾಗೂ ಈ ಬಂಡೆಯಲ್ಲಿ ಮತ್ತೇ ಕೆಲವು ವರ್ಣಚಿತ್ರಗಳು ಇದ್ದಿರಬಹುದಾದ ಲಕ್ಷಣಗಳು ಕಂಡುಬರುತ್ತವೆಯಾದರೂ ಅವುಗಳು ಸಂಪೂರ್ಣವಾಗಿ ಮಸುಕಾಗಿವೆ. ಈ ವರ್ಣಚಿತ್ರಗಳನ್ನು ಕಡುಕೆಂಪು ಬಣ್ಣದಲ್ಲಿ ರಚಿಸಿರುವುದನ್ನು ಗಮನಿಸಬಹುದು.



ವರ್ಣಚಿತ್ರ-2 ರ ಮುಂಚಾಚಿದ ಬಂಡೆಗಲ್ಲು



ವರ್ಣಚಿತ್ರ-2 ರ ಬಂಡೆಗಲ್ಲಿನಲ್ಲಿರುವ ಸರಳ ಗೆರೆಗಳಿರುವಚಿತ್ರ



ವರ್ಣಚಿತ್ರ-2 ರ ಬಂಡೆಗಲ್ಲಿನಲ್ಲಿರುವ ಪಾದದ ಚಿತ್ರಗಳು

## ಉಪಸಂಹಾರ

ವರ್ಣಚಿತ್ರಗಳ ಗುಣವೈಶಿಷ್ಟ್ಯವನ್ನು ನೋಡಿದರೆ ಇವು ಪ್ರಾಗೈತಿಹಾಸಿಕ ವರ್ಣಚಿತ್ರಗಳಾಗಿದ್ದು ಇವುಗಳಲ್ಲಿನ ಮನುಷ್ಯಾಕೃತಿಯ ಚಿತ್ರವು ಬಿಳಿ ವರ್ಣದಿಂದ ಮೂಡಿಸಲಾಗಿದ್ದು ಇನ್ನುಳಿದ ಚಿತ್ರಗಳು ಕೆಂಪು ವರ್ಣದಿಂದ ಮೂಡಿಸಿದ ಚಿತ್ರಗಳಿವೆ. ಈ ಒಂದೆ ದೊರೆತ ಚಿತ್ರಗಳಿಗೂ ಈ ಚಿತ್ರಗಳಿಗೂ ಸಾಮ್ಯತೆ ಇರುವುದು ಕಂಡುಬರುತ್ತದೆ. ಇವುಗಳು ನವಶಿಲಾಯುಗ ಸಂಸ್ಕೃತಿಯ ಕಾಲಘಟ್ಟಕ್ಕೆ ಸೇರಿದೆ ಎಂದು ಸ್ಪಷ್ಟವಾಗಿ ಹೇಳಬಹುದು. ನೈಸರ್ಗಿಕವಾಗಿಯೂ ವನ್ಯಜೀವಿಗಳಿಂದಲೂ ಸಂಪದ್ಭರಿತವಾಗಿರುವ ಈ ಸ್ಥಳವು ಆದಿ ಮಾನವನು ನೆಲೆಸಲು ಬೇಕಾದ ಎಲ್ಲ ಲಕ್ಷಣಗಳನ್ನು ಹೊಂದಿದೆ. ಮುಳ್ಳುಹಂದಿ, ಜಿಂಕೆ ಮತ್ತು ಮೀನಿನ ಚಿತ್ರಗಳ ಜೊತೆಗೆ ಮಾನವರ ಚಿತ್ರಗಳು ಅಂದಿನ ಪರಿಸರದೊಂದಿಗಿನ ಅನ್ಯೋನ್ಯತೆಯನ್ನು ಬಿಂಬಿಸುವಲ್ಲಿ ಪ್ರಮುಖ ಪಾತ್ರ

ವಹಿಸಿವೆ. ಈ ನೆಲೆಯು ಅಧ್ಯಯನ ದೃಷ್ಟಿಯಿಂದ ಹೆಚ್ಚಿನ ಮಹತ್ವ ಪಡೆದುಕೊಂಡಿದ್ದು ಮನುಕುಲದ ಚರಿತ್ರೆ ಮೇಲೆ ತನ್ನದೆ ಆದ ಮಹತ್ವವನ್ನು ಹೊಂದಿದೆ.

**ಹಿಂಬದಿಯ ರಕ್ಷಾಪುಟದಲ್ಲಿರುವ ವರ್ಣಚಿತ್ರಗಳ ವಿವರ –**

1. ಬಂಡೆಗಲ್ಲಿನಲ್ಲಿರುವ ಮುಳ್ಳುಹಂದಿಯ ಚಿತ್ರ
2. ಬಂಡೆಗಲ್ಲಿನಲ್ಲಿರುವ ಜಿಂಕೆಯ ಚಿತ್ರ
3. ಬಂಡೆಗಲ್ಲಿನಲ್ಲಿರುವ ಮೀನಿನ ಚಿತ್ರ
4. ಬಂಡೆಗಲ್ಲಿನಲ್ಲಿರುವ ಮನುಷ್ಯಕೃತಿಯ ಚಿತ್ರ

(ಕ್ಷೇತ್ರ ಕಾರ್ಯದಲ್ಲಿ ಸಹಕರಿಸಿದ ನಮ್ಮ ಕಛೇರಿಯ ದಿನಗೂಲಿ ನೌಕರನಾದ ಹನುಮಂತಪ್ಪ ದುರ್ಗಪ್ಪ ಮತ್ತು ಪತ್ರಕರ್ತ ಭೀಮಸಮುದ್ರ ರಂಗನಾಥ ಅವರಿಗೂ ಹಾಗೂ ಈ ಲೇಖನವನ್ನು ತಯಾರಿಸುವಲ್ಲಿ ಸಲಹೆ ಸೂಚನೆಗಳನ್ನಿತ ನನ್ನ ಪಿಎಚ್.ಡಿ. ಮಾರ್ಗದರ್ಶಕರಾದ ಡಾ. ಸರ್ವಮಂಗಳ ಜಿ. ಇವರಿಗೂ ಕೃತಜ್ಞತೆಗಳು)

---

**ಕೊನೆ ಟಿಪ್ಪಣಿಗಳು**

1. ಕೊಟ್ರೇಶ್ ಎಂ, 2011, ***ಬಳ್ಳಾರಿ ಜಿಲ್ಲೆಯ ಕೋಟೆಗಳು,*** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ, ಪು.37.
2. ಚನ್ನಬಸಪ್ಪ ಎಸ್. ಪಾಟೀಲ ಮತ್ತು ವಿನೋದಾ ಪಾಟೀಲ, 1997, ***ಕರ್ನಾಟಕ ಶಾಸನಗಳು*** ಸಂಪುಟ–3 ಬಳ್ಳಾರಿ ಜಿಲ್ಲೆಯ ಶಾಸನಗಳು, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು, ಪು.164.
4. ಕಲಬುರ್ಗಿ ಎಂ. ಎಂ. (ಸಂ)., 1993, ***ಕರ್ನಾಟಕದ ಕೈಫಿಯತ್ತುಗಳು,*** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ, ಪು.406.
5. ಕೊಟ್ರೇಶ್ ಎಂ, 2011, ***ಪೂರ್ವೋಕ್ತ,*** ಪು.38.

**ಆಕರ ಸೂಚಿ**


1. ಶರಣಬಸಪ್ಪ ಕೊಲ್ಕಾರ್, 2002, ***ಕೊಪ್ಪಳ ಹಂಪಿ ಪ್ರದೇಶದ ಪ್ರಾಗಿತಿಹಾಸ ಕಾಲದ ಕಲೆ.*** (ಅಪ್ರಕಟಿತ ಪಿಎಚ್.ಡಿ. ಮಹಾ ಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ.)
2. ಶರಣಬಸಪ್ಪ ಕೊಲ್ಕಾರ್, 2010, ***ಶಿಲಾಯುಗದ ಗವಿಚಿತ್ರಗಳು,*** ಬಸವ ಪ್ರಕಾಶನ ಮತ್ತು ಪುಸ್ತಕ ವ್ಯಾಪಾರಿಗಳು, ಗುಲಬರ್ಗಾ.
3. ಶ್ರೀನಿವಾಸ ಎಲ್, 2010, ***ಹಂಪಿ ಪರಿಸರದ ಆದಿಮಾನವನ ನೆಲೆಗಳು,*** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
4. ಸುಂದರ ಅ, 1994, ***ಕರ್ನಾಟಕ ಪ್ರಾಗೈತಿಹಾಸ ಕಾಲದ ಕಲೆ,*** ಬೆಂಗಳೂರು.
5. Neumayer E, 1983, *Prehistoric Indian Rock Paintings,* Oxford University Press, Delhi.


■

# ಬಾಹುಬಲಿಯ ಜೀವನ ಚರಿತ್ರೆ

**ಅಪ್ಪಣ್ಣ ಎನ್. ಹಂಜೆ**
ಇತಿಹಾಸ ಸಹಾಯಕ ಪ್ರಾಧ್ಯಾಪಕರು
ಸರ್ಕಾರಿ ಪ್ರಥಮ ದರ್ಜೆ ಕಾಲೇಜು
ಹಾಗೂ
ಸ್ನಾತಕೋತ್ತರ ಅಧ್ಯಯನ ಕೇಂದ್ರ
ಕೈಗಾರಿಕಾ ವಸಾಹತು, ನಾಗಸಮುದ್ರ
ರಸ್ತೆ, ಗದಗ–582 102.
ದೂರವಾಣಿ : 9886592927.
appannahanje73@gmail.com

ಭಾರತದಲ್ಲಿ ಇತಿಹಾಸಪೂರ್ವ ಕಾಲಾವಧಿಯ ವಿವಿಧ ಶಿಲಾಯುಗ ಸಂಸ್ಕೃತಿಗಳ ಮಾನವನು ಅನಾಗರಿಕತೆಯಿಂದ ಕ್ರಮೇಣ ನಾಗರಿಕತೆಯೆಡೆಗೆ ಬೆಳೆದು ಬರಲು ಶ್ರಮಣ ಪರಂಪರೆಯ ಫಲಶ್ರುತಿ (ಪ್ರತಿಶ್ರುತಿ), ಸನ್ಮತಿ, ಕ್ಷೇಮಂಕರ, ಕ್ಷೇಮಂಧರ, ಸೀಮಂಕರ, ಸೀಮಂಧರ, ವಿಮಲವಾಹನ, ಚಕ್ಷುಷಂತ (ಚಕ್ಷುಷ್ಮಾನ), ಯಶಸ್ವಿ, ಅಭಿಚಂದ್ರ, ಚಂದ್ರಾಭ, ಮರುದೇವ, ಪ್ರಸೇನಜಿತ, ನಾಭಿರಾಜ (ನಾಭಿರಾಯ) ಎಂಬ ಹದಿನಾಲ್ಕು ಮನುಗಳ (ಕುಲಂಕರರು) ಪಾತ್ರ ಮಹತ್ವದ್ದಾಗಿದೆ ಎಂಬುದು ಜೈನ ಪ್ರಾಚೀನ ಸಾಹಿತ್ಯದಲ್ಲಿನ ನಿರೂಪಣೆಯಿಂದ ಮನದಟ್ಟಾಗುತ್ತದೆ.[1] ಯತಿ ವೃಷಭಾಚಾರ್ಯರು 'ತಿಲೋಯಪಣ್ಣತ್ತಿ'ಯಲ್ಲಿ ದಾಖಲಿಸಿರುವಂತೆ_

**ತ್ಸ್ಲಿಂ ಕಾಲೇ ಹೋದಿ ಹು ಬಾಲಾಣಂ ಣಾಭಿಣಾಲಮಇದೀಹು**
**ತಕ್ಕತ್ತಣೋವದೇಸಂ ಕಹದಿ ಮಣೂ ತೇ ಪಕುವ್ವಂತಿ ॥**

14ನೆಯ ಕುಲಂಕರನು ನವಜಾತ ಶಿಶುವಿನ 'ನಾಭಿನಾಳ'ವನ್ನು ಚೂಪಾದ ಕಲ್ಲಿನಿಂದ ಕತ್ತರಿಸುವ ವಿಧಾನವನ್ನು ತಿಳಿಸಿಕೊಟ್ಟು 'ನಾಭಿರಾಜ' ಎಂತಲೂ, ಆತನು ಅಜನಾಭ ಖಂಡವನ್ನು ಆಳಿದ್ದರಿಂದ 'ಅಜನಾಭ' ಎಂತಲೂ ಪ್ರಸಿದ್ಧನಾಗಿದ್ದನು. ಅತ್ಯಂತ

ಪ್ರತಾಪಿಯಾಗಿದ್ದ ಆತನು ರಾಜ್ಯಭಾರ ಮಾಡಿದ ಅಜನಾಭ ಖಂಡವು ಇಂದಿನ ಭಾರತ ದೇಶವಾಗಿದೆ. ಅಂದು ಈ ದೇಶವನ್ನು 'ಅಜನಾಭವರ್ಷ' ಎಂತಲೂ ಕರೆಯಲಾಗುತ್ತಿತ್ತು. 'ಭಾಗವತ ಪುರಾಣ'ದಲ್ಲಿ (5/4/5, 5/7/3)–

> **ವಿದಿತಾನುರಾಗ ಮಹಾಪೌರ ಪ್ರಕೃತಿ ಜನಪದೋ ರಾಜಾನಾಭಿರಾತ್ಮಜಂ**
> **ಸಮುಸೇತು ರಕ್ಷಾಯಾಮಭಿಷಿಚ್ಯ ಸಹ ಮರುದೇವ್ಯಾ ವಿಶಾಲಾಯಾಂ**
> **ಪ್ರಸನ್ನನಿಪುಣೇನ ತಪಸಾ ಸಮಾಧಿಯೋಗೇನ ಮಹಿಮಾನಮವಾಪ ॥**
> **ಅಜನಾಭಂ ನಾಮ್ಯೈತದ್‌ವರ್ಷ ಭರತಮಿತಿ ಯತ್ ಆರಭ್ಯ ವ್ಯಪದಿಶಂತಿ ॥**

'ನಾಭಿರಾಜನು ತನ್ನ ಮಗನಾದ ಋಷಭನಿಗೆ (ಋಷಭನಾಥ, ಆದಿನಾಥ) ರಾಜ್ಯಾಭಿಷೇಕವನ್ನು ಮಾಡಿ, ತನ್ನ ಕಿರೀಟವನ್ನು ಆತನ ಶಿರದ ಮೇಲೆ ಧಾರಣೆ ಮಾಡಿದನೋ, ಆಗ ಆತನ ಗಂಭೀರ ಮತ್ತು ವೈರಾಗ್ಯ ಪರಿಣಾಮಗಳ ಮುಖಮುದ್ರೆಯಿಂದ ಕೂಡಿದ ರಾಜಸೀ ವೇಷದ ಆ ರೂಪವು ಶೋಭಾಯಮಾನವಾಗಿದ್ದಿತ್ತು. ಅಜನಾಭವರ್ಷ ಎಂದು ಕರೆಯಲ್ಪಡುತ್ತಿದ್ದ ಈ ವರ್ಷವು (ದೇಶವು), ಅನಂತರ ಭರತ ಚಕ್ರವರ್ತಿಯ ಹೆಸರಿನಿಂದ ಭಾರತವರ್ಷ ಎಂದಾಯಿತು' ಎಂಬ ನಿರೂಪಣೆಯಿದೆ.[2] 'ಸ್ಕಂಧಪುರಾಣ'ದಲ್ಲಿ (1/2/37/57)–

> **ಹಿಮಾದ್ರಿ ಜಲಧೇರಂತ ನಾಭಿಖಂಡಮಿತಿ ಸ್ಮೃತಮ್ ॥**

'ಹಿಮಾಲಯ ಪರ್ವತದಿಂದ ಸಮುದ್ರದವರೆಗಿನ ಈ ಪ್ರದೇಶವು ನಾಭಿರಾಜನ ಹೆಸರಿನಿಂದ ಗುರುತಿಸಲ್ಪಟ್ಟಿದೆ' ಎಂದು ಪ್ರಸ್ತಾಪವಿದೆ.[3] ಇದರಿಂದ ಇಂದಿನ ಭಾರತ ದೇಶವು ನಾಭಿರಾಜನ ಕಾಲದಲ್ಲಿ 'ಅಜನಾಭವರ್ಷ' ಎಂತಲೂ, ಆತನ ಮೊಮ್ಮಗನೂ, ಆದಿನಾಥನ ಹಿರಿಯ ಮಗನೂ ಆದ ಭರತ ಚಕ್ರವರ್ತಿಯ ಕಾಲದಲ್ಲಿ 'ಭಾರತವರ್ಷ' ಎಂತಲೂ ಕರೆಯಲ್ಪಟ್ಟಿರುವುದು ಮನದಟ್ಟಾಗುತ್ತದೆ. ಇದನ್ನು ಜೈನ ಪುರಾಣ–ಕಾವ್ಯಗಳಾದ ಜಂಬೂದ್ವೀಪ ಪಣ್ಣತ್ತಿ, ಜಿನಸೇನಾಚಾರ್ಯರ ಮಹಾಪುರಾಣ (17/76, 15/158–159), ಪುರುದೇವ ಚಂಪೂ (6/32), ಧರ್ಮಸೇನಗಣಿಯ ವಸುದೇವಹಿಂಡಿ (ಪ್ರಥಮ ಖಂಡ, ಪು. 186) ಮತ್ತು ಜೈನೇತರ ಪುರಾಣ–ಕಾವ್ಯಗಳಾದ ಅಗ್ನಿಪುರಾಣ (10/10–11), ಮಾರ್ಕಂಡೇಯ ಪುರಾಣ, ಬ್ರಹ್ಮಾಂಡಪುರಾಣ (ಪೂರ್ವಖಂಡ, 2/14), ವಾಯುಪುರಾಣ (30/50–53), ನಾರದಪುರಾಣ (ಪೂರ್ವಖಂಡ, ಅಧ್ಯಾಯ 48), ಲಿಂಗಪುರಾಣ (47/19–23), ಶ್ರೀಮದ್ ಭಾಗವತ್ (5/4/9, 5/5/20), ಸಾರ್ಥ ಏಕನಾಥಿ ಭಾಗವತ (2/44/45), ಸೂರಸಾಗರ, ಪಂಚಮ ಸ್ಕಂದ, ಪು. 150–151), ಶಿವಪುರಾಣ (37/57) ಮೊದಲಾದವುಗಳೂ ದೃಢಪಡಿಸುತ್ತವೆ.[4] ಈ ಹಿನ್ನೆಲೆಯಲ್ಲಿ ರಾಮಾಯಣದ ದಶರಥನ ಮಗ ಮತ್ತು ಶ್ರೀರಾಮನ ಸಹೋದರ ಭರತ, ದುಷ್ಯಂತ ಮತ್ತು ಶಕುಂತಲೆಯ ಮಗನಾದ ಭರತ, ನಾಟ್ಯಶಾಸ್ತ್ರವನ್ನು ರಚಿಸಿದ ಭರತ ಇವರಲ್ಲಿ ಒಬ್ಬನಿಂದ ಈ ದೇಶಕ್ಕೆ 'ಭಾರತ' ಎಂಬ ಹೆಸರು ಬಂದಿದೆ ಎನ್ನುವುದು ಸತ್ಯಕ್ಕೆ ದೂರವಾದುದು.

ಹದಿನಾಲ್ಕನೆಯ ಕುಲಂಕರನಾದ ನಾಭಿರಾಜನು ಕ್ಷತ್ರಿಯ ಕುಲೋತ್ಪನ್ನನಾಗಿದ್ದನು. 'ತೈತ್ತರೀಯ ಬ್ರಾಹ್ಮಣ'ದಲ್ಲಿ (2/6/5)–

**ಕ್ಷತ್ರಸ್ಯ ನಾಭಿರಸಿ ಕ್ಷತ್ರಸ್ಯ ಯೋನಿರಿಸಿ ಇತಿ ॥**

'ನಾಭಿರಾಜನು ಸ್ವತಃ ಕ್ಷತ್ರಿಯನಾಗಿದ್ದು, ಅವನು ಈ ದೇಶದಲ್ಲಿ ಕ್ಷತ್ರಿಯ ಪರಂಪರೆಯನ್ನು ಪ್ರವರ್ತಿಸಿದನು' ಎಂದು ನಿರೂಪಣೆಯಿದೆ.[5] 'ಮೇದಿನಿಕೋಶ'ದಲ್ಲಿ (106/5–6)–

**ನಾಭಿಮುಖ್ಯನೃಪೆ ಚಕ್ರಮಧ್ಯೆ ಕ್ಷತ್ರಿಯೋ ಪುಮಾನ್ ॥**

'ಚಕ್ರದ ಮಧ್ಯದಲ್ಲಿ ನಾಭಿಯು ಮುಖ್ಯವಾಗಿರುವಂತೆ, ಎಲ್ಲ ಕ್ಷತ್ರಿಯ ರಾಜರಲ್ಲಿ ನಾಭಿರಾಜರು ಪ್ರಮುಖರಾಗಿದ್ದರು' ಎಂದು ಪ್ರಸ್ತಾಪವಿದೆ.[6] ಕ್ಷತ್ರಿಯ ಪರಂಪರೆಯ ಮೂಲಕ ಆಧ್ಯಾತ್ಮಿಕ ತತ್ವಜ್ಞಾನದ ಪ್ರವರ್ತನ ಮತ್ತು ಸಂರಕ್ಷಣೆಯಾಗಿದೆ. ಎಂತಲೇ 'ಛಾಂದೋಗ್ಯ ಉಪನಿಷದ್'ದಲ್ಲಿ (1/4/11)–

**ತಸ್ಮಾತ್ ಕ್ಷತ್ರಾತ್ಪರಂ ನಾಸ್ತಿ ॥**

'ಕ್ಷತ್ರಿಯರು ಆಧ್ಯಾತ್ಮಿಕ ತತ್ವಜ್ಞಾನದ ಪ್ರವರ್ತಕರಾದ್ದರಿಂದ ಅವರಿಗಿಂತಲೂ ಶ್ರೇಷ್ಠರು ಯಾರೂ ಇಲ್ಲ' ಎಂದು ಬಣ್ಣಿಸಲಾಗಿದೆ.[7] ಶಂಕರಾಚಾರ್ಯರೂ 'ಗೀತಾ ಶಂಕರಭಾಷ್ಯ'ದಲ್ಲಿ (4/2)–

**ಏವಂ ಕ್ಷತ್ರಿಯ ಪರಂಪರಾ ಪ್ರಾಪ್ತಮಿಮಮ್ ॥**

'ಕ್ಷತ್ರಿಯ ಪರಂಪರೆಯ ಮೂಲಕ ಆಧ್ಯಾತ್ಮಿಕ ತತ್ವಜ್ಞಾನ ಪ್ರಾಪ್ತವಾದುದು' ಎಂದು ಒಪ್ಪಿದ್ದಾರೆ.[8] ಸಿಂಧೂ ನಾಗರಿಕತೆಯ ನೆಲೆಯಲ್ಲಿ ದೊರೆತ ಗಡ್ಡ ಮತ್ತು ವಸ್ತ್ರಧಾರಿ ಪುರುಷ ಪ್ರತಿಮೆಯು ನಾಭಿರಾಜನದೆಂದು ಕೆಲವು ವಿದ್ವಾಂಸರು ಅಭಿಪ್ರಾಯ ಪಟ್ಟಿದ್ದಾರೆ.[9]

ಜೈನಧರ್ಮದ ಪ್ರಾಚೀನ ಪುರಾಣಗಳಾದಿ ಕೃತಿ–ಕಾವ್ಯಗಳು ಮತ್ತು ವೈದಿಕ ಪರಂಪರೆಯ ಋಗ್ವೇದ (4.1.25, 4.6.6, 4.58.3, 7.21.5, 8.8.24, 10.99.3, 10.102.6, 10.136.1, 10.136.2–3, 10.166.1, 1.190.1, 101.21.126), ತೈತ್ತಿರೀಯ ಅರಣ್ಯಕ (2.7.1–2), ಯಜುರ್ವೇದ (ಅಧ್ಯಾಯ 20, ಪದ್ಯ 19, 24), ಅಥರ್ವವೇದ (19.42.4), ಮಹಾಭಾರತ (12/64/20, ಮನುಸ್ಮೃತಿ, ಕೂರ್ಮಪುರಾಣ (ಅಧ್ಯಾಯ 41, ಪದ್ಯ 37–38), ವರಾಹಪುರಾಣ (ಅಧ್ಯಾಯ 74, ಪದ್ಯ 49), ಭಾಗವತಪುರಾಣ (5.2.6, 5.4.8, 5.4.9, 5.4.14, 5.6.28–31, 5.3.20, 5.6.12), ವಿಷ್ಣುಪುರಾಣ, ಮಾರ್ಕಂಡೇಯ ಪುರಾಣ (ಅಧ್ಯಾಯ 1, ಪದ್ಯ 39–41), ನಾರದಪುರಾಣ, ಅಗ್ನಿಪುರಾಣ (ಅಧ್ಯಾಯ 10, ಪದ್ಯ 10–11), ಲಿಂಗಪುರಾಣ (ಅಧ್ಯಾಯ 47, ಪದ್ಯ 19–24), ಪ್ರಭಾಸಪುರಾಣ, ಹರಿವಂಶಪುರಾಣ (9.204), ಬ್ರಹ್ಮಾಂಡಪುರಾಣ (2/14/60), ಶಿವಪುರಾಣ (ಅಧ್ಯಾಯ 4, ಪದ್ಯ 48, 7.2.9), ವಾಯುಪುರಾಣ (33/50–51), ನಾಗರಪುರಾಣ, ವಿಷ್ಣುಪುರಾಣ (ಅಧ್ಯಾಯ 1, ಪದ್ಯ 27–28), ಸ್ಕಂಧಪುರಾಣ (ಅಧ್ಯಾಯ 37, ಪದ್ಯ 57), ಲಿಂಗಪುರಾಣ

(ಅಧ್ಯಾಯ 47, ಪದ್ಯ 19–24), ಬೌದ್ಧ ಧರ್ಮದ ಮಜ್ಜಿಮನಿಕಾಯ, ಧರ್ಮಕೀರ್ತಿಯ ನ್ಯಾಯಬಿಂದು ಮತ್ತು ಹಠಯೋಗ ಪ್ರದೀಪಿಕಾ, ಸಹಸ್ರನಾಮ, ಗೋರಕ್ಷಪಾ (ಪುಟ 156), ಚೌರಾಸೀ ಸಿದ್ಧೋಂಕಾ ದರ್ಶನ (ಪುಟ 157), ಹಠಯೋಗ ಟೀಕಾ (ಪುಟ 854), ಸೂರದಾಸರ ಸೂರಸಾಗರ (150–51), ಸ್ವಯಂಭೂಸ್ತೋತ್ರ (1/3), ಬನಾರಸಿದಾಸರ ಬನಾರಸಿ ವಿಲಾಸ ಮೊದಲಾದ ಪುರಾಣಗಳಾದಿ ಕೃತಿ–ಕಾವ್ಯಗಳಲ್ಲಿಯೂ ಆದಿನಾಥನ ತಂದೆ–ತಾಯಿಯರು, ಪತ್ನಿಯರು, ಪುತ್ರರು, ಲೌಕಿಕ ಜೀವನದಲ್ಲಿ ವೈರಾಗ್ಯ, ಮುನಿದೀಕ್ಷೆ ಸ್ವೀಕಾರ, ತಪಸ್ಸು, ಜ್ಞಾನೋದಯ, ಉಪದೇಶ, ಧರ್ಮಪ್ರಸಾರ, ನಿರ್ವಾಣ ಇತ್ಯಾದಿ ವಿಚಾರಗಳಿಗೆ ಸಂಬಂಧಿಸಿದಂತೆ ನಿರೂಪಣೆಗಳಿವೆ.[10]

ಉತ್ಕೃಷ್ಟ ಕ್ಷತ್ರಿಯ ಕುಲೋತ್ಪನ್ನನೂ, ಆಧ್ಯಾತ್ಮಿಕ ತತ್ವಜ್ಞಾನದ ಪ್ರವರ್ತಕನೂ ಆದ ನಾಭಿರಾಜನು ಅಯೋಧ್ಯೆ ನಗರವನ್ನು ಕೇಂದ್ರ ಮಾಡಿಕೊಂಡು ರಾಜ್ಯಭಾರ ಮಾಡುತ್ತಿದ್ದನು.[11] ಸುಂದರ ರೂಪವನ್ನು ಹೊಂದಿದ ಆತನ ಧರ್ಮಪತ್ನಿ ಮರುದೇವಿ ಶೀಲವತಿ ಮತ್ತು ಸುಕೋಮಲೆಯಾಗಿದ್ದಳು. ಈ ದಂಪತಿಗಳ ಉದರದಲ್ಲಿ ಗಂಡು ಮಗು ಜನಿಸಿತು. ಮರುದೇವಿಗೆ ವೃಷಭಾಕಾರದಿಂದ ಗರ್ಭಕ್ಕವತರಿಸುವ ಸ್ವಪ್ನಪೂರ್ವಕವಾಗಿ ಮಗು ಜನಿಸಿರುವುದರಿಂದ ಮಗುವಿಗೆ 'ವೃಷಭ' ಎಂದು ಹೆಸರಿಟ್ಟರು. 'ವೃಷಭ' ಎಂಬುದಕ್ಕೆ ಧರ್ಮವನ್ನು ಪ್ರಕಾಶಿಸುವವನು, ಎತ್ತು ಎಂದರ್ಥ. 'ಭಾಗವತ ಪುರಾಣ'ದಲ್ಲಿ (5/4/2)–

**ತಸ್ಯ ಹಿ ವಾ ಇತ್ಥಂ ವರ್ಷ್ಮಣಾ ವರೀಯಸಾ ಬ್ರಹ್ಮಚ್ಛಲೋಕೇನ**
**ಚೌಜಸಾ ಬಲೇನ ಶ್ರಿಯಾ ಯಶಸಾ ವೀರ್ಯ ಶೌರ್ಯಾಭ್ಯಾಂ**
**ಚ ಪಿತಾ ಋಷಭ ಇತಿ ನಾಮ ಚಕಾರ ॥**

'ಸುಂದರವಾದ ಸದೃಢ ಶರೀರ, ವಿಪುಲಕೀರ್ತಿ, ಅಪೂರ್ವ ತೇಜ ಅಗಾಧವಾದ ಶಕ್ತಿ, ರಾಜೈಶ್ವರ್ಯ, ಯಶಸ್ಸು, ಪರಾಕ್ರಮ, ಶೌರ್ಯ ಇವುಗಳನ್ನೆಲ್ಲ ಮೈಗೂಡಿಸಿಕೊಂಡಿದ್ದ ಮಗುವಿಗೆ ತಂದೆಯು (ನಾಭಿರಾಜ) ವೃಷಭ ಎಂದು ನಾಮಕರಣ ಮಾಡಿದರು' ಎಂದು ನಿರೂಪಣೆಯಿದೆ.[12] ಮನುಷ್ಯನ ಸಾಮಾಜಿಕ ವ್ಯವಸ್ಥೆಯ ಆದಿಕಾಲದಲ್ಲಿ ಜನಿಸಿದ ವೃಷಭನು 'ಆದಿನಾಥ' ಎಂತಲೂ ಕರೆಯಲ್ಪಟ್ಟನು. ಮಗನಿಗೆ ವಿವಾಹಯೋಗ್ಯವಾದ ವಯಸ್ಸಿನಲ್ಲಿ ತಂದೆ–ತಾಯಿಯರು ಕಚ್ಛ, ಮಹಾಕಚ್ಛ ಅರಸರ ಸಹೋದರಿಯರಾದ ಯಶಸ್ವತಿ (ನಂದಾದೇವಿ) ಮತ್ತು ಸುನಂದಾದೇವಿ ಎಂಬಿಬ್ಬರು ರಾಜಪುತ್ರಿಯರನ್ನು ತಂದು ವಿವಾಹ ಮಾಡಿದರು. ಅಯೋಧ್ಯೆ ಆತನ ರಾಜಧಾನಿಯಾಗಿತ್ತು. ಯಶಸ್ವತಿಯ ಉದರದಲ್ಲಿ ಭರತ, ಶಂಖ, ವಿಶ್ವಕರ್ಮ, ವಿಮಲ, ಸುಭಿಕ್ಷಣ, ಅಮಲ, ಚಿತ್ರಾಂಗ, ಖ್ಯಾತಿಕೀರ್ತಿ, ವರದತ್ತ, ಸಾಗರ, ಯಶೋಧರ, ಅಮರ, ರಥವರ, ಕಾಮದೇವ, ಧ್ರುವ, ವಚ್ಛ, ನಂದ, ಸುರ, ಸುನಂದ, ಕುರು, ಅಂಗ, ವಂಗ, ಕೌಶಲ, ವೀರ, ಕಲಿಂಗ, ಮಗಧ, ವಿದೇಹ, ಸಂಗಮ, ದಶಾರ್ಣ, ಗಂಭೀರ, ವಸುಚರ್ಮಾ, ಸುವರ್ಮಾ, ರಾಷ್ಟ್ರ, ಸುರಾಷ್ಟ್ರ, ಬುಧ್ಧಿಕರ, ವಿವಿಧಕರ, ಸುಯಶಾ, ಯಶಸ್ಕೀರ್ತಿ, ಯಶಸ್ಕರ, ಕೀರ್ತಿಕರ, ಸೂರಣ, ಬ್ರಹ್ಮಸೇನ, ವಿಕ್ರಾಂತ, ನರೋತ್ತಮ, ಪುರುಷೋತ್ತಮ, ಚಂದ್ರಸೇನ, ಮಹಾಸೇನ, ನಭಸೇನ, ಭಾನು, ಸುಕಾಂತ, ಪುಷ್ಪಯುತ,

ಶ್ರೀಧರ, ದುರ್ಧರ್ಷ, ಸುಸುಮಾರ, ದುರ್ಜಯ, ಅಜೇಯಮಾನ, ಸುಧರ್ಮಾ, ಧರ್ಮಸೇನ, ಆನಂದನ, ಆನಂದ, ನಂದ, ಅಪರಾಜಿತ, ವಿಶ್ವಸೇನ, ಹರಿಷೇಣ, ಜಯ, ವಿಜಯ, ವಿಜಯಂತ, ಪ್ರಭಾಕರ, ಅರಿದಮನ, ಮಾನ, ಮಹಾಬಾಹು, ದೀರ್ಘಬಾಹು, ಮೇಘ, ಸುಘೋಷ, ವಿಶ್ವ, ವರಾಹ, ಸುಸೇನ, ಸೇನಾಪತಿ, ಕಪಿಲ, ಶೈಲವಿಚಾರಿ, ಅರಿಂಜಯ, ಕುಂಜರಬಲ, ಜಯದೇವ, ನಾಗದತ್ತ, ಕಶ್ಯಪ, ಬಲ, ಧೀರ, ಶುಭಮತಿ, ಸುಮತಿ, ಪದ್ಮನಾಭ, ಸಿಂಹ, ಸುಜಾತಿ, ಸಂಜಯ, ಸುನಾಭ, ನರದೇವ, ಚಿತ್ತಹರ, ಸುರವರ, ದೃಢರಥ, ಪ್ರಭಂಜನ ಎಂಬ ತೊಂಭತ್ತೊಂಭತ್ತು ಗಂಡು ಮಕ್ಕಳು ಮತ್ತು ಬ್ರಾಹ್ಮಿ ಎಂಬ ಮಗಳು ಜನಿಸಿದರು.[13] ಸುನಂದಾದೇವಿಯ ಉದರದಲ್ಲಿ ಬಾಹುಬಲಿ ಮತ್ತು ಸುಂದರಿ ಎಂಬಿಬ್ಬರು ಮಕ್ಕಳು ಜನಿಸಿದರು.

ಆದಿನಾಥನು ತನ್ನ ಮಕ್ಕಳೆಲ್ಲರಿಗೂ ಯೋಗ್ಯವಾದ ವಯಸ್ಸಿನಲ್ಲಿ ಅನೇಕ ಕಲೆಗಳು ಮತ್ತು ವಿದ್ಯೆಗಳನ್ನು ಕಲಿಸಿದನು. ಇದರ ಕುರಿತು ಜೈನ ಮತ್ತು ಜೈನೇತರ ಪ್ರಾಚೀನ ಪುರಾಣಗಳಾದಿ ಕೃತಿ–ಕಾವ್ಯಗಳಲ್ಲಿ ಸವಿಸ್ತಾರವಾದ ವಿವರಗಳಿವೆ. ಅಭಿದಾನ ರಾಜೇಂದ್ರ ಕೋಶದ 'ಉಸಭ' ಪ್ರಕರಣದಲ್ಲಿ–

**ಲೇಣಂ ಲಿವೀವಿಹಾಣಂ ಜಿಣೇಣ ಬಂಭೀಏ ದಾಹಿಣಕರೇಣ**
**ಗಣಿಂ ಸಂಖಾಣಂ ಸುಂದರೀಏ ವಾಮೇಣ ಉವಇಟ್ಠಂ ॥**

'ಬ್ರಾಹ್ಮಿಯನ್ನು ತಮ್ಮ ಎಡಬದಿಯಲ್ಲಿ ಕುಳ್ಳಿರಿಸಿಕೊಂಡು ಲಿಪಿ ವಿದ್ಯೆಯನ್ನೂ, ಸುಂದರಿಯನ್ನು ತಮ್ಮ ಬಲಬದಿಯಲ್ಲಿ ಕುಳ್ಳಿರಿಸಿಕೊಂಡು ಅಂಕೆ–ಸಂಖ್ಯೆಯ ವಿದ್ಯೆಯನ್ನೂ ಕಲಿಸಿದರು' ಎಂದು ನಿರೂಪಣೆಯಿದೆ. ಇದೇ ಕಾರಣದಿಂದ ಅಕ್ಷರಗಳು ಎಡಬದಿಯಿಂದ ಬಲಬದಿಗೂ, ಅಂಕೆ–ಸಂಖ್ಯೆಗಳು ಮೇಲಿನಿಂದ ಕೆಳಕ್ಕೂ ಸಾಗುತ್ತವೆ. ಹೇಮಚಂದ್ರ ಆಚಾರ್ಯರು 'ತ್ರಿಸಠ ಶಲಾಕಾಪುರುಷ ಚರಿತ'ದಲ್ಲಿ–

**ಅಷ್ಟಾದಶಲಿಪಿ ಬ್ರಾಹ್ಮ್ಯಾ ಅಪಸವ್ಯೇನ ಪಾಣಿನಾ**
**ದರ್ಶಯಾಮಾಸ ಸವ್ಯೇನ ಸುಂದರ್ಯಾಂ ಗಣಿತಂ ಪುನಃ ॥**

'ಭಗವಾನ್‌ರು (ಆದಿನಾಥ) ಬಲಗೈಯಿಂದ ಬ್ರಾಹ್ಮಿಗೆ ಹದಿನೆಂಟು ಲಿಪಿಗಳ ಜ್ಞಾನವನ್ನೂ, ಸುಂದರಿಗೆ ಎಡಗೈಯಿಂದ ಗಣಿತ ಜ್ಞಾನವನ್ನೂ ಮಾಡಿಸಿದರು' ಎಂದು ಹೇಳಿದ್ದಾರೆ. ಅಭಿದಾನ ರಾಜೇಂದ್ರ ಕೋಶದ 'ಉಸಭ' ಪ್ರಕರಣದಲ್ಲಿ–

**ಲೇಖೋ ಲಿಪಿವಿಧಾನಂ ತದ್ದಕ್ಷಿಣ ಹಸ್ತೇನ ಜಿನೇನ ಬ್ರಹ್ಮ್ಯಾ**
**ದರ್ಶಿತಮ್ ಇತಿ ತಸ್ಮಾದ್ ಬ್ರಾಹ್ಮೀ ನಾಮ್ನೀ ಸಾ ಲಿಪಿಃ ॥**

'ಬ್ರಾಹ್ಮಿಗೆ ಕಲಿಸಿದ ಲಿಪಿವಿದ್ಯೆಗೆ 'ಬ್ರಾಹ್ಮಿಲಿಪಿ' ಎಂಬ ಹೆಸರು ಪ್ರಚಲಿತವಾಯಿತು' ಎಂದು ಪ್ರಸ್ತಾಪಪಿದೆ. ಆದಿನಾಥನು ಬ್ರಾಹ್ಮಿಗೆ ಕಲಿಸಿದ ಹದಿನೆಂಟು ಲಿಪಿಗಳು ಬರಬರುತ್ತ ಭಾರತದ ಹದಿನೆಂಟು ಭಾಷೆಗಳಿಗೆ ಆಧಾರವಾಗಿವೆ. ಈ ಹಿನ್ನೆಲೆಯಲ್ಲಿ ಉತ್ತರ ಪ್ರದೇಶದ ಝಾಂಸಿ ಜಿಲ್ಲೆಯ ಲಲಿತಪುರ ತಾಲ್ಲೂಕಿನ ದೇವಗಢದ ಬೆಟ್ಟದಲ್ಲಿರುವ ಶಾಂತಿನಾಥ

ಬಸದಿಯಲ್ಲಿ ಹದಿನೆಂಟು ಭಾಷೆಗಳು ಮತ್ತು ಲಿಪಿಗಳ ಜೈನ ಶಾಸನವಿದೆ. ಇದನ್ನು 'ಜ್ಞಾನಶಿಲೆ' ಎಂದು ಕರೆಯಲಾಗುತ್ತದೆ.[14] ಒಂದೇ ಶಾಸನದಲ್ಲಿ ಹದಿನೆಂಟು ಭಾಷೆಗಳು ಮತ್ತು ಲಿಪಿಗಳನ್ನು ಬಳಸಿರುವುದು ಭಾರತ ದೇಶದಲ್ಲಿಯೇ ಅಪರೂಪದ ಸಂಗತಿಯಾಗಿದೆ. ಇದೇ ರೀತಿ ಖರೋಷ್ಠಿ ಲಿಪಿಯ ಉಗಮವೂ ವೃಷಭನಾಥನಿಂದ (ಆದಿನಾಥ) ಆಗಿದೆ. 'ಖರೋಷ್ಠ' ಎಂಬ ಶಬ್ದವು 'ವೃಷಭೋಷ್ಠ' ಎಂಬ ಶಬ್ದದಿಂದ ಉಂಟಾಗಿದೆ ಎಂಬುದು ಸಾವಿರಾರು ವರ್ಷಗಳ ಪರಂಪರೆಯಿಂದ ವೇದ್ಯವಾಗುತ್ತದೆ. 'ವೃಷಭ'ವು ಪ್ರಾಕೃತದಲ್ಲಿ ಉಸಭ > ರಿಸಭ, ಸಂಸ್ಕೃತದಲ್ಲಿ ವೃಷಭ > ಋಷಭ, ಅಪಭ್ರಂಶದಲ್ಲಿ ವೃಷಭ > ರಿಖಬ ಎಂದಾಗುತ್ತದೆ. ವರ್ಣ ವಿಪರ್ಯದಿಂದ 'ರಿಖಬೋಷ್ಠಿ'ಯು 'ಖರೋಷ್ಠಿ' ಎಂದಾಗಿದೆ. ಅಂದರೆ ವೃಷಭೋಷ್ಠ > ರಿಖಬೋಷ್ಠ > ಖರೋಷ್ಠ > ಖರೋಷ್ಠಿ ಎಂದಾಗಿರುವುದು ಮನದಟ್ಟಾಗುತ್ತದೆ.[15]

ನಾಭಿರಾಜನ ತರುವಾಯ ಸಮಾಜ ವ್ಯವಸ್ಥೆ ಮತ್ತು ಶಾಸನ ತಂತ್ರವನ್ನು ವಿಕಾಸದ ಶಿಖರದವರೆಗೆ ತಲುಪಿಸುವ ಜವಾಬ್ದಾರಿಯನ್ನು ಆದಿನಾಥ ವಹಿಸಿಕೊಂಡನು. ಈತನು_

**ಪುರಗಾಮವಟ್ಟಣಾದೀ ಲೋಯಿಯಸತ್ಥಂ ಚ ಲೋಯವವಹಾರೋ**
**ಧರ್ಮೋೀವಿ ದಯಾಮೂಲೋ ವಿಣೆಮ್ಮಿ ಋ ಆದಿಬ್ರಹ್ಮೇಣ ॥**
**ಅಸಿರ್ಮಷಿ ಕೃಷಿರ್ವಿದ್ಯಾ ವಾಣಿಜ್ಯ ಶಿಲ್ಪಮೇವಚ**
**ಕರ್ಮಾಣೀಮಾನೀ ಷೋಢಾ ಸ್ಯುಃ ಪ್ರಜಾಜೀವನ ಹೇತುವಃ ॥**
**ಪ್ರಜಾಪತಿರ್ಯಃ ಪ್ರಥಮಂ ಜಿಜೀವಿಷುಃ**
**ಶಶಾಸ್ಪ ಕೃಷ್ಯಾದಿಮ ಕರ್ಮಸು ಪ್ರಜಾಃ ॥**

ಪುರ, ಗ್ರಾಮ, ಪಟ್ಟಣ, ನಗರ, ಕೋಟೆ–ಕೊತ್ತಲು, ಕಂದಕ, ಗೋಪುರಗಳ ನಿರ್ಮಾಣ, ಲೋಕವ್ಯವಹಾರ, ದಯಾಮೂಲವಾದ ಅಹಿಂಸಾಧರ್ಮ, ಭೂಮಿಯ ವಿಂಗಡನೆ, ಊರಿನ ರಕ್ಷಣೆ, ರಾಜಧಾನಿಗಳ ವಿನ್ಯಾಸ, ಗ್ರಾಮವಿನ್ಯಾಸ ಮೊದಲಾದ ಹಲವು ಸಿದ್ಧಾಂತಗಳು ಮತ್ತು ಶಸ್ತ್ರ ಲಿಪಿ, ಕೃಷಿ, ವಾಣಿಜ್ಯ, ಶಿಲ್ಪ, ವಿದ್ಯೆಗಳೆಂಬ ಷಟ್ಕರ್ಮಗಳನ್ನು ಜನತೆಗೆ ಬೋಧಿಸಿ ಮನುಕುಲದ ಸಂಸ್ಕೃತಿ ಮತ್ತು ನಾಗರಿಕತೆಗಳಿಗೆ ಒಂದು ವ್ಯವಸ್ಥಿತವಾದ ರೂಪಕೊಟ್ಟು ಜೀವನೋಪಾಯಗಳನ್ನು ತಿಳಿಸಿಕೊಟ್ಟನು. ಲೌಕಿಕ ಬದುಕಿನಲ್ಲಿ ಮೈಮರೆತಿದ್ದ ಆದಿನಾಥನ ಮನಸ್ಸನ್ನು ಪರಿವರ್ತಿಸಿ ವೈರಾಗ್ಯದೆಡೆಗೆ ತಿರುಗಿಸುವ ಉದ್ದೇಶದಿಂದ ದೇವೇಂದ್ರನು ಈತನ ಅಂತಃಪುರದಲ್ಲಿ ಏರ್ಪಡಿಸಿದ ಮುಗಿಲಮರೆಯ ವಿದ್ಯುಲ್ಲತೆಯಂತಿದ್ದ ಅಮರನರ್ತಕಿ ನೀಲಾಂಜನೆ ಎಂಬ ಅಪ್ಸರೆಯ ನೃತ್ಯಪ್ರಸಂಗದ ನಿಮಿತ್ತದಿಂದ_

**ನಾರೀ ರೂಪದಯಂತ್ರಂ**
**ಚಾರುತರಂ ನೋಡೆ ನೋಡೆ ಕರಗಿದುದೀ ಸಂ**
**ಸಾರದನಿತ್ಯತೆ ಮನದೊಳ್**
**ಬೇರೂರಿದುದೀಗಳಿಂತಿದಂ ಕಡೆಗಣಿಪೆಂ ॥**
**ಕೋಟಿ ತೆರದಿಂದಮೆಸೆವ**

ನಾಟಕಮಂ ತೋರಿಮಾಣ್ದಳ್ ಇಲ್ಲಳ್ ಬಗೆಯೊಳ್
ನಾಟುವಿನಮ್ ಅಮರಿ ಸಂಸ್ಕೃತಿ
ನಾಟಕಮುಮನೆ ಎನಗೆ ತೋರಿದಳೀಗಳ್ ॥
ತನುರೂಪ ವಿಭವಯಾವನ
ಧನ ಸೌಭಾಗ್ಯ ಆಯುರಾದಿಗಳ್ಗೆಣೆಕುಡುಮಿಂ
ಚಿನ ಪೊಳಪು ಮುಗಿಲ ಇಂ
ದ್ರನ ಬಿಲ್ ಬೊಬ್ಬುಳಿಕೆಯಪುರ್ವ ಪರ್ವಿದ ಭೋಗಂ ॥

ಜೀವನದಲ್ಲಿ ನಶ್ವರತೆ ಮತ್ತು ಕ್ಷಣಿಕತೆಯನ್ನು (ಶಾಶ್ವತವೆಂದು ನಂಬಿರುವುದೆಲ್ಲವೂ ಕೇವಲ ಕ್ಷಣಿಕವೆಂಬ ಅತ್ಯಂತಿಕ ಸತ್ಯ) ಮನಗಂಡು, 'ನಮಃ ಸಿದ್ಧೇಭ್ಯಃ' ಎಂದು ಉಚ್ಚರಿಸಿ ಸರ್ವಸಂಗ ಪರಿತ್ಯಾಗಿಯಾಗಿ ನಿತ್ಯಸುಖದಾಯಕವಾದ ಮುಕ್ತಿಯನ್ನು ಪಡೆಯಲು ಉದ್ಯುಕ್ತನಾದನು.

ಕಷ್ಟಂ ದುಃಖಾನಳಪರಿ
ಪ್ಲುಷ್ಟಂ ಚಿಃ ಗತಿ ಚತುಷ್ಟಯಂ ಪ್ರಾಣಿಗೆಸಂ
ತುಷ್ಟತೆಯನೆಯ್ದೆ ಪಡೆದುಮ
ಭೀಷ್ಟ ಸುಖಪ್ರದಮದೊಂದೆ ಮುಕ್ತಿಸ್ಥಾನಂ ॥

ಎಂದು ಚಿಂತನೆಗೆ ತೊಡಗಿ, ತನ್ನ ರಾಜ್ಯವನ್ನು ಎಲ್ಲ ಮಕ್ಕಳಿಗೂ ಯಥೋಚಿತವಾಗಿ ವಿಭಾಗಿಸಿಕೊಟ್ಟು, ಪ್ರಜೆಗಳ ಪಾಲನೆ ಮತ್ತು ಪೋಷಣೆಯಲ್ಲಿ ಸಮರ್ಥನಾದ ಹಿರಿಯ ಮಗನಾದ ಭರತನಿಗೆ ಅಯೋಧ್ಯೆಯ ರಾಜಪಟ್ಟವನ್ನೂ, ಬಾಹುಬಲಿಗೆ ಪೌದನಪುರದ (ಪೋದನಪುರ) ಯುವರಾಜಪಟ್ಟವನ್ನೂ ಒಪ್ಪಿಸಿ, ಮುನಿದೀಕ್ಷೆಯನ್ನು ಸ್ವೀಕರಿಸಿ ಆರು ತಿಂಗಳವರೆಗೆ ಪ್ರತಿಮಾ ಯೋಗದಲ್ಲಿ (ಕಾಯೋತ್ಸರ್ಗ) ಘೋರವಾದ ತಪಸ್ಸಿನ ಮೂಲಕ ಕೇವಲಜ್ಞಾನವನ್ನು (ಜ್ಞಾನೋದಯ) ಪಡೆದನು. ಸರ್ವಜ್ಞನಾಗಿ–

ಆಪ್ತೇನೋಚ್ಛಿನ್ನದೋಷೇಣ ಸರ್ವಜ್ಞೇ ನಾಗಮೇಶಿನಾ
ಭವಿತವ್ಯಂ ನಿಯೋಗೇನ ನಾನ್ಯಥಾಹ್ಯಾಪ್ತತಾ ಭವೇತ್ ॥

ರಮಣೀಯವಾದ ಕೈಲಾಸ ಪರ್ವತದ ಮೇಲೆ ದೇವೇಂದ್ರನ ಅಪ್ಪಣೆಯಂತೆ ಕುಬೇರನಿಂದ ನಿರ್ಮಿತವಾದ ಸಮವಸರಣದಲ್ಲಿ (ಧರ್ಮಸಭೆಯ ಮಂಟಪ) ವಿರಾಜಮಾನನಾಗಿ ಮುನಿ-ಕಂತಿಯರಾದಿಯಾಗಿ ಹನ್ನೆರಡು ಸಭೆಯಲ್ಲಿ ಸೇರಿದ ಭವ್ಯಜೀವಿಗಳಿಗೆ ಶಾಂತಿಯ ಸಂದೇಶ ಮತ್ತು ಮೋಕ್ಷಮಾರ್ಗವನ್ನು ಉಪದೇಶಿಸಿದನು.

ಗುಣಮೆಂಟುಂ ಬಂದು ತನ್ನೊಳ್ ಪೆಣೆದಿರೆ ಸುಖಸೋದ್ಧತನುಂ
ಲೋಕಚೂಡಾಮಣಿಯುಂ ಶಶ್ವತ್ತ್ರಿಲೋಕೀ ಪ್ರಭುತನುಮತಿ ವಿಖ್ಯಾತನುಂ
ಭವ್ಯಚಿಂತಾಮಣಿಯುಂ ತಾನಾಗಿ ತನ್ನೊಳ್ ನೆಜಿಯೆ ಪಡೆದು
ತನ್ನಂದಮಂ ತಾನೆ ತನ್ನತ್ತಣೆನಾದಿ ಬ್ರಹ್ಮನೇಕಕ್ಷಣದೊಳೆ ಪರಬ್ರಹ್ಮಸದ್ಮಕ್ಕೆ ಸಂದಂ ॥

ಭವಬಂಧನದಿಂದ ಮುಕ್ತನಾಗಿ ಕೈಲಾಸಪರ್ವತದಲ್ಲಿ (ಹಿಮಾಲಯ ಪರ್ವತ ಸಾಲುಗಳ ಕೆಳಗಿರುವ ಅಷ್ಟಾಪದ ಅಂದರೆ ಇಂದಿನ ಬದರಿ) ನಿತ್ಯಸುಖೋದ್ಭೂತವಾದ ಪರಮ ಬ್ರಹ್ಮತ್ವವನ್ನು ಪಡೆದನು.[16]

ಭರತನು ಅಯೋಧ್ಯೆ ಪ್ರದೇಶವನ್ನು ಸುಖಸಂತೋಷದಿಂದ ಆಳುತ್ತಿದ್ದನು. ಈತನ ಪುಣ್ಯೋದಯದಿಂದ ಆಯುಧಾಗಾರದಲ್ಲಿ (ಶಸ್ತ್ರಾಗಾರ) ಸಹಸ್ರಯಕ್ಷ ರಕ್ಷಿತವೂ ದಿವ್ಯವೂ ಆದ ಚಕ್ರರತ್ನ ಉದ್ಭವಿಸಿತು. ಚಕ್ರರತ್ನದ ನಿಮಿತ್ತದಿಂದ ಚಕ್ರವರ್ತಿಯಾದ ಭರತನು ದಿಗ್ವಿಜಯಯಾತ್ರೆ ಕೈಗೊಂಡು, ಷಟ್ಖಂಡ ಮಂಡಿತವಾದ ಭರತಕ್ಷೇತ್ರವನ್ನೆಲ್ಲ ಜಯಿಸಿ, ಅಯೋಧ್ಯೆಗೆ ಹಿಂದಿರುವಾಗ ಚಕ್ರರತ್ನವು ಪುರಪ್ರವೇಶವನ್ನು ಮಾಡದೆ ನಿಂತಿತು. ಆಗ ಭರತನು ತನಗೆ ಕಪ್ಪ-ಕಾಣಿಕೆಗಳನ್ನು ಕೊಟ್ಟು ಅಧೀನರಾಗದಿರುವವರು ಇರುವುದರಿಂದಲೇ ಚಕ್ರರತ್ನವು ನಿಂತಿದೆ ಎಂದು ಪುರೋಹಿತರಿಂದ ತಿಳಿದನು. ಅಂಥವರು ಯಾರಿದ್ದಾರೆಂದು ವಿಚಾರ ಮಾಡಲಾಗಿ ತನ್ನ ಸಹೋದರರಿದ್ದಾರೆಂದು ತಿಳಿಯಿತು. ಅವರೆಲ್ಲರೂ ಬಂದು ತನಗೆರಗುವಂತೆ ಓಲೆಯನ್ನು ಬರೆಯಿಸಿ ಬಾಹುಬಲಿಯೊಬ್ಬನನ್ನು ಹೊರತುಪಡಿಸಿ ಇತರೆ ಸಹೋದರರ ಬಳಿಗೆ ದೂತರನ್ನು ಕಳುಹಿಸಿದನು. ಆದರೆ ಸ್ವಾಭಿಮಾನಿಗಳಾದ ಸಹೋದರರು ಭರತನಿಗೆ ಅಧೀನರಾಗಲು ಒಪ್ಪದೆ, ಆದಿನಾಥನು ತಪಸ್ಸು ಮಾಡುತ್ತಿದ್ದ ಕೈಲಾಸಪರ್ವತಕ್ಕೆ ಹೋಗಿ ದೀಕ್ಷೆಯನ್ನು ಪಡೆದರು.

ಭರತನು ಬಾಹುಬಲಿಯನ್ನು ಸಾಮೋಪಾಯದಿಂದ ತನ್ನ ಬಳಿಗೆ ಕರೆತರಲು ದಕ್ಷಿಣಾಂಕ (ಕೆಲವು ಕೃತಿಗಳಲ್ಲಿ ಸುಯೋಗ ಎಂದು ಹೇಳಲಾಗಿದೆ) ಎಂಬ ಚತುರನಾದ ಮಂತ್ರಿಯನ್ನು ಕಳುಹಿಸಿದನು. ದಕ್ಷಿಣಾಂಕನು ಬಾಹುಬಲಿಗೆ ನಾನಾ ಚತುರೋಕ್ತಿಗಳಿಂದ ಭರತನ ಬಳಿಗೆ ಬರುವಂತೆ ಪ್ರಾರ್ಥಿಸಿದನು. ಆಗ ಬಾಹುಬಲಿ "ಎಲೈ ದೂತನೆ! ತಂದೆಯು ನನಗೆ ವಿಭಾಗಿಸಿ ಕೊಟ್ಟಿರುವ ಭೂಮಿಯನ್ನು, ಸಹೋದರನ ಪತ್ನಿಯನ್ನು ಪರಿಗ್ರಹಿಸಲಿಚ್ಛಿಸುವವನಂತೆ, ಅಪಹರಿಸಲಿಚ್ಛಿಸುವ ನಿನ್ನ ದೊರೆಗೆ ಲಜ್ಜೆಯಾಗುವುದಿಲ್ಲವೇ? ಜಯೇಚ್ಛೆಯುಳ್ಳ ಮನುಷ್ಯನು ತನ್ನ ಪತ್ನಿಯನ್ನೂ ರಾಜ್ಯವನ್ನೂ ಹೊರತು ಮತ್ತಾವುದನ್ನಾದರೂ ಕೊಡಬಲ್ಲನು. ಆದುದರಿಂದ ಹೆಚ್ಚು ಮಾತನಾಡಬೇಡ. ಏಕಚ್ಛತ್ರಾಂಕಿತವಾದ ಭೂಮಂಡಲವನ್ನು ಅವನಾದರೂ ಅನುಭವಿಸುತ್ತಾನೆ. ಭುಜವಿಕ್ರಮಿಯಾದ ನಾನಾದರೂ ಅನುಭವಿಸುತ್ತೇನೆ. ನಮ್ಮೀರ್ವರ ಪೌರುಷವು ಯುದ್ಧವೆಂಬ ಒರೆಗಲ್ಲಿನಲ್ಲಿ ವ್ಯಕ್ತವಾಗುವುದು. ರಣಾರಂಗಣದಲ್ಲಿ ಏನಾಗುವುದೋ ಆಗಲಿ. ಕ್ಷತ್ರಿಯಪುತ್ರನು ಪರರಿಂದ ಅಪಹರಿಸಲಾಗದ ಯಶಸ್ಸೆಂಬ ಧನವನ್ನು ರಕ್ಷಿಸಬೇಕು. ಭೂಮಿಯೊಳಗೆ ನಿಧಿಗಳನ್ನು ಹೂಳಿಟ್ಟವರನೇಕರು ನಿಧನವನ್ನು ಹೊಂದಿದ್ದಾರೆ. ಯಾರೂ ಅದನ್ನು ಜೊತೆಯಲ್ಲಿ ಒಯ್ಯಲಿಲ್ಲ. ನಿನ್ನ ದೊರೆಯೋರ್ವನು ಮಾತ್ರ ಜೊತೆಯಲ್ಲಿ ಒಯ್ಯುವಂತೆ ತೋರುತ್ತದೆ. ಎಂಥೆಂಥವರ ಸಮಾಧಿ ಸ್ಥಾನಗಳು ಜೇಡರ ಹುಳು, ಹಲ್ಲಿ ಮೊದಲಾದ ಕ್ಷುದ್ರ ಜೀವಗಳ ನಿವಾಸಸ್ಥಾನಗಳಾಗಿಲ್ಲ? ಧೀರನಾದ ಮನುಷ್ಯನು ನಶ್ವರವಾದ ಪ್ರಾಣಗಳನ್ನು ಕೊಟ್ಟಾದರೂ ಮಾನವನ್ನು ರಕ್ಷಿಸಿ ಕೊಳ್ಳಬೇಕು. ಮಾನದಿಂದ ಸಂಪಾದಿಸಲ್ಪಟ್ಟ ಯಶಸ್ಸು ಯಾವಾಗಲೂ ವಿಶ್ವವನ್ನಲಂಕರಿಸುವುದು. ನಿನ್ನಲ್ಲಿ ಹೆಚ್ಚು ಮಾತೇಕೆ? ಹೋಗು. ನಿನ್ನ

ದೊರೆಯು ಯುದ್ಧ ಸನ್ನದ್ಧನಾಗುವಂತೆ ಹೇಳು" ಎಂದು ಹೇಳಿ ಕಳುಹಿಸಿದನು. ಇತ್ತ ತಾನು ಯುದ್ಧಕ್ಕೆ ಅಣಿಯಾದನು. ಭರತನೂ ದೂತನಿಂದ ಸಮಾಚಾರವನ್ನೆಲ್ಲ ತಿಳಿದು ಯುದ್ಧಕ್ಕೆ ಸನ್ನದ್ಧನಾದನು.

ಉಭಯ ಪಕ್ಷಗಳ ಸೈನ್ಯಗಳೂ ಪ್ರಳಯ ಕಾಲದ ಸಮುದ್ರಗಳಂತೆ ಉಕ್ಕೇರಿದವು. ಆಗ ಉಭಯ ಪಕ್ಷಗಳ ಮಂತ್ರಿಗಳು ಸೇರಿ "ಈ ಯುದ್ಧದಿಂದ ವ್ಯರ್ಥವಾಗಿ ಉಭಯ ಪಕ್ಷಗಳ ಅನೇಕ ಸೈನಿಕರು ನಾಶವಾಗುವರಲ್ಲದೆ, ವಜ್ರದೇಹಿಗಳೂ ಅಪಮೃತ್ಯುರಹಿತರೂ ಆದ ಭರತ ಮತ್ತು ಬಾಹುಬಲಿಗಳಿಗೆ ಯಾವ ಹಾನಿಯೂ ಆಗುವುದಿಲ್ಲ. ಆದುದರಿಂದ ಅವರೀರ್ವರೇ ಪರಸ್ಪರವಾಗಿ ಯುದ್ಧವನ್ನು ಮಾಡುವಂತೆ ಪ್ರಾರ್ಥಿಸಿಕೊಳ್ಳಬೇಕು" ಎಂದು ಯೋಚಿಸಿದರು. ಈ ವಿಷಯವನ್ನು ತಂತಮ್ಮ ದೊರೆಗಳ ಬಳಿಗೆ ಹೋಗಿ ತಿಳಿಸಿದರು. ಭರತ ಮತ್ತು ಬಾಹುಬಲಿ ಇರ್ವರೇ 'ದೃಷ್ಟಿಯುದ್ಧ', 'ಜಲಯುದ್ಧ' ಮತ್ತು 'ಮಲ್ಲಯುದ್ಧ'ಗಳನ್ನು ಮಾಡಿ, ಜಯ ಪರಾಜಯಗಳನ್ನು ನಿಶ್ಚಯಿಸಿಕೊಳ್ಳುವಂತೆ ಪ್ರಾರ್ಥಿಸಿಕೊಂಡರು. ಆ ಹಿತವಚನಕ್ಕೆ ಭರತ ಮತ್ತು ಬಾಹುಬಲಿ ಇಬ್ಬರೂ ಒಪ್ಪಿ ಹಾಗೆ ಪರಸ್ಪರವಾಗಿ ಯುದ್ಧವನ್ನು ಮಾಡಲು ಅಣಿಯಾದರು.

ಸಹೋದರರಿಬ್ಬರೂ ನೀಲ ಮತ್ತು ನಿಷಧ ಪರ್ವತಗಳಂತೆ ಸಮಚಿತ್ತರಾಗಿ ಎದುರಾದರು. ದೃಷ್ಟಿಯುದ್ಧ ಆರಂಭವಾಗುವುದು. ಸ್ತಬ್ಧತೆ ದಿಕ್ಕನ್ನೆಲ್ಲ ಆವರಿಸುವುದು. ನಿಶ್ಚಲಚಿತ್ತನಾದ ಬಾಹುಬಲಿಯು ತನ್ನ ರೆಪ್ಪೆಯನ್ನು ಪಿಳಿಕಿಸದೆ, ಕಣ್ಣಾಲೆಗಳನ್ನು ಮಿಸುಕಾಡಿಸದೆ, ದೃಷ್ಟಿಬೀರಿ ನಿಲ್ಲುವನು. ಅವನ ಮುಖದಿಂದ ಹೊರಹೊಮ್ಮಿದ ತೇಜಸ್ಸು ಭರತನ ಕಣ್ಣು ಕುಕ್ಕುವುದು. ಒಂದು ಕ್ಷಣ ಭರತನ ಕಣ್ಣಾಲೆಗಳು ಹೊಯ್ದಾಡಿ ಅವನ ಚಿತ್ತವನ್ನು ಕದಲುವುದು. ಇದನ್ನು ಕಂಡ ಹಿರಿಯರು ಬಾಹುಬಲಿ ವಿಜಯಿಯಾದನೆಂದು ಸಾರುವರು. ಮದವೇರಿದ ಆನೆಗಳಂತೆ ಸಹೋದರರಿಬ್ಬರೂ ತಾವರೆ ಕೊಳಕ್ಕೆ ಹೊಗುವರು. ಒಬ್ಬನೆಡೆ ಮತ್ತೊಬ್ಬ ನೀರು ಚಿಮ್ಮುತ್ತ ಕೊಳವೇ ಕಂಪಿಸುವಂತೆ ಮಾಡುವರು. ಬಲವಾದ ಬಾಹುಗಳನ್ನು ಹೊಂದಿದ ಬಾಹುಬಲಿಯು ಐರಾವತವು ತನ್ನ ಸೊಂಡಿಲಿನಿಂದ ರಭಸವಾಗಿ ಬಡಿದು ಚಿಮ್ಮುವಂತೆ ಭರತನ ಮುಖದೆಡೆಗೆ ನೀರು ಚಿಮ್ಮುವನು. ಆ ರಭಸವನ್ನು ಎದುರಿಸಲಾರದೆ ಭರತನ ಮುಖ ಬೇರೆಡೆ ತಿರುಗುವುದು. ಇದನ್ನು ಕಂಡ ಹಿರಿಯರು ಬಾಹುಬಲಿ ವಿಜಯಿಯಾದನೆಂದು ಸಾರುವರು. ಸಹೋದರರಿಬ್ಬರೂ ಮಲ್ಲಯುದ್ಧಕ್ಕಾಗಿ ಕಣವನ್ನು ಪ್ರವೇಶಿಸಿ, ತಮ್ಮ ಬಲವನ್ನು ಪೂಣಕ್ಕೊಡ್ಡುವರು. ಗಂಭೀರ ಗತಿಯಲ್ಲಿ ಕಣವನ್ನು ಸುತ್ತು ಹಾಕುತ್ತ, ಪಟ್ಟು ಹಾಕಿ ಮೇಲೆ ಬೀಳುವರು. ಅವರು ಹಿಡಿದ ಪಟ್ಟು, ಒಗೆವ ರೀತಿ, ಕೊಡಕು ಹಾಕುವ ಬಗೆ, ಬಿಡಿಸಿಕೊಳ್ಳುವ ಜಾಣ್ಮೆಯನ್ನು ಕಂಡು ಪ್ರೇಕ್ಷಕರು ಹೌಹಾರುವರು. ಮಿಂಚಿನಂತೆ ಮೇಲೆರಗಿದ ಬಾಹುಬಲಿಯು ಭರತನನ್ನು ಹಿಡಿದು ತೃಣಸಮಾನನೇನೋ ಎನ್ನುವಂತೆ ಮೇಲೆತ್ತಿ ನಿಲ್ಲುವನು. ಮರಕತಗಿರಿ ಕನಕಾಚಲವನ್ನು ಎತ್ತಿ ಹಿಡಿದಂತಿತ್ತು ಆ ದೃಶ್ಯ. ಇನ್ನೇನು ನೆಲಕ್ಕೆ ಅಪ್ಪಳಿಸಬೇಕು, ಅಷ್ಟರಲ್ಲಿ ತನ್ನ ಅಣ್ಣ ವಿಶ್ವದ ಪ್ರಭು ಎಂಬ ನೆನಪು ಅವನಿಗಾಗುವುದು. 'ಸಾಮ್ರಾಟನಾದ ಅಣ್ಣನನ್ನು ಈ ಬಗೆಯಲ್ಲಿ ಅವಮಾನಗೊಳಿಸುವುದೆ?

ಛೆ! ಛೆ! ಸಲ್ಲದು' ಎಂದು ಭಾವಿಸಿ, ಅವನನ್ನು ಮೆಲ್ಲನೆ ಕೆಳಗಿಳಿಸುವನು. ಭರತನ ಬೆಂಬಲಿಗರು ಅವಮಾನದಿಂದ ತಲೆತಗ್ಗಿಸುವರು. ಹಿರಿಯರು ಬಾಹುಬಲಿಯ ವಿಜಯವನ್ನು ಸಾರುವರು.

ಮೂರೂ ಯುದ್ಧಗಳಲ್ಲಿ ಬಾಹುಬಲಿ ಜಯಶಾಲಿಯಾದನು. ಇದರಿಂದ ಷಟ್ಖಂಡಗಳನ್ನು ಜಯಿಸಿದ್ದ ಭರತನಿಗೆ ಅಪಮಾನವಾಯಿತು. ಅದರಿಂದ ಅವನು ಬಹುಕುಪಿತನಾಗಿ ಬಾಹುಬಲಿಯ ಮೇಲೆ ತನ್ನ ಸುದರ್ಶನ ಚಕ್ರವನ್ನೇ ಪ್ರಯೋಗಿಸಿದನು. ಆದರೆ ಬಾಹುಬಲಿಯನ್ನು ಆ ಚಕ್ರವು ಸ್ಪರ್ಶಿಸಲಾರದೆ ಅವನಿಗೆ ಬಲವಂದು ಅವನ ಬಲಭುಜದ ಪಕ್ಕದಲ್ಲಿ ಸ್ತಬ್ಧವಾಗಿ ನಿಂತಿತು. ಆಗ ಭರತನನ್ನು ಎಲ್ಲರೂ ಧಿಕ್ಕರಿಸಿದರು. ಬಾಹುಬಲಿ ತನ್ನ ಬಾಹುಗಳಿಂದ ಭರತನನ್ನು ಎತ್ತಿ ತಿರುಗಿಸಿ ನೆಲಕ್ಕಿಳಿಸಿದನು. ಬಾಹುಬಲಿ ಜಯಿಸಿದನಾದರೂ ಆತನ ಚಿತ್ತಕ್ಷೇತ್ರದಲ್ಲಿ ವೈರಾಗ್ಯವೆಂಬ ಅಂಕುರವು ಮೊಳೆಯಿತು.

ಬಾಹುಬಲಿ ಭರತನಿಗೆ "ಎಲೈ ರಾಜಶ್ರೇಷ್ಠನೇ! ಕೇಳು. ಅಭೇದ್ಯವಾದ ನನ್ನ ಶರೀರವೆಂಬ ಪರ್ವತದಲ್ಲಿ ನೀನು ಚಕ್ರವನ್ನು ಪ್ರಯೋಗಿಸಿದೆ. ಅದು ನನ್ನನ್ನೇನೂ ಮಾಡಲಾರದಾಯಿತು. ಸಹೋದರರನ್ನೆಲ್ಲ ನಾಶಮಾಡಿ ನೀನೊರ್ವನೇ ರಾಜ್ಯವನ್ನನುಭವಿಸಬೇಕೆಂದು ಬಯಸಿದೆ. ಆದಿಬ್ರಹ್ಮನ (ಆದಿನಾಥ) ಜ್ಯೇಷ್ಠಪುತ್ರನೂ ಭರತಚಕ್ರೇಶ್ವರನೂ ಆದ ನೀನು ಧರ್ಮವನ್ನೂ ಕೀರ್ತಿಯನ್ನೂ ಗಳಿಸಿದೆಯಲ್ಲವೆ? ಪಾಪಮಯವಾದ ರಾಜ್ಯಶ್ರೀಯನ್ನು ಬೇರೆಯವರು ಭೋಗಿಸಬಾರದೆಂದೂ ತಿಳಿಯುತ್ತಿ. ನೀನು ಬಯಸಿರುವ ರಾಜ್ಯಶ್ರೀಯು ನಿನಗೇ ಪ್ರಿಯಳಾಗಿರಲಿ. ನನಗೆ ಈ ಶ್ರೀಯು ಯೋಗ್ಯಳಲ್ಲ. ನಿಷ್ಕಂಟಕಳಾದ ತಪೋಲಕ್ಷ್ಮಿಯನ್ನು ವಶಪಡಿಸಲಿಚ್ಛಿಸುವ ನನಗೆ ವಿಷಕಂಟಕಗಳುಳ್ಳ ಪೊದರಿನಂತಿರುವ ಈ ರಾಜ್ಯಲಕ್ಷ್ಮಿಯು ಸರ್ವಥಾ ತ್ಯಾಜ್ಯಳಾಗಿರುತ್ತಾಳೆ. ನಾನು ಚಪಲತೆಯಿಂದ ನಿನಗೆ ಮಾಡಿದ ಅಪರಾಧವನ್ನು ಕ್ಷಮಿಸು. ಇದೋ ನಾನು ತಪಸ್ಸಿಗೆ ಹೋಗುತ್ತೇನೆ" ಎಂದನು. ಈ ಮಾತುಗಳನ್ನು ಕೇಳಿ ಭರತನು ತಾನು ಮಾಡಿದ ದುಷ್ಕಾರ್ಯಕ್ಕೆ ಪಶ್ಚಾತಾಪ ಪಟ್ಟು, ಬಾಹುಬಲಿಗೆ ದೈನ್ಯವಚನಗಳನ್ನು ನುಡಿದು ಆತನನ್ನು ಸಮಾಧಾನಪಡಿಸಲು ಪ್ರಯತ್ನಿಸಿದನು. ಆದರೆ ಬಾಹುಬಲಿ ವೈರಾಗ್ಯ ಸಂಕಲ್ಪದಿಂದ ವಿಚಲಿತನಾಗದೆ ತನ್ನ ರಾಜ್ಯಸಂಪತ್ತನ್ನೆಲ್ಲ 'ಮಹಾಬಲಿ' ಎಂಬ ಮಗನಿಗೆ ವಹಿಸಿ, ತಾನು ಆದಿನಾಥನ ಸಾನ್ನಿಧ್ಯಕ್ಕೆ ಹೋಗಿ ಸಕಲ ಸಂಗ ಪರಿತ್ಯಾಗ ಮಾಡಿ, ದಿಗಂಬರ ದೀಕ್ಷೆಯನ್ನು ತೆಗೆದುಕೊಂಡು ಅವಿಚಲಿತವಾದ ತಪಸ್ಸಿಗೆ ನಿಂತನು.

ಬಾಹುಬಲಿ ನಿರಂತರವಾಗಿ ಕಠಿಣ ತಪಸ್ಸಿನಲ್ಲಿ (ಧ್ಯಾನ) ತೊಡಗಿದನು. ಆ ಸಂದರ್ಭದಲ್ಲಿ ಈತನ ಪಾದಗಳ ಬಳಿ ಹುತ್ತಗಳು ಬೆಳೆದವು. ಅವುಗಳಲ್ಲಿ ಕುಕ್ಕುಟ ಸರ್ಪಗಳು (ಹಾವಿನ ಹೆಡೆಯಂತೆ ತಲೆ, ಕೋಳಿಯ ಮೈಯಂತೆ ಮೈಯುಳ್ಳ ಒಂದು ಕಾಲ್ಪನಿಕ ಪ್ರಾಣಿ, ವಿಷಜಂತು) ಹರಿದಾಡತೊಡಗಿದವು. (ಇದರಿಂದಲೇ ಬಾಹುಬಲಿಯನ್ನು 'ಕುಕ್ಕುಟೇಶ್ವರ' ಎಂದು ಕರೆಯಲಾಗಿದೆ. 'ಗೊಮ್ಮಟಸಾರ'ದಲ್ಲಿ 'ಕುಕ್ಕುಡಜಿನ' ಎಂಬ ಪ್ರಸ್ತಾಪವಿದೆ). ಕಾಡು ಪ್ರಾಣಿಗಳು ಈತನ ಶರೀರವನ್ನು ತಿಕ್ಕಿದವು. ಶರೀರಕ್ಕೆ ಬಳ್ಳಿಗಳು

ಸುತ್ತಿಕೊಂಡವು. ಕೂದಲುಗಳು ಜಡೆಗಟ್ಟಿ ಭುಜಗಳವರೆಗೂ ಇಳಿಬಿದ್ದವು. ಆ ಎಲ್ಲ ಉಪಸರ್ಗಗಳನ್ನು ಸಹಿಸಿಕೊಂಡು ಒಂದು ವರ್ಷ ಕಾಲ ತಪಸ್ಸಿನಲ್ಲಿ ತೊಡಗಿದನಾದರೂ, ಆತನ ಮನಸ್ಸಿನಲ್ಲಿ "ನಾನು ಭರತನ ರಾಜ್ಯದೊಳಗೆ ತಪಸ್ಸನ್ನು ಮಾಡುತ್ತಿದ್ದೇನಲ್ಲ" ಎಂಬ ಚಿಂತೆಯಿತ್ತು. ಎಂತಲೇ ಆತನಿಗೆ ಕೇವಲಜ್ಞಾನ (ಜ್ಞಾನೋದಯ) ಪ್ರಾಪ್ತವಾಗಲಿಲ್ಲ. ಇದನ್ನು ಆದಿನಾಥನಿಂದ ತಿಳಿದುಕೊಂಡ ಭರತನು ಬಾಹುಬಲಿಯ ಬಳಿಗೆ ಹೋಗಿ ಅವನ ಕಾಲುಗಳಿಗೆರಗಿ ಪೂಜಿಸಿ "ಯೋಗಿಪುಂಗವನೆ! ನೀನು ಗೆದ್ದು ನನಗಿತ್ತ ನೆಲವಿದು, ನಿನ್ನದಲ್ಲದೆ ನನ್ನದಲ್ಲ. ಇದನ್ನು ಬಗೆಯದೆ ನೀನು ನಿಜಾತ್ಮಪರನಾಗು" ಎಂದು ಪ್ರಾರ್ಥಿಸಿದನು. ಆಗ ಬಾಹುಬಲಿಯ ಮನಸ್ಸಿನಲ್ಲಿನ ಚಿಂತೆ ದೂರವಾಗಿ ಆತನಿಗೆ ಕೇವಲಜ್ಞಾನ ಪ್ರಾಪ್ತವಾಯಿತು.

ಶ್ವೇತಾಂಬರ ಪಂಥದ ಕೃತಿ-ಕಾವ್ಯಗಳಲ್ಲಿ ಬಾಹುಬಲಿ ಭರತನೊಂದಿಗೆ ಕೈಗೊಂಡ ಯುದ್ಧಗಳು, ತಪಸ್ಸು, ಕೇವಲಜ್ಞಾನದ ಕುರಿತು ಅಲ್ಪಸ್ವಲ್ಪ ವ್ಯತ್ಯಾಸ ಗೋಚರಿಸುತ್ತದೆ. "ಬಾಹುಬಲಿ ಭರತನೊಂದಿಗೆ ಕೈಗೊಂಡಿದ್ದ ಧರ್ಮಯುದ್ಧಗಳಲ್ಲಿ (ದೃಷ್ಟಿಯುದ್ಧ, ಧ್ವನಿಯುದ್ಧ, ಬಾಹುಯುದ್ಧ, ಮುಷ್ಠಿಯುದ್ಧ) ಜಯಿಸಿದನಾದರೂ ಸ್ವಲ್ಪ ಹೊತ್ತಿನಲ್ಲಿಯೇ ತನ್ನ ನಡವಳಿಕೆಗೆ ತಾನೇ ಪಶ್ಚಾತ್ತಾಪ ಹೊಂದಿ ಭರತನ ಕಾಲುಗಳ ಮೇಲೆ ಬಿದ್ದು ಕ್ಷಮಾಪಣೆ ಬೇಡಿಕೊಳ್ಳುತ್ತಾನೆ. ಎಲ್ಲವನ್ನೂ ತೊರೆದು ಅಲ್ಲಿಯೇ ತಪಸ್ಸಿಗೆ ನಿಲ್ಲುತ್ತಾನೆ. ತಪಸ್ಸಿಗೆ ನಿಂತ ಸಂದರ್ಭದಲ್ಲಿ ಈತನ ಕಾಲುಗಳ ಬಳಿಯಲ್ಲಿ ಹುತ್ತಗಳು ಬೆಳೆದವು. ಮೈಮೇಲೆ ಸರ್ಪಗಳು ಹರಿದಾಡಿದವು. ಬಳ್ಳಿಗಳು ಹಬ್ಬಿದವು. ಹಕ್ಕಿಗಳು ಗೂಡು ಕಟ್ಟಿದವು. ಕಾಡುಕೋಣಗಳು ಶರೀರಕ್ಕೆ ಕೊಂಬು ತಿಕ್ಕಿದವು. ಖಡ್ಗಮೃಗಗಳು ಮೈಯ್ಯೊರಗಿ ಮಲಗಿದವು. ಚಮರಿ ಮೃಗಗಳು ಈತನನ್ನು ವೃಕ್ಷವೆಂದು ಬಗೆದು ನಾಲಿಗೆಯಿಂದ ನೆಕ್ಕಿದವು. ಈ ಎಲ್ಲ ಉಪಸರ್ಗಗಳ ಅರಿವೇ ಇಲ್ಲದ ಬಾಹುಬಲಿ ಒಂದು ವರ್ಷದವರೆಗೆ ಪ್ರತಿಮಾಯೋಗದಲ್ಲಿ (ಕಾಯೋತ್ಸರ್ಗ / ಖಡ್ಗಾಸನ) ನಿಂತು ತಪಸ್ಸುಗೈದರೂ ಕೇವಲಜ್ಞಾನ ಪ್ರಾಪ್ತಿಯಾಗುವುದಿಲ್ಲ. ಈ ಸಂಗತಿಯನ್ನು ತಿಳಿದ ಈತನ ತಂದೆ ಆದಿನಾಥನು ಬ್ರಾಹ್ಮಿ-ಸುಂದರಿಯರನ್ನು ಈತನಲ್ಲಿಗೆ ಕಳುಹಿಸಿ ಈತನ ಅಭಿಮಾನವನ್ನು ಹೋಗಲಾಡಿಸಲು ಹೇಳಿದನು. ಅದರಂತೆ ಅವರು ಈತನ ಬಳಿಗೆ ಬಂದು ಬಳ್ಳಿಯಲ್ಲಿ ಮುಚ್ಚಿಹೋಗಿದ್ದ ಈತನನ್ನು ತೆರೆದು ವಂದಿಸುತ್ತ, 'ಅಣ್ಣ ಆನೆಯ ಮೇಲೆ ಕುಳಿತವರಿಗೆ ಕೇವಲಜ್ಞಾನ ದೊರೆಯದೆಂದು ತಿಳಿಸಲು ತಂದೆಯವರು ಕಳುಹಿಸಿದ್ದಾರೆ' ಎಂದು ಆಡಿಕೊಂಡರು. ಆಗ ಬಾಹುಬಲಿ 'ನಾನು ಆನೆಯ ಮೇಲೆ ಕುಳಿತಿದ್ದೇನೆಯೇ? ಓ! ಹೌದು, ತನಗಿಂತಲೂ ಮೊದಲೇ ದೀಕ್ಷೆ ತೆಗೆದುಕೊಂಡು ಹಿರಿಯರಾದ ತಮ್ಮಂದಿರಿಗೆ ನಮಸ್ಕರಿಸಲು ನನ್ನ ಅಭಿಮಾನವೆಂಬ ಆನೆ ಅಡ್ಡ ಬಂದಿತು! ಆದ್ದರಿಂದಲೇ ನನಗೆ ಕೇವಲಜ್ಞಾನ ಪ್ರಾಪ್ತಿಯಾಗಲಿಲ್ಲ, ಈ ಅಭಿಮಾನದ ಆನೆಯಿಂದ ಇಳಿಯಬೇಕು' ಎಂದುಕೊಂಡು ತನ್ನಲ್ಲಿ ನೆಲೆಸಿರುವ ಅಭಿಮಾನವನ್ನು ಕಿತ್ತೊಗೆದೊಡನೆ ಕೇವಲಜ್ಞಾನ ಪ್ರಾಪ್ತವಾಯಿತು".[17]

ಬೊಪ್ಪಣ ಪಂಡಿತನು ಕ್ರಿ.ಶ. ಸುಮಾರು 12ನೆಯ ಶತಮಾನದಲ್ಲಿ ರಚಿಸಿರುವ 'ಗೊಮ್ಮಟಜಿನೇಂದ್ರಗುಣಸ್ತವ' ಎಂಬ ಶಾಸನಕಾವ್ಯದಲ್ಲಿ-

ಧೃತಜಯಬಾಹು ಬಾಹುಬಳಿ ಕೇವಳಿರೂಪಸಮಾನ ಪಂಚವಿಂ
ಶತಿಸಮುಪೇತ ಪಂಚಶತಚಾಪಸಮುಂನತಿಯುಕ್ತಮಪ್ಪ ತ
ತ್ಪ್ರತಿಕೃತಿಯಂ ಮನೋಮುದದೆ ಮಾಡಿಸಿದಂ ಭರತಂ ಜಿತಾಖಿಳ
ಕ್ಷಿತಿಪತಿಚಕ್ರಿ ಪೌದನಪುರಾಂತಿಕದೊಳ್ಪುರುದೇವನಂದನಂ ॥

'ವಿಜಯದ ಬಾಹುಗಳನುಳ್ಳ (ತೋಳುಗಳು) ಬಾಹುಬಲಿ ಕೇವಲಿಯ (ಮುಕ್ತಜೀವನ) ರೂಪಕ್ಕೆ ಸಮಾನವಾಗಿರುವಂತೆ 525 ಬಿಲ್ಲುಗಳಷ್ಟು ಒಳ್ಳೆಯ ಎತ್ತರದ ಆತನ ಪ್ರತಿರೂಪವನ್ನು (ಪ್ರತಿಮೆಯನ್ನು) ವೃಷಭನಾಥನ ಮಗನೂ, ಸಮಸ್ತ ಪ್ರಭುಗಳನ್ನು ಸಾಧಿಸಿದವನೂ ಆದ ಚಕ್ರವರ್ತಿ ಭರತನು ಪೌದನಪುರದ ಸಮೀಪದಲ್ಲಿ ಸಂತೋಷದಿಂದ ನಿರ್ಮಿಸಿದನು' ಎಂದು ಪ್ರಸ್ತಾಪಿಸಿದ್ದಾನೆ.[18] "ಈ ವಿಚಾರ ಜಿನಸೇನಾಚಾರ್ಯರ 'ಪೂರ್ವಪುರಾಣ'ದಲ್ಲಾಗಲಿ, ಪಂಪನ 'ಆದಿಪುರಾಣ'ದಲ್ಲಾಗಲಿ ಬಂದಿಲ್ಲವೆಂದು ಗೋವಿಂದ ಪೈಗಳು ಹೇಳಿದ್ದಾರೆ. ಆದ್ದರಿಂದ ಈ ಕಥಾಂಶವನ್ನು ಬೊಪ್ಪಣ ಪಂಡಿತನು ಎಲ್ಲಿಂದ ಸಂಗ್ರಹಿಸಿದನೆಂಬುದು ಶೋಧಿಸಬೇಕಾದ ವಿಷಯ. ಆದರೆ ಭರತ–ಬಾಹುಬಲಿಯ ವ್ಯಾಯೋಗ, ಬಾಹುಬಲಿಯ ತಪಶ್ಚರ್ಯೆ ಮೊದಲಾದ ವಿವರಗಳ ಮುಖ್ಯಾಂಶಗಳನ್ನು ಆತನು ಆ ಇಬ್ಬರು ಪೂರ್ವಕವಿಗಳನ್ನು ಓದಿಯೇ ಗ್ರಹಿಸಿರಬಹುದು".[19]

"ವಿಮಲಸೂರಿಯ ಪಉಮಚರಿಯ, ರವಿಷೇಣನ ಪದ್ಮಚರಿತ, ಹರಿಷೇಣನ ಮಹಾಪುರಾಣ, ಗುಣಭದ್ರಾಚಾರ್ಯರ ಉತ್ತರಪುರಾಣ, ಚಾವುಂಡರಾಯನ ಚಾವುಂಡರಾಯಪುರಾಣ, ಪಂಪನ ಆದಿಪುರಾಣ, ರತ್ನಾಕರನ ಭರತೇಶವೈಭವ, ದೇವಚಂದ್ರನ ರಾಜಾವಳಿ ಕಥಾಸಾರ ಮೊದಲಾದ ಕೃತಿ–ಕಾವ್ಯಗಳಲ್ಲಿ ಪೋತನ, ಪೋದನ, ಪೌದನ, ಪೋದನಪುರ ಮುಂತಾದ ವಿಧಗಳಿಂದ ಉಕ್ತವಾದ ಈ ಪಟ್ಟಣವು ಒಂದೇ ಎಂಬುದು ಕಥಾಸಂದರ್ಭದಿಂದ ಸ್ಪಷ್ಟವಾಗುತ್ತದೆ. ಬೌದ್ಧ ಧರ್ಮದ ಜಾತಕಗಳು ಮತ್ತು ಪದ್ಮಪುರಾಣದಲ್ಲಿ ಪೋದನಪುರವು ಅಶ್ಮಕ ದೇಶದ ರಾಜಧಾನಿಯಾಗಿದ್ದಿತ್ತೆಂದು ಹೇಳಲಾಗಿದೆ. ಜೈನ ಸಾಹಿತ್ಯದಲ್ಲಿ ಪೋದನಪುರವು ರಮ್ಯಕ ಇಲ್ಲವೆ ಸುರಮ್ಯ ದೇಶದ ರಾಜಧಾನಿಯಾಗಿದ್ದಿತ್ತೆಂದು ಹೇಳಲಾಗಿದೆ. ಈ ದೇಶವು ದಕ್ಷಿಣಪಥದ ಉತ್ತರ ಭಾಗದಲ್ಲಿ ಗೋದಾವಿಯ ನೆರೆಯಲ್ಲಿತ್ತೆಂದು 'ಸುತ್ತನಿಪಾತ'ದಲ್ಲಿ ಹೇಳಲಾಗಿದೆ. ವೆಂಗಿಯ ಚಾಳುಕ್ಯರ ಮುಮ್ಮಡಿ ಅರಿಕೇಸರಿಯ ಪರಭಣಿಯ ತ್ರಾಮಪಟ ಶಾಸನದಲ್ಲಿ ಆತನ ಪೂರ್ವಜನಾದ ಯುದ್ಧಮಲ್ಲನು 'ಪೋದನ'ವಲ್ಲಿ ದಿನಾಲು ಐನೂರು ಆನೆಗಳ ನೀರಾಟವಾಡಿಸುತ್ತಿದ್ದನು ಎಂದು ನಿರೂಪಣೆಯಿದೆ. ಪಂಪನು 'ಪಂಪಭಾರತ'ದ (ವಿಕ್ರಮಾರ್ಜುನ ವಿಜಯ) 17ನೆಯ ಪದ್ಯದಲ್ಲಿ ಇದೇ ವಿಷಯವನ್ನು ನಿರೂಪಿಸಿದ್ದು, 'ಪೋದನ' ಎಂಬಲ್ಲಿ 'ಬೋದನ' ಎಂಬ ಪದವಿದೆ. ಇಂದಿನ ಆಂಧ್ರಪ್ರದೇಶದ ನಿಜಾಮಾಬಾದ ಜಿಲ್ಲೆಯ ತಾಲ್ಲೂಕು ಕೇಂದ್ರ 'ಬೋಧನ'ವೇ ಪ್ರಾಚೀನ 'ಪೋದನಪುರ' ಆಗಿದೆ. ಈ ಪಟ್ಟಣವು ದಕ್ಷಿಣ ಭಾರತದಲ್ಲಿ ಜೈನಧರ್ಮದ ಪ್ರಪ್ರಥಮ ಪ್ರಸಿದ್ಧ ಕೇಂದ್ರವಾಗಿತ್ತು. ಇಲ್ಲಿಯೇ ಭರತನು ಬಾಹುಬಲಿಯ ಪ್ರತಿಮೆಯನ್ನು ಮಾಡಿಸಿದನು. ಚಾವುಂಡರಾಯ ಮತ್ತು ಆತನ ತಾಯಿ ಕಾಳಲಾದೇವಿ ಈ ಪುಣ್ಯಕ್ಷೇತ್ರವನ್ನು ಸಂದರ್ಶಿಸಲು ಹಂಬಲಿಸಿ ಪ್ರಯೋಜನವಿಲ್ಲದುದಕ್ಕೆ ಶ್ರವಣಬೆಳಗೊಳದಲ್ಲಿ ಬಾಹುಬಲಿಯ ಶಿಲ್ಪವನ್ನು ಸ್ಥಾಪಿಸಿ ಸಮಾಧಾನ

ಪಟ್ಟುಕೊಂಡಂತೆ ತೋರುತ್ತದೆ. ಇಲ್ಲಿಯ ಬಾಹುಬಲಿಯ ಶಿಲ್ಪಕ್ಕೆ ಪೋದನಪುರದ ಬಾಹುಬಲಿಯ ಶಿಲ್ಪವೇ ಆದರ್ಶವಾಯಿತು".[20]

ಆದರೆ ರಾಷ್ಟ್ರಸಂತ ಆಚಾರ್ಯಶ್ರೀ ವಿದ್ಯಾನಂದರು ಪ್ರಾಕೃತ, ಸಂಸ್ಕೃತ, ಕನ್ನಡ ಪುರಾಣಗಳಾದಿ ಕೃತಿ–ಕಾವ್ಯಗಳನ್ನು ಸವಿಸ್ತಾರವಾಗಿ ಅಧ್ಯಯನ ಮಾಡಿ, ಬಾಹುಬಲಿಯ ರಾಜಧಾನಿ ಪೌದನಪುರವು (ಪೋದನಪುರ) ಇಂದಿನ ಪಾಕಿಸ್ತಾನದ ರಾವಲ್ಪಿಂಡಿ ಜಿಲ್ಲೆಯಲ್ಲಿರುವ ತಕ್ಷಶಿಲೆ ಎಂದು ದೃಢಪಡಿಸಿದ್ದಾರೆ. ಅಂದು ಬಹಲೀ (ಬಾಹಲಿಕ) ದೇಶದ ರಾಜಧಾನಿಯಾಗಿದ್ದ ತಕ್ಷಶಿಲೆಗೆ ಪೋದನಪುರ ಎಂಬ ಮತ್ತೊಂದು ಹೆಸರಿತ್ತು. ವಿಮಲಸೂರಿಯ 'ಪಉಮಚರಿಯಂ'ದಲ್ಲಿ (4/37–41)_

**ಉಸಭಜಿಣಸ್ಸ ಭಗವೋ ಪುತ್ತಸಯಂ ಚದಸೂರಸರಿಸಾಣಂ**
**ಸಮಣತ್ತಂ ಪಡಿವಣ್ಣಂ ಸವಿ ಯ ದೇಹೇ ಣಿಖಿಯಕ್ಖಂ ॥**
**ತಕ್ಖಸಿಲಾಏ ಮಹಪ್ಪಾ ಬಾಹುಬಲೀ ತಸ್ಸ ಣಿಚ್ಚಪಡಿಕೂಲೋ**
**ಭರಹಣರಿಂದಸ್ಸ ಸಯಾ ಣ ಕುಣಇ ಆಣಾ ಪಣಾಮಂ ಸೋ ॥**
**ಅಹ ರುಟ್ಠೋ ಚಕ್ಕಹರೋ ತಸ್ಸುವರಿಂ ಸಯಣಸಾಹಣ ಸಮಗ್ಗೋ**
**ಣಯರಸ್ಸ ತುರಿಯ ಚವಲೋ ವಿಣಿಗ್ಗಓ ಸಯಲಬಲ ಸಹಿಓ ॥**
**ಪತ್ತೋ ತಕ್ಖಸಿಲಪುರಂ ಜಯಸದ್ದು ಘುಟ್ಠ ಕಲಯಲಾರಾವೋ**
**ಜಜ್ಝಸ್ಸ ಕಾರಣತ್ಥಂ ಸಣ್ಣದ್ಧೋ ತಕ್ಖಣಂ ಭರಹೋ ॥**
**ಬಾಹುಬಲೀ ವಿ ಮಹಪ್ಪಾ ಭರಹಣರಿಂದಂ ಸಮಾಗಯಂ ಸೋಉ**
**ಭಡಚಡಯರೇಣ ಮಹಯಾ ತಕ್ಖಸಿಲಾಓ ವಿಣಿಜ್ಜಾಓ ॥**

'ಭಗವಾನ್ ಋಷಭನಾಥರ ಚಂದ್ರಸೂರ್ಯ ಸಮಾನರಾದ ನೂರು ಮಕ್ಕಳು ಶ್ರಮಣತ್ವವನ್ನು ಧಾರಣೆ ಮಾಡಿದರು. ಅವರೆಲ್ಲರೂ ಶರೀರ ನಿರಪೇಕ್ಷಿಗಳಾಗಿ (ಅನಾಸಕ್ತರಾಗಿ) ಇದ್ದರು. ತಕ್ಷಶಿಲೆಯಲ್ಲಿ ಬಲಶಾಲಿ ಬಾಹುಬಲಿ ಇದ್ದನು. ಅವನು ಭರತ ಚಕ್ರವರ್ತಿಯ ನಿತ್ಯ ಪ್ರತಿಕೂಲನಾಗಿದ್ದನು. ಅಂದರೆ ಸ್ವಾಧೀನತೆಯನ್ನು ಪ್ರೀತಿಸುವ ರಾಜನಾಗಿದ್ದನು. ಅವನು ಭರತ ಚಕ್ರವರ್ತಿಯ ಅಧೀನತೆಯನ್ನು ಸ್ವೀಕಾರ ಮಾಡುವ ಆಜ್ಞೆಯನ್ನು ಮನ್ನಿಸುತ್ತಿರಲಿಲ್ಲ. ಇದರಿಂದ ಕುಪಿತನಾದ ಭರತ ಚಕ್ರವರ್ತಿ ಬಾಹುಬಲಿಯ ಮೇಲೆ ಸಕಲ ಸಾಮಗ್ರಿಸಹಿತ, ಸಂಪೂರ್ಣ ಬಲಸಹಿತ (ಸೇನೆ) ಆಕ್ರಮಣ ಮಾಡಲು ನಗರದಿಂದ ತ್ವರಿತಗತಿಯಲ್ಲಿ ಹೊರಟನು. ಚಕ್ರವರ್ತಿಯು ತಕ್ಷಶಿಲೆಯನ್ನು ತಲುಪಿದಾಗ ಜಯಘೋಷದ ಕಲಕಲ ಧ್ವನಿಯು ಎಲ್ಲೆಡೆ ಹರಡಿತು. ಭರತಚಕ್ರಿ ತಕ್ಷಣ ಯುದ್ಧಕ್ಕಾಗಿ ಸನ್ನದ್ಧನಾದನು. ಆ ಸಮಯದಲ್ಲಿ ಭರತ ಚಕ್ರವರ್ತಿಯ ಆಗಮನವನ್ನು ಕೇಳಿ ಬಾಹುಬಲಿಯೂ ಮಹಾನ್ ಸುಭಟ ಸೇನೆಯೊಂದಿಗೆ ಭರತನೊಂದಿಗೆ ಯುದ್ಧ ಮಾಡಲು ತಕ್ಷಶಿಲೆಯಿಂದ ಹೊರಟನು' ಎಂದು ನಿರೂಪಣೆಯಿದೆ.[21] 'ಆವಶ್ಯಕ ನಿರ್ಯುಕ್ತಿ'ಯಲ್ಲಿ (ಪು. 180–181)_

**ತತೋ ಭಗವಂ ವಿಹರಮಾಣೋ ಬಹಲೀ ವಿಸಯಂ ಗತೋ**
**ತತ್ಥ ಬಾಹುಬಲೀಸ್ಸ ರಾಯಹಾಣೀ ತಕ್ಖಸಿಲಾಣಾಮಂ ॥**

'ಆಗ ಆ ಭಗವಾನ್ ಋಷಭನಾಥರು ಬಹಲೀ ಪ್ರದೇಶದಲ್ಲಿ ಸಂಚರಿಸುತ್ತ ಬಾಹುಬಲಿಯ ರಾಜಧಾನಿ ತಕ್ಷಶಿಲೆಯ ಕಡೆಗೆ ಹೊರಟರು' ಎಂದು ಪ್ರಸ್ತಾಪವಿದೆ.[22] ಪೂಜ್ಯಪಾದ ಆಚಾರ್ಯರು 'ನಿರ್ವಾಣಕಾಂಡ'ದಲ್ಲಿ–

**ಬಾಹುಬಲಿ ತಹ ವಂದಾಮಿ ಪೋದನಪುರೇ ॥**

'ಪೋದನಪುರದಲ್ಲಿ ಬಾಹುಬಲಿಗೆ ವಂದನೆ ಮಾಡಿದೆ' ಎಂದು ಹೇಳಿದ್ದಾರೆ.[23] 'ಅಭಿದಾನ ರಾಜೇಂದ್ರಕೋಶ'ದಲ್ಲಿ–

**ತಕ್ಷಶಿಲಾ ಬಹಲೀ ದೇಶೇ ಬಾಹುಬಲೇರ್ನಗರ್ಯಾಂ ॥**

'ತಕ್ಷಶಿಲೆಯು ಬಹಲೀ ದೇಶದಲ್ಲಿದ್ದ ಬಾಹುಬಲಿಯ ನಗರವಾಗಿತ್ತು' ಎಂದು ಪ್ರಸ್ತಾಪವಿದೆ.[24] ಆಚಾರ್ಯ ಜಿನಕಲ್ಪಸೂರಿಯ 'ವಿವಿಧ ತೀರ್ಥಕಲ್ಪ'ದಲ್ಲಿ–

**ತಕ್ಷಶಿಲಾಯಾಂ ಬಾಹುಬಲೀ ವಿನಿರ್ಮಿತಂ ಧರ್ಮಚಕ್ರಮ್ ॥**

'ಬಾಹುಬಲಿಯು ತಕ್ಷಶಿಲೆಯಲ್ಲಿ ಧರ್ಮಚಕ್ರದ ಸ್ಥಾಪನೆಯನ್ನು ಮಾಡಿದ್ದನು' ಎಂದು ನಿರೂಪಣೆಯಿದೆ.[25] ಇದೇ ರೀತಿ ಕಲ್ಪಸೂತ್ರ, ಪರಿಶಿಷ್ಟ ಪರ್ವ, ಕುಮಾರಪಾಲ ಪ್ರತಿಬೋಧ, ಪದ್ಮಪುರಾಣ, ಕುವಲಯಮಾಲಾಕಹಾ, ಚಉಪನ್ನಮಹಾಪುರಿಸ ಚರಿಯಂ, ಮಹಾಕವಿ ರಯಧೂವಿನ ಪಾಸಪುರಾಣ, ಹರಿಷೇಣನ ಕಥಾಕೋಶ (ಕಥೆ 23, 25), ಸೋಮದೇವನ ಉಪಾಸಕಾಧ್ಯಯನ (ಯಶಸ್ತಿಲಕ ಚಂಪೂ), ಪುಣ್ಯಾಸ್ರವ ಕಥಾಕೋಷ (ಕಥೆ 2), ಆರಾಧನಾ ಕಥಾಕೋಶ, ಆವಶ್ಯಕ ಚೂರ್ಣಿ, ಹ್ಯೂಯನ್‌ತ್ಸಾಂಗ್‌ನ ಸಿಯುಕಿ ಮೊದಲಾದವುಗಳಲ್ಲಿ ಬಾಹುಬಲಿಯ ರಾಜಧಾನಿ ತಕ್ಷಶಿಲೆಯ (ಪೌದನಪುರ) ಪ್ರಸ್ತಾಪಗಳಿವೆ.[26] ತಕ್ಷಶಿಲೆ ಮತ್ತು ಅದರ ಪರಿಸರದ ಸರಕಾಪ, ಹಸಿನಾ (ಗಜನೀ), ಹಜಾರಾ (ಹೋಸಲಾ) ಮೊದಲಾದೆಡೆಗಳಲ್ಲಿ ಜೈನ ಸ್ತೂಪಗಳು ಮತ್ತು ಶಿಲ್ಪಗಳು ಬೆಳಕಿಗೆ ಬಂದಿವೆ. ಹ್ಯೂಯನ್‌ತ್ಸಾಂಗನು ಈ ಪ್ರದೇಶಗಳ ಜನಜೀವನದ ಕುರಿತು ತನ್ನ ಬರವಣಿಗೆಯಲ್ಲಿ ದಾಖಲಿಸಿರುವ, "ಇಲ್ಲಿ ಅನೇಕ 'ತೀರ್ಥಕ' ವಿಧರ್ಮೀಯರಿದ್ದಾರೆ. ಅವರು 'ಕ್ಷುಣದೇವ'ರನ್ನು ಪೂಜಿಸುತ್ತಾರೆ. ಆತನನ್ನು ಶ್ರದ್ಧೆಯಿಂದ ಪ್ರಾರ್ಥಿಸುವವರ ಆಸೆ–ಆಕಾಂಕ್ಷೆಗಳು ಈಡೇರುತ್ತವೆ. ದೂರದೂರದ ಹಾಗೂ ಹತ್ತಿರದ ಪ್ರದೇಶಗಳಿಗೆ ಸೇರಿದ ಜನರು ಆತನ ಬಗ್ಗೆ ಆಳವಾದ ಧಾರ್ಮಿಕ ಗೌರವವನ್ನು ತೋರುತ್ತಾರೆ. ಮೇಲು ಮತ್ತು ಕೆಳವರ್ಗದವರಿಬ್ಬರಲ್ಲೂ ಆತನ ಬಗ್ಗೆ ಧಾರ್ಮಿಕ ಭಯಭೀತಿಗಳಿವೆ....... ತಮ್ಮ ಮನಸ್ಸನ್ನು ಗೆಲ್ಲುವುದರ ಮೂಲಕ ಹಾಗೂ ಕಾಮನೆಗಳನ್ನು ನಿಗ್ರಹಿಸುವುದರ ಮೂಲಕ, ದೇವಲೋಕದ ಶಕ್ತಿಗಳಿಂದ ಅವರು ಪವಿತ್ರ ಮಂತ್ರಗಳನ್ನು ಪಡೆದುಕೊಳ್ಳುತ್ತಾರೆ. ಅವುಗಳಿಂದ ಅವರು ರೋಗ–ರುಜಿನಗಳನ್ನು ದೂರ ಮಾಡುತ್ತಾರೆ ಹಾಗೂ ರೋಗಿಗಳು ಪುನಶ್ಚೇತನಗೊಳ್ಳುವಂತೆ ಮಾಡುತ್ತಾರೆ" ಎಂಬ ಮಾತುಗಳು ಅಹಿಂಸಾ ತತ್ವಕ್ಕೆ ಹೆಸರಾಗಿರುವ ಜೈನಧರ್ಮದ ದೇವತಾಗಣ ರಾರಾಜಿಸುವಂತೆ ಮಾಡಿರುವ ತೀರ್ಥಂಕರರನ್ನು ಅಥವಾ ಅವರ ಅನುಯಾಯಿಗಳನ್ನು ಸೂಚಿಸುತ್ತವೆ.[27] ಪ್ರಪಂಚವನ್ನೇ ಗೆಲ್ಲಬೇಕೆಂಬ

ಮಹತ್ವಾಕಾಂಕ್ಷೆಯನ್ನು ಹೊಂದಿದ್ದ ಅಲೆಗ್ಸಾಂಡರನು (ಕ್ರಿಪೂ. 355-323) ಕ್ರಿಪೂ. 326ರ ನವೆಂಬರ ತಿಂಗಳಿನಲ್ಲಿ ಅಟಕದ ಬಳಿ ಸಿಂಧೂ ನದಿಯನ್ನು ದಾಟಿ ತಕ್ಷಶಿಲೆಗೆ ಆಗಮಿಸಿದ ಸಂದರ್ಭದಲ್ಲಿ, ಇಲ್ಲಿ ಅನೇಕ ಜೈನ ದಿಗಂಬರ ಮುನಿಗಳನ್ನು ಕಂಡನು. ಅವನು ಭಾರತದಿಂದ ಮರಳಿ ತನ್ನ ದೇಶಕ್ಕೆ ಹೋಗುತ್ತಿದ್ದಾಗ ತಕ್ಷಶಿಲೆಯಲ್ಲಿದ್ದ ಕಾಲೋನಸ (ಕಲ್ಯಾಣ) ಮುನಿಯನ್ನು ಗ್ರೀಕ್ ದೇಶದಲ್ಲಿ ಧರ್ಮಪ್ರಸಾರ ಮಾಡಲು ತನ್ನೊಂದಿಗೆ ಕರೆದುಕೊಂಡು ಹೊರಟನು. ಆದರೆ ಅಲೆಗ್ಸಾಂಡರನು ಮಾರ್ಗಮಧ್ಯದಲ್ಲಿ ಬೆಬಿಲೋನ್‌ದಲ್ಲಿ ಅನಾರೋಗಕ್ಕೀಡಾಗಿ ಕ್ರಿಪೂ. 323ರ ಜೂನ್ 3ರಂದು ಮರಣ ಹೊಂದಿದನು. ಕಲ್ಯಾಣಮುನಿ ಗ್ರೀಕ್ ದೇಶವನ್ನು ತಲುಪಿ ಧರ್ಮಪ್ರಸಾರ ಮಾಡಿ, ಅಥೆನ್ಸ್ ನಗರದಲ್ಲಿ ಸಲ್ಲೇಖನದಿಂದ ಸಮಾಧಿಮರಣವನ್ನಪ್ಪಿದನು. ಅಥೆನ್ಸ್ ನಗರದಲ್ಲಿ ಕಲ್ಯಾಣಮುನಿಯ ಚರಣ ಚಿಹ್ನೆಗಳು (ಪಾದಗಳು) ಪ್ರಸಿದ್ಧ ಸ್ಥಾನದಲ್ಲಿ ಈಗಲೂ ಅಂಕಿತವಾಗಿವೆ.[28] ಈ ಹಿನ್ನೆಲೆಯಲ್ಲಿ ತಕ್ಷಶಿಲೆ ಕ್ರಿಪೂ. ಸುಮಾರು 4ನೆಯ ಶತಮಾನದ ಪೂರ್ವದಲ್ಲಿಯೇ ಪ್ರಸಿದ್ಧ ಜೈನ ಕೇಂದ್ರವಾಗಿತ್ತೆಂಬುದು ಮನದಟ್ಟಾಗುತ್ತದೆ.

ಈ ಮೇಲಿನ ನಿರೂಪಣೆಗಳಿಂದ ದಿಗಂಬರ ಪಂಥದ ಪುರಾಣಗಳಾದಿ ಕೃತಿ-ಕಾವ್ಯಗಳಲ್ಲಿ ಉಲ್ಲಿಖಿತವಾದ ಪೋದನಪುರವು ದಕ್ಷಿಣದಲ್ಲಿತ್ತು ಮತ್ತು ಶ್ವೇತಾಂಬರ ಪಂಥದ ಪುರಾಣಗಳಾದಿ ಕೃತಿ-ಕಾವ್ಯಗಳಲ್ಲಿ ಉಲ್ಲಿಖಿತವಾದ ಪೋದನಪುರವು ಉತ್ತರದಲ್ಲಿತ್ತು ಎಂಬುದು ಸ್ಪಷ್ಟವಾಗುತ್ತದೆ. ದಕ್ಷಿಣದಲ್ಲಿ ಇಂದಿನ ಆಂಧ್ರಪ್ರದೇಶದ ನಿಜಾಮಾಬಾದ ಜಿಲ್ಲೆಯ ತಾಲ್ಲೂಕು ಕೇಂದ್ರವಾದ 'ಬೋಧನ'ವೇ ಪೋದನಪುರವಾಗಿತ್ತು. ಉತ್ತರದಲ್ಲಿ ಇಂದಿನ ಪಾಕಿಸ್ತಾನದ ರಾವಲ್ಪಿಂಡಿ ಜಿಲ್ಲೆಯಲ್ಲಿರುವ ತಕ್ಷಶಿಲೆ ಪೋದನಪುರವಾಗಿತ್ತು. ನೇಮಿಚಂದ್ರಸಿದ್ಧಾಂತ ಚಕ್ರವರ್ತಿಗಳ 'ಗೊಮ್ಮಟಸಾರ'ದಲ್ಲಿ (ಪದ್ಯ 968, 969)-

**ಗೊಮ್ಮಟ ಸಂಗಹಸುತ್ತಂ ಗೊಮ್ಮಟಸಿಹರುವರಿ ಗೋಮ್ಮಟಜಿಣೋ ಯ**
**ಗೊಮ್ಮಟರಾಯವಿಣಿಮ್ಮಿಯ ದಖ್ಖಿಣಕುಕ್ಕಡ ಜಿಣೋ ಜಯಲು ॥**
**ಜೇಣ ವಿಣಿಮ್ಮಿಯಪಡಿಮಾವಯಣಂ ಸರ್ವಟಸಿದ್ಧಿ ದೇವೇಹಿಂ**
**ಸರ್ವಪರಮೋಹಿಜೋಗಿಹಿಂ ದಿಟಂ ಸೋ ಗೊಮ್ಮಟೋ ಜಯಲು ॥**

'ಗೊಮ್ಮಟ ಸಂಗ್ರಹ ಸೂತ್ರ, ಗೊಮ್ಮಟ ಜಿನ, ದಕ್ಷಿಣ ಕುಕ್ಕುಟ ಜಿನನಿಗೆ ನಮಸ್ಕಾರಗಳು' ಎಂದು ಪ್ರಸ್ತಾಪವಿದೆ.[29] ಪಾಣಿನಿಯ 'ಅಷ್ಟಾಧ್ಯಾಯಿ'ಯಲ್ಲಿ (6/3/117) ಕಿಂಶುಲಕಾಗಿರಿ, ಶಾಲ್ವಕಾಗಿರಿ, ಅಂಜನಗಿರಿ, ಭಂಜನಗಿರಿ, ಲೋಹಿತಾಗಿರಿ, ಕುಕ್ಕುಟಗಿರಿ ಎಂಬ ಆರು ಬೆಟ್ಟಗಳ ನಿರೂಪಣೆಯಿದೆ.[30] "ಇಂದಿನ ಭಾರತದ ಉತ್ತರ-ಪಶ್ಚಿಮದ ದಂಡೆಯಲ್ಲಿ ಅಫ್ಘಾನಿಸ್ತಾನದಿಂದ ಬಲೂಚಿಸ್ತಾನದವರೆಗೆ ಉತ್ತರ-ದಕ್ಷಿಣದ ಕಡೆಗೆ ಹಬ್ಬಿರುವ ಬೆಟ್ಟಗಳ ಸಾಲಿನ ಎತ್ತರದ ಶಿಖರಗಳಿಗೆ ಈ ಹೆಸರುಗಳಿದ್ದವೆಂದು ತಿಳಿಯಬಹುದಾಗಿದೆ. ಕುಕ್ಕುಟಗಿರಿಯನ್ನು ಕೋಹೇಬಾಬಾ ಅಥವಾ ಭಂಜನಾಗಿರಿಯ ಪಶ್ಚಿಮದ ಕಡೆ ಹಬ್ಬಿರುವ ಕೆಳಗಿನ ನದಿಗಳಾದ ಹೇರಾತ ಮತ್ತು ಹರಿರೂಪ (ಸರಯೂ) ನದಿಯ ಉತ್ತರ ಸಮಾನಾಂತರವಾಗಿ ಹರಡಿರುವ ಪರ್ವತ ಶ್ರೇಣಿಯಲ್ಲಿ ಗುರುತಿಸಬಹುದಾಗಿದೆ. ಪ್ರಾಚೀನ

ಇರಾನಿಗಳು ಆ ಬೆಟ್ಟಗಳು ತಗ್ಗಿನಲ್ಲಿರುವ ಕಾರಣ ಅವುಗಳನ್ನು 'ಉಪರಿಶಏನ' (ಗಿಡುಗ ಕುಳಿತುಕೊಳ್ಳುವ ಸ್ಥಳ) ಎಂದು ಕರೆಯುತ್ತಿದ್ದರು. ಗ್ರೀಕರು ಅವುಗಳನ್ನು 'ಪರೋಪಮಿಸಮ' ಎಂದು ಕರೆದಿದ್ದಾರೆ. ಇದು ಬಾಲ್ಖಿ ಅಥವಾ ಬಲ್ಖ್‌ನ ದಕ್ಷಿಣದ ಪರ್ವತ ಸರಣಿಯಾಗಿತ್ತು. ಈ 'ಉಪರಿಶಏನ' ಎಂಬ ಹೆಸರಿನಿಂದಲೇ ಕುಕ್ಕುಟಗಿರಿ ಎಂಬ ಭಾರತೀಯ ಹೆಸರಾಗಿರಬೇಕು. ಬಾಹುಬಲಿಯು ತಕ್ಷಶಿಲೆಯಿಂದ (ಪೋದನಪುರ) ಹೊರಟು ಇದೇ ಕುಕ್ಕುಟಗಿರಿಯ ಮೇಲೆ ತಪಸ್ಸನ್ನು ಮಾಡಿರಬೇಕು. ತಪದ ಅವಧಿಯಲ್ಲಿ ಬಾಹುಬಲಿಯ ಶರೀರದ ಮೇಲೆ ಹುತ್ತವನ್ನು ಮಾಡಿಕೊಂಡಿದ್ದ ಸರ್ಪಗಳು ಕುಕ್ಕುಟ ಸರ್ಪಗಳೇ ಆಗಿದ್ದವು. ಇವುಗಳ ಕಾರಣದಿಂದಲೇ ಆ ಪ್ರದೇಶಕ್ಕೆ ಹೋಗಿ ಬರುವುದನ್ನು ದುರ್ಗಮವೆಂದು ಭಾವಿಸಲಾಗಿತ್ತು."[31]

ಶ್ರವಣಬೆಳಗೊಳದ ಸ್ವಸ್ತಿಶ್ರೀ ಚಾರುಕೀರ್ತಿ ಭಟ್ಟಾರಕ ಮಹಾಸ್ವಾಮೀಜಿ ಅವರು "ಹಿಂದೆ ಹಿಮಾಲಯದ ಕಡೆ ಇರುವ ಇಂದಿನ ರಷ್ಯಾ, ಆಫ್‌ಘಾನಿಸ್ತಾನ, ಇರಾನ್ ಮತ್ತು ಇರಾಕ್ ಈ ಪ್ರದೇಶಗಳಲ್ಲಿ ಬಾಹುಬಲಿಯ ಹೆಸರನ್ನು ಇಡುವ ಪದ್ಧತಿ ಇದ್ದಿತು. ಬಾಹುಲ್ಲಾಯ್, ಬಹುಲ್ಲಾ ಎನ್ನುವ ಹೆಸರುಗಳು ಬಾಹುಬಲಿಯ ಮೂಲದಿಂದ ಬಂದಿರಬೇಕೆಂದು ಒಬ್ಬ ಅಮೇರಿಕಾದ ಸಂಶೋಧಕ ಪತ್ತೆ ಮಾಡಿದ್ದಾರೆ. ಅಂದರೆ ಆ ಪ್ರದೇಶಗಳಲ್ಲಿ ಬಾಹುಬಲಿಯ ಪ್ರಭಾವವಿದ್ದು, ಇಂದಿಗೂ ಹಿಮಾಲಯದ ಆಚೆಯ ಪ್ರದೇಶ ಹಿಮಾಲಯದಿಂದ ಬಾಲ್ಟಿಕ್ ಪ್ರದೇಶದ ಶ್ವೇತ ಸಮುದ್ರವರೆಗಿನ ಪ್ರದೇಶವು 'ಬಲಿವರ್ಷ' ಎಂದು ಉಲ್ಲೇಖಿಸಲ್ಪಟ್ಟಿದೆ. ಅದರಂತೆಯೇ ಹಿಮಾಲಯದ ಈಚೆಗೆ ಕನ್ಯಾಕುಮಾರಿಯವರೆಗಿನ ಪ್ರದೇಶಕ್ಕೆ 'ಭಾರತವರ್ಷ' ಎಂಬ ಉಲ್ಲೇಖವಿದೆ. ಬಾಹುಬಲಿಯಿಂದಲೇ ಬಲಿವರ್ಷ ಬಂದಿರಬೇಕೆಂದು ಜೇಮ್ಸ್ ಟಾಡ್ ಎನ್ನುವ ವಿದ್ವಾಂಸರು ತಮ್ಮ **'ಟ್ರಾವಲ್ಸ್ ಇನ್ ವೆಸ್ಟರ್ನ್ ಇಂಡಿಯಾ'** ಎಂಬ ಕೃತಿಯಲ್ಲಿ ಬರೆದಿದ್ದಾರೆ. ಇಸ್ಲಾಂ ಧರ್ಮ ಹುಟ್ಟುವುದಕ್ಕಿಂತ ಮೊದಲು ಮೆಕ್ಕಾದ ಪ್ರದೇಶದಲ್ಲಿ ಬಾಹುಬಲಿ ಮೂರ್ತಿಯ ಆರಾಧನೆ ನಡೆಯುತ್ತಿದ್ದಿತು. ಅಲ್ಲಿ ಇದ್ದ ಬಾಹುಬಲಿಯ ಮೂರ್ತಿಯನ್ನು ಗುಜರಾತಿನ ಭಾವನಗರ ಹತ್ತಿರ ಗೋಧ ಪ್ರದೇಶದ ಗೋಗ್ರಿಕ್ ಎನ್ನುವ ವಂಶದ ದೊರೆ ಗೇವುರ್‌ಷಹಾ ತೆಗೆದುಕೊಂಡು ಬಂದನೆಂದು ಹಿಂದೆ ಈ ಗೋಧನದಲ್ಲಿ ಒಂದು ಭಟ್ಟಾರಕ ಪೀಠವಿದ್ದು, ಈಗಲೂ ಅಲ್ಲಿ ಸ್ಫಟಿಕ ಮೂರ್ತಿಗಳು ಇವೆ ಎಂದು ತಿಳಿಯುವುದಲ್ಲದೇ, ಮೆಕ್ಕಾದಿಂದ ಹಡಗಿನಲ್ಲಿ ತಂದ ಬಾಹುಬಲಿ ಮೂರ್ತಿಯನ್ನು ಶತ್ರುಂಜಯ ಪರ್ವತದ ಮೇಲೆ ಸ್ಥಾಪಿಸಿದ ಉಲ್ಲೇಖಗಳಿವೆ" ಎಂದು ಸಂಶೋಧನ ಅಧ್ಯಯನದಿಂದ ಕಂಡುಕೊಂಡಿದ್ದಾರೆ.[32]

ಈ ಮೇಲಿನ ಎಲ್ಲ ಸಂಗತಿಗಳ ಹಿನ್ನೆಲೆಯಲ್ಲಿ ದಕ್ಷಿಣದ ಬೋಧನದಲ್ಲಿದ್ದ ಬಾಹುಬಲಿಯ ಶಿಲ್ಪವು 'ದಕ್ಷಿಣ ಕುಕ್ಕುಟಜಿನ' ಎಂತಲೂ, ಉತ್ತರದ ತಕ್ಷಶಿಲೆ ಅಥವಾ ಅದರ ಸಮೀಪದ ಕುಕ್ಕುಟಗಿರಿಯಲ್ಲಿದ್ದ ಬಾಹುಬಲಿಯ ಶಿಲ್ಪವು 'ಉತ್ತರ ಕುಕ್ಕುಟಜಿನ' ಎಂತಲೂ ಪ್ರಸಿದ್ಧವಾಗಿರುವಂತೆ ತೋರುತ್ತದೆ. ದಕ್ಷಿಣದ ಬಾಹುಬಲಿಯ ಶಿಲ್ಪಗಳಿಗೆ ಬೋಧನದ ಬಾಹುಬಲಿಯ ಶಿಲ್ಪ ಮತ್ತು ಉತ್ತರದ ಬಾಹುಬಲಿಯ ಶಿಲ್ಪಗಳಿಗೆ ತಕ್ಷಶಿಲೆಯ

(ಪೋದನಪುರ) ಬಾಹುಬಲಿಯ ಶಿಲ್ಪ ಸ್ಫೂರ್ತಿಯಾಗಿವೆ. ಆದರೆ ಭರತ ಚಕ್ರವರ್ತಿ ಮಾಡಿಸಿದ ಬಾಹುಬಲಿಯ ಶಿಲ್ಪ ಉತ್ತರದ ಪೋದನಪುರದಲ್ಲಿ ಇತ್ತೆಂದು ಮನದಟ್ಟಾಗುತ್ತದೆ. ಆ ನಗರವು ಕ್ರಿ.ಶ. ಸುಮಾರು 10ನೆಯ ಶತಮಾನದಲ್ಲಾಗಲೇ ನಾಶವಾಗಿದ್ದು, ಅದು ಕಾಡು-ಬೆಟ್ಟಗಳಿಂದ ಆವೃತ್ತವಾಗಿ, ಅಲ್ಲಿ ಕಾಡು ಪ್ರಾಣಿಗಳು (ಕುಕ್ಕುಟ ಸರ್ಪಗಳು ಇತ್ಯಾದಿ) ನೆಲೆಸಿದ್ದವು. ಹಾಗೆಯೇ ಕ್ರಿ.ಪೂ. ಸುಮಾರು 3ನೆಯ ಶತಮಾನದಲ್ಲಾಗಲೇ ಪ್ರಸಿದ್ಧ ಜೈನ ಕೇಂದ್ರವಾಗಿದ್ದ ಬೋಧನದಲ್ಲಿಯೂ ಬಾಹುಬಲಿಯ ಶಿಲ್ಪ ಪ್ರತಿಷ್ಠಾಪಿತವಾಗಿತ್ತು. ಇಲ್ಲಿ ಕ್ರಿ.ಶ. ಸುಮಾರು 10ನೆಯ ಶತಮಾನದಿಂದೀಚೆಗೆ ಅನ್ಯಮತಗಳು ಪ್ರಾಬಲ್ಯವಾಗಿ ಜೈನ ಚಟುವಟಿಕೆಗಳು ಇಳಿಮುಖವಾದವು. ಆದರೂ ಆ ಸ್ಥಳದ ಕುರಿತು ಜೈನರಲ್ಲಿ ಅಭಿಮಾನವಿತ್ತು. ಉತ್ತರದಲ್ಲಿದ್ದ ಪೋದನಪುರವು ಕಾಡು ಪ್ರಾಣಿಗಳ ಕಾಟ ಮತ್ತು ಅದು ದೂರದಲ್ಲಿದ್ದ ಕಾರಣ ಚಾವುಂಡರಾಯ ಮತ್ತು ಆತನ ತಾಯಿಗೆ ಅಲ್ಲಿಗೆ ಹೋಗುವುದು ದುಷ್ಕರವಾಗಿತ್ತು. ಎಂತಲೇ ಆತನು ಬೋಧನದ ಬಾಹುಬಲಿಯ ಶಿಲ್ಪದ ಸ್ಫೂರ್ತಿಯಿಂದ ಶ್ರವಣಬೆಳಗೊಳದಲ್ಲಿ ಬಾಹುಬಲಿಯ ಶಿಲ್ಪವನ್ನು ಮಾಡಿಸಿದನು. ಈ ನಿಟ್ಟಿನಲ್ಲಿ ರಾಷ್ಟ್ರಸಂತ ಆಚಾರ್ಯಶ್ರೀ ವಿದ್ಯಾನಂದರ 'ಬಾಹುಬಲಿಯ ರಾಜಧಾನಿ ತಕ್ಷಶಿಲೆ' ಎಂಬ ವಿದ್ವತ್ಪೂರ್ಣ ಸಂಶೋಧನ ಅಧ್ಯಯನವು ಗಮನೀಯವಾಗಿದೆ.

---

**ಆಕರ ಸೂಚಿ ಮತ್ತು ಕೊನೆ ಟಿಪ್ಪಣಿಗಳು**

1. ಮಿರ್ಜಿ ಅಣ್ಣಾರಾಯ, **ಜೈನಧರ್ಮ** (ಮೂರನೆಯ ಮುದ್ರಣ-1997), ಪು. 25-28. ಕೇಶವಮೂರ್ತಿ ಎಸ್. (ಅನು.), **ಅಂತರದ್ವಂದ್ವಗಳ ಆಚೆ ಗೊಮ್ಮಟೇಶ್ವರ ಬಾಹುಬಲಿ** (1997), 3-8. ಭೋಸಗೆ ಬಾಹುಬಲಿ (ಅನು.), **ತಿಲೋಯಪಣ್ಣತ್ತಿ (2016)**, ನಾಲ್ಕನೆಯ ಮಹಾಧಿಕಾರ, ಪ.ಸಂ. 428-516, ಪು. 409-425.
2. ಸರಸ್ವತಿ ವಿಜಯಕುಮಾರ (ಅನು.). **ಬಾಹುಬಲಿಯ ರಾಜಧಾನಿ ತಕ್ಷಶಿಲೆ** (2013), ಪು. 21-23.
3. ಶೇಡಬಾಳ ಡಿ.ಎನ್. (ಅನು.), **ಋಷಭಪುತ್ರ ಭರತ ಮತ್ತು ಬಾಹುಬಲಿ** (2014), ಪು. IX.
4. ಅದೇ, ಪು. 13-30.
5. ಅದೇ, ಪು. IX.
6. ಅದೇ, ಪು. 43.
7. ಅದೇ, ಪು. X.
8. ಅದೇ.
9. ಹಂಜೆ ಅಪ್ಪಣ್ಣ ಎನ್., **"ಜೈನ ಧರ್ಮದ ಪ್ರಾಚೀನತೆ ಮತ್ತು ದಿಗಂಬರ ಆಗಮ ಸಾಹಿತ್ಯ"**, ಸಮವಸರಣ (ಸಂಶೋಧನ ಲೇಖನಗಳ ಸಂಕಲನ-2015), ಪು. 3-5.
10. ಹಂಜೆ ಅಪ್ಪಣ್ಣ ಎನ್., **"ಆದಿನಾಥ ತೀರ್ಥಂಕರನ ಶಿಲ್ಪಗಳ ಪ್ರತಿಮಾ ಲಕ್ಷಣಗಳು"**, ಅರವಂಟಿಗೆ ಸಂ. 3/1 (ಸಪ್ಟೆಂಬರ್-2010), ಪು. 15-19, ಜೈನ ಅಧ್ಯಯನ ಸಂಸ್ಥೆ ಶ್ರವಣಬೆಳಗೊಳ.
11. ಪಂಡಿತರತ್ನ ಎ. ಶಾಂತಿರಾಜಶಾಸ್ತ್ರಿಗಳು, **ಶ್ರೀ ಗೋಮಟೇಶ್ವರ ಚರಿತ** (ಐದನೇ ಮುದ್ರಣ-2008), ಪು. 1-19. ವಸಂತಮಾಲಾ ಜೆ.ಎಸ್., **"ಭಗವಾನ್ ಋಷಭನಾಥ-ಕೆಲವು ವಿಚಾರಗಳು"**, **ಜಾನಪದ ಗೀತೆಗಳಲ್ಲಿ ಬಾಹುಬಲಿ** (2006), ಪು. 11-18.
12. ಶೇಡಬಾಳ ಡಿ.ಎನ್. (ಅನು.), ಪೂರ್ವೋಕ್ತ, ಪು. 46.

13. ಅದೇ, ಪು. 56–57.
14. ವಸಂತರಾಜಯ್ಯ ಎಸ್.ಬಿ., **"ಕೆಲವು ಅಪೂರ್ವ ಪ್ರಾಚೀನ ಬಾಹುಬಲಿ ಪ್ರತಿಮೆಗಳು"**, ನಿತ್ಯವಸಂತ (2006), ಪು. 40.
15. ಬ್ರಾಹ್ಮಿ ಮತ್ತು ಖರೋಷ್ಠಿ ಲಿಪಿಗಳ ಹಿನ್ನೆಲೆ, ಉಗಮ, ವಿಕಾಸ ಇತ್ಯಾದಿ ವಿಚಾರಗಳ ಸವಿಸ್ತಾರವಾದ ವಿವರಗಳಿಗೆ ಗಮನಿಸಿ; ಜೋಡಟ್ಟಿ ಟಿ.ಆರ್. (ಅನು.), ಡಾ. ಪ್ರೇಮಸಾಗರ ಜೈನ ಅವರ **ಬ್ರಾಹ್ಮೀ ವಿಶ್ವದ ಮೂಲ ಲಿಪಿ** (2003), ಚಂದ್ರಗಿರಿ ಚಿಕ್ಕಬೆಟ್ಟ ಮಹೋತ್ಸವ ಸಮಿತಿ, ಶ್ರವಣಬೆಳಗೊಳ.
16. ಮಿರ್ಜಿ ಅಣ್ಣಾರಾಯ, **ಜೈನಧರ್ಮ** (3ನೆಯ ಮುದ್ರಣ–1997), ಪು. 28–29. **ಕೋಟಿ** ರತನಚಂದ ನೇಮಿನಾಥ, **ತೀರ್ಥಲೋಕ** (24 ತೀರ್ಥಂಕರರ ಸಂಕ್ಷಿಪ್ತ ಚರಿತ್ರೆ–2011), ಪು. 1–30. ಶಿವಾನಂದ ಎಸ್., **ಕನ್ನಡ ಜೈನ ಪುರಾಣಗಳು : ಒಂದು ಸಮಗ್ರ ಅಧ್ಯಯನ** (2008), ಪು. 174–177.
17. ಮಹೀಶವಾಡಿ ಬಿ.ಬಿ., **"ಶ್ವೇತಾಂಬರ ಬಾಹುಬಲಿ"**, **ಜೈನ ವಾಙ್ಮಯ ಪರಿಶೋಧನೆ** (1977), ಪು. 4–5. ಕಮಲಾ ಹಂಪನಾ, **"ಕನ್ನಡ ಸಾಹಿತ್ಯದಲ್ಲಿ ಬಾಹುಬಲಿಯ ಪರಿಕಲ್ಪನೆ"**, **ಬದ್ದವಣ** (2003), ಪು. 281–304.
18. ಎ.ಕ. ಸಂ. II, ಶಾ.ಸಂ. 170.
19. ವೆಂಕಟಾಚಲಶಾಸ್ತ್ರೀ ಟಿ.ವಿ.(ಸಂ.), **ಬೊಪ್ಪಣ ಪಂಡಿತನ ಗೊಮ್ಮಟಜಿನೇಂದ್ರಗುಣಸ್ತವಂ** (2006), ಪು. 7.
20. ಅದೇ, ಪು. 49–50.
21. ಸರಸ್ವತಿ ವಿಜಯಕುಮಾರ (ಅನು.), ಪೂರ್ವೋಕ್ತ, ಪು. 65–66.
22. ಅದೇ, ಪು. 66.
23. ಅದೇ.
24. ಅದೇ, ಪು. 68.
25. ಅದೇ.
26. ಅದೇ.
27. ಪ್ರಧಾನ್ ಗುರುದತ್ತ (ಅನು.), **ಹರಪ್ಪಾ ಮತ್ತು ಜೈನಧರ್ಮ** (1987), ಪು. 7.
28. ಅದೇ, ಪು. 96–99.
29. ಸರಸ್ವತಿ ವಿಜಯಕುಮಾರ (ಅನು.), ಪೂರ್ವೋಕ್ತ ಪು. 83. ಜಾಗೀರದಾರ ಸೀತಾರಾಮ, **"ಶ್ರವಣಬೆಳಗೊಳ ಗೊಮ್ಮಟೇಶ್ವರನ ಒಂದು ಪ್ರಾಚೀನ ಸ್ತುತಿ"**, ಜನ್ನ (ಅಖಿಲ ಕರ್ನಾಟಕ ಕನ್ನಡ ಜೈನ ಸಾಹಿತ್ಯ ಸಮ್ಮೇಳನದ ಸ್ಮರಣ ಸಂಚಿಕೆ–2000), ಪು. 47–48. ವೆಂಕಟಾಚಲಶಾಸ್ತ್ರಿ ಟಿ.ವಿ., **"ಶ್ರವಣಬೆಳಗೊಳ ಮತ್ತು ಚಾವುಂಡರಾಯ"**, ವಿಜಯವಾಣಿ ದಿನಪತ್ರಿಕೆ (2015 ಫೆಬ್ರುವರಿ 1), ನುಡಿಮಜ್ಜನ, ಪು. 5.
30. ಸರಸ್ವತಿ ವಿಜಯಕುಮಾರ (ಅನು.), ಪೂರ್ವೋಕ್ತ, ಪು. 84–85.
31. ಅದೇ, ಪು. 85–86.
32. ಚಾರುಕೀರ್ತಿ ಭಟ್ಟಾರಕ ಪಟ್ಟಾಚಾರ್ಯವರ್ಯ ಸ್ವಾಮಿಗಳು, **"ಬಾಹುಬಲಿ ಆರಾಧನೆ"**, ಅನಂತಸಿರಿ (ಶ್ರೀ ಅನಂತನಾಥಸ್ವಾಮಿ ಬಸದಿಯ ಶತಮಾನೋತ್ಸವ ಸ್ಮರಣ ಸಂಚಿಕೆ–2000), ಪು. 78.

■

# ಕರ್ನಾಟಕದ ಜೈನಧರ್ಮದಲ್ಲಿ ಸಾಮರಸ್ಯ ಮತ್ತು ಕೆಲವು ವಿರಸ ಸನ್ನಿವೇಶಗಳು : ಒಂದು ವಿವೇಚನೆ


**ಪಿ.ವಿ. ಕೃಷ್ಣಮೂರ್ತಿ**
# 37, 3ನೇ ಕ್ರಾಸ್
ಸುಬ್ಬಣ್ಣ ಲೇಔಟ್
ಹರಿನಗರ ಕ್ರಾಸ್
ಬೆಂಗಳೂರು-560 062
ಮೊ: 9036808395
pvk.krishnamurthy@gmail.com


ಭಾರತದಲ್ಲಿ, ಜೈನಧರ್ಮವು ತನ್ನ ಸ್ಪಷ್ಟ ಹಾಗೂ ದೃಢ ಹೆಜ್ಜೆ ಗುರುತುಗಳನ್ನು ಉಳಿಸಿರುವ ಪ್ರದೇಶಗಳಲ್ಲಿ 'ಕರ್ನಾಟಕ' ಅಗ್ರಮಾನ್ಯ ಸ್ಥಾನದಲ್ಲಿದೆ. ಕರ್ನಾಟಕದ ಪ್ರಾಚೀನ ಭಾಷೆ, ಸಾಹಿತ್ಯ, ಸಂಸ್ಕೃತಿಗಳಲ್ಲಿ ಜೈನಧರ್ಮವು ಮಡುಗಟ್ಟಿ ನಿಂತಿದೆ. ಹಾಗಾಗಿ ಕರ್ನಾಟಕದ ಸಾಂಸ್ಕೃತಿಕ ಪರಂಪರೆಯ ಬಗ್ಗೆ ಹೇಗೆ ಗಮನಿಸಿದರೂ; ಅದರ ತಲಕಾವೇರಿ ಜೈನವೇ ಆಗಿದ್ದು; ಆ ಮೂಲಕವೇ ಎಲ್ಲ 'ಕರ್ನಾಟಶಾಸ್ತ್ರ' ಅಧ್ಯಯನಿಗಳು ಮಿಂದೇಳಲೇ ಬೇಕಾಗಿದೆ. ಕರ್ನಾಟಕ ಜನಪದಕ್ಕೆ ಜೈನಧರ್ಮ ಪರಕೀಯ ಎನಿಸುವುದೇ ಇಲ್ಲ. ಕನ್ನಡ ಸಾಹಿತ್ಯವನ್ನು ಅಧ್ಯಯನ ಮಾಡುವ ಪ್ರತಿಯೊಬ್ಬನೂ ಜೈನ ಸಾಹಿತ್ಯದ ಪರಿಚಯವಿಲ್ಲದೆ ಹೊರಗುಳಿಯುವಂತಿಲ್ಲ. ಅಂತೆಯೇ ಕನ್ನಡ ಸಾಹಿತ್ಯದ ಪ್ರತಿಯೊಬ್ಬ ವಿದ್ಯಾರ್ಥಿಯೂ ಅನಿವಾರ್ಯವಾಗಿ ಜೈನಸಾಹಿತ್ಯದ ವಿದ್ಯಾರ್ಥಿಯೂ ಆಗಿಬಿಟ್ಟಿರುತ್ತಾನೆ ಎಂಬುದರಲ್ಲಿ ಉತ್ಪ್ರೇಕ್ಷೆ ಇಲ್ಲ.

ಕರ್ನಾಟಕದಲ್ಲಿ ಜೈನಧರ್ಮವು ಕ್ರಿಸ್ತಶಕ ಆಚೀಚಿನ ಅವಧಿಯಲ್ಲಿ, ಅಂದರೆ ಸಂಪ್ರತಿ ಚಂದ್ರಗುಪ್ತನ ಕಾಲದಲ್ಲಿ, ಬದ್ರಬಾಹು ಮುನಿಗಳ ಆಗಮನದೊಂದಿಗೆ ಹೆಚ್ಚು ಪ್ರಕರವಾಗಿ ಕಾಣಿಸಿಕೊಂಡು, ನಿಧಾನವಾಗಿ ನೆಲೆಯೂರಲು

ಆರಂಭಿಸಿತು. ಆರಂಭದಲ್ಲಿ ಕದಂಬರ ರವಿವರ್ಮ ಮಹಾರಾಜನ ಪ್ರೋತ್ಸಾಹ ಜೈನಧರ್ಮಕ್ಕೆ ದೊರೆತಿತ್ತು. ರಾಜನು ಜೈನ ಯತಿಯಾದ 'ಜಿನಕುಮಾರದತ್ತ'ನೆಂಬುವನನಿಂದ ರಾಜ್ಯಭಾರ ಮತ್ತು ಧರ್ಮದ ವಿಷಯದಲ್ಲಿ ಸಲಹೆಗಳನ್ನು ಪಡೆಯುತ್ತಿದ್ದನೆಂದು ಶಾಸನವೊಂದು ಉಲ್ಲೇಖಿಸುತ್ತದೆ. ಬಾದಾಮಿ ಚಲುಕ್ಯರ ಪುಲಕೇಶಿ (ಶಂಕಜಿನಾಲಯ) ಮತ್ತು ಅನಂತರದ ರಾಜರು ಮತ್ತು ಅನೇಕ ಮಾಂಡಲಿಕರು ಜೈನಧರ್ಮಕ್ಕೆ ಪ್ರೋತ್ಸಾಹ ನೀಡಿರುವ ಅಂಶ ಅವರ ಶಾಸನಗಳಿಂದ ವ್ಯಕ್ತವಾಗುತ್ತದೆ. ಇದೇ ಕಾಲಕ್ಕೆ ಸೇರಿದ ಗಂಗವಾಡಿ ಪ್ರದೇಶದಲ್ಲಿ ಹೆಗ್ಗಡದೇವನಕೋಟೆ ಮತ್ತು ಸಾಲಿಗ್ರಾಮಗಳಲ್ಲಿ ದೊರೆತಿರುವ ಪ್ರಾಚೀನ ಜೈನಶಿಲ್ಪಗಳು ಗಮನಾರ್ಹವಾಗಿವೆ. ಮುಂದೆ ರಾಷ್ಟ್ರಕೂಟರ ಕಾಲ ಕರ್ನಾಟಕದಲ್ಲಿ ಜೈನಧರ್ಮದ ಪ್ರಗತಿಯ ಯುಗವಾಗಿದ್ದಿತು. ಆ ಕಾಲದಲ್ಲಿ ಅರಸರಷ್ಟೇ ಅಲ್ಲ ಅನೇಕ ಅಧಿಕಾರಿಗಳು ಹಾಗೂ ಸಾಮಂತರು ಅನೇಕ ರೀತಿಯಲ್ಲಿ ಜೈನಧರ್ಮದ ಬೆಳವಣಿಗೆ ಪ್ರೋತ್ಸಾಹವಿತ್ತರು. ರಾಷ್ಟ್ರಕೂಟ ಸಾಮ್ರಾಟ ಅಮೋಘವರ್ಷ ನೃಪತುಂಗನು ಸ್ಯಾದ್ವದ್ ಮತದ ಅನುಯಾಯಿಯಾಗಿದ್ದು, ಅಕಿಂಚನಾ ನೀತಿಯನ್ನು ಅನುಸರಿಸಿ (ಜೈನ ಯತಿಗಳ ಒಂದು ವ್ರತ : ಏನೊಂದೂ ತನ್ನ ಬಳಿ ಇರಿಸಿಕೊಳ್ಳದ ನೀತಿ). ಕೆಲವು ಕಾಲ ಸಿಂಹಾಸನವನ್ನು ತ್ಯಜಿಸಿದ್ದ ಎನ್ನಲಾಗಿದೆ. ಜೈನಗುರು ಜಿನಸೇನರು ಅಮೋಘವರ್ಷನ ಗುರುವಾಗಿದ್ದರು. ಹಾಗೇ ಮತ್ತೋರ್ವ ಪ್ರಸಿದ್ಧ ಜೈನಗುರು ಗುಣಭದ್ರರು ರಾಷ್ಟ್ರಕೂಟ ಇಮ್ಮಡಿ ಕೃಷ್ಣನ ಗುರುವಾಗಿದ್ದರು. ರಾಷ್ಟ್ರಕೂಟರ ಕಾಲದ ಅವರ ಅನೇಕ ಸಾಮಂತರು ಜಿನಧರ್ಮವನ್ನು ಅನುಸರಿಸುತ್ತಿದ್ದರು. ಉದಾಹರಣೆ : ಬಂಕೇಶ ಅವನ ಮಗ ಲೋಕಾದಿತ್ಯ, ಕಮ್ಮಟ ಮಾಚಯ್ಯ, ಬಲ್ಲಯ್ಯ ಮುಂತಾದವರನ್ನು ಹೆಸರಿಸಬಹುದು. ರಾಷ್ಟ್ರಕೂಟರ ನೆಚ್ಚಿನ ಸಾಮಂತರೂ ಬಂಧುಗಳು ಆಗಿದ್ದ ಗಂಗವಾಡಿ ಪ್ರದೇಶದ ಗಂಗರಸರು ದಕ್ಷಿಣಕರ್ನಾಟಕ ಪ್ರದೇಶದಲ್ಲಿ ಜೈನಧರ್ಮದ ಏಳಿಗೆಗೆ ಕಾರಣರಾಗಿದ್ದುದು ಲೋಕ ಪ್ರಸಿದ್ಧವಾದ ಸಂಗತಿಯಾಗಿದೆ. ಒಟ್ಟಿನಲ್ಲಿ ಕಿ.ಪೂ. ಕಾಲದ ಜೈನಧರ್ಮ ಕ್ರಮೇಣ ತನ್ನ ಪ್ರಭಾವವನ್ನು ಸ್ವಲ್ಪ ಸ್ವಲ್ಪವಾಗಿ ಬೆಳಸಿಕೊಳ್ಳುತ್ತಾ 8–9ನೆಯ ಶತಮಾನದ ಹೊತ್ತಿಗೆ ಬಹುಮುಖವಾಗಿ ಏಳಿಗೆಯನ್ನು ಪಡೆಯಿತು.

ಹತ್ತನೆಯ ಶತಮಾನದ ಅವಧಿಯ ವೇಳೆಗೆ ಕರ್ನಾಟಕದಲ್ಲಿ ಜೈನಧರ್ಮದ ವಿವಿಧ ಪ್ರಕಾರಗಳು ಹರಡಿದ್ದವು. ದಿಗಂಬರ, ಶ್ವೇತಾಂಬರ ಪಂಥಗಳ ಜೊತೆಗೆ ಯಾಪನೀಯ ಪಂಥವು ವಿಶೇಷವಾಗಿ ಪ್ರಚಲಿತಗೊಂಡಿದ್ದುದು ಗಮನಾರ್ಹ ಸಂಗತಿ. ಈ ಕಾಲ ಘಟ್ಟಕ್ಕಾಗಲೇ ಶಂಕರ, ಕುಮಾರಿಲ, ಕಪಿಲ, ಲಕುಲ, ನಾಗಾರ್ಜುನ, ಕುಂದಕುಂದ ಈ ಮೊದಲಾದ ಆಚಾರ್ಯರು ಧರ್ಮ ವಿಚಾರದಲ್ಲಿ ಒಂದು ಘಟ್ಟವನ್ನು ಮುಟ್ಟಿಸಿದ್ದರು. ಸಮಾಜದಲ್ಲಿ ಪುಣ್ಯ ಸಂಪಾದನೆಗಾಗಿ ಧರ್ಮದಿಂದಲೂ ನಿಷ್ಠೆಯಿಂದಲೂ ಇದ್ದು ದಾನ ಉಪಾಸನಾದಿಗಳಲ್ಲಿ ನಿರತರಾಗಿರಬೇಕೆಂಬ ಭಾವನೆ ವಿಶೇಷವಾಗಿದ್ದಿತು. ಅಲ್ಲದೆ ವರ್ಣ-ಕುಲಗಳು ಸ್ವಲ್ಪಮಟ್ಟಿಗೆ ನಿರಾಕರಣೆಗೊಳಪಟ್ಟಿದ್ದವು. ಆಗ್ಗೆ ಕೇವಲ ಒಂದೇ ಜಾತಿ ಅಥವಾ ವರ್ಗಗಳ ಸ್ವತ್ತಾಗಬಹುದಾಗಿದ್ದ ವಿದ್ಯೆ ಮತ್ತು ಸಾಹಿತ್ಯವನ್ನು ಭೇದವಿಲ್ಲದೆ ಆಸಕ್ತರೆಲ್ಲರಿಗೂ ಎಟುಕುವಂತೆ ಮಾಡಿದ ಪ್ರಯತ್ನ ಈ ಧರ್ಮಾನುಯಾಯಿಗಳಲ್ಲಿ ಕಾಣುತ್ತದೆ. ಒಟ್ಟಾರೆ 10 ನೆಯ ಶತಮಾನವು ಜೈನಧರ್ಮ ಹೆಚ್ಚಿನ ಜನಮನ್ನಣೆಯನ್ನು ಗಳಿಸಿದ ಕಾಲವಾಗಿತ್ತು.

ಆಗ ಜೈನಧರ್ಮವು ಯಾವ ಒಂದೇ ಆರ್ಥಿಕ ಸಾಮಾಜಿಕವರ್ಗಕ್ಕೆ ಮಾತ್ರ ಸೀಮಿತವಾಗಿರಲಿಲ್ಲ. ಸರ್ವ ಜನಾದರಣೀಯವಾಗಿತ್ತು.

ಹನ್ನೊಂದನೆಯ ಶತಮಾನಕ್ಕೆ ಕಾಲಿಡುತ್ತಿದ್ದಂತೆ, ಕರ್ನಾಟಕದ ಆಗ್ನೇಯದ ಬಹುಭಾಗ ಚೋಳರ ಆಕ್ರಮಣಗಳಿಗೆ ಈಡಾಯಿತು. ಹಾಗಾಗಿ ಆವರೆಗೂ ಗಂಗರಿಂದ ಪೋಷಿಸಲ್ಪಟ್ಟದ್ದ ಜೈನಧರ್ಮ ಆ ಭಾಗದಲ್ಲಿ ಒಂದೇ ಬಾರಿಗೆ ಅವನತಿಯತ್ತ ಸಾಗಿತ್ತು. ಪ್ರತಿಷ್ಠಿತರ ಪ್ರೋತ್ಸಾಹ ತಪ್ಪಿಹೋಯಿತು. ಖಟ್ಟಾ ಜೈನ ದ್ವೇಷಿಗಳಾದ ಚೋಳರಿಂದ ಹಲವು ಜೈನ ಮಂದಿರಗಳು ಆ ಪ್ರದೇಶದಲ್ಲಿ ನೆಲಸಮಗೊಂಡಿದ್ದರೂ ಆಶ್ಚರ್ಯವಿಲ್ಲ. ಅದೇ ವೇಳೆಗೆ ಉತ್ತರ ಕರ್ನಾಟಕದ ಭಾಗದಲ್ಲಿ ಜೈನಧರ್ಮದ ಇಳಿಮುಖದ ಚಿಹ್ನೆಗಳು ಕಾಣಿಸಿಕೊಳ್ಳಲಾರಂಭಿಸಿದುವು. ಆದರೂ ಈ ಅವಧಿಯಲ್ಲಿ ಧರ್ಮಗ್ರಂಥಗಳಿಗೆ ಟೀಕೆ, ವ್ಯಾಖ್ಯಾನಗಳನ್ನು ಬರೆಯುವ ಒಂದು ಪ್ರವೃತ್ತಿ ಬೌದ್ಧಿಕರಂಗದಲ್ಲಿ ವಿಶೇಷವಾಗಿ ಪ್ರಚಲಿತವಾಗಿತ್ತು. ಈ ಕಾಲದ ಮತ್ತೊಂದು ವಿಶೇಷವೆಂದರೆ : ಈ ಹಿಂದಿನಿಂದಲೂ ಇದ್ದ ಯೋಗ, ತ್ಯಾಗಗಳೊಡನೆ ಭೋಗಕ್ಕೆ ಸಹ ಸಾಧನಾಮಾರ್ಗ ಅಥವಾ ಆಚರಣೆಗಳಲ್ಲಿ ಮುಖ್ಯಸ್ಥಾನ ಕಲ್ಪಿತವಾದದ್ದು ಒಂದು ವಿಶೇಷ. ಆದರೆ ಹೊಸ ವಿಚಾರಗಳು ಉದ್ಭವವಾಗಲಿಲ್ಲವಾಗಿ, ಈ ಕಾಲ ಧರ್ಮ ಚಿಂತನೆಗೆ ಸಂಬಂಧಿಸಿದಂತೆ ವೈಶಿಷ್ಟ್ಯಹೀನವಾಗಿ ಕಂಡರೂ ಧಾರ್ಮಿಕ ಚಟುವಟಿಕೆಗಳು ಬೇರೆಯ ರೀತಿಯಲ್ಲಿ ಸ್ಫುಟವಾಗಿದ್ದುವು.

ಹನ್ನೊಂದನೆಯ ಶತಮಾನದ ಕೊನೆಯ ವೇಳೆಗೆ ಕರ್ನಾಟಕದ ಮಲೆನಾಡು ಪ್ರದೇಶದಲ್ಲಿ ತಲೆಯೆತ್ತಿದ ಹೊಯ್ಸಳ ಮುಂತಾದ ರಾಜವಂಶಗಳು ಜೈನಧರ್ಮದ ಒಲವನ್ನು ಮುಂದುವರಿಸಿಕೊಂಡು ಬಂದುವು. ಹೊಯ್ಸಳರು ಪ್ರಬಲರಾಗಿ ತಲಕಾಡಿನಿಂದ ಚೋಳರನ್ನು ಉಚ್ಚಾಟನೆ ಮಾಡಿ ಹೊಯ್ಸಳ ಸಾಮ್ರಾಜ್ಯ ಸ್ಥಾಪನೆಗೊಂಡಾಗ ಅವರ ರಾಣಿಯರೂ, ದಂಡನಾಯಕರುಗಳಾದ ಗಂಗರಾಜ, ಬೀಚ, ಹುಳ್ಳಮ, ಭರತಿಮಯ್ಯ ಮುಂತಾದವರು ಗಂಗವಾಡಿ ಪ್ರದೇಶದಲ್ಲಿ ನೂರಾರು ಜಿನಾಲಯಗಳನ್ನು ನಿರ್ಮಿಸಿದರೆಂದೂ ಹಾಳುಬಿದ್ದಿದ್ದ ಹಲವು ಜಿನಾಲಯಗಳನ್ನು ಜೀರ್ಣೋದ್ಧಾರ ಮಾಡಿಸಿದರೆಂದೂ ಶಾಸನಗಳು ತಿಳಿಸುತ್ತವೆ. ಚೋಳರ ಕಾಲದಲ್ಲಿ ಮಸುಕಾಗಿದ್ದ ಜೈನಧರ್ಮ ಮತ್ತೆ ಹೊಯ್ಸಳರ ಕಾಲದಲ್ಲಿ ಮೆರೆಯುವಂತಾಯಿತು. 'ಜಿನಧರ್ಮಂ ಗಂಗ ನೃಪಾಳರಂದಿನ ವಿಭೂತಿಯ ರೂಢಿಯನೆಯ್ದೆ' ಮಾಡುತ್ತಿದ್ದ ಸಂಪ್ರದಾಯಗಳು ಪುನಃ ತಲೆಯೆತ್ತಲಾರಂಭಿಸಿದುವು.

ಹಾಗೇ ವಿಷ್ಣುವರ್ಧನನ ನಂತರದ ಕಾಲದಲ್ಲಿ ಕಾಳಾಮುಖ, ಶ್ರೀವೈಷ್ಣವ ಮತಗಳಿಗೂ ಆಶ್ರಯ ದೊರೆತು ಅವೂ ವಿಜೃಂಭಿಸತೊಡಗಿದವು. ಅವು ಜನಾಕರ್ಷಣೆಯ ಕೇಂದ್ರಗಳಾಗತೊಡಗಿದ್ದವು ಅಂತಹ ಸಂದರ್ಭದಲ್ಲಿ ಜೈನಧರ್ಮಿಯರಾದರೂ ತಮ್ಮ ಧರ್ಮದಲ್ಲಿ ಸಾಕಷ್ಟು ಬದಲಾವಣೆಗಳನ್ನು ಅನಿವಾರ್ಯವಾಗಿ ಆಚರಣೆಗೆ ತರಬೇಕಾಯಿತೇನೋ ಎಂದೆನಿಸುತ್ತದೆ. ಹಾಗಾಗಿ ಹೊಯ್ಸಳರ ಕಾಲದಲ್ಲಿ ಪೂಜಾ ವಿಧಾನಗಳು ಇತರ ಹಿಂದೂ ದೇವಾಲಯಗಳಲ್ಲಿದ್ದುದಕಿಂತ ಭಿನ್ನವಾಗಿರಲಿಲ್ಲ. ಜಲ, ಗಂಧ, ಪುಷ್ಪ, ಅಕ್ಷತ, ಧೂಪ, ದೀಪ, ನೈವೇದ್ಯ, ತಾಂಬೂಲ ಈ ಅಷ್ಟವಿಧಾರ್ಚನೆಗಳೂ ರೂಢಿಗೆ ಬಂದುಬಿಟ್ಟವು. ಅಲ್ಲದೇ ನೃತ್ಯ-ಗೀತಾದಿ ಸೇವೆಗಳೂ ನಡೆಯುತ್ತಿದ್ದವು. ಸರ್ವತ್ಯಾಗವಮಾಡಿದ ತೀರ್ಥಂಕರರಿಗೆ ಇವುಗಳನ್ನು ಜೊತೆಗೂಡಿಸಿರುವುದು

ಅಸಮಂಜಸವಾಗಿ ಕಂಡರೂ ವಿವಿಧ ಧರ್ಮಗಳಲ್ಲಿ ಆಚರಣೆಗಳು ಒಂದೇ ಮಾರ್ಗದಲ್ಲಿ ಸಾಗುತ್ತಿದ್ದವೆಂಬುದಕ್ಕೆ ಇದು ಒಳ್ಳೆಯ ನಿದರ್ಶನ.

ಈ ಕಾಲದಲ್ಲಿ ಅನೇಕ ಬಸದಿಗಳಲ್ಲಿ ಅಂಬಿಕಾ, ಜ್ವಾಲಮಾಲಿನಿ, ಪದ್ಮಾವತೀ, ಚಕ್ರೇಶ್ವರೀ ಮೊದಲಾದ ಯಕ್ಷಿಯರ ವಿಗ್ರಹಗಳು ಕಾಣಿಸಿಕೊಂಡವು. ಇವುಗಳಿಗೂ ವಿಶೇಷ ಪೂಜೆನಡೆಸುವ ಆಚರಣೆ ಪ್ರಬಲಗೊಂಡಿತು. ಲಕ್ಷ್ಮೀ, ಸರಸ್ವತಿಯರಂತೆ ಬೇರೆ ಬೇರೆ ಯಕ್ಷಿಯರು ಧನ, ವಿದ್ಯೆ, ಪ್ರಜಾಪಾಲನೆ ಮೊದಲಾದುವಕ್ಕೆ ಅಧಿಷ್ಠಾತ್ರಿ ದೇವತೆಗಳೆಂಬ ಕಲ್ಪನೆ ವಿಶೇಷವಾಗಿ ಬೆಳೆದಿತ್ತು. ಮಂತ್ರ, ತಂತ್ರಗಳಲ್ಲೂ ಹಲವು ಜೈನರು ನಿಷ್ಣಾತರಾಗಿದ್ದರು. ಈ ಅವಧಿಯ ಮುಳಗುಂದದ ಜೈನ ಗುರು ಮಲ್ಲಿಷೇಣಸೂರಿ ತಾಂತ್ರಿಕ ಆರಾಧಕನಾಗಿ 'ಭೈರವ ಪದ್ಮಾವತಿ ಕಲ್ಪ', 'ಜ್ವಾಲಮಾಲಿನಿ ಕಲ್ಪ' ಎಂಬ ಗ್ರಂಥಗಳನ್ನು ಬರೆದಿದ್ದಾನೆ. ಜೈನರು ಅನೇಕ ಪರ್ವಗಳನ್ನು ನೋಂಪಿ, ಹಬ್ಬಗಳನ್ನು ಆಚರಿಸುತ್ತಿದ್ದ ವಿವರಗಳು ಶಾಸನಗಳಲ್ಲಿ ಬಂದಿವೆ. ಒಟ್ಟಾರೆ ಈ ಅವಧಿಯಲ್ಲಿ ಜೈನ ಶ್ರಾವಕರ ಆಚರಣೆಗಳು ಅಂದಿನ ಇತರ ಧರ್ಮಿಯರ ಆಚರಣೆಗಳಿಗಿಂತ ವಿಭಿನ್ನವಾಗಿರಲಿಲ್ಲ.

ಹನ್ನೆರಡನೆಯ ಶತಮಾನದ ಆರಂಭದ ವೇಳೆಗೆ ಧಾರ್ಮಿಕ ರಂಗದಲ್ಲಿ ಹೊಸ ಸಿದ್ಧಾಂತಗಳೂ ಮಾರ್ಗಗಳೂ ಹುಟ್ಟಿಕೊಂಡವು. ಸಮಾಜದಲ್ಲಿ ಹೊಸ ವ್ಯವಸ್ಥೆ ಮತ್ತು ಮೌಲ್ಯಗಳನ್ನು ಅಳವಡಿಸುವೆಡೆ ದೃಷ್ಟಿ ಹರಿಯಿತು. ಇಂಥ ಸಂದರ್ಭದಲ್ಲಿ ಹೊಸ ಮತ್ತು ಹಳೆಯ ಮಾರ್ಗಗಳ ನಿಷ್ಠ ಪ್ರತಿಪಾದನೆಗಳು, ಅವುಗಳ ನಡುವೆ ತಾಕಲಾಟಗಳು ಜೊತೆ ಜೊತೆಯಾಗಿ ಕಾಣಿಸಿಕೊಂಡವು. ಸಾಂಸ್ಕೃತಿಕ ಅಸ್ವಸ್ಥತೆ ಮತ್ತು ವೈವಿಧ್ಯ ಈ ಅವಧಿಯ ವೈಶಿಷ್ಟ್ಯಗಳಾಗಿದ್ದವು. ಆದರೆ ಈ ಕಾಲಘಟ್ಟದಲ್ಲಿ ಜೈನಧರ್ಮ ಯಾವ ಹೊಸ ಸೈದ್ಧಾಂತಿಕ ಅಥವಾ ಆಚರಣೆಗಳನ್ನೂ ಬೆಳಸಲಿಲ್ಲ. ಅದರ ಪ್ರಭಾವವೂ ಇಳಿಮುಖವಾಗುತ್ತಾ ಬಂದಿತ್ತು. ಅದರಲ್ಲೂ ಉತ್ತರ ಕರ್ನಾಟಕ ಪ್ರದೇಶದಲ್ಲಿ ತೀರ ಹೀನಾಯ ಸ್ಥಿತಿಯನ್ನು ಮುಟ್ಟಿತ್ತೆನ್ನಬಹುದು. ಕಲ್ಯಾಣದ ಚಾಲುಕ್ಯರ ಆಳ್ವಿಕೆಯ ಉತ್ತರಾರ್ಧದ ಕಾಲದಲ್ಲಿ ಪೌರಾಣಿಕ ಹಿಂದೂ ಧರ್ಮದತ್ತ ರಾಜರ ಒಲವು ಹೆಚ್ಚಾಗುತ್ತಿದ್ದುದೂ ಉಚ್ಚವರ್ಗ ಹಾಗೂ ಇತರ ಸಮಾಜದ ವರ್ಗಗಳು ಪೌರಾಣಿಕ ಹಿಂದು ಧರ್ಮ ಗ್ರಂಥಗಳು, ಅದರಲ್ಲೂ ಪಾಶುಪತ ಶೈವಧರ್ಮ ಪ್ರವರ್ಧಿತವಾದುದನ್ನು ಗಮನಿಸಬಹುದಾಗಿದೆ.

ಈ ಅವಧಿಯಲ್ಲಿ ಜೈನಗುರುಗಳು ಧರ್ಮ ಪ್ರಸಾರಕ್ಕಿಂತ ಹೆಚ್ಚಾಗಿ ಬಸದಿಗಳಿಗೆ ಆಸ್ತಿಯನ್ನು ಬೆಳಸುವ, ಅದಕ್ಕಾಗಿ ಶ್ರೀಮಂತವರ್ಗದವರ ಪ್ರೋತ್ಸಾಹವನ್ನು ಗಳಿಸುವ ಪ್ರವೃತ್ತಿ ಹೆಚ್ಚಾಯಿತೇನೋ ಎಂದೆನಿಸುತ್ತದೆ.

ಇದೇ ಕಾಲದಲ್ಲಿ ಶೈವಧರ್ಮ ವ್ಯಾಪಕವಾಗುತ್ತಿದ್ದು, ಅದರಲ್ಲೂ ಜನಸಾಮಾನ್ಯ ವರ್ಗದಿಂದ ಆ ವರ್ಗದವರಿಗಾಗಿಯೇ ವೀರಶೈವಧರ್ಮ ಹೆಚ್ಚು ಪ್ರಚಾರವಾಗತೊಡಗಿದ್ದು, ಇವುಗಳಿಂದ ಈ ಹೊತ್ತಿಗೆ ಜನಸಾಮಾನ್ಯ ಸಂಪರ್ಕವನ್ನು ಕಳೆದುಕೊಳ್ಳುತ್ತಿದ್ದ ಜೈನಧರ್ಮ ಆ ಜನರಿಂದಲೂ ಹೆಚ್ಚಿನ ಬೆಂಬಲವನ್ನು ಗಳಿಸಲಾರದೆ ಹೋಯಿತು.

ಹಾಗೇ ಹೊಯ್ಸಳರ ಕಕ್ಷೆಯಲ್ಲಿದ್ದ ದಕ್ಷಿಣ ಕರ್ನಾಟಕದಲ್ಲಿ ಸರ್ವಧರ್ಮ ಸಹಿಷ್ಣುತೆಯ ತತ್ತ್ವ ಸಾಕಷ್ಟು ಬಲವಾಗಿಯೇ ಇತ್ತು. ಆದರೂ ಈ ಪ್ರದೇಶದ ಶಾಸನಗಳಲ್ಲಿ ಕಂಡುಬರುವ ಪ್ರಾರ್ಥನಾ ಶ್ಲೋಕಗಳು, ಶಾಪಾಶಯ ಭಾಗಗಳು ಹಾಗೂ ಜೈನಮುನಿಗಳು ಧರಿಸಿದ್ದ

ಬಿರುದಾವಳಿಗಳಾದ 'ವಾಧಿಕುಳಧರ ವಜ್ರಾಯುಧ', ಪರಸಮಯ ತಿಮಿರ ದಿನಕರ, ರುದ್ರವಾದಿ ಗಜಾಂಕುಶ, ವಾದಿಗಜಾಂಕುಶ, ಪರವಾದಿ ಮಲ್ಲ ವಾದಿರಾಜ, ಪಂಡಿತವಾದಿ ವಜ್ರಾಂಕುಶ, ದುರ್ಮಾರ್ಗಾಗ್ರಿದ್ರಿ ವಜ್ರಾಯುಧ, ವಾದೀಭಸಿಂಹ' ಎಂಬುವು ಪರೋಕ್ಷವಾಗಿ ಹೊಯ್ಸಳ ಸಾಮ್ರಾಜ್ಯದಲ್ಲಿ ಜೈನರ ಸ್ಥಿತಿಗತಿಗಳನ್ನು ಬಿಂಬಿಸುತ್ತಿವೆ ಎನ್ನಬಹುದು. ಅಂದರೆ ಆಗ್ಗೆ, ಅನ್ಯಮತಗಳಿಗಿದ್ದ ಪ್ರಾಬಲ್ಯದ ವಿರುದ್ಧ ಜೈನ ಧರ್ಮಿಯರು ಹೋರಾಡುತ್ತಿದ್ದುದನ್ನು ಈ ಉಲ್ಲೇಖಗಳು ಪ್ರತಿಬಿಂಬಿಸಿವೆ ಎಂದು ಭಾವಿಸಬೇಕಾಗಿದೆ. ಒಟ್ಟಾರೆ ಜೈನ ಮುನಿಗಳು ಅನೇಕ ವಾದ-ವಿವಾದಗಳಲ್ಲಿ ಭಾಗವಹಿಸಿ ಗೆದ್ದು ಬಿರುದುಗಳನ್ನು, ಜಯಪತ್ರಗಳನ್ನು ಗಳಿಸುತ್ತಿದ್ದರು. ಹಾಗೇ ಶೈವ ಮುನಿಗಳು ಕೂಡ ವಾದ-ವಿವಾದಗಳಲ್ಲಿ ತೊಡಗಿದ್ದುದರ ಬಗ್ಗೆ ಹಾಸನ ಜಿಲ್ಲೆಯ ಅರಸೀಕೆರೆ ತಾಲೂಕಿನ ಜಾಜೂರು ಗ್ರಾಮದ ಶಾಸನವೊಂದು ಬೆಳಕು ಚೆಲ್ಲುತ್ತದೆ. ಅಲ್ಲಿನ ಕಲ್ಲೇಶ್ವರ ದೇವಾಲಯದ ಶೈವ ಯತಿ ಚಂದ್ರಭೂಷಣ ಪಂಡಿತನನ್ನು ಮಹಾದೇವಜೀಯನೆಂದು ಕರೆದಿದ್ದು, ಆತನು ಕುಮತವಾದಿಗಳನ್ನು ಒಳ್ಳುವೆತ್ತ ನುಡಿಗಳಿಂದ ಭಂಗಿಸಿ, ಇಳೆಯಲ್ಲಿ ಪೆಂಪುವೆತ್ತ ಶೈವ ಮತವನ್ನು ನಿಲ್ಲಿಸಲು ವೀರ ಪರಾಕ್ರಮದಿಂದ ಎದುರಾಳಿಗಳನ್ನು ಸೋಲಿಸಿ 'ಸಮಯ ಪ್ರತಿಪಾಲಕ'ನೆಂಬ ಬಿರುದನ್ನು ಪಡೆದನೆಂದು ಶಾಸನ ವರ್ಣಿಸಿದೆ. ಈ ವಿವರಗಳನ್ನು ಗಮನಿಸಿದರೆ; ಜೈನ ಮತ್ತು ಶೈವರ ಮಧ್ಯೆ ಕೇವಲವಾದ ವಿವಾದಗಳಷ್ಟೇ ಅಲ್ಲ ಅವರ ಮಧ್ಯೆ ಕೈ ಕೈ ಮಿಲಾವಣೆಯೂ ನಡೆದಿದ್ದರಬೇಕೆಂದು ಅನಿಸದಿರದು.

ವಿದ್ವತ್ತಿನ ಮಟ್ಟದಲ್ಲಿ ಜೈನಮತ ಬಹಳಮಟ್ಟಿಗೆ ಗೆದ್ದಿತಾದರೂ, ಜನ ಸಾಮಾನ್ಯರ ಮಟ್ಟದಲ್ಲೇ ನಡೆದ ಘರ್ಷಣೆಗಳಲ್ಲಿ ಸ್ವಲ್ಪಮಟ್ಟಿಗೆ ಸೋತಿತು ಎಂದೇ ಹೇಳಬೇಕು. ಆ ವೇಳೆಗಾಗಲೇ ತಲೆಯೆತ್ತ ತೊಡಗಿದ್ದ ವೀರಶೈವ ಹಾಗೂ ಆ ಧರ್ಮದ ಮುಂದಾಳುಗಳು ಜನತೆಯ ಒಲವನ್ನು ಗೆಲ್ಲಲು ಮೊದಲಿಗೆ ಪ್ರಯತ್ನಶೀಲರಾದರು ಅಲ್ಲದೆ ಗೆದ್ದರೂ ಕೂಡ. ಹಾಗೇ ಅವರ ಸಾಹಿತ್ಯ ಸೃಷ್ಟಿಯಲ್ಲೂ ಅದೇ ದೃಷ್ಟಿಯನ್ನು ನಾವು ಕಾಣಬಹುದಾಗಿದೆ.

ಈ ಹಂತದಲ್ಲಿ ಕರ್ನಾಟಕದ ಹಲವು ಭಾಗಗಳಲ್ಲಿ ನಡೆದು ಹೋದ ಘಟನೆಗಳ ಪ್ರತಿಧ್ವನಿಗಳೇ ಹೆಮ್ಮಾಡಿ ಅರಸ, ಗೊಗ್ಗಿದೇವ, ಏಕಾಂತರಾಮಯ್ಯ ಮುಂತಾದವರು ನೆಡಸಿದ ಸಾಹಸಗಳಾಗಿವೆ ಎಂದರೆ ತಪ್ಪಾಗಲಾರದು.

ಸರಿಸುಮಾರು ಈ ಅವಧಿಯಲ್ಲೇ ಪ್ರಾಜ್ಞರಾದ ಜೈನ ನಕರವರ್ಗದವರ ಆಶಯದ ಮೇರೆಗೆ ಹೆಚ್ಚು ಪ್ರಬಲರಾಗಿದ್ದ ಶೈವ ಗುರುಗಳು; ಆಗ್ಗೆ ಅಲ್ಪ ಸಂಖ್ಯಾತರಾಗ ತೊಡಗಿದ್ದ ಜೈನರ ಹಾಗೂ ಅವರ ಪೂಜಾಸ್ಥಾನಗಳ ರಕ್ಷಣೆಗೆ ಮುಂದೆ ಬಂದು. ಅದಕ್ಕಾಗಿ ಎಕ್ಕೋಟಿಗಣಗಳನ್ನು ನೇಮಿಸುವ ಒಂದು ಪ್ರಕ್ರಿಯೆ ಆರಂಭಗೊಳಿಸಿದರು ಎಂಬ ಸೂಚನೆ ಬಿಜಾಪುರ ಜಿಲ್ಲೆಯ ತೇರದಾಳ ಸ್ಥಳದ ಶಾಸನದಿಂದ ವ್ಯಕ್ತವಾಗುತ್ತದೆ. ತೇರದಾಳ ಗ್ರಾಮದ ಸಮಸ್ತ ನಕರರ ಪ್ರಾರ್ಥನೆಯ ಮೇರೆಗೆ ಕೊಲ್ಲಾಪುರದ ಘಟಿಕಾಸ್ಥಾನದ ಆಚಾರ್ಯರು ಮತ್ತು ಎಕ್ಕೋಟಿಯಸಂಖ್ಯಾತ ಗಣಗಳು ಒಂದುಗೂಡಿ ತೇರದಾಳದ ನೇಮಿನಾಥೇಶ್ವರ ಜಿನಾಲಯವನ್ನು ಅದೇ ಊರಿನ ಕಲಿದೇವರ ದೇವಾಲಯಕ್ಕೆ ಪ್ರತಿಬದ್ಧಮಾಡಿದರು. ಈ ಸಂಗತಿಯು ಅಂದು ನಡೆಯುತ್ತಿದ್ದ ಧಾರ್ಮಿಕ ಆಂದೋಲನದ ಚಿತ್ರವನ್ನು, ಅಂಥ ದುರ್ಘಟನೆ ತೇರದಾಳದ ಬಸದಿಗೆ ಒದಗಬಾರದೆಂಬ ಉದ್ದೇಶದಿಂದ ಶೈವರಕ್ಷೆಯನ್ನೇ

ಬೇಡಿದ ಒಂದು ಸಂದರ್ಭವನ್ನು ನಿರೂಪಿಸುವ ಈ ಶಾಸನ 12ನೆಯ ಶತಮಾನದ ಉತ್ತರಾರ್ಧದಲ್ಲಿ ಉತ್ತರಕರ್ನಾಟಕದಲ್ಲಿ ಜೈನಧರ್ಮಕ್ಕೆ ಎಂತಹ ಸ್ಥಿತಿ ಬಂದಿತ್ತು ಎಂಬುದನ್ನು ಸೂಚಿಸುತ್ತದೆ. ಈ ಹಿನ್ನೆಲೆಯಲ್ಲಿ ಕರ್ನಾಟಕದಾದ್ಯಂತ ಕಂಡುಬರುವ ಎಕ್ಕೋಟಿ ಜಿನಾಲಯಗಳು ಶೈವ ರಕ್ಷಣೆಯನ್ನು ಪಡೆದು ಉಳಿದುಬಂದ ಪೂಜಾಸ್ಥಾನಗಳಾಗಿವೆ ಎಂದರೆ ತಪ್ಪಾಗಲಾರದು.

ಹಾಗೆ ಅಗ್ರಹಾರಗಳಲ್ಲಿ ಬ್ರಾಹ್ಮಣರ ಸಹಕಾರದಿಂದ ರೂಪಿತಗೊಂಡ ಬಸದಿಗಳಲ್ಲಿ ಬ್ರಹ್ಮದೇವರನ್ನು ಸ್ಥಾಪಿಸಿ, ಬಸದಿಯ ಶ್ರೀಕಾರ್ಯಕ್ಕೆ ಮಹಾಜನರು ದಾನವಿತ್ತು – ಬ್ರಹ್ಮ ಜಿನಾಲಯವನ್ನಾಗಿಸುತ್ತಿದ್ದರು. ಲಕ್ಕುಂಡಿಯ ಅತ್ತಿಮಬ್ಬೆ ಕಟ್ಟಿಸಿದ ಬ್ರಹ್ಮ ಜಿನಾಲಯ ಇದಕ್ಕೆ ಒಳ್ಳೆಯ ನಿದರ್ಶನವಾಗಿದೆ. ಈ ಅವಧಿಯ ಸಾಹಿತ್ಯ ಕೃತಿಗಳಲ್ಲೂ ಅಂದಿನ ಧಾರ್ಮಿಕ ಒಲವು ನಿಲುವುಗಳು ಪ್ರತಿಪಾದಿತವಾಗಿವೆ. ಈ ದಿಸೆಯಲ್ಲಿ ನಯಸೇನನ 'ಧರ್ಮಾಮೃತಂ', ಬ್ರಹ್ಮಶಿವನ 'ಸಮಯಪರೀಕ್ಷೆ', ಆಂಡಯ್ಯನ 'ಕಬ್ಬಿಗರ ಕಾವ', ಹರಿಹರ ಮಹಾಕವಿಯ ಚಂಡೇಶಪಿಳ್ಳೆಯವರ ರಗಳೆ, ಆದಯ್ಯನ ರಗಳೆ, ಏಕಾಂತರಾಮಿತಂದೆಯ ರಗಳೆ, ಮಾರುಡಿಗೆ ನಾಚಿತಂದೆಯ ರಗಳೆ, ಕೋವೂರ ಬೊಮ್ಮಿತಂದೆಯ ರಗಳೆ ಮತ್ತು ವೀರಭದ್ರದೇವರ ರಗಳೆಗಳಲ್ಲಿ ಪರಸಮಯಗಳ ನಿಂದೆ, ಅಪಹಾಸ್ಯಗಳನ್ನು ಕಾಣಬಹುದಾಗಿದೆ. ಹಾಗೇ ರಾಘವಾಂಕನ 'ಸೋಮನಾಥ ಚರಿತೆ', ವೀರೇಶ ಚರಿತೆ'ಗಳು ಕೂಡ ಅಂದಿನ ಜೈನ-ಶೈವ ಧರ್ಮಗಳ ಸ್ಥಿತಿಗತಿಗಳನ್ನು ಪರೋಕ್ಷವಾಗಿ ಬಿಂಬಿಸಿರುವುದನ್ನು ನಾವು ಕಾಣಬಹುದಾಗಿದೆ.

ಉತ್ತರ ಕರ್ನಾಟಕ ಪ್ರದೇಶದಲ್ಲಿ ದೃಗ್ಗೋಚರವಾಗಿ ಜೈನರು ಮತ್ತು ಜೈನ ಸಂಸ್ಥೆಗಳ ಮೇಲೆ ದಾಳಿಗಳು ನಡೆದ ರೀತಿಯಲ್ಲಿ ದಕ್ಷಿಣ ಕರ್ನಾಟಕದಲ್ಲಿ ನಡೆಯಲಿಲ್ಲವೆಂದು ಮೇಲುನೋಟಕ್ಕೆ ಅನಿಸಿದರೂ, ಹೊಯ್ಸಳ ರಾಜ್ಯದ ಅನೇಕ ಪ್ರದೇಶಗಳಲ್ಲಿ ಪಾಳುಬಿದ್ದಿರುವ ಬಸದಿಗಳು, ಚೆಲ್ಲಾಪಿಲ್ಲಿಯಾಗಿ ಕೆರೆ, ಕಟ್ಟೆ, ಕಾಲುವೆಗಳೆಲ್ಲೆಲ್ಲಾ ಕಂಡುಬರುವ ಜೈನ ಸಂಬಂಧಿ ಶಿಲ್ಪ-ವಾಸ್ತು ಅವಶೇಷಗಳು, ಈ ಪ್ರದೇಶದಲ್ಲೂ ಉಗ್ರವಾಗಿಯೇ ದಾಳಿಗಳು ನಡೆದಿತ್ತೆನ್ನಲು ಸಾಕ್ಷಿಯಾಗಿವೆ. ಇದಕ್ಕೆ ಮುಖ್ಯ ಕಾರಣ ಆ ಕಾಲದ ಹೊಯ್ಸಳ ದೊರೆ ನರಸಿಂಹನು ತನ್ನ ಕಾರ್ಯ ಚಟುವಟಿಕೆಗಳನ್ನು ತಮಿಳುನಾಡಿನ ಕಣ್ಣಾನೂರಿನಲ್ಲಿ ಕೇಂದ್ರೀಕರಿಸಿದ್ದು, ಸ್ವಲ್ಪಮಟ್ಟಿನ ಅರಾಜಕತೆಯು ಇದಕ್ಕೆ ಕಾರಣವಾಗಿರಬೇಕು. ಈ ಅವಧಿಯಲ್ಲೇ ಜೈನ ವಿರೋಧಿ ಆಂದೋಲನಗಳು ನಡೆದಿರಬೇಕೆಂದು ತಮ್ಮ ಕ್ಷೇತ್ರಕಾರ್ಯದ ಮೂಲಕ ಡಾ. ಕೆ. ವಸಂತಲಕ್ಷ್ಮಿ ಅವರು ತಮ್ಮ ಅಧ್ಯಯನಗಳಲ್ಲಿ ಸವಿವರವಾಗಿ ಸಾದರಪಡಿಸಿದ್ದಾರೆ. ಆ ವೇಳೆಗಾಗಲೇ ದಕ್ಷಿಣ ಕರ್ನಾಟಕದಲ್ಲಿ ರಾಮಾನುಜರ ಪ್ರಭಾವ ಮತ್ತು ರಾಜಾಶ್ರಯದ ಹಿನ್ನೆಲೆಯಲ್ಲಿ ಶ್ರೀವೈಷ್ಣವಧರ್ಮ ಹೆಚ್ಚು ಜನಾದರಣೆಯನ್ನು ಗಳಿಸಿಕೊಳ್ಳ ತೊಡಗಿತ್ತು. ಒಂದು ಕಡೆ ಶೈವ ಮತ್ತೊಂದು ಕಡೆ ಶ್ರೀವೈಷ್ಣವ ಧರ್ಮಗಳ ಮಧ್ಯ ಸಿಲುಕಿ ತನ್ನ ಅಸ್ತಿತ್ವಕ್ಕಾಗಿ ಜೈನ ಧರ್ಮ ಹೋರಾಡಬೇಕಾದ ಪರಿಸ್ಥಿತಿಗೆ ಸಿಕ್ಕಿಕೊಂಡಿದ್ದಿತು. ಧರ್ಮ ಸ್ಪರ್ಧೆ ಬಿಸಿಯಾಗಿ ಜರುಗುತ್ತಿದ್ದ ಕಾಲದಲ್ಲಿ ಸ್ವಧರ್ಮ ಪ್ರಶಂಸೆ, ಪರಧರ್ಮ ಖಂಡನೆ ಇವನ್ನೇ ವಸ್ತುವಾಗುಳ್ಳ ಕೃತಿಗಳು ಹುಟ್ಟುವುದು ಸಾಮಾನ್ಯ. ಧರ್ಮದ ಉಳಿವೇ ಸಮಸ್ಯೆಯಾಗಿರುವಾಗ ಇಂಥ ಕಾಲದಲ್ಲಿ ಆಯಾ ಧರ್ಮೀಯರಿಂದ ಶಾಸ್ತ್ರಗ್ರಂಥಗಳು

ಹುಟ್ಟುವ ಸಂದರ್ಭ ಬಹು ಕಡಿಮೆ. ಈ ಕಾಲದಲ್ಲಿಯೇ ಹೆಚ್ಚು ಸಂಖ್ಯೆಯಲ್ಲಿ ಜೈನ ಧಾರ್ಮಿಕ ಕೃತಿಗಳು ರಚಿತವಾಗಿರುವುದು ಆಶ್ಚರ್ಯ.

ವಿಜಯನಗರ ಕಾಲದ ಆರಂಭದ ಹೊತ್ತಿಗೆ ವೈಷ್ಣವ ಜೈನ ಕಲಹಗಳು ಹುಟ್ಟಿಕೊಂಡ ಪ್ರಸ್ತಾಪ ಶ್ರವಣಬೆಳಗೊಳ, ಕಲ್ಯ ಇತ್ಯಾದಿ ಜೈನ ಕ್ಷೇತ್ರಗಳಲ್ಲಿನ ಬುಕ್ಕರಾಯನ ಶಾಸನಗಳಲ್ಲಿ ದೊರೆಯುತ್ತದೆ. ಬುಕ್ಕರಾಯ ಜೈನರಿಗೂ ವೈಷ್ಣವರಿಗೂ ರಾಜಿ ಮಾಡಿಸಿದ್ದು, ಜೈನ ಕ್ಷೇತ್ರಗಳ ರಕ್ಷಣೆಗೆ ವೈಷ್ಣವರ ಬೆಂಬಲವನ್ನು ಪಡೆದುಕೊಂಡಿದ್ದು ಇವು ಆ ಹೊತ್ತಿಗೆ ಜೈನಧರ್ಮದ ಉಳಿವು ಅಂದಿನ ಜೈನ ಅನುಯಾಯಿಗಳಿಂದ ಅಲ್ಲ, ಇತರ ಮತಾನುಯಾಯಿಗಳ ಸಹಿಷ್ಣುತಾ ನೀತಿಯಿಂದ ಮಾತ್ರ ಸಾಧ್ಯ ಎನ್ನುವ ಸ್ಥಿತಿಯನ್ನೇ ಹೇಳುವಂತಿದೆ.

ಕರ್ನಾಟಕವು ಸರ್ವಧರ್ಮಗಳ ಉಳಿವು ಮತ್ತು ಬೆಳವಣಿಗೆಗೆ ನೆರವಾಗಿರುವುದು ಮುಖ್ಯವಾಗಿ ಧರ್ಮ ಸಹಿಷ್ಣುತೆ, ಎಲ್ಲಾ ಕಾಲದಲ್ಲೂ ಪ್ರಧಾನವಾಗಿ ಎದ್ದು ಕಾಣುವುದು ಈ ಪುಣ್ಯ ಭೂಮಿಯ ಗುಣ. ಹಾಗಾಗಿ ನೆರೆಯ ರಾಜ್ಯಗಳಲ್ಲಿ ಆದಂತೆ ಜೈನಧರ್ಮದ ಬುಡಮಟ್ಟನಾಶ ಕರ್ನಾಟಕದಲ್ಲಿ ಆಗಲಿಲ್ಲ. ಅದು ಉಳಿದು ಬರಲು ಅಲ್ಲಿನ ಸುಸಂಸ್ಕೃತ ವರ್ಗದ ಗುರುಗಳು, ಜನರು, ಆಡಳಿತಗಾರರೂ ಕಾರಣವಾಗಿರುವುದು ಕಂಡುಬರುತ್ತದೆ.

ವಿಜಯನಗರ ಪೂರ್ವದಲ್ಲಿ ಇಂತಹ ಸಂದರ್ಭಗಳಲ್ಲಿ ಕುಶಲ ತತ್ವಜ್ಞರು ವಾದ ವಿವಾದಗಳಿಂದ ತಮ್ಮ ಸಿದ್ಧಾಂತ ಮೇಲ್ಮೆಯನ್ನು ಸಾಧಿಸಿ ಅನುಯಾಯಿಗಳನ್ನು ಉಳಿಸಿಕೊಳ್ಳುವುದೂ ಗಳಿಸಿಕೊಳ್ಳುವುದೂ ಸಾಧ್ಯವಾಗಿದ್ದಿತು. ಆದರೆ ವಿಜಯನಗರ ಕಾಲದಲ್ಲಿ ಆ ಮಾರ್ಗಕ್ಕೆ ಅಷ್ಟಾಗಿ ಅವಕಾಶವಿರಲಿಲ್ಲ. ಧರ್ಮ ಪ್ರಚಾರ ಮಾಧ್ಯಮ ಈಗ ಬದಲಾಗಿತ್ತು. ಅದು ಜಿಜ್ಞಾಸುಗಳಿಗಿಂತಲೂ ಜನಸಾಮಾನ್ಯರನ್ನು ಉದ್ದೇಶಿಸುವಂತೆ ಇರಬೇಕಾಗಿದ್ದಿತು. ಒಟ್ಟಿನಲ್ಲಿ ನೋಡಿದರೆ ಜನಸಾಮಾನ್ಯರು ಪ್ರಭಾವ ಏರುತ್ತಿದ್ದ ವಿಜಯನಗರ ಕಾಲದಲ್ಲಿ ಜೈನಧರ್ಮಕ್ಕೆ ತನ್ನ ಉಳಿವಿಗಾಗಿ ತೊಳಲುವ ಸ್ಥಿತಿ ಬಂದಿತ್ತು.

ಸ್ಥಳೀಯವಾದ ವಿವಿಧ ಧರ್ಮ ಪಂಥಗಳಲ್ಲಿ ಹಿಂದೆ ಬೆಳದಿದ್ದ ಸ್ವಧರ್ಮವೇ ಹೆಚ್ಚೆಂಬ ಭಾವನೆ, ಪರಧರ್ಮಗಳನ್ನು ತುಚ್ಛವಾಗಿ ಕಾಣುವ ಮನೋಭಾವ, ಅಸಹಿಷ್ಣುತೆ ಅಂಶಗಳು ಅಲ್ಪಜ್ಞರಾದ ಕೆಲವು ಗುರುಗಳು ಮತ್ತು ಜನರಲ್ಲಿ ರೂಢ ಮೂಲವಾಗಿ ಉಳಿದು ಬಂದಿತ್ತೆಂಬುದಕ್ಕೆ ಸಾಕ್ಷಿ; ಕೃಷ್ಣದೇವರಾಯನ ಕಾಲದಲ್ಲಿ ಶಾಂತಲಿಂಗ ಎಂಬ ಲಿಂಗಾಯತ ಪ್ರಮುಖ ತನಗೆ ಕೈಲಾಸ ಪ್ರಾಪ್ತಿಯಾಗಬೇಕೆಂಬ ಉದ್ದೇಶದಿಂದ ಹಲವಾರು ಜೈನಗುರುಗಳ ತಲೆಗಡೆದನೆಂದು ಒಂದು ಶಾಸನ ತಿಳಿಸುತ್ತದೆ.

ವಿಜಯನಗರ ಆಳ್ವಿಕೆಗೆ ಒಳಪಟ್ಟಿದ್ದ ಮಲೆನಾಡು ಮತ್ತು ಪಶ್ಚಿಮ ಕಡಲ ತೀರದ ಪ್ರದೇಶಗಳಲ್ಲಿ ಜೈನಧರ್ಮ ಹೆಚ್ಚು ಪ್ರವರ್ಧಮಾನವಾಗಿಯೇ ಮುಂದುವರೆಯಿತು. ಅದಕ್ಕೆ ಮುಖ್ಯ ಕಾರಣ ಆ ಪ್ರದೇಶಗಳನ್ನು ಆಳಿದ ಸ್ಥಳೀಯ ಪ್ರಭುಗಳು. ಹಾಡುವಳ್ಳಿಯ ಸಾಳುವರು, ಕಾರ್ಕಳದ ಭೈರರಸರು, ಸುರುಳಿನ ತೋಳದರು, ಹೊಸಂಗಡಿಯ ಹೊನ್ನಕಂಬಳಿಯರಸರು, ಪುತ್ತಿಗೆಯ ಚೌಟರು, ಮೂಲ್ಕಿಯ ಸಾವಂತರು, ಬಂಗಾಡಿಯ ಬಂಗರು, ಆಳವಂಗಡಿಯ ಅಜಿಲರು, ಬೈಲಂಗಡಿಯ ಮೂಲರು, ಪಡು ಪಣಂಬೂರು, ಯೆರ್ಮಾಳು, ಪಡುಬಿದಿರೆ, ಕಾಪು, ಯೊಲ್ಲೂರು, ಮುಂತಾದ ಪ್ರದೇಶದ ಹೆಗ್ಗಡೆ, ಬಲ್ಲಾಳರು

ಅನೇಕ ಬೀಡುಗುತ್ತುಗಳ ಮುಖ್ಯಸ್ಥರು ಜೈನ ಮತಾವಲಂಬಿಗಳಾಗಿದ್ದು ಜೈನ ಸಂಸ್ಕೃತಿಯ ಬೆಳವಣಿಗೆಗೆ ಕಾರಣರಾದರು. ಈ ಪ್ರದೇಶದಲ್ಲಿ ರಾಜಕೀಯರಂಗದಲ್ಲಿ ಜೈನಧರ್ಮಕ್ಕೆ ಯಾವ ಭಾದಕವೂ ಉಂಟಾಗಲಿಲ್ಲ. ಆ ಪ್ರದೇಶದಲ್ಲಿ ವಾಸ್ತು, ಮೂರ್ತಿಶಿಲ್ಪ, ಸಾಹಿತ್ಯ ಸಂಸ್ಕೃತಿ ಎಲ್ಲವೂ ಉತ್ಕೃಷ್ಟತೆಯನ್ನು ಪಡೆದುಕೊಂಡಿತು.

ಒಟ್ಟಾರೆ ಕನ್ನಡ ಸಂಸ್ಕೃತಿಗೆ ಜೈನಧರ್ಮವು ಕೊಟ್ಟಿರುವ ಕಾಣಿಕೆಯು ಅಪರಿಮಿತ ಮತ್ತು ಉಪಮಾತೀತ ಎಂಬ ಹಿರಿಯ ವಿದ್ವಾಂಸರ ಅಭಿಪ್ರಾಯ ಸತ್ಯಸ್ಯ ಸತ್ಯ ಕನ್ನಡನಾಡಿನ ಜೀವನಕ್ಕೆ ಶಾಸ್ತ್ರದ ಬೆಳಕನ್ನು, ಕಾವ್ಯದ ತಂಪನ್ನು ತಂದುಕೊಟ್ಟು ಅದನ್ನು ರೂಪಿಸಿದವರು ಜೈನರು.

---

**ಆಕರ ಸೂಚಿ**

1. ಹಂಪ ನಾಗರಾಜಯ್ಯ, 2008, **ತುಳುನಾಡಿನ ಶಾಸನಗಳು ಮತ್ತು ಬಸದಿಗಳು: ವೈಶಿಷ್ಟ್ಯ**
2. ವಸಂತಲಕ್ಷ್ಮಿ ಕೆ., 2006, **ಹಾಸನಜಿಲ್ಲೆಯ ಹೊಯ್ಸಳರ ಬಸದಿಗಳು**, ಬೆಂಗಳೂರು: ಸುಮುಖ ಪ್ರಕಾಶನ.
3. ಕಲಬುರ್ಗಿ ಎಂ.ಎಂ., 1995, 'ಪ್ರಾಚೀನ ಕರ್ನಾಟಕದಲ್ಲಿ ದೇವಾಲಯಗಳ ನಾಶ; **ಅಮೃತವರ್ಷ**, ದೇಜಗೌ–75, ಅಭಿನಂದನ ಸಮಿತಿ.

# ಹತ್ತನೆಯ ಶತಮಾನದ ಕನ್ನಡ-ತೆಲುಗು ದ್ವಿಭಾಷಿಕ ಶಾಸನಗಳ ಸ್ವರೂಪ

**ಮಂಜುನಾಥ ಟಿ**
ಹಿರಿಯ ಸಂಶೋಧನಾ ವಿದ್ಯಾರ್ಥಿ
ಕನ್ನಡ ಅಧ್ಯಯನ ಕೇಂದ್ರ
ಬೆಂಗಳೂರು ವಿಶ್ವವಿದ್ಯಾಲಯ,
ಬೆಂಗಳೂರು-560056
manjutkivi@gmail.com
ಮೊಬೈಲ್: 8123943199.

ಶಾಸನಗಳ ಚರಿತ್ರೆಯನ್ನು ಅವಲೋಕಿಸಿದರೆ ಮೊದಲಿಗೆ ಅಶೋಕನು ಕ್ರಿಪೂ. 3ನೇ ಶತಮಾನದಲ್ಲಿ ಹಾಕಿಸಿರುವ ದ್ವಿಭಾಷಾ ಶಾಸನಗಳು ಕಂಡುಬರುತ್ತವೆ. ಕ್ರಿ.ಶ.ಮೊದಲನೆಯ ಹಾಗೂ ಎರಡನೆಯ ಶತಮಾನದಲ್ಲಿ ಸಾತವಾಹನರದ್ದು ದೊರಕಿದರೆ, ನಂತರ ದಕ್ಷಿಣದಲ್ಲಿ ಪ್ರಾಕೃತ-ಸಂಸ್ಕೃತ ನುಡಿಗಳಲ್ಲಿ ಬರೆದಿರುವ ಶಾಸನಗಳು ಸಿಗುತ್ತವೆ. ಕ್ರಿ.ಶ.4-5ನೇ ಶತಮಾನದಲ್ಲಿ ಕದಂಬ ಅರಸರು ದ್ವಿಭಾಷೆಯಲ್ಲಿ ಬರೆಸಿರುವ ಶಾಸನಗಳು ದೊರಕುತ್ತವೆ. ಕ್ರಿ.ಶ. ಹತ್ತನೇ ಶತಮಾನದ ಹೊತ್ತಿಗೆ ಮೂರು ಬಗೆಯ ಭಾಷಾ ಬಳಕೆಯನ್ನು ಶಾಸನಗಳಲ್ಲಿ ಕಾಣುತ್ತೇವೆ. ಒಂದು; ಪಾಕೃತ. ಎರಡು; ಕನ್ನಡ-ಸಂಸ್ಕೃತ.ಮೂರು; ಕನ್ನಡ-ತೆಲುಗು.ಪ್ರಸ್ತುತ ಪ್ರಬಂಧದಲ್ಲಿ ಕ್ರಿ.ಶ. 8 ಮತ್ತು 9ನೇ ಶತಮಾನದಿಂದ ಉಳಿದುಬಂದಿರುವ ಕನ್ನಡ-ತೆಲುಗು ದ್ವಿಭಾಷಾ ಶಾಸನಗಳಾದ ಕಲಕಡ[1], ವೆಲಿಗಲ್ಲು[2], ಅಕನೂರು[3], ಅರಕಟವೇಮುಲ[4] ಮತ್ತು ಕುರ್ಕ್ಯಾಲ[5] ಶಾಸನಗಳಲ್ಲಿರುವ ಕನ್ನಡ, ತೆಲುಗು ಹಾಗೂ ಅವುಗಳಲ್ಲಿರುವ ದ್ರಾವಿಡ ರೂಪಗಳ ವೈಶಿಷ್ಟ್ಯಗಳನ್ನು ಗುರುತಿಸಲಾಗಿದೆ.

## ದ್ವಿಭಾಷಾ ಶಾಸನಗಳು : ಪ್ರದೇಶ ಹಾಗೂ ರಾಜಕೀಯ ಹಿನ್ನಲೆ

ದ್ವಿಭಾಷಾ ಶಾಸನಗಳ ಭಾಷಾ ಸ್ವರೂಪದೊಡನೆ, ಆ ಶಾಸನಗಳು ರಚನೆಯಾದ ರಾಜಕೀಯ ವಿವರಗಳನ್ನು ತಿಳಿದರೆ, ಆ ಕಾಲದ ಭಾಷೆಯ ಸ್ವರೂಪವನ್ನು ಅರಿಯಲು ಸಾಧ್ಯವಾಗುತ್ತದೆ. ಮೇಲೆ ತಿಳಿಸಿದ ಐದು ದ್ವಿಭಾಷಾ ಶಾಸನಗಳು ಕನ್ನಡ-ತೆಲುಗು ದ್ವಿಭಾಷಾ ಪ್ರಾಂತ್ಯಗಳಲ್ಲಿ ದೊರತಿವೆ. ಕರ್ನಾಟಕದ ಇಂದಿನ ಕೋಲಾರ ಜಿಲ್ಲೆಯು ಬಹಳ ಹಿಂದಿನಿಂದಲೂ ಬಹುಭಾಷಾ ಪ್ರದೇಶವಾಗಿದೆ. ಕೋಲಾರದ ಕೆಜಿಎಫ್, ಮಾಲೂರು ಪ್ರದೇಶಗಳಲ್ಲಿ ತಮಿಳಿನ ಪ್ರಭಾವವಿದ್ದರೆ, ಮುಳಬಾಗಿಲು, ಶ್ರೀನಿವಾಸಪುರ, ಬಾಗೇಪಲ್ಲಿ, ಗೋರಿಬಿದನೂರುಗಳಲ್ಲಿ ತೆಲುಗು ನುಡಿಯ ಪ್ರಭಾವವಿದೆ. ಕೋಲಾರಕ್ಕೆ ಅಂಟಿಕೊಂಡಿರುವ ಆಂಧ್ರಪ್ರದೇಶದ ಚಿತ್ತೂರು ಜಿಲ್ಲೆಯು ಸಹ ದ್ವಿಭಾಷಿಕ ಪ್ರದೇಶವಾಗಿತ್ತು ಎಂಬುದಕ್ಕೆ ಅಲ್ಲಿ ದೊರತಿರುವ ದ್ವಿಭಾಷಿಕ ಶಾಸನಗಳಿಂದ ಗುರುತಿಸಬಹುದು.

'ಕಲಕಡ' ಹಾಗೂ 'ವೆಲಿಗಲ್ಲು' ಶಾಸನಗಳು ಚಿತ್ತೂರು ಜಿಲ್ಲೆಯ ಕ್ರಮವಾಗಿ ವಾಯಲಪಾಡು, ಮದನಪಲ್ಲಿ ತಾಲ್ಲೂಕುಗಳಲ್ಲಿ ಸಿಕ್ಕಿವೆ. ಇವು ಕ್ರಿ.ಶ. ಒಂಬತ್ತನೇ ಶತಮಾನಕ್ಕೆ ಸೇರಿದ 'ವೀರಗಲ್ಲು'ಶಾಸನಗಳಾಗಿವೆ. ಇವೆರಡುಶಾಸನಗಳು ವೈದುಂಬ ಅರಸ ಗಣ್ಡ ತ್ರಿಣೇತ್ರನ ಆಳ್ವಿಕೆಯನ್ನು ಹೇಳುತ್ತವೆ. ಇವರ ದ್ವಿಭಾಷಾ ಶಾಸನಗಳಿಗೆ ವಿಶೇಷವಾದ ಸ್ಥಾನವಿದೆ. 'ಅಕನೂರು' ಶಾಸನವು ವಾರಂಗಲ್ ಜಿಲ್ಲೆಯ ಜನಗಾಂ ತಾಲ್ಲೂಕಿನಲ್ಲಿದೆ.ಇದನ್ನು ಕೊಳ್ಳಿಪಾಕೆನಾಡು-2000 ಅನ್ನು ಆಳುತ್ತಿದ್ದ ಮಹಾಸಾಮಂತ ಅರಸ ಸಂಕರಗಂಡರಸನ ಸಾಮಂತನಾದ ಇಂದುಪಯ್ಯನ ಆಳ್ವಿಕೆಯಲ್ಲಿ ಹಾಕಿಸಲಾಗಿದೆ. ಇದು ಕೊಳ್ಳಿಪಾಕೆಯ ಪಿರಿಯಬಸದಿಗೆ ಕೊಟ್ಟ ಭೂಮಿದತ್ತಿಯನ್ನು ಪ್ರಸ್ತಾಪಿಸಿದೆ.

'ಅರಕಟವೇಮುಲ' ಶಾಸನವು ಕಡಪ ಜಿಲ್ಲೆಯ ಪ್ರೊದ್ದಟೂರು ತಾಲ್ಲೂಕಿನಲ್ಲಿದೆ. ಇದು ಕ್ರಿ.ಶ. ಒಂಬತ್ತನೆ ಶತಮಾನದಲ್ಲಿ ರಚಿತವಾಗಿದೆ. ಈ ಶಾಸನ ರಾಷ್ಟ್ರಕೂಟರ ಶ್ರೀವಲ್ಲಭನನ್ನು ತಿಳಿಸುತ್ತದೆ. ಮತ್ತೊಂದು 'ಕುರ್ಕ್ಯಾಲ' ಶಾಸನವಾಗಿದೆ. ಇದು ಕರೀಂನಗರ ಜಿಲ್ಲೆಯ ಅದೇ ತಾಲ್ಲುಕಿನ ಕುರ್ಕ್ಯಾಲ ಹಳ್ಳಿಯ ಹತ್ತಿರವಿರುವ ಬೊಮ್ಮಲಮ್ಮಗುಟ್ಟದ ಮೇಲಿನ ಶಾಸನವಾಗಿದೆ. ಇದು ಕನ್ನಡಸಾಹಿತ್ಯ ಚರಿತ್ರೆಯ ದೃಷ್ಟಿಯಿಂದ ಮಹತ್ವದ ಆಕರವಾಗಿದೆ. ಇದು ವೇಮುಲವಾಡದ ಚಾಲುಕ್ಯರ ಎರಡನೇ ಅರಿಕೇಸರಿಯ ಕಾಲವನ್ನು ತಿಳಿಸುತ್ತದೆ. ಇದು ಕ್ರಿ.ಶ. ಹತ್ತನೇ ಶತಮಾನಕ್ಕೆ ಸೇರಿದ ಶಾಸನವಾಗಿದೆ.

## ದ್ವಿಭಾಷಾ ಶಾಸನಗಳ ಸೃಷ್ಟಿಗೆ ಕಾರಣಗಳು

ದ್ರಾವಿಡ ಭಾಷೆಗಳಾದ ಕನ್ನಡ, ತೆಲುಗು ಹಾಗೂ ತಮಿಳು ಭಾಷೆಗಳು ಒಳಗೊಂಡಿರುವ ಪ್ರದೇಶಗಳೆಂದರೆ: ಕರ್ನಾಟಕದ ಕೋಲಾರ, ಆಂಧ್ರದ ಚಿತ್ತೂರು, ಅನಂತಪುರ ಮತ್ತು ತಮಿಳುನಾಡಿನ ಉತ್ತರ ಆರ್ಕಾಟ್ ಜಿಲ್ಲೆಗಳಾಗಿವೆ. ಇದಕ್ಕೆ ಉದಾಹರಣೆಗಳೆಂದರೆ ಚಿತ್ತೂರಿನಲ್ಲಿ ದೊರೆತಿರುವ ವೆಲಿಗಲ್ಲು, ಕಲಕಡ ಶಾಸನಗಳಲ್ಲಿ ಬಳಕೆಯಾಗಿರುವ ಕನ್ನಡ-ತೆಲುಗು ದ್ವಿಭಾಷಾ ಶಾಸನಗಳಾಗಿವೆ. ಆದರೆ ಉತ್ತರ ಆರ್ಕಾಟ್ ಜಿಲ್ಲೆಯ ಕ್ರಿ.ಶ. 8 ಮತ್ತು 9ನೇ ಶತಮಾನಗಳ ತಮಿಳು ಶಾಸನಗಳನ್ನು ಗಮನಿಸಿದಾಗ ಸಂಸ್ಕೃತ ಭಾಷೆಯ ಛಾಯೆ ಇರುವುದು ತಿಳಿದುಬರುತ್ತದೆ.

ದ್ವಿಭಾಷಾ ಪ್ರಾಂತಗಳಲ್ಲಿ ಎರಡು ಭಾಷೆಗಳ ಪರಸ್ಪರ ಸಂಪರ್ಕದಿಂದ ಶಾಸನಗಳಲ್ಲಿ ಕೊಡುಕೊಳು ನಡೆದಿರುವುದು ಕಂಡುಬಂದಿದೆ. ದ್ವಿಭಾಷಾ ಶಾಸನಗಳು ಉಂಟಾಗಲು ಕೆಳಗಿನ ಅಂಶಗಳು ಕಾರಣವಾಗುತ್ತವೆ. "ಒಂದು ಪ್ರದೇಶದಲ್ಲಿ ಯಾವುದೇ ಭಾಷೆಯ ಶಾಸನ ದೊರೆಯಬೇಕಾದರೆ ಪ್ರಧಾನವಾಗಿ ಎರಡು ಕಾರಣಗಳಿರುತ್ತವೆ.

1. ಅದು ಆ ಪ್ರದೇಶವನ್ನು ಆಳುತ್ತಿರುವ ಅರಸರ ಭಾಷೆಯಾಗಿರಬಹುದು.

2. ಅದು ಆ ಪ್ರದೇಶದ ಜನ ಆಡುತ್ತಿರುವ ಭಾಷೆಯಾಗಿರಬಹುದು."[6]

ದ್ವಿಭಾಷಾ ಶಾಸನಗಳನ್ನು ಹಾಕಿಸಲು ಇವುಗಳಲ್ಲದೆ ಉಳಿದೆರಡು ಕಾರಣಗಳು ಕಂಡುಬರುತ್ತವೆ. ಅವು ಹೀಗಿವೆ;

**ರಾಜಕೀಯ ಸಂಪರ್ಕ**

ಕೋಲಾರ, ಮುಳಬಾಗಿಲು, ಬಾಗೇಪಲ್ಲಿ, ಚಿಂತಾಮಣಿ, ಮಾಲೂರು, ಬೌರಿಂಗ್‌ಪೇಟ್, ಆಂಧ್ರದ ಚಿತ್ತೂರು ಜಿಲ್ಲೆಯ ಮದನಪಲ್ಲಿ, ಪುಂಗನೂರು, ಕುಪ್ಪಂ, ವಾಯಲ್ಪಾಡು ಇವು ದ್ವಿಭಾಷಾ ಪ್ರಾಂತಗಳಾಗಿ ತೋರಿಬಂದಿವೆ. ಈ ಪ್ರದೇಶಗಳಲ್ಲಿ ರಾಜಕೀಯವಾಗಿ ಕ್ರಿ.ಶ.9–10ನೇ ಶತಮಾನದ ತೆಲುಗು ಚೋಡರ[7] ಪ್ರಭಾವವಾಗಿರುವುದಕ್ಕೆ ಆಧಾರಗಳಿವೆ. ಕೋಲಾರದ ಕ್ರಿ.ಶ.7–8ನೇ ಶತಮಾನದ ಮುಳಬಾಗಿಲು[8], ಚಿತ್ತೂರಿನ ಚಂದ್ರಗಿರಿ[9], ಕ್ರಿ.ಶ.845ರ ಕಾಳಹಸ್ತಿ[10], ತಾಲ್ಲೂಕುಗಳಲ್ಲಿ ತಮಿಳು ಅರಸರಾದ ಪಲ್ಲವರ ಪ್ರಭಾವವಾಗಿರುವುದು ಕಂಡುಬರುತ್ತದೆ. ಕೋಲಾರದ ಗೌರಿಬಿದನೂರು[11], ಮುಳಬಾಗಿಲು[12], ಆಂಧ್ರದ ಅನಂತಪುರದ ಬೂದಲಿ[13], ಚಿತ್ತೂರಿನ ಕರ್ಶನಪಲ್ಲಿ[14], ಮದನಪಲ್ಲಿಯ ಕ್ರಿ.ಶ.8ನೇ ಶತಮಾನದ ಚಿಪ್ಪಲಿಯ[15] ಶಾಸನಗಳಲ್ಲಿ ತಮಿಳುನಾಡಿನ ಚೋಳರ ಆಳ್ವಿಕೆಯು ಸ್ಪಷ್ಟವಾಗಿದೆ.

ಅವಿಭಜಿತ ಕೋಲಾರದ ಬಾಗೇಪಲ್ಲಿ ಹಾಗೂ ಉತ್ತರಕ್ಕೆ ಕಡಪ ಪ್ರದೇಶದಲ್ಲಿ ತೆಲುಗು ಚೋಡರು ಆಳ್ವಿಕೆ ನಡೆಸುತ್ತಿದ್ದುದನ್ನು ಶಾಸನಗಳು ಆಧಾರವನ್ನು ಒದಗಿಸುತ್ತವೆ[16]. ಇವುಗಳಲ್ಲದೆ "ಕ್ರಿ.ಶ.ಸು.350ರ ಕಾಲಕ್ಕಾಗಲೇ ಇಂದಿನ ತಮಿಳುನಾಡಿನ ಬಾರಾಘಾಟ್, ಬಾಲಾಮಹತ್ ಪ್ರದೇಶಗಳು ಪ್ರಾಚೀನ ಕರ್ನಾಟಕದ ಅವಿಭಾಜ್ಯಭಾಗವಾಗಿ ಕರ್ನಾಟಕದ ಗಂಗರಸರ ಅಧೀನದಲ್ಲೆಬಹುಕಾಲ ಇದ್ದದ್ದುಸರಿಯಷ್ಟೆ."[17]

**ವ್ಯಾಪಾರ ಸಂಪರ್ಕ**

ಕೋಲಾರ ಪ್ರದೇಶವು ಚೋಳರ ಕಾಲಕ್ಕೂ ಹಿಂದಿನಿಂದಲೂ ಒಂದು ವ್ಯಾಪಾರ ಪ್ರದೇಶವಾಗಿತ್ತು. ಅವರ ಕಾಲದಲ್ಲಿ ಮುಖ್ಯವಾಗಿ ಕಾಂಚೀಪುರಂ(ಕಂಚಿ) ಜೊತೆ ವ್ಯಾಪಾರ ನಂಟನ್ನು ಹೊಂದಿತ್ತು. ಹಾಗೆಯೇ ತೆಲುಗು ಭಾಷಿಕರ ಜೊತೆ ಉತ್ತಮ ವ್ಯಾಪಾರದ ಸಂಬಂಧವಿತ್ತು ಎಂಬ ಸುಳಿವು 'ಪ್ರಾಚೀನಪಥ'ವು ಕೊಡುತ್ತದೆ. ಕೋಲಾರ ಜಿಲ್ಲೆಯ ಕನ್ನಡಶಾಸನಗಳಲ್ಲಿ 'ವಡುಗವಟಿ' ಎಂಬಪ್ರಯೋಗವನ್ನು ಗುರುತಿಸಬಹುದು. ಉತ್ತರಾ ಪಥಾ, ದಕ್ಷಿಣಾ ಪಥಗಳಿರುವಂತೆ 'ಆಂಧ್ರಪಥಾ'ವೆಂಬುದಿದೆ. ಅದು ಆಂಧ್ರಪ್ರದೇಶವನ್ನು ಸೂಚಿಸುತ್ತದೆ. ಅಂದರೆ ಆಂಧ್ರಕ್ಕೆಹೋಗುವ ದಾರಿ ಎಂದು ತಿಳಿದುಬರುತ್ತದೆ. ಅದು "ಪ್ರಾಚೀನ ಕಾಲದಲ್ಲೂ ಕಾಂಚೀಪುರವನ್ನು ಚಂಗಲ್ ಮತ್ತು ನೆಲ್ಲೂರು ಜಿಲ್ಲೆಗೆ ಸೇರಿಸುವ ಮಾರ್ಗವೊಂದು ಇದ್ದಿರಬೇಕು"[18].

**ಶಾಸನ: ದ್ವಿಭಾಷಿಕತೆ**

ಚಿತ್ತೂರು ಜಿಲ್ಲೆಯ ವಾಯಲ್ಪಾಡು ತಾಲೂಕಿನಲ್ಲಿ ದೊರಕಿರುವ 'ಕಲಕಡಶಾಸನ'ವು ಕ್ರಿ.ಶ.9ನೇ ಶತಮಾನದ ಹಳಗನ್ನಡ ಭಾಷೆಯಲ್ಲಿದೆ. ಇದು ಕನ್ನಡ-ಸಂಸ್ಕೃತ ಭೂಯಿಷ್ಠ ಬರಹದ 28 ಸಾಲುಗಳುಳ್ಳ ತ್ರಿಭಾಷಾಶಾಸನವಾಗಿದೆ. ಇದು 1-3, 7-11,20-28ರವರಗಿನ ಸಾಲುಗಳು 'ಹಳಗನ್ನಡ', 4-6ರವರೆಗಿನ ಸಾಲುಗಳು 'ಹಳೇತೆಲುಗು', 12-19ರವರೆಗೆ 'ಸಂಸ್ಕೃತಭಾಷೆ'ಯಿಂದ ಕೂಡಿವೆ. ಹಳಗನ್ನಡ ಭಾಷೆಯಲ್ಲಿ ಸಂಸ್ಕೃತ, ತೆಲುಗು ನುಡಿಗಳನ್ನು ಬಳಸಿರುವುದರಿಂದ ಇದು ಮಿಶ್ರ ಭಾಷಾ ಪಾಠವನ್ನು ಸಾದರಪಡಿಸುತ್ತವೆ.

ಚಿತ್ತೂರು ಜಿಲ್ಲೆ, ಮದನಪಲ್ಲಿ ತಾಲ್ಲೂಕಿನ 'ವೆಲಿಗಲ್ಲು' ಹಳ್ಳಿಯಲ್ಲಿ ಸಿಕ್ಕಿರುವ ಕ್ರಿ.ಶ. 9ನೇ ಶತಮಾನದ ಶಾಸನವು ದ್ವಿಭಾಷಾಶಾಸನವಾಗಿದೆ. ಶಾಸನದ 1-5 ಹಾಗೂ 14-16 ನೇ ಸಾಲುಗಳು 'ಹಳೇತೆಲುಗು' ನುಡಿಯಲ್ಲಿವೆ. 6-14 ಸಾಲುಗಳು 'ಹಳಗನ್ನಡ'ದಿಂದ ಕೂಡಿವೆ. ಕೆಲವು ಹೆಸರು, ಮತ್ತು ಸ್ಥಳ ನಾಮ ಅಲ್ಲಿನ ಸ್ಥಳೀಯ ನುಡಿಯಲ್ಲಿವೆ. ಇದೊಂದು ಸಂಸ್ಕೃತಭೂಯಿಷ್ಠ ಕಲ್ಬರಹವಾಗಿರದೆ, ಹಳಗನ್ನಡ ಮತ್ತು ಪ್ರಾಚೀನ ತೆಲುಗು ಭಾಷೆಗಳ ಪದಗಳು ಹೆಚ್ಚು ಬಳಸಿರುವ ನಿದರ್ಶನಗಳಿವೆ. ಇವುಗಳ ಜೊತೆಗೆ ಪ್ರಾಕೃತದ ಕೆಲವು ಸ್ಪಷ್ಟ ನಿದರ್ಶನಗಳು ದಾಖಲಾಗಿವೆ. ತೆಲುಗು ನುಡಿಯಲ್ಲಿ ಬರೆದಿರುವ ಪದಗಳು ಸ್ಪಷ್ಟವಾಗಿ ಪರಿಚಯವಾಗುತ್ತದೆ. ಆದರೆ ಹಳಗನ್ನಡ ಬಳಸಿರುವ ಸಾಲುಗಳಲ್ಲಿ ಅಸ್ಪಷ್ಟ ಪದಗಳ ಪ್ರಯೋಗಗಳನ್ನು ಅದು ಒಳಗೊಂಡಿದೆ.

ವಾರಂಗಲ್ ಜಿಲ್ಲೆಯ ಜನಗಾಂ ತಾಲ್ಲೂಕು ಅಕನೂರು ಹಳ್ಳಿಯಲ್ಲಿ ಸಿಕ್ಕಿರುವ ಕ್ರಿ.ಶ.ಸು.9ನೇ ಶತಮಾನದ ಶಾಸನವು ದ್ವಿಭಾಷಾ ಶಾಸನವಾಗಿದೆ. ಶಾಸನದ ಮೊದಲನೆಯ ಮತ್ತು ಎರಡನೆಯ ಮುಖದಲ್ಲಿ ಹಳಗನ್ನಡದ 29 ಚಿಕ್ಕ ಚಿಕ್ಕ ಸಾಲುಗಳಿವೆ. ಶಾಸನದ ಮೂರನೇಯ ಮುಖದಲ್ಲಿ 19 ಚಿಕ್ಕ ಚಿಕ್ಕ ಸಾಲುಗಳು ಪ್ರಾಚೀನ ತೆಲುಗು ಭಾಷೆಯಲ್ಲಿವೆ.

'ಅರಕಟವೇಮುಲ' ಶಾಸನವು ಕ್ರಿ.ಶ. ಸುಮಾರು 9ನೇ ಶತಮಾನಕ್ಕೆ ಸೇರಿಸಬಹುದು. ಇದು ರಾಷ್ಟ್ರಕೂಟರ ಅಮೋಘವರ್ಷನು ಆಳುತ್ತಿದ್ದನು ಎಂಬುದನ್ನು ಶಾಸನದಲ್ಲೇ ಉಲ್ಲೇಖಿಸಲಾಗಿದೆ. ಇದು ಕನ್ನಡ ಮತ್ತು ತೆಲುಗು ಭಾಷೆಗಳಲ್ಲಿದೆ. ಮೊದಲನೇ ಭಾಗದ ಎರಡು ಸಾಲುಗಳು ಹಳಗನ್ನಡದಲ್ಲಿ ರಚಿತವಾಗಿವೆ. ಅನಂತರ ಪ್ರಾಚೀನ ತೆಲುಗು ನುಡಿಯನ್ನು ಹೋಲುವಂತಹ 3 ಸಾಲುಗಳಿವೆ. ಶಾಸನದ ಕೊನೆಯ ಎರಡು ಸಾಲುಗಳು ಸಂಸ್ಕೃತ ಮೂಲದ ಶ್ಲೋಕವೊಂದು ರಚಿತವಾಗಿದೆ.

'ಕುರ್ಕ್ಯಾಲ' ಶಾಸನವು ಕ್ರಿ.ಶ. ಹತ್ತನೇ ಶತಮಾನದಲ್ಲಿ ಆಳ್ವಿಕೆ ನಡೆಸುತ್ತಿದ್ದ ವೇಮುಲವಾಡದ ಚಾಲುಕ್ಯ ಅರಸ 'ಎರಡನೇ ಅರಿಕೇಸರಿ'ಯ ಅಮೂಲ್ಯವಾದ ಶಾಸನವಾಗಿದೆ. ಶಾಸನದಲ್ಲಿ ಮೂರು 'ಸಂಸ್ಕೃತಪದ್ಯ'ಗಳೂ, ಆರು 'ಕನ್ನಡಪದ್ಯ'ಗಳೂ ಹಾಗೂ ಮೂರು 'ಪ್ರಾಚೀನ ತೆಲುಗು ಕಂದ' ಪದ್ಯಗಳು ಇದರಲ್ಲಿವೆ. ಈ ಶಾಸನದಲ್ಲಿ ಕನ್ನಡ ಮತ್ತು ಸಂಸ್ಕೃತಭಾಷೆಗಳು ಸರಿಯಾಗಿ ಬರೆಯಲ್ಪಟ್ಟಿವೆ.

## ಭಾಷಿಕ ವಿಶ್ಲೇಷಣೆ

ಕ್ರಿ.ಶ.8,9 ಮತ್ತು 10ನೇ ಶತಮಾನದಲ್ಲಿ ದ್ವಿಭಾಷಾ ಶಾಸನಗಳು ದೊರೆತಿವೆ. ಕಲಕಡ, ವೆಲಿಗಲ್ಲು, ಆಕನೂರು, ಅರಕಟವೇಮುಲ, ಹಾಗೂ ಕುರ್ಕ್ಯಾಲ ಶಾಸನಗಳಲ್ಲಿ ಅದೇ ಕಾಲದ ಕರ್ನಾಟಕದ ಬೇರೆ ಭಾಗದ ಶಾಸನಗಳಲ್ಲಿ ಸಿಗುವ ಪ್ರಯೋಗಗಳು ಇವುಗಳಲ್ಲಿ ದೊರೆತಿವೆ. ಈ ದ್ವಿಭಾಷಾ ಶಾಸನಗಳಲ್ಲಿ ಪ್ರಯೋಗವಾಗಿರುವ ತೆಲುಗು ಭಾಷೆಯನ್ನು ಗಮನಿಸಿದಾಗ, ಆಂಧ್ರಪ್ರದೇಶದ ಕ್ರಿ.ಶ.7 ಹಾಗೂ 8ನೇ ಶತಮಾನಗಳ ಶಾಸನಗಳಲ್ಲಿನ ಪ್ರಾಚೀನ ವೈಶಿಷ್ಟ್ಯಗಳು ಹೆಚ್ಚಾಗಿ ಉಳಿದಿರುವುದು ಕಂಡುಬರುತ್ತದೆ. ಅಲ್ಲದೇ ಮೇಲಿನ ದ್ವಿಭಾಷಾ ಶಾಸನಗಳಲ್ಲಿ ವಿಶೇಷವಾಗಿ ದ್ರಾವಿಡ ಭಾಷೆಯ ಪದ ಪ್ರಯೋಗಗಳು ತೋರಿಬಂದಿವೆ. ಕನ್ನಡ ಹಾಗೂ ತೆಲುಗು ಭಾಗಗಳಲ್ಲಿ ಹೆಚ್ಚಾಗಿ ಕಂಡುಬರುತ್ತವೆ.

## ದ್ರಾವಿಡದಿಂದ ತೆಲುಗು ಬೇರೆಯಾಗಿ ರೂಪುಗೊಂಡ ಬಗೆ

ತೌಲನಿಕ ವಿಧಾನದಿಂದ ಭಾಷೆಗಳನ್ನು ಬೇರೆ ಬೇರೆ ಭಾಷಾ ಗುಂಪುಗಳಾಗಿ ವಿಂಗಡಿಸಬಹುದು. "ಈ ರೀತಿ ಭಾಷಾ ಕುಟುಂಬವೊಂದರಲ್ಲಿ ಸೇರಿಸುವ ಭಾಷೆಗಳನ್ನೆಲ್ಲ ಒಂದೇ ಒಂದು ಮೂಲಭಾಷೆಯಿಂದ ಚಾರಿತ್ರಿಕವಾಗಿ ಸಾಧಿಸಲು ಸಾಧ್ಯವಿದೆ."[19] ಕನ್ನಡ, ತಮಿಳು, ತೆಲುಗು, ತೋದ, ಗೋಂಡಿ, ಕುವಿ, ಮೊದಲಾದ ಮೂವತ್ತಕ್ಕೂ ಹೆಚ್ಚು ಭಾಷೆಗಳನ್ನು 'ದ್ರಾವಿಡ' ಭಾಷಾ ಗುಂಪಿಗೆ ಸೇರಿಸಲಾಗಿದೆ. ಇಪ್ಪತ್ತೊಂದನೇ ಶತಮಾನದಲ್ಲಿ ಭಾಷಾವಿಜ್ಞಾನಿಗಳು 'ಮೂಲ ದ್ರಾವಿಡ'ವೆಂಬ ಮೂಲಭಾಷೆಯಿಂದ ಚಾರಿತ್ರಿಕವಾಗಿ ಮೇಲಿನ ಭಾಷೆಗಳನ್ನು ಸಾಧಿಸಲು ಪ್ರಯತ್ನಿಸಿದ್ದಾರೆ.

'ಮೂಲ ದ್ರಾವಿಡಭಾಷೆಯಿಂದ ಮೂರು ಪ್ರಾದೇಶಿಕ ಗುಂಪುಗಳಾಗಿ ಒಡೆದಿವೆ. ಅವುಗಳಲ್ಲಿ 'ದಕ್ಷಿಣ ದ್ರಾವಿಡ' ವೆಂಬ ಪ್ರಧಾನ ಗುಂಪಾಗಿ ಮೊದಲು ಬೇರ್ಪಟ್ಟಿತು. ಇದು ಪ್ರಧಾನವಾಗಿ ಎರಡು ಗುಂಪುಗಳಾಗಿ ಪ್ರತ್ಯೇಕಗೊಂಡಿತು. ಒಂದು ಮೂಲ ದಕ್ಷಿಣ ದ್ರಾವಿಡ I. ಎರಡು. ಮೂಲ ದಕ್ಷಿಣ ದ್ರಾವಿಡ II. ಇವುಗಳಲ್ಲಿ ಕ್ರಮವಾಗಿ ಕನ್ನಡ, ತಮಿಳು ಮೊದಲ ಶಾಖೆಯಿಂದ, ತೆಲುಗು, ಗೋಂಡಿ, ಕುವಿ, ಮೊದಲಾದ ಭಾಷೆಗಳು ಎರಡನೇ ಶಾಖೆಯಿಂದ ಪ್ರತ್ಯೇಕಗೊಂಡವು'. ಎಂದು ಈಗಾಗಲೇ ವಿದ್ವಾಂಸರು ಗುರುತಿಸಿದ್ದಾರೆ.19ಎ ಮುಂದೆ ಇವುಗಳ ಬದಲಾದ ಸ್ವರೂಪ ಎಂತಹದ್ದು ಎಂಬುದನ್ನು ಗುರುತಿಸಲು ಶಾಸನಗಳನ್ನು ಆಧಾರವಾಗಿ ಬಳಸಲು ಸಾಧ್ಯವಿದೆ.

ದ್ರಾವಿಡದಿಂದ ತೆಲುಗು ಭಾಷೆಯು ಬೇರೆಯಾಗುವ ಸಂದರ್ಭದಲ್ಲಿ ಎಂತಹ ಬದಲಾವಣೆಗಳು ನಡೆದಿವೆ, ಅವುಗಳ ಸ್ವರೂಪವೇನು ಎಂಬುದನ್ನು ದ್ವಿಭಾಷಿಕ ಶಾಸನಗಳ ಮೂಲಕ ಹೇಳಲು ಸಾಧ್ಯ.ಮೂಲದ್ರಾವಿಡದಿಂದ ತೆಲುಗು ಭಾಷೆ ಬೇರೆಯಾಗಿರುವ ಬಗೆಯನ್ನು ಭಾಷಾವಿಜ್ಞಾನದ ಹಿನ್ನಲೆಯಲ್ಲಿ ಯಾವ ಬಗೆಯ ಬದಲಾವಣೆಗಳು ನಡೆದವು ಎಂಬುದನ್ನು ಈ ಕೆಳಗೆ ಸ್ಥೂಲವಾಗಿ ವಿಶ್ಲೇಷಿಸಲಾಗಿದೆ.

'ಆಳ್' ಸ್ತ್ರೀಲಿಂಗ ದ್ರಾವಿಡ ರೂಪ:-ದ್ರಾವಿಡ ಭಾಷೆಗಳಲ್ಲಿ ನಾಮವಾಚಕಗಳು ಎರಡು ಬಗೆಯಲ್ಲಿವೆ. ತಮಿಳಿನಲ್ಲಿ 'ಉಯರ್ ತಿಣೈ', 'ಅಟ್ರಿಣೈ' ಎಂದೂ, ತೆಲುಗಿನಲ್ಲಿ 'ಮಹತ್ತು' ಹಾಗೂ 'ಅಹಮತ್' ಎಂಬುದಾಗಿ ಕರೆಯಲಾಗುತ್ತದೆ. ಆದರೆ ತೆಲುಗಿನಲ್ಲಿ ಸ್ತ್ರೀಯನ್ನು ಸೂಚಿಸುವ ಪ್ರತ್ಯೇಕ ಪ್ರತ್ಯಯಗಳಿಲ್ಲ. ಸ್ತ್ರೀಸೂಚಕ ಪ್ರತ್ಯಯಗಳಾದ ಏಕವಚನ

ಅಹಮತ್‌ನಲ್ಲೂ, ಬಹುವಚನ ಮಹತ್ ಗುಂಪಿನಲ್ಲೂ ಏರ್ಪಟ್ಟಿವೆ. ಪ್ರಾಚೀನ ತೆಲುಗು ಶಾಸನಗಳಲ್ಲಿ ಸ್ತ್ರೀಸೂಚಕ ಪದ ಪ್ರಯೋಗವಿಲ್ಲ. ಆದರೆ ಚಿತ್ತೂರು ಜಿಲ್ಲೆಯ ಕಲಕಡ ಶಾಸನದಲ್ಲಿ ಸ್ತ್ರೀಲಿಂಗ ಸೂಚಕ 'ಆಳಿನಿ'(=ಹೆಂಡತಿ) ಏಕವಚನ ರೂಪ ಉಲ್ಲೇಖಿಪಿದೆ.

ಹತ್ತನೇ ಶತಮಾನದವರೆಗಿನ ಕನ್ನಡ ಶಾಸನಗಳಲ್ಲಿ ಸ್ತ್ರೀಲಿಂಗ ಪ್ರತ್ಯಯವಾಗಿ (ಅ)-(ಆ)ಆಳ್ ಬಳಕೆಯಾಗಿದೆ.[20] 'ಆಳಿನಿ'ಪದದ ಪ್ರಾಚೀನ ರೂಪ ಆಳ್. ದ್ರಾವಿಡಭಾಷೆಗಳಲ್ಲಿ ತ.ಆಟ್ಟಿ(ಹೆಂಡತಿ), ಕ.ಆಡಂಗಿ, ತೆ.ಆಳು, ಆಟದಿ, ಆಡದಿ.[21] ಎಂಬ ಜ್ಞಾತಿ ಪದಗಳಿವೆ. ಆಳ್ ಎಂಬ ರೂಪವು ಮುಂದೆ ಡಕಾರವಾಗಿ ಆಡ (=ಸ್ತ್ರೀ) ರೂಪ ಮಾತ್ರ ತೆಲುಗಿನಲ್ಲಿ ಉಳಿದಿದೆ.

[<PSDr *D¹/₄ï-/*Duï-][22]

ಟ>ಡ:– ಮೂರ್ಧನ್ಯ ಟ'ಕಾರವು ಕನ್ನಡದಲ್ಲಿ ಘೋಷವರ್ಣವಾಗುತ್ತದೆ. ತೆಲುಗಿನಲ್ಲಿ ಕೂಡ ಈ ಲಕ್ಷಣ ಕಂಡಬಂದರೂವೆಲಿಗಲ್ಲು ಶಾಸನದಲ್ಲಿ ಮೂರ್ಧನ್ಯ ಟಕಾರದ ಪ್ರಯೋಗವಿದೆ. 'ಪೋಟುನ' ಪದವು ಯುದ್ಧ ಎಂಬರ್ಥವನ್ನು ಕೊಡುತ್ತದೆ. ಅಲ್ಲದೆ 'ಪೊಡುಚು'(=ಇರಿತ) ಅರ್ಥವೂ ಇದೆ. ದ್ರಾವಿಡ ನುಡಿಗಳಾದ ತ.ಪುಟ್ಟೈಪು, ಕ.ಪೊಡೆ, ಕೊ.ಪೊಡ, ತೆ.ಪೊಡುಚು, ಪೋಟು[23] ಎಂಬ ಧಾತು ರೂಪಗಳು ಶಾಸನಗಳಲ್ಲಿ ಕಂಡುಬರುತ್ತವೆ. ಅಘೋಷ ವರ್ಣವು ಘೋಷ ವರ್ಣವಾಗಿ ತಮಿಳನ್ನು ಬಿಟ್ಟು ಕನ್ನಡ, ತೆಲುಗು, ಕೊಡವ ಭಾಷೆಗಳಲ್ಲಿ ಉಂಟಾಗುತ್ತಿರುವುದನ್ನು ಇದು ಹೇಳುತ್ತಿದೆ.

ಣ>ನ:– ಮೂಲ ದ್ರಾವಿಡದ *ಣ ಕಾರವು ಪ್ರಾಚೀನ ತೆಲುಗು ಭಾಷೆಯಲ್ಲಿ "ಣ ಈ ಮೂರ್ಧನ್ಯನಾಸಿಕವರ್ಣವು ತೆಲುಗಿನಲ್ಲಿ ಸಾಮಾನ್ಯವಾಗಿ ದಂತ್ಯ ವರ್ಣ 'ನ'ಕಾರವಾಗುತ್ತದೆ."[24] 'ಈ ಬದಲಾವಣೆಯು ಕ್ರಿ.ಶ.7ನೇ ಶತಮಾನದಿಂದ ಆರಂಭವಾಗಿ 9ನೇ ಶತಮಾನಕ್ಕೆ ಪೂರ್ತಿಯಾಗಿದೆ' ಎಂದು ಡಾ. ಬೂದರಾಜು ರಾಧಾಕೃಷ್ಣ ಅವರುಸೂಚಿಸಿದ್ದಾರೆ.[25] ಕ್ರಿ.ಶ.9ನೇ ಶತಮಾನದ ಹೊತ್ತಿಗೆ ಣಕಾರ ನಕಾರವಾಗಿದ್ದರೂ ಕೂಡ ಚಿತ್ತೂರು ಜಿಲ್ಲೆಯ ವೆಲಿಗಲ್ಲು ದ್ವಿಭಾಷಾ ಶಾಸನದಲ್ಲಿ 'ಪಣಿ' ಮತ್ತು ಕ್ರಿ.ಶ.825ರ ಚೆನ್ನರಾಯನಿಪಲ್ಲಿಯಲ್ಲಿ ದೊರೆತಿರುವ ತೆಲುಗುಶಾಸನ[26]ದಲ್ಲಿ 'ತಣ' ಪದಗಳಲ್ಲಿಪ್ರಾಚೀನ ರೂಪವಾದ ಣಕಾರದ ಕುರುಹುಗಳಾಗಿ ಈ ಪ್ರಯೋಗಗಳಿವೆ. [<ಕಆಡಿ .ಪಣ್-][27] ಆಡುಮಾತಿನ ಲಕ್ಷಣವನ್ನು ತಿಳಿಸುವಂತಹ ಹಲವು ಉದಾಹರಣೆಗಳಿವೆ.

| ಕನ್ನಡ | ತೆಲುಗು |
|---|---|
| ಅಣ್ಣನ್ | ಅನ್ನ |
| ಕಣ್ | ಕನ್ನು ಮುಂತಾದವು. |

**ಕನ್ನಡದ ಪ್ರಭಾವ**

ತೆಲುಗು ಭಾಷೆಯು ಮೊದಲಿನಿಂದಲೂ ಸಂಸ್ಕೃತ ಭಾಷೆಯ ಪ್ರಭಾವಕ್ಕೊಳಗಾಗಿದೆ. ಆದರೆ ಗಡಿ ಪ್ರದೇಶಗಳಲ್ಲಿ ತೆಲುಗು ಭಾಷೆಯ ಮೇಲೆ ಕನ್ನಡ ಪ್ರಭಾವ ಆಗಿರುವುದನ್ನು ಶಾಸನಗಳ ಮೂಲಕ ಗುರುತಿಸಬಹುದು. ತೆಲುಗು ಭಾಷೆಯು ಕನ್ನಡದ ಪ್ರಭಾವವನ್ನು

ಪಡೆದರೂ ಕೂಡ ತನ್ನ ಸ್ವಂತಿಕೆಯನ್ನು ಪಡೆದಿದೆ. ಈ ಎರಡೂ ಭಾಷೆಗಳ ಧ್ವನಿ ಹಾಗೂ ಪದರಚನೆಯನ್ನುಹೋಲಿಸುವುದರ ಮೂಲಕ ಕನ್ನಡದ ಪ್ರಭಾವವನ್ನು ಗುರುತಿಸಲಾಗಿದೆ.

ಪುರುಷವಾಚಕ ಸರ್ವನಾಮ 'ವಾನುಜ':- ತೆಲುಗು ಭಾಷೆಯಲ್ಲಿ ವಾನುಜ(=ವಾಡು(ಅವನು)ಎಂಬುದು ಪುರುಷ ವಾಚಕ ಸರ್ವನಾಮವಾಗಿದೆ. ದ್ವಿಭಾಷಾ ಶಾಸನದಲ್ಲಿ ಇದು ಪ್ರಥಮಾ ವಿಭಕ್ತಿ ಏಕವಚನದಲ್ಲಿ ಪ್ರಯೋಗವಾಗಿದೆ. ಇದು ತೆಲುಗು ಭಾಷೆಯ ಪ್ರಾಚೀನ ಸರ್ವನಾಮ ರೂಪವಾಗಿದೆ[28]. ಕ್ರಿ.ಶ.7 ಮತ್ತು 8ನೇ ಶತಮಾನಗಳ ಆದಿ ಭಾಗ[29]ದ ಶಾಸನಗಳಲ್ಲಿ ವಾಣ್ಡು ಎಂದು ಪ್ರಯೋಗವಾಗಿರುವುದು ಕಂಡುಬರುತ್ತದೆ. ಇದಕ್ಕೆ ಕೋಲಾರ ಪ್ರದೇಶಗಳಲ್ಲಿ ಸಿಕ್ಕಿರುವ ಶಾಸನಗಳಲ್ಲಿ ಅವಂಗೆ[30], ಅವನ್ಗೆ[31] ಎಂಬ ಸಂವಾದಿ ಸರ್ವನಾಮ ರೂಪಗಳು ಬಳಕೆಯಾಗಿವೆ. ತೆಲುಗಿನ ಈ ಸರ್ವನಾಮ ಪ್ರಯೋಗವನ್ನು ಗಮನಿಸಿದರೆ ಮಿಕ್ಕ ದ್ರಾವಿಡ ಭಾಷೆಗಳಿಗಿಂತ ಬೇರೆಯಾಗಿ ಗೋಚರಿಸುತ್ತದೆ. ದಕ್ಷಿಣ ದ್ರಾವಿಡ ಭಾಷೆಗಳಾದ ಕನ್ನಡ, ತಮಿಳು, ಮಲೆಯಾಳಗಳಲ್ಲಿ 'ಅವನ್' ಎಂದಿದ್ದು, ತೆಲುಗು, ಕೊಲಾಮಿಗಳಲ್ಲಿ 'ವಾನುಜ', ರೂಪವಿದೆ. 'ಅವನ್' ಸರ್ವನಾಮದಲ್ಲಿರುವಪೂರ್ವದ ಅ ಸ್ವರವು ಅದರ ಮುಂದಿನ ವ್ಯಂಜನವಾದ 'ವ'ಕಾರಕ್ಕೆ ಪ್ರಯುಕ್ತವಾದಾಗ 'ವಾ' ಎಂದು ದೀರ್ಘವಾಗುತ್ತದೆ. "ತಮಿಳಿನಲ್ಲಿನ 'ನಜ' ಇರುವೆಡೆಗಳಲ್ಲಿ (ಎಂದರೆ ಹ್ರಸ್ವಸ್ವರಕ್ಕೆ ಪರದಲ್ಲಿ ವಿಶೇಷವಾಗಿ) ಕನ್ನಡದಲ್ಲಿ 'ನ್ದ' ಇರುವುದು ಸಾಮಾನ್ಯ"[32]. ಇದೇ ರೀತಿ ತೆಲುಗಿನಲ್ಲಿ 'ನಜ'ದಲ್ಲಿ ದ್ವಿತ್ವ 'ಜ'ಕಾರವು ಮೂರ್ಧನ್ಯ ಉಚ್ಚಾರ ಸ್ಥಾನದಲ್ಲಿ ಹುಟ್ಟುವುದರಿಂದ ಬಹುಶಃ 'ಜ'ಕಾರವು ಡಕಾರವಾಗಿರುವ ಸಾಧ್ಯತೆಯಿದೆ. ಇದರ ನಿಷ್ಪತ್ತಿಯನ್ನು ಹೀಗೆ ಗುರುತಿಸಬಹುದು: 'ವಾನುಜ>ವಾನ್ದು>ವಾಡು.

## ಇತರ ದ್ರಾವಿಡ ಭಾಷೆಗಳಿಗಿಂತ ತೆಲುಗು ಭಿನ್ನವಾಗಿರುವ ಬಗೆ

ದಕ್ಷಿಣ ದ್ರಾವಿಡ ಭಾಷೆಗಳಾದ ಕನ್ನಡ, ತಮಿಳು ಮೊದಲಾದ ನುಡಿಗಳಿಗಿಂತ ತೆಲುಗು ಮಧ್ಯದ್ರಾವಿಡ ಭಾಷೆಯಾಗಿ ಹಲವು ವಿಷಯಗಳಲ್ಲಿ ಭಿನ್ನವಾಗಿದೆ. ಹಳಗನ್ನಡವನ್ನು ಮತ್ತು ಹಳೆತೆಲುಗು ಭಾಷೆಗಳನ್ನು ಹೋಲಿಸಿದಾಗ ಹೆಚ್ಚು ವಿಷಯಗಳಲ್ಲಿ ತೆಲುಗು ಬೇರೆಯಾಗಿ ರೂಪುಗೊಂಡಿದೆ. ಇದಕ್ಕೆ ಸಂಬಂಧಿಸಿದಂತೆ ಕ್ರಿ.ಶ.9. 10ನೇ ಶತಮಾನಗಳ ಶಾಸನಗಳಲ್ಲಿ ಇದರ ಪ್ರಯೋಗಗಳಿವೆ. ಅಂತಹ ಪ್ರಯೋಗಗಳಲ್ಲಿ ಕೆಲವನ್ನು ಇಲ್ಲಿ ಗಮನಿಸಬಹುದು.

ಟ>ಡ:-ಪ್ರಾಚೀನ ದ್ರಾವಿಡ ಭಾಷೆಗಳಲ್ಲಿನ 'ಟ'ಕಾರ ತೆಲುಗುಮತ್ತು ಕನ್ನಡಭಾಷೆಗಳಲ್ಲಿ ಕ್ರಮವಾಗಿ 'ಡ'ಕಾರ, 'ಳ'ಕಾರಗಳಾಗಿ ಬದಲಾಗುತ್ತದೆ. ಕ್ರಿ.ಶ.9-10ನೇ ಶತಮಾನಗಳ ಶಾಸನಗಳಲ್ಲಿ ಕೆಲವುಪದಗಳಲ್ಲಿ ಈ ಬದಲಾವಣೆಯನ್ನು ಕಾಣುತ್ತೇವೆ. ವೆಲಿಗಲ್ಲು ಶಾಸನದಲ್ಲಿ 'ತೋಟಿ'(=ತೆ.ತೋಟ) ಎಂಬ ಪ್ರಯೋಗವಿದೆ. ಇದಕ್ಕೆ 'ತೋಡಿ ಅಥವ ತೋಡ'[33] ಎಂಬ ರೂಪ ಅದೇ ಶತಮಾನಗಳ ಶಾಸನಗಳಲ್ಲೇನೇ ಕಾಣಿಸುತ್ತದೆ. (ತ.ತೋಟಿನ್, ತೋಟಿ; ತೆ.ತೋಡ, ತೋಡಿ; ಮ.ತೋಟಿನ್, ತೋಟಿ.) [<PDrand PCDr *ತೋಟ್-C;PSDr*ತೋ]'[14]ಹೀಗೆ ಟ>ಡವಾಗುವ ನಿಯಮ ಪದಗಳ ಕೊನೆಯಲ್ಲಿ ನಡೆಯುತ್ತದೆ. ಇದಕ್ಕೆ ದಕ್ಷಿಣ ದ್ರಾವಿಡ ಭಾಷೆಗಳ ಈಗಿನ ಆಡುಮಾತಿನಲ್ಲಿ ಹಲವು ಉದಾಹರಣೆಗಳಿವೆ;

| ತಮಿಳು | ಕನ್ನಡ | ತೆಲುಗು |
| --- | --- | --- |
| ಕೋೞಿ | ಕೋಳಿ | ಕೋಡಿ |
| ಚೋೞಿ | ಚೋಳ | ಚೋಡ |
| ಏೞು | ಏಳ್ | ಏಡು |
| ಚುೞಿ | ಸುಳಿ | ಸುಡಿ |
| ನೆೞಿಲ್ | ನೆಳಲ್>ನೆರಳು | ನೀಡ |

ಕ್ರಿ.ಶ.8-9ನೇ ಶತಮಾನದ ಶಾಸನಗಳಲ್ಲಿ ಸಂಖ್ಯಾವಾಚಿ ಏೞು ರೂಪವಿದ್ದು, ಅನಂತರದ ತೆಲುಗು ಶಾಸನಗಳಲ್ಲಿ 'ಏಡು' ಎಂಬ ಪ್ರಯೋಗವಿದೆ. ದ್ರಾವಿಡಭಾಷೆಗಳಾದ ತ;ಏೞು, ಮ;ಏೞು, ಕ; ಏೞು, ತು;ಏಳು, ತೆ; ಏಡು, ಕೊ.ಎಡ್, ಕು.ಒಡ್ 35ಪದಗಳಲ್ಲಿ ಎರಡು ಬಗೆಗಳು ಕಂಡುಬರುತ್ತವೆ. ದಕ್ಷಿಣ ದ್ರಾವಿಡ ಭಾಷೆಗಳಲ್ಲಿ 'ೞ'ಕಾರವಿದ್ದು ದಕ್ಷಿಣ ಮಧ್ಯ ದ್ರಾವಿಡಭಾಷೆಗಳಲ್ಲಿ ೞಕಾರವಿರುವ ಕಡೆ ಡಕಾರವಾಗಿ ಬದಲಾಗಿರುವುದು ಈ ಎಲ್ಲಾ ಅಂಶಗಳಿಂದ ಸ್ಪಷ್ಟಪಡುತ್ತದೆ.

ಳ>ಲ:-ಪ್ರಾಚೀನ ತೆಲುಗು ಭಾಷೆಯ ವರ್ಣ ಬದಲಾವಣೆಗಳಲ್ಲಿ ಳ ಕಾರವು ಲಕಾರವಾಗುವುದು ಒಂದಾಗಿದೆ. ಆಡುಮಾತಿನಲ್ಲಿ ಇದಕ್ಕೆ ಹಲವು ಉದಾಹರಣೆಗಳು ದೊರೆಯುತ್ತವೆ. ಕುಳಮ್-ಕೊಲನು, ಆಳು-ಏಲು, ವಿಳಂಗು-ವೆಲುಗು ಮೊದಲಾದವು. ಈ ಪದಗಳಲ್ಲಿ ಪದಮಧ್ಯ, ಪದಾಂತ್ಯಗಳಲ್ಲಿ ಳಕಾರವಿರುವ ಕಡೆಗಳಲ್ಲಿ ಲಕಾರವಾಗಿರುವುದು ಕಾಣಿಸುತ್ತದೆ. ಶಾಸನಗಳಲ್ಲೂ ಈ ಬಗೆಯ ಪ್ರಯೋಗಗಳು ಕಂಡುಬರುತ್ತವೆ. ಪದಾಂತ್ಯ; ವೆಲಿಗಲ್ಲು ಶಾಸನದಲ್ಲಿ 'ಪಡಲ್' ಎಂಬ ಪದ ಪ್ರಯೋಗವಿದೆ. ಇದು 'ಪಡವಾಲು' ಪದದ ಮತ್ತೊಂದು ರೂಪವಾಗಿದೆ. ಇದರರ್ಥ 'ಸೇನಾಪತಿ'. ಇದು ದ್ರಾವಿಡಭಾಷೆಗಳಾದ ತಮಿಳು ಹಾಗೂ ಕನ್ನಡ ಭಾಷೆಗಳಲ್ಲಿ ಕ್ರಮವಾಗಿ ಪಟ್ಟೆಯಾಳ್, ಪಡವಾಳ್ ಪದಗಳು ಬಳಕೆಯಲ್ಲಿವೆ. [<PDr *ಪಟ- ಮತ್ತು *ಆಳ್-ವ್ಯಕ್ತಿ][36]. ಇದು ಪ್ರಾಕೃತದ ಭಡವಾಳೊ< ಸಂಸ್ಕೃತ ಭಟಪಾಲಃ[37] ಎಂಬ ಪದದಿಂದ ನಿಷ್ಪತ್ತಿಯಾಗಿರುವುದು ಕಂಡುಬರುತ್ತದೆ. ಅದೇ ಶಾಸನದಲ್ಲಿ 'ವೆಳುಂಗು' ಎಂಬ ಪದದಲ್ಲಿ ಳ-ಲವಾಗಿ ಬದಲಾಗದೆ ಹಾಗೆಯೇ ಉಳಿದಿರುವ ಪ್ರಯೋಗವಿದೆ. 'ವೆಳುಂಗು' ಸ್ಥಳವಾಚಕ ಇಂದು 'ವೆಲಿಗಲ್ಲು' ಎಂದಾಗಿದೆ. 'ವೆಳುಂಗು' ಪದವು ಮೂಲ ದ್ರಾವಿಡದ *ವೆಳ್- ಮೂಲರೂಪವಾಗಿದೆ.

ಱಕಾರ ದ್ವಿತ್ವ:- ಇದು ದ್ರಾವಿಡ ಭಾಷೆಗಳ ವಿಶಿಷ್ಟವಾದ ಧ್ವನಿ. ಹಳಗನ್ನಡದಲ್ಲಿದ್ದು ಹೊಸಗನ್ನಡದಲ್ಲಿ ರಕಾರವಾಗಿ ಬದಲಾಗಿದೆ. ಆದರೆ ತಮಿಳು, ಮಲೆಯಾಳಗಳಲ್ಲಿ ಈಗಲೂ ಬಳಕೆಯಲ್ಲಿದೆ. ಸೋಲಿಗರ ನುಡಿಯಲ್ಲಿ ಕೇವಲ ಧ್ವನಿ ಪ್ರಭೇದವಾಗಿ ಉಳಿದಿದೆ. ಕನ್ನಡದಲ್ಲಿ ಱಕಾರ ದ್ವಿತ್ವವಿಲ್ಲ. ಕುರ್ಕ್ಯಾಲ ಶಾಸನದಲ್ಲಿ 'ಱ'ಕಾರದ್ವಿತ್ವದಿಂದೊಡಗೂಡಿದ 'ಗುಣ್ಡಕಱಱ', 'ವೆಂಗಿಪಱಱ' ಪ್ರಯೋಗಗಳು ಕಂಡುಬರುತ್ತವೆ. ಕನ್ನಡದಲ್ಲಿ ಈ ಶಾಸನಕ್ಕೂ ಪೂರ್ವದಲ್ಲಿ ಇಂಥ ಪ್ರಯೋಗಗಳಿಲ್ಲವೆಂದೂ ಅದು ತೆಲುಗಿನ ಪ್ರಭಾವದಿಂದ ಬಳಕೆಯಾಗಿದೆ ಎಂದು ಎಂ.ಜಿ.ನೇಗಿನಹಾಳ ಅವರು ಅಭಿಪ್ರಾಯಪಟ್ಟಿದ್ದಾರೆ.[38] ತೆಲುಗು ಶಾಸನಗಳಲ್ಲಿ ಱಕಾರ ದ್ವಿತ್ವವಿರುವ ಸ್ಥಳನಾಮಗಳು ಪ್ರಯೋಗಗೊಂಡಿವೆ. ಕೊಱಱಪಱು[39], ತಾಱುಪಱಱ[40],

ಮಡಪಲ್ಲುಪಜಿಜಿ[41], ಮಲ್ಕಪಜಿಜಿ[42], ಮೊದಲಾದ ಪದಗಳಲ್ಲಿ ದ್ವಿತ್ವವಿದೆ. ಇಂಥ ದ್ವಿತ್ವಗಳಿಗೆ ಕಾರಣ ಬಹುಶಃ ಉಚ್ಚಾರಣೆಯಲ್ಲಿ ಸ್ವರದ ಮೇಲೆ ಬೀಳುವ ಒತ್ತು (ಆಘಾತ) ಎಂದು ಹೇಳಬಹುದು.

**ಸಮಾರೋಪ:** ಪ್ರಕೃತ ಪ್ರಬಂಧದ ಒಟ್ಟು ಚರ್ಚೆಯನ್ನು ಕೂಲಂಕಷವಾಗಿ ಗಮನಿಸಿದಾಗ ಈ ಕೆಳಗಿನ ಅಂಶಗಳು ಕಂಡುಬರುತ್ತವೆ:

- ಗಡಿ ಭಾಗದ ದ್ವಿಭಾಷಾ ಶಾಸನಗಳಲ್ಲಿ ಕನ್ನಡ ಮತ್ತು ತೆಲುಗು ಭಾಷೆಗಳ ಪರಸ್ಪರ ಕೊಡುಕೊಳ್ಳುವಿಕೆ ನಡೆದಿದೆ.
- ಕ್ರಿ.ಶ.9–10ನೆಯ ಶತಮಾನದ ಹೊತ್ತಿಗೆ ದ್ರಾವಿಡ ಗಡಿ ಭಾಗವಾದ ಕೋಲಾರ ಮತ್ತು ಚಿತ್ತೂರು ಭಾಗಗಳು ಕನ್ನಡ ಭಾಷಾ ಪ್ರದೇಶವಾಗಿತ್ತು.
- ಈಗಿನ ಕೋಲಾರ ಹಾಗೂ ಚಿತ್ತೂರು ಜಿಲ್ಲೆಗಳು ಕ್ರಿ.ಶ.ಹತ್ತನೇ ಶತಮಾನದ ಹೊತ್ತಿಗೆ ದ್ರಾವಿಡ ಗಡಿಯ ಪ್ರದೇಶವಾಗಿತ್ತೆಂಬುದನ್ನು ದ್ವಿಭಾಷಾ ಶಾಸನಗಳಲ್ಲಿನ ದ್ರಾವಿಡ ಪದಪ್ರಯೋಗಗಳು ಎತ್ತಿ ತೋರಿಸಿವೆ.
- ಕ್ರಿ.ಶ.9–10ನೇ ಶತಮಾನದ ದ್ವಿಭಾಷಾ ಶಾಸನಗಳಲ್ಲಿನ ತೆಲುಗು ಪದಪ್ರಯೋಗಗಳು ತೆಲುಗು ಭಾಷೆಯು ದ್ರಾವಿಡದಿಂದ ಬೇರೆಯಾಗಿ ರೂಪುಗೊಂಡ ಬಗೆಯನ್ನು ತೋರಿಸುತ್ತಿವೆ.

---

**ಕೊನೆ ಟಿಪ್ಪಣಿಗಳು**

1. E.I.XXX No.46.Insc. A
2. E.I. XXIV No.26.Insc.C
3. IAP.Wr.No.3, KUES.Vol.V pt.II.No.418
4. SII.X.No.604, IAP.Cud.No.45,1968. ಇದರಲ್ಲಿ ಸಾಲುಗಳ ವ್ಯತ್ಯಾಸವಿದೆ.
5. IAP.Krm.No.3,
6. ಆಂಧ್ರಪ್ರದೇಶದ ಕನ್ನಡ ಶಾಸನಗಳು.ಸಂಪುಟ.5.ಭಾಗ–1, ಪುಟ.XXXIX
7. SII.X.641, 616, 635
8. E.I.VII.22-3;EC.X.Part.II
9. Inscriptions of The Pallavas.No.330, SII.XII.43, TTDI.I.No.2,
10. E.I.XI.No.22(B)Plate.I, IA.XL.104-14, EI.XI.22-C and Plate I
11. EC. X.gb.76,69,72,73,75
12. EC.X.mb.203, 208,209,256
13. SII.IX.pt.I.No.401
14. SII.IX.pt.I.No.301
15. SII.IX.pt.I.No.400
16. SII.X..No.607, EI.XXVII.225-282, SII.X.No.606
17. ಶಾಸನ ಮಂಥನ, ಪುಟ.345,
18. ಬಾಣರಸರ ಶಾಸನಗಳು ಒಂದು ಅಧ್ಯಯನ, ಪುಟ.24.

19. ಕನ್ನಡ ಭಾಷೆಯ ಕಲ್ಪಿತ ಚರಿತ್ರೆ,ಪುಟ.19
19ಎ. ಕೃಷ್ಣಮೂರ್ತಿ.ಭ, 2003. 21
20. ಪ್ರಾಚೀನ ಕನ್ನಡ ಶಾಸನಗಳ ಭಾಷಿಕ ಅಧ್ಯಯನ, ಪುಟ.150
21. See DED.342(B)
22. See DED.342
23. DED.3493, and TVB 891
24. ತೌಲನಿಕ ದ್ರಾವಿಡ ವ್ಯಾಕರಣ, ಪುಟ.41
25. ಪ್ರಾಚೀನಾಂಧ್ರ ಶಾಸನಾಲು, ಪುಟ.XLV,
26. SII.X.No.639
27. See DED.3209
28. SII.X.No.606,625.A.D
29. SII.VI.No.593, E.I.XXX,pp280-284 ,SII.X.No.35
30. EC.X.mb.92
31. EC.X.mb.255
32. ಪ್ರಾಚೀನ ಕನ್ನಡ ಶಾಸನಗಳ ಭಾಷಿಕ ಅಧ್ಯಯನ, ಪುಟ.79
33. SII.X.No.626, ಚಿತ್ತೂರು
34. BSOAS 12.355, See DED.2939
35. DED.772
36. DED.3195
37. Surya Raya Andhra Nighantuvu
38. ಪ್ರಾಚೀನ ಕನ್ನಡ ಶಾಸನಗಳ ಭಾಷಿಕ ಅಧ್ಯಯನ, ಪುಟ.79
39. E.I.V,118-122,799-843
40. SII.I.No.38,945-50
41. SII.I.No.36
42. E.I. X,9-47,945

---

**ಆಕರ ಸೂಚಿ**


1. Budaraju Radha Krishna. 1971. *Early Telugu Inscriptions (Upto 1100 A.D)* . : Andhra Pradesh sahitya akademi: Hyderabad.
2. Ed.by.B l.Rice : *Epigraphia carnatica, Vol- X Kolar*
3. Burrow,T, and Emeneau.M.B.1984. *A Dravidian Etymological Dictionary* . Clarendon :Oxford.
4. *Epigraphia Indica, Vols,5,7,10,11,24,27,30* : Archaeological Survey of India. New Delhi.
5. *South Indian Inscriptions, Vols.5,6,9Pt.1,10*: Archaeological Survey of India.

New Delhi.

6. Ed.Mahalingam,T.V.1988, *Inscriptions of The Pallavas*, ICHR and Agam Prakashan.Delhi.

7. ಇಂ:ರಾಬರ್ಟ್ ಕಾಲ್ಡ್‌ವೆಲ್. ಮಾಧವ ಪೆರಾಜೆ. 2005. **ತೌಲನಿಕ ದ್ರಾವಿಡ ವ್ಯಾಕರಣ**. ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ. ಹಂಪಿ.

8. ಡಾ.ಕೆ.ಆರ್.ಗಣೇಶ್.ಡಾ.ಆರ್.ಶೇಷಶಾಸ್ತ್ರಿ.2001. **ಆಂಧ್ರಪ್ರದೇಶದ ಕನ್ನಡ ಶಾಸನಗಳು ಭಾಗ–1**. ಕನ್ನಡ ವಿ.ವಿ. ಹಂಪಿ.

9. ಎಂ.ಬಿ.ನೇಗಿನಹಾಳ. 1982. **ಪ್ರಾಚೀನ ಕನ್ನಡ ಶಾಸನಗಳ ಭಾಷಿಕ ಅಧ್ಯಯನ**. ಪ್ರಸಾರಾಂಗ. ಕರ್ನಾಟಕ ವಿಶ್ವವಿದ್ಯಾಲಯ.ಧಾರವಾಡ.

10. ಪಿ.ವಿ.ಕೃಷ್ಣಮೂರ್ತಿ.2009. **ಬಾಣರಸರ ಶಾಸನಗಳು ಒಂದು ಅಧ್ಯಯನ,** ಸಿವಿಜಿ ಪಬ್ಲಿಕೇಷನ್ಸ್.ಬೆಂಗಳೂರು.

11. ಪಿ.ವಿ.ಕೃಷ್ಣಮೂರ್ತಿ. 2011. **ಶಾಸನ ಮಂಥನ,** ತುಮಕೂರು.ವಿ.ವಿ. ತುಮಕೂರು.

12. ಬಿ.ಆರ್.ಭಾರತೀ. 2011. **ರಾಷ್ಟ್ರಕೂಟರ ಶಾಸನಗಳು**. ಭಾಗ–1, 2. ಪ್ರಸಾರಾಂಗ. ಮೈಸೂರು ವಿ.ವಿ. ಮೈಸೂರು.

**ಅನುಬಂಧ–1**

**ಶಾಸನಗಳ ಪಾಠ**

## I. ಕಲಕಡ ಶಾಸನ

1. ಸ್ವಸ್ತ್ಯನೇಕ ಸಮರ ಸಂಘಟ್ಟ[ನೋ]ಪ[ಲ]ಬ್ಧ ಜಯಲಕ್ಷ್ಮೀ
2. ಸಮಾಲಿಂಗಿತ ವಕ್ಷಸ್ಥಲ ಗನ್ಡತ್ರಣೇತ್ರ ಶ್ರೀವೆಯ್ದು
3. ಂಬ ಮಹರಾಜಂ ಪ್ರಿಥ್ವೀರಾಜ್ಯಂಗೆಯೆ ಆತನ ಪ್ರಿಯಾನುಜ ಪ
4. ಲ್ಲ[ದ]ಯ್ಯನಾಳು ಓಗಿನ ರಾಮಯನ ತಮ್ಮ ಇಂದಿರೆಯರ್ ಮಜೆಯ
5. ಕೊನ್ತೆಯ ದೊಡ ಮಾ[ಧಿ]ಯ್ಯ ಪಸಿನ್ದಿದಿ ಪೆಳಗೆ[ಂ] [ಬಾ] ಎಮ್ಮೆಗಳ ತು
6. [ಮ್ಬೆ]ವಾಡಿ ಕ
7. ಣಕೊನ್ದು ಪ
8. ರಿಯೆ ಪುಯ್ಯ
9. ವರಿದು ಅಜ
10. ಳ ಸತ್ತನೆ[ಂಬಾ]
11. ಮಾತ ಪೇಳ್ದ
12. ಡೆ ಜಿತೇನ ಲ
13. [ಭ್ಯತೇ ಲ]ಕ್ಷ್ಮೀ
14. [ಮ್ರ್ಪ]ತೇನಾ
15. ಪಿ ಸುರಾಂಗ
16. [ನಾ] ಕ್ಷಣ ವಿ
17. ಧ್ವಂಸಿನಿ [ಕಾ]
18. ಯೇ ಕಾ ಚಿ[ಂತಾ]
19. ಮ[ರ*] [ಣೇ] ರ[ಣೇ]
20. ಯೆಂಬ [ಮಾ] ತ

21. ನೆ
22. ನೆಯುತ್ತು[ಂ]
23. ಸುರೇನ್ದ್ರಾ[ರ]
24. ಗಣಿಕಾ
25. ಘನ–ಸ್ಥ
26. ನಸ್ಥಾ
27. ನಪ್ರಾ
28. ಪ್ತನಾದಂ
(ಆಂಧ್ರಪ್ರದೇಶದ ಕನ್ನಡ ಶಾಸನಗಳು.ಭಾಗ–1,ನಂ.217)

## II. ವೆಲಿಗಲ್ಲು ಶಾಸನ

1. ಸ್ವಸ್ತ್ಯನೇಕ ಸಮರ ಸಂಗಷ್ಟಣೋಪಲಬ್ಧಜಯಾಲ
2. ಕ್ಷ್ಮಿ ಸಮಲಿಂಗಿತ [ವೊ]ಕ್ಷಸ್ತಲ ಗಣ್ಡ ತ್ರಿಣೇತ್ರ [ಶ್ರೀ] ಬೈದುಂಬರ ಮಹಾ*
3. ರಜು ರೇನಾಂಡೇಬು ವೇಲುಮೇಳುಚುಂ ನೊಟಿಂಬಿ ತೋಟಿಕಯ್ಯಂಬು[ನ] ಮುದುಮಡುವುನ
4. ಪೋಟುನ ಮಹರಾಜು ಚಂತಮಾನ ದಡಿನಿ ವಧಿಂಚಿನ ಪಣಿಗಣಿ ಪಡಲ್ವೆ
5. ಮ್ಬೊಡಿಚೆ ಕೋ[ಱ] ದೇಸಿಂಙ್ಗಂಬು ಏಳಿನ ಜೇನಿಕಿನೆದರಯ್ನ ಗಣ್ಡತ್ರೆಣೇತ್ರನಿ
6. ...ರಣ[ಂಬು] [।*] ಉರ್ಬ್ಬಿಯೊಳ್ಸಕಲದೊಳೊರ್ಬ್ಬನೆ ಗಂಡನ್ ಶ್ರೀ ಚನ್ತಮನೆನ್ತು ಮೊಳ್ಪಿ
7. ಯನ್ ಗೊನ್ತಿ ಸುತರಿಮ್ಪರಾಕ್ರಮನ್ ಬಲ್ವಡೆ ಸುದ್ರಕನ್ ಪ್ರಳಯ ಧನಿ ಮುತ್ತಿ ಅಣಿ
8. ಯೆ[ಂ] ಕಡಿವೊಂಗಂ ಛಲಮಱಿವೊಂಗಂ [ಆ]ಟ್ಮವೊಂಗಂ ಕುಡಲಪ್ಪೊಂಗಂ ಒರ್ಬ್ಬನೊ ಆಚಾ
9. ರ್ಜ್ಯನ್ ಅದಱಿಂ ಕಟ್ಟಾಳ ಮಾನುಸಗಂಡಮನ್ನವ ಬಂಟಣಂ ಬೀಟಿವೋಂ [ಪೆ] ಡೆಯಂ ಬೆ[ಲ]
10. ಪ [ಬಿ]ರುದ]ಪ್ಪವರ ಬಿರುದನೊಡ್ಡಟಿವೊನ್ ಬಿದ್ಧ ಬಗದತ್ತಿ ಆಣಿ ಗಣ್ಡುಕದ ಗ
11. ಣಿ ಪೊಕ್ಕ ಅಬ್ಬಯ ಆಟ್ಮ ಮೆಚ್ಚಿನಾಳ್ಗಂಡನ್ ಆ[ಚಾ]ರ್ಜ್ಯ ಪುರುಷ ಇಜಿ
12. ದು ಬಸಮ[ಜಿಯದೆ]ಬೀಟ್ಪೊರನ್ತೆಱೆ[ನ] ಮೆಚ್ಚದೊಂ ಪಿಸುಣರ ಪೊಸೆವೊ ಕುಥಿ
13. ಲಂ ವೊ. . . .ವ ಈಯದೆ ಈಜೆಯ[ದೆ] ನನ್ನಿ ನುಡಿಯದೆ ನಣ್ಡೆ ದೇವಂಗಟಿಸ್ಸಿ ಮುಯ್ವಂಪ
14. ಡೆದೊಂಗರ ಅಲೆದೊಂ ಮೂದಲಿಪೊಂ ಆದಜಿಂಕೋಱದೇಸಿನ್ಗವೆ[ನ್ತ]ಣೆಸುವೆಷಯ ಸುಂಕಂಬುವೆ
15. ಳುಂಗುಗುಂಟ[ಲೋ]. . .[ದ್ವಿ]ಯು ಇಱುಜಈ[ಏ] ಬಿರಾಡ್ಯಾಂಬು ವೇಯುವ[ಣ] . . . .ಮ್ಬು ದೀನಿಕ್ಕಿ ವಕ್ತಂಬು ವಚ್ಚುವಾ
16. . . . ನಜಾಱುಱಗಟ್ಟುಶ್ರೀಕ[ಣ್ಠ] ದೇವಾ ಆಚಾರ್ಜ್ಯ ಲಿಕಿ[ತಂ]

(J.EA.XXIV. ನಂ. 26 'ಅ')

(ಆ.ಪ್ರಕನ್ನಡಶಾಸನಗಳು.ಭಾಗ–1, ಶಾಸನ ಸಂ.244)

* ಪಾಠದಲ್ಲಿ ಓರೆ ಹಾಗೂ ಬೋಲ್ಡ್ ಮಾಡಿರುವ ಪದಗಳು ಅರ್ಥದ ನೆಲೆಯಿಂದ ಸರಿಹೊಂದುವುದರಿಂದ ಆರ್.ಎಸ್.ಪಂಚಮುಖಿ ಅವರ ಪಾಠದಿಂದ ತೆಗೆದುಕೊಳ್ಳಲಾಗಿದೆ.

## III. ಅಕುನೂರು ಶಾಸನ

**ಮೊದಲನೆಯ ಮುಖ**

1. ಸಮಧಿಗತ ಪಂ
2. ಚ ಮಹಾಶಬ್ದ ಮಾಹಾ
3. ಸಾಮನ್ತಾಧಿಪತಿ ಜ
4. ಯಧೀರ ಛೆವಣರಜು
5. ಅಭಿಮಾನಧವಳ ರ

6. ಟ್ಟಶೂರರು ರಾಜಭೂರಿ[ಶ್ರ]
7. ವ ವಿಚ್ಚಿನಾರಾಯಣ
8. ಸತ್ಯಾರ್ಣ್ನವ ಧರ್ಮ್ಮರ
9. ತ್ನಗರ ಶ್ರೀಮತ್ಸಂಕ[ರ]
10. ಗಣ್ಣರಸರು ಕೊಳ್ಳಿ[ಪಾ]
11. ಕೆನಾಡ ರಾಜ್ಯಾಭಿವ್ರಿದ್ಧ
12. ದೆ ಇಪ್ಪತ್ತಿಚ್ಛಾಸಿರಮ
13. ನಾಳುತ್ತಿರೆ ಆಕುನೂರ
14. ಇನ್ನುಪಯ್ಯನ ರಾಜ್ಯ

ಎರಡನೆಯ ಮುಖ

15. ಭಿವ್ರಿ ಉತ್ತ[ರೋ]ತ್ತರಂ ಪೊಲ್ವೊ
16. ತ್ತಿರೆ ಕೊಳ್ಳಿ[ಪಾ]ಕೆಯ ಪಿರಿ
17. ಯಬಸದಿ [ಯೆ . . ಯ ಭಟ್ಟು]
18. ರೇವಯ್ಯನ . . . . ಸಗಳು ಏಜಿ
19. ಯಕಸ್ಥಲಣ. . . . ಸರಪ್ಪಗ
20. ರಪಯ್ಯಗ . .ಟ್ಟದ ಮಗ
21. ನಿಮಯ್ಯರಾ. .ಮಯ್ಯನ .
22. ಸಿಲಿಲಪ್ಪು. . .ರದರೆರಿಂ
23. ಪ್ಪರರೆಜ್ಯೆಜ್ಜ . . .ಕಬ್ಬೆ[ಗ]
24. ರಾಜಮಯ್ಯ . . ಮಟ್ಟಿಜ [ಮ]
25. ಕ್ಕಳು ರತಿ [ಯೆ] . . . ಬ್ಬೆಯುಂ [ದ್ರ]
26. ಮ್ನಬ್ಬೆಯುಂ . . ಚರಕುಲ
27. ಸನ್ತತಿಯರಾ . ಮಯ್ಯ [ಪ್ಪಜಿ]
28. [ಗ]ಟಿಸಿ . . . ರಟ್ಟ ಸಮು
29. ದ್ರ ಮೆಳುದು . . ಳ ಕೊಟ್ಟ

ಮೂರನೆಯ ಮುಖ

30. ರಟ್ಟ ಸಮು . . . .
31. ಸಿನವಾರು [ಮರವಣ]
32. ಚುಡು ವರಿನಿ ಮೊಡಿ[ಚಿ]
33. ನಟಿವಾಡು ಚ [ಂ][ಪಿ][ನ]
34. ವಾರು ಬರನಸಿ ವ್ರಚ್ಚಿ
35. ನವರು ಪೆದ್ದಕೊಡುಕು
36. ಕಪಾಲಬುಚೇತ ಬ
37. ಟ್ಟ ಅಲುಗುವಾನಿ .
38. . ಪಾಪಂಬು ಗೊನ್ನವಾಡು
39. ಚಜುಮು ಕ್ರೊಚ್ಚಿನ
40. ಯೊಡ್ಡನಿ ಪೇರು
41. ಚಲುವಿನ ಬೋ

42. ಯುನ್ನು
43. ಗೋವಧಯ್ಯ ಸ್ತ್ರೀ ವಧಯು
44. ರಿಷಿವಧಯ್ಯು ಪುತ್ರವ
45. ಧಯ್ಯ ಬ್ರಮ್ಮತಿಯುಮೆಂಬ
46. ಪಂಚಮಹಾಪಾತಕುಗ .
47. ಯ್ದಲ್ಲಿನ ಪಾಪ ಲೋಕ
48. [ದೊಗ್ಗ] ನರಕದೊತಿಯ
49. [ರು]
(ಆ.ಪ್ರ.ಕನ್ನಡಶಾಸನಗಳು.ಭಾಗ-2, ಶಾಸನ ಸಂ.418)

## IV. ಅರಕಟವೇಮುಲ ಶಾಸನ

**ಮೊದಲನೆಯ ಭಾಗ**

1. ಸ್ವಸ್ತಿ ಶ್ರೀ ವಲ್ಲಭ ಮಹಾರಾಜಾಧಿರಾಜ ಪರಮೇಶ್ವರ ಬಟ್ಟರಾ[ಳ] ಪೃಥಿವಿ ರಾಜ್ಯ
2. ಞ್ಚೆಯ[ನ್] ಪೆರ್ಬಾಣ ವ(ಂ)ಶ ಭುಜ[ಂ]ಗದಿ ಭೂಪಾದಿತ್ಯುಲ ಕಡಾ[ನ್] ವ[ಂ]ಗನೂಜ್ಲು ಚರುವ ಶರ್ಮ್ಮ ಪುತ್ರ
3. ವಿನ್ನ ಶರ್ಮ್ಮುಳಕು ನಿಡುಗಟಂಬುನ ಪನ್ನಳ ಇಚ್ಚಿರಿ ವೇಗುಳೂಜ್ಲು ಪೆ[ಣಜ] ಕೋಲುಸಕ ಕೋಳು ಕಚ್ಚಜ್ಲು ಇನ್ನಲ್ವುರು ಸಾಕ್ಷಿ

**ಎರಡನೆಯ ಮುಖ**

4. ದೀನಿಕಿ ವಕ್ರಂಬುವಚ್ಚುವಾನುಱಪಞ್ಚಮಹಾಪಾತಕಸಯ್ಯುಕ್ತನಱಗು[ನೇ]
5. ತ್ರಿಬಿರ್ದ್ದತ್ತಂ ತ್ರಿಭಿರ್ಭುಕ್ತ[ಂ] ಸದ್ಭಿಶ್ಚ ಪರಿಪಾಲಿತಂ ಏತಾನಿನ ನವರ್ತ್ತನ್ತೆ ಪೂರ್ವ್ವರಾಜಕೃ
6. ತಾನಿಚ[।] ಸ್ವದತ್ತಾ[ಂ] ವಾ ಯೋ ಹರೇತಿ ವಸುನ್ದರಾ[ಂ] ಷಷ್ಟವರ್ಷಸಹಾಸ್ರಾಣಿ ವಿಷ್ಟಾ
7. ಯಾಂ ಜಾಯತೇ ಕ್ರುಮಿ (ರಾಷ್ಟ್ರಕೂಟರ ಶಾಸನಗಳು.ಭಾಗ-1, ಸಂಖ್ಯೆ.128)

## V. ಕುರ್ಕ್ಯಾಲ ಶಾಸನ

ಮೊದಲು ಕನ್ನಡ ಪಾಠ*ವಿದೆ. . . . .

**ತೆಲುಗು ಪಾಠ : ಕಂದ ಪದ್ಯ**

ಜಿನಭವನಂಬುಲೆತ್ತಿಂಚುಟಜಿನಪೂಜಲ್ಸೇಯುಚುನ್ನಿ ಜಿನಮುನುಲಕು ನತ್ತಿನಯಮ್ಮದಾನಂಬೀವುಟಂ
ಜಿನವಲ್ಲಭು ಬೋಲಂಗಲರೆ ಜಿನಧರ್ಮ್ಮಪರುಲ್॥10॥ದಿನಕರುಸರಿವೆಲ್ಗುದುಮನಿ ಜಿನವಲ್ಲಭುನೊಟ್ಟನೆತ್ತು
ಜಿತಕವಿನನನುಂಮನುಜುಲ್ಗಲರೇಧಾತ್ರಿಂವಿನಿತಿಚ್ಚುದುನನಿಯ ವೃತ್ತವಿಬುಧಕವೀನ್ದ್ರುಲ್॥11॥ಒಕ್ಕೊಕ್ಕೊಗುಣಂ
ಕಲ್ಗುದುಕ್ಕೊಣ್ಡಿಗಾಕ್ಕೊಕ್ಕಲಕ್ಕಲೇವೆವ್ವರಿಕಿಂಲೆಕ್ಕಿಂಪನೊಕ್ಕೊಲಕ್ಕಕುಮಿಕ್ಕಿಲಿ ಗುಣಪಕ್ಷಪಾತಿ ಗುನಮಣಿಗಣಂಬುಲ್॥12॥

* ಪ್ರಸ್ತುತ ಶಾಸನದಲ್ಲಿ ತೆಲುಗು ಭಾಗದಲ್ಲಿರುವ ಪಾಠವನ್ನು ಅಧ್ಯಯನಕ್ಕೆ ಬಳಸಿಕೊಂಡಿರುವುದರಿಂದ, ಅದರ ಪಾಠವನ್ನು ಮಾತ್ರ ಕೆಳಗೆ ಕೊಡಲಾಗಿದೆ. ಕನ್ನಡ ಪಾಠವನ್ನು ಕೊಟ್ಟಿಲ್ಲ.

(ಆಂಧ್ರಪ್ರದೇಶದ ಕನ್ನಡ ಶಾಸನಗಳು.ಭಾಗ-2.ನಂ.404)

[]ಚೌಕ ಕಂಸದಲ್ಲಿ ಕೊಟ್ಟಿರುವುದು ಊಹಾಪಾಠ ಮತ್ತು ಸಂಪಾದಕರು ಸಂದೇಹವಾಗಿ ಸೂಚಿಸುವ ಪಾಠವಾಗಿ
[।]ಪದ್ಯದ ಮೊದಲ ಪಾದ ಪಾದ ಮುಗಿದ ನಂತರ ಕೊಟ್ಟಿರುವ ಗುರುತು.

# ಜಿನಧರ್ಮ ಪೋಷಕರಾದ ಅಂಬ್ವಣಶ್ರೇಷ್ಠಿಯ ಮನೆತನ

ಪ್ರಕೃತ ಲೇಖನವು ಹೇಳಹೊರಟಿರುವುದು ಶಿವಮೊಗ್ಗ ಜಿಲ್ಲೆಯ ಸಾಗರ ತಾಲೂಕಿನ ಗೋವರ್ಧನಗಿರಿ ಎಂಬ ಊರಿನಲ್ಲಿರುವ ಶಾಸನವೊಂದರ ಬಗ್ಗೆ. ಈ ಶಾಸನವು (ಎಪಿಗ್ರಾಫಿಯ ಕರ್ನಾಟಿಕ (ಪರಿಷ್ಕೃತ) ಸಂಪುಟ-15, ಸಾಗರ-89) ಊರಿನ ವೆಂಕಟರಮಣ ಸ್ವಾಮಿಯ ದೇವಸ್ಥಾನದೆದುರಿಗೆ ಇರುವ ಕಂಚಿನ ಕಂಬದ ಮೇಲಿದೆ. ಶಾಸನದಲ್ಲಿ ಕಾಲದ ಉಲ್ಲೇಖವಿಲ್ಲ. ಆದರೆ ವಿದ್ವಾಂಸರು ಲಿಪಿಯ ಲಕ್ಷಣದ ಆಧಾರದ ಮೇಲೆ ಇದರ ಕಾಲವನ್ನು ಕ್ರಿ.ಶ. 15-16 ನೆಯ ಶತಮಾನವೆಂದು ನಿರ್ಧರಿಸಿದ್ದಾರೆ. ಈ ಶಾಸನವು ಕರಾವಳಿ ಸಾಳುವ ಮನೆತನದ ದೇವರಾಯನ ಆಳ್ವಿಕೆಯನ್ನು ಉಲ್ಲೇಖಿಸುತ್ತದೆ. ಈ ದೇವರಾಯನ ತಾಯಿಯು ಭೈರವಭೂಪತಿಯ ತಂಗಿ. ಈ ಭೈರವಭೂಪತಿಗೆ ಅಂಬ, ಸಾಳ್ವಮಲ್ಲ ಮತ್ತು ಭೈರವ ಎಂಬ ಕಿರಿಯ ಸೋದರರು ಇದ್ದರು. ದೇವರಾಯನು ಅಳಿಯ ಸಂತಾನ ಪದ್ಧತಿಯ ಪ್ರಕಾರ ಅಧಿಕಾರ ಪಡೆದಿದ್ದನು. ಇವನು ತುಳು, ಕೊಂಕಣ, ಹೈವೆ ಮತ್ತು ಇತರೆ ರಾಜ್ಯಗಳನ್ನಾಳುತ್ತಿದ್ದನು. ದೇವರಾಯನ ಗುರು ಪಂಡಿತರಾಯ. ಈ ಅರಸನು ಅಪೂರ್ವವಾದ "ಅತ್ಯದ್ಭುತ ಮಸ್ತಾಕಾಭಿಷವಣ ಜನ್ಮಾಭಿಷೇಕೋಪ"ವನ್ನು ಮಾಡಿಸಿದನೆಂದು ಶಾಸನದಲ್ಲಿ ಹೇಳಿದೆ.

**ಗಂಗಾಂಬಿಕೆ ಎಸ್.**
ಸಂಶೋಧನಾ ವಿದ್ಯಾರ್ಥಿನಿ
ಡಾ.ಡಿ.ವಿ.ಗುಂಡಪ್ಪ ಕನ್ನಡ ಅಧ್ಯಯನ ಕೇಂದ್ರ
ತುಮಕೂರು ವಿಶ್ವವಿದ್ಯಾನಿಲಯ
ತುಮಕೂರು.
ಮೊ: 9740192706
gangasgovardhan@gmail.com

ದೇವರಾಯ ಭೂಪತಿಯ ಕಾಲದಲ್ಲಿದ್ದ ಅಂಬ್ವಣಸೆಟ್ಟಿಯ ಮನೆತನವು ಜೈನಧರ್ಮಕ್ಕೆ ನೀಡಿದ ಕೊಡುಗೆಯನ್ನು ಈ ಶಾಸನವು ತನ್ನೊಡಲಲ್ಲಿರಿಸಿಕೊಂಡು ಅತ್ಯಂತ ವಿಶೇಷವೆನಿಸಿದೆ. ಒಂದೇ ಮನೆತನದ ಏಳು ತಲೆಮಾರುಗಳು ಹಾಗೂ ಅವರೊಂದಿಗೆ ವಿವಾಹ ಸಂಬಂಧಗಳನ್ನೇರ್ಪಡಿಸಿಕೊಂಡ ಕುಟುಂಬಗಳು ಸಹ ಜಿನಧರ್ಮವನ್ನು ಪೋಷಿಸಿರುವುದು ಅಪೂರ್ವವೇ ಸರಿ. ಈ ಶಾಸನದ ನಡುಗನ್ನಡ ಕಾಲಘಟ್ಟದ ಭಾಷಿಕ ಲಕ್ಷಣಗಳು, ಸಾಹಿತ್ಯಿಕ ಸೌಂದರ್ಯ, ಕಂದ-ವೃತ್ತಗಳಿಂದ ಕೂಡಿದ ಛಂದೋಲಾಸ್ಯಗಳು ಸೊಗಸಾಗಿದ್ದು ಅಧ್ಯಯನಾಸಕ್ತರಿಗೆ ಮುದನೀಡುತ್ತವೆ.

ಶಾಸನದ ಆರಂಭದಲ್ಲಿ ಜಿನಸ್ತುತಿಯಿದೆ; ನೇಮಿನಾಥನನ್ನು ಭಕ್ತಿಯಿಂದ ಕೊಂಡಾಡಲಾಗಿದೆ. ಆನಂತರ ಗೇರುಸೊಪ್ಪೆಯ ಹಾಗೂ ದೇವರಾಯನ ವಂಶಾವಳಿಯ ವರ್ಣನೆಗಳಿವೆ. ತರುವಾಯ ಅಂಬ್ವಣಸೆಟ್ಟಿ ಮನೆತನದ ವಿಷಯ ನಿರೂಪಣೆಯಿದೆ.

**ಜಿನಧರ್ಮ ಪೋಷಣೆ**

ಯೋಜಣ್ಣಶ್ರೇಷ್ಠಿಯು 'ಚಂದಾವರದ ಕದಂಬಕುಲತಿಲಕ'ನಾದ ಕಾಮಿದೇವ ಮಹಾರಾಜನಲ್ಲಿ ದಂಡನಾಯಕ ಹುದ್ದೆಯಲ್ಲಿದ್ದ ಕಾಮೆಯದಂಡನಾಯಕನ ಮಗ ರಾಮಣ್ಣಹೆಗ್ಗಡೆಯ ಸುಪುತ್ರ. ರಾಮಣ್ಣಹೆಗ್ಗಡೆ ಮತ್ತು ರಾಮಕ್ಕ ದಂಪತಿಗಳ ಅಷ್ಟಪುತ್ರರಲ್ಲಿ ಈ ಯೋಜಣ್ಣಶ್ರೇಷ್ಠಿಯು ಅತಿ ಪ್ರಸಿದ್ಧನಾಗಿದ್ದನು. ಈತನಿಗೆ ಇಬ್ಬರು ಮಡದಿಯರು: ಮೊದಲನೆಯವಳು ತಂಗಮ್ಮ ಅಥವಾ ತಂಗಣೆ. ಎರಡನೆಯವಳು ರಾಮಕ್ಕ. ತಂಗಮ್ಮನಿಗೆ ರಾಮಣ್ಣಶ್ರೇಷ್ಠಿ, ರಾಮಕ್ಕನಿಗೆ ಕಲ್ಪಸೆಟ್ಟಿಯರೆಂಬ ಪುತ್ರರಿದ್ದರು. ಹೀಗೆ-

**"ಪ್ರಿಯತಮೆಯದ್ವಯದಿಂದಂ**
**ನಯನದ್ವಯದಿಂದೆ ವಕ್ತ್ರಮಪ್ಪುವ ತೆರದಿಂ**
**ಜಯದಂಕದಾನೆ ದಂತ**
**ದ್ವಯದಿದೆಸೆವಂತೆಯೊಪ್ಪಿದಂ ಯೋಜಣಂ"**

ಮುಖಾರವಿಂದದಲ್ಲಿ ಎರಡು ಕಣ್ಣುಗಳು ಶೋಭಿಸುವಂತೆ, ಯುದ್ಧದಲ್ಲಿ ಜಯಕ್ಕೆ ಕಾರಣವಾಗುಳ್ಳ ಎರಡು ದಂತಗಳು ಆನೆಗೆ ಒಪ್ಪಿರುವಂತೆ, ಇಬ್ಬರು ಮಡದಿಯರ ದೆಸೆಯಿಂದ ಯೋಜಣ್ಣನು ಸಂಸಾರದಲ್ಲಿ ಸುಖಿಯಾಗಿದ್ದನು.

ಯೋಜಣ್ಣ ಶ್ರೇಷ್ಠಿಯು ಅಪಾರ ಜೈನಭಕ್ತಿಯುಳ್ಳವನು ಆಗಿದ್ದನು. ಇದಕ್ಕೆ ದ್ಯೋತಕವೆಂಬಂತೆ ಕ್ಷೇಮಪುರ [ಗೇರುಸೊಪ್ಪೆ]ದಲ್ಲಿ ಶ್ರೀ ಅನಂತನಾಥನ ಚೈತ್ಯಾಲಯವನ್ನು ನಿರ್ಮಿಸಿದ್ದನು. ಜಿನಧರ್ಮ ಪ್ರಸಾರವನ್ನು ಕೈಗೊಂಡು ಶಾಶ್ವತವಾದ ಕೀರ್ತಿಯನ್ನು ಸಂಪಾದಿಸಿದ್ದನು. ಇಂತಹ ಶ್ರೇಷ್ಠಕಾರ್ಯವನ್ನೆಸಗಿದ ಯೋಜಣ್ಣಶ್ರೇಷ್ಠಿಯು ತನ್ನ 'ರಾಜಶ್ರೇಷ್ಠಿ' ಪದವಿಯನ್ನು ತನ್ನ ಪುತ್ರರಿಗೊಪ್ಪಿಸಿ ಸುರಲೋಕಪ್ರಾಪ್ತನಾದನು.

ಯೋಜಣ್ಣಶ್ರೇಷ್ಠಿಗೆ ತಂಗಮ್ಮನಲ್ಲಿ ಹುಟ್ಟಿದ ರಾಮಣ್ಣ ಶ್ರೇಷ್ಠಿಗೆ 'ಕಾಮನಿಭಂ' ಎನಿಸಿದ್ದ ತಮ್ಮಣಾಂಕನೆಂಬ ಮಗನಿದ್ದನು. ಈ ತಮ್ಮಣಾಂಕನ ಸುಪುತ್ರ ನಾಗಪಾಂಕ ಅಥವಾ ನಾಗಪ್ಪಶ್ರೇಷ್ಠಿ. ಈತನಿಗೆ ಸಾತಮ್ಮ ಮತ್ತು ನಾಗಮ್ಮನೆಂಬ ಇಬ್ಬರು ಸತಿಯರು. ಸಾತಮ್ಮನಿಗೆ ತೋಟಿಯಣ್ಣಸೆಟಿಯು ಹಾಗೂ ನಾಗಮ್ಮನಿಗೆ ಅಂಬ್ವಣಸೆಟ್ಟಿ ಮತ್ತು ಮಲ್ಲಿಸೆಟ್ಟಿ ಎಂಬ ಪುತ್ರರಿದ್ದರು. ನಾಗಮ್ಮನ ಮುತ್ತಾತ ನರಸಣ್ಣನಾಯಕನು ಸಹ ಜಿನಧರ್ಮಕಾರ್ಯದುರಂಧರ ನಾಗಿದ್ದನು.

ನರಸಣ್ಣನಾಯಕನ ಜನ್ಮಸ್ಥಳ ಮಾಗೋಡು. 'ಸಿರಿಗೆ ತವರ್ಮನೆ ಎನಿಸಿದ ನಗರೀಸೀಮೆಯಾದ ಮಾಗೋಡಿ'ನ 'ದಂಡು ಬಳಿಗೆ' ಈತ ಸೇರಿದವನು. ಇವನು ಮಾಗೋಡಿನಲ್ಲಿ ಜಿನಾಲಯವನ್ನು ಕಟ್ಟಿಸಿ ಅಲ್ಲಿ ಶ್ರೀಪಾರ್ಶ್ವತೀರ್ಥೇಶ್ವರ ಸ್ವಾಮಿಯನ್ನು ಪ್ರತಿಷ್ಠಾಪನೆ ಮಾಡಿದನು. ಅಲ್ಲಿ ಚತುರ್ವಿಧ ದಾನ [ಆಹಾರದಾನ, ಔಷಧದಾನ, ಅಭಯದಾನ, ಶಾಸ್ತ್ರದಾನ]ಕ್ಕೆಂದು ಅಪಾರವಾದ ಭೂದಾನವನ್ನು ಕೊಟ್ಟು ಪುಣ್ಯಕ್ಕೆ ಭಾಜನನಾಗಿದ್ದನು.

ನರಸಣ್ಣನಾಯಕನ ಮೊಮ್ಮಗಳು ಮಾರಕ್ಕ, ಈಕೆಯನ್ನು ಹೈವೆರಾಜ್ಯಕ್ಕೆ ಮುಖ್ಯವಾದಂತಹ ಹರಿಯಬ್ಬೆಯಸೀಮೆಗೆ ಸೇರಿದ 'ಅಂತರ ಬಳಿ'ಯಲ್ಲಿ ಹುಟ್ಟಿದ 'ಹಟ್ಟಿಗನ ಬಳಿ'ಯ ನೇಮಣಸೆಟ್ಟಿಗೆ ಕೊಟ್ಟು ವಿವಾಹ ಮಾಡಲಾಗಿತ್ತು. ಈ ದಂಪತಿಗಳ ಪುತ್ರಿಯೇ ನಾಗಪ್ಪ / ನಾಗಪಾಂಕ ಶ್ರೇಷ್ಠಿಯ ಮಡದಿ ಹಾಗೂ ಅಂಬ್ವಣಸೆಟ್ಟಿ ಸೋದರರ ತಾಯಿಯಾದ ನಾಗಮ್ಮ. ಈಕೆಯು ಪತಿವ್ರತಾಧರ್ಮ, ಜಿನಭಕ್ತಿ, ಶೀಲೋನ್ನತಿ, ದಾನದತ್ತಿಕಾರ್ಯಗಳಿಂದ ಪ್ರಸಿದ್ಧಳಾಗಿದ್ದಳು:

**ಪತಿಚಿತ್ತಾನುಗುಣ ಪರವರ್ತ್ತನ ದಿನತ್ಯಾಶ್ಚರ್ಯ್ಯ ಸೌಕರಿರ್ಯ್ಯ ಸಂ**
**ಯುತ ಸೀಲೋನ್ನತಿಯಿಂ ಜಿನೇಂದ್ರಪದಪೂಜಾಸಕ್ತ ಸದ್ಭಕ್ತಿಯಿಂ ಸತ**
**ತೋತ್ಸಾಹ ಸುದಾನದಿಂ ಪರಹಿತ ವ್ಯಾಪಾರ ಚಾತುರ್ಯ್ಯದಿಂ**
**ಕ್ಷಿತಿಯೋಳ್ನಾಗಮಗಾಂ ತಳುತ್ತಮ ಯಶಃ ಸೌಭಾಗ್ಯಮಂ**

ಬಹುಶಃ ನಾಗಮ್ಮನು ತನ್ನ ಪತಿಯು ನಿರ್ವಹಿಸುತ್ತಿದ್ದ ವರ್ತಕ ಸಂಬಂಧಿ ಕಾರ್ಯಗಳಲ್ಲಿ ಭಾಗಿಯಾಗಿ ಯಶಸ್ಸನ್ನು ಸಂಪಾದಿಸಿದ್ದಳೆಂದು ತೋರುತ್ತದೆ. ಜೊತೆಗೆ ಇಂತಹ ವಣಿಜವೃತ್ತಿಯಲ್ಲೂ 'ಪರಹಿತ'ವನ್ನು ಕಾಯ್ದುಕೊಂಡು ಬಂದ ಧರ್ಮಿಷ್ಠೆಯು ಆಗಿದ್ದಳು ಎಂಬುದಕ್ಕೆ 'ಪರಹಿತ ವ್ಯಾಪಾರ ಚಾತುರ್ಯ' ಎಂಬ ಮಾತು ಧ್ವನಿಪೂರ್ಣವಾಗಿ ಸಾಕ್ಷಿಯೊದಗಿಸುತ್ತದೆ.

ಅಂಬ್ವಣಸೆಟ್ಟಿಯು ಕರಾವಳಿ ಸಾಳುವ ಮನೆತನದ ದೊರೆಯಾದ ದೇವರಾಯನ ಆಳ್ವಿಕೆಯ ಕಾಲದಲ್ಲಿ ರಾಜಶ್ರೇಷ್ಠಿ ಪದವಿಯಲ್ಲಿದ್ದನು. ಈತನ ಮಡದಿ ದೇವರಸಿ. ಈ ದೇವರಸಿಯ ಗುಣಾವಳಿಯನ್ನು ಶಾಸನವು ಮನದುಂಬಿ ಹೊಗಳಿದೆ:

**ಆತನ ಕಾಂತೆ ಶೀಲಗುಣವಂತೆ ಕಲಾಗುಣವಂತೆ ಜೈನಮಾ**
**ರ್ಗ್ಗಾತತಚಿತ್ತೆ ಧರ್ಮಪರವಿತ್ತೆ ಜನಸ್ತುತವೃತ್ತೆ ಸತ್ಕುಲ**
**ಖ್ಯಾತಸುರೂಪೆ ಸಂಸ್ಮತಿ ಕಲಾಪೆ ವಿನಿರ್ಗ್ಗತಕೋಪೆಯೆಂದು ಧಾ**
**ತ್ರೀತಳವೊಪ್ಪೆ ದೇವರಸಿಯಂ ಪೊಗಳ್ಗುಂ ಗುಣರತ್ನರಾಶಿಯಂ**

ದೇವರಸಿಯು ಶಿಲ, ವಿದ್ಯೆ, ಧರ್ಮಬುದ್ಧಿ, ಸೌಂದರ್ಯ, ಜಾಣ್ಮೆ, ಚಾರಿತ್ರ್ಯಗಳಲ್ಲಿ ಜನಮಾನಸದಲ್ಲಿ ಗೌರವಾನ್ವಿತಳಾಗಿದ್ದಳು. ಇಂತಹ ಸದ್ಗುಣೋಪೆಯಾದ ಕುಲಸ್ತ್ರೀಯು" ಇರುವಂತೆ ಅಂಬ್ವಣಸೆಟ್ಟಿಯೊಡನೆ ಸಾನುರಾಗದಿಂದ ಜೀವಿಸುತ್ತಿದ್ದಳು. ಈ ದಂಪತಿಗಳು ತಮ್ಮ ಜೈನಧರ್ಮಕ್ಕೆ ನಿಷ್ಠರಾಗಿಯೂ ಇರುತ್ತಿದ್ದರು.

ಒಮ್ಮೆ ಈ ದಂಪತಿಗಳು ನೇಮೀಶ್ವರ ಚೈತ್ಯಾಲಯಕ್ಕೆ ಭೇಟಿನೀಡುತ್ತಾರೆ. ಅಲ್ಲಿ ನೇಮಿತೀರ್ಥೇಶ್ವರನನ್ನು ಪೂಜಿಸಿ ಆರಾಧಿಸುತ್ತಾರೆ. ಇದನ್ನು ತಿಳಿಸುವ ಸ್ತುತಿಪದ್ಯವು ಹೀಗಿದೆ:

**ಜನನೇತ್ರಭ್ರಮರಾವಳೀ ಕುಸುಮಿತೋದ್ಯಾನಂ ಮುನೀಂದ್ರೌಘಚಿ**
**ತ್ತನವೀನಾಂಬುರಹ ಪ್ರಭಾತಸಮಯು ವಿದ್ವಜ್ಜನ ಸ್ತೋತ್ರದಿ**
**ವ್ಯನದೀಪೂರ ಹಿಮಾಚಳಂ ನಿಜಮಹಾಸೌಂದರಿಯ್ಯಮೆಂದೆಂಬ ಸ**
**ಜ್ಜನತಾ ಸಂಸ್ತುತಿ ನಿನ್ನೊಳೇನಮದ್ರ್ದುದ್ಯೆ ಶ್ರೀನೇಮಿತೀರ್ತ್ಥೇಶ್ವರಾ**

ಆನಂತರ ಅಲ್ಲಿದ್ದ ಮುನಿವೃಂದವನ್ನು ವಂದಿಸುತ್ತಾರೆ. ಆ ಮುನಿವೃಂದದಲ್ಲಿ ಒಬ್ಬನಾದ ಅಭಿನವಸಮಂತಭದ್ರಮುನಿಯಿಂದ ಧರ್ಮೋಪದೇಶವನ್ನು ಕೇಳಿ ಅದರಿಂದ ಪ್ರೇರಿತರಾಗಿ ತಮಗೆ ಒಳಿತಾಗಲಿ ಎಂಬ ಆಶಯದಿಂದ ತಮ್ಮ ಅಜ್ಜನಾದ ಯೋಜಣಶ್ರೇಷ್ಠಿಯು ಕಟ್ಟಿಸಿದ ನೇಮಿಶ್ವರನ ಚೈತ್ಯಾಲಯದ ಮುಂದೆ ಮಾನಸ್ತಂಭವನ್ನು ನಿಲ್ಲಿಸಲು ನಿರ್ಧರಿಸುತ್ತಾರೆ. ತದನಂತರ ಈ ನಿರ್ಧಾರವನ್ನು ಗುರುಗಳಿಗೂ ಹೇಳಿ, ತಮ್ಮ ಒಡಹುಟ್ಟಿದವರೇ ಮೊದಲದ ಬಂಧುಬಳಗದವರ, ಮಹಾರಾಜ ದೇವರಾಯ ಮತ್ತು ಚತುಸ್ಸಂಘದ (ಶ್ರಮಣರು, ಆರ್ಯಿಕೆಯರು, ಶ್ರಾವಕರು, ಶ್ರಾವಕಿಯರು ಎಂಬ ನಾಲ್ಕು ಸಂಘ) ಅನುಮತಿಯನ್ನು ಪಡೆದು ನೇಮೀಶ್ವರ ಜಿನಾಲಯದ ಮುಂದೆ ಕಾಂತಿಯುಕ್ತವಾದ ಕಂಚಿನ ಮಾನಸ್ತಂಭವನ್ನು ನಿಲ್ಲಿಸಿದರು. ಇದೇ ಸಂದರ್ಭದಲ್ಲಿ ದೇವರಿಗೆ:

**"ಕಮಲಿನಿಯುಂ ಕುಮುದಿನಿಯುಂ ಕ್ರಮದಿಂ ಕಾಸಾರಲಕ್ಷ್ಮಿ**
**ಗುದಯಿಪವೋಲ್"**

ಅವಳಿ ಹೆಣ್ಣು ಮಕ್ಕಳು ಜನಿಸಿದರು. ಈ ಮಕ್ಕಳಿಗೆ ಕ್ರಮವಾಗಿ ಪದ್ಮರಸಿ ಮತ್ತು ದೇವರಸಿ ಎಂದು ನಾಮಕರಣ ಮಾಡಲಾಯಿತು. ಈ ಸವಿಯಾದ ಘಟನೆಯ ಜ್ಞಾಪಕಾರ್ಥವಾಗಿ ಈಗಾಗಲೇ ತಾವು ನಿಲ್ಲಿಸಿದ ಮಾನಸ್ತಂಭದ ತುದಿಯಲ್ಲಿ ಈ ಅವಳಿ ಪುತ್ರಿಯರಷ್ಟೇ ಎತ್ತರದ ಚಿನ್ನದ ಕಳಶವನ್ನು ಪ್ರತಿಷ್ಠಾಪಿಸಿದರು. ಆ ಮಾನಸ್ತಂಭದ ಸೊಬಗನ್ನು ಹೀಗೆ ವರ್ಣಿಸಲಾಗಿದೆ:

**ಭರದಿಂ ಜನ್ಮಾಬ್ಧಿಯಂ ದಾಂಟಿಸುವವರ ಮಹಾಧರ್ಮ್ಮಮೆಂದೆಂಬ ಪೋತ**
**ಕ್ಕುರುಕೂಪಸ್ತಂಭಮೆಂಬಾಕನ ವಿಪದಯಶಃ ಪಟ್ಟಿಕಾಸ್ತಂಭಮೆಂಬಂ**
**ತಿರೆ ಮಾನಸ್ತಂಭಮಾಕೂಟದೊಳೆಸೆವ ಚತುರ್ಜೈನಬಿಂಬಾಂಘ್ರಿಪೂಜಾ**
**ಪರಿಕೀರ್ಣ್ಣಾಸ್ಥರ ಪುಷ್ಪಾಂಜಲಿಯೊಲೆಸುದೀ ವ್ಯೋಮತಾರಾಕದಂಬಂ"**

ಅಂಬ್ವಣಸೆಟ್ಟಿಯ ಮಡದಿಯರಾದ ದೇವರಸಿ ಮತ್ತು ಮಲ್ಲಿದೇವಿಯರ ಪೂರ್ವಿಕರು ಸಹ ಜಿನಧರ್ಮಾಸಕ್ತರೂ, ಜಿನಧರ್ಮಸೇವ್ಯರೂ ಆಗಿದ್ದರು. ಈಗಾಗಲೇ ಹೇಳಿದ ರಾಜಶ್ರೇಷ್ಠಿಯಾದ ಯೋಜಣಶ್ರೇಷ್ಠಿಯ ಮಗ ರಾಮಣ್ಣಸೆಟ್ಟಿಗೆ ರಾಮಕ್ಕ ಎಂಬ ಮಡದಿಯಿದ್ದಳು. ಈ ದಂಪತಿಗಳ ಸುತನಾದ ಕಲ್ಲಪ್ಪಶ್ರೇಷ್ಠಿಯು ದಾನ, ಪೂಜೆ ಮೊದಲಾದ ಸತ್ಕಾರ್ಯಗಳಿಂದ ಜೈನ ಧರ್ಮವನ್ನು ಸೇವಿಸುತ್ತಿದ್ದು ತನ್ನ ಧರ್ಮನಿಷ್ಠೆಯಿಂದಲೇ ಲೋಕಪ್ರಸಿದ್ಧನಾಗಿದ್ದನು. ಇವನಂತೆಯೇ ಇವನ ತನುಜನಾದ ಯೋಜಣಶ್ರೇಷ್ಠಿ (ಈತನನ್ನು ಅಧ್ಯಯನದ ದೃಷ್ಟಿಯಿಂದ 2ನೇ ಯೋಜಣಶ್ರೇಷ್ಠಿ ಅಥವಾ ಕಿರಿಯ ಯೋಜಣಶ್ರೇಷ್ಠಿ ಎಂದಿಟ್ಟುಕೊಳ್ಳಬಹುದು. ಏಕೆಂದರೆ ಕಲ್ಲಪ್ಪಸೆಟ್ಟಿಗೆ ಈಗಾಗಲೇ ಕೀರ್ತಿ ಪಡೆದ ತಾತ ಯೋಜಣಶ್ರೇಷ್ಠಿ ಇರುವುದರಿಂದ) 'ಜಿನಪದಪಲ್ಲವಕಮನೀಯ ಭಕ್ತಿಲತಿಕಾಭೋಗಂ' ಎಂದು ಹೆಸರಾಂತನಾದ ಜಿನಭಕ್ತನಾಗಿದ್ದನು. ಈ ಕಿರಿಯೋಜಣಶ್ರೇಷ್ಠಿಗೆ ವೀರಕ್ಕನು ಕುಲವಧುವಾಗಿದ್ದಳು. ಈಕೆ ಜಿನಾಲಯವನ್ನು ಕಟ್ಟಿಸಿ, ಜಿನಧರ್ಮವನ್ನು ಪೋಷಿಸಿದಂತಹ ಹಾಗೂ ಬಿದುರುನಾಡಿನ ಮುಖ್ಯಸ್ಥನಾದ ಮಾಬುಗೌಡನ ತಂಗಿ. ಮಾಬುಗೌಡನು

ತಗರಸಿ ಎಂಬುವವಳ ಮಗ ದೇಪಿಸಾವಣ (ಹೊಲೆಯ ಬಳಿಗೆ ಸೇರಿದ)ನ ಸೋದರ.

ಕಿರಿಯೋಜಣಶ್ರೇಷ್ಠಿಯು ತನ್ನ ತಂದೆ ಕಲ್ಲಪ್ಪಶ್ರೇಷ್ಠಿಯ ಆಜ್ಞೆಯ ಮೇರೆಗೆ ಕ್ಷೇಮಪುರ (ಗೇರುಸೊಪ್ಪೆ)ದಲ್ಲಿ ದ್ವಿತಲದ (ಎರಡು ಅಂತಸ್ತಿನ) ಜಿನಾಲಯವನ್ನು ನಿರ್ಮಿಸಿದನು. ಕೆಳಗಿನ ತಲದಲ್ಲಿ ಶ್ರೀನೇಮೀಶ್ವರನ ಪ್ರತಿಮೆಯನ್ನು ಮೇಲಿನ ತಲದಲ್ಲಿ ಶ್ರೀಗುಮ್ಮಟನಾಥನ ಪ್ರತಿಕೃತಿಯನ್ನು ಪ್ರತಿಷ್ಠಾಪಿಸಿದನು. ಈ ಚೈತ್ಯಾಲಯವು ಯೋಜಣಶ್ರೇಷ್ಠಿಯ 'ಕೀರ್ತಿಯ ಮೂರ್ತಿಯಂತೆ ಪುಣ್ಯದ ಪುಂಜದಂತೆ' ಶೋಭಾಯಮಾನವಾಗಿತ್ತು. ಇದರ ವರ್ಣನೆಯೂ ಶಾಸನದಲ್ಲಿ ಸೊಗಸಾಗಿ ಮೂಡಿಬಂದಿದೆ:

**ಹರಿವಂಶಾರಿಷ್ಟ ನೇಮಿಸ್ಥಿರನಿವಸನದಿಂದೂರ್ಜ್ಜಯಂತಾದ್ರಿಯಿಂ ಭಾ**<br>
**ಸ್ಕರರತ್ನಸ್ಪುರಿಶ್ಚ ರೂಪೋನ್ನತಿಯಿನನುದಿನಂ ರೋಹಣಾ ದ್ರೀಂ**<br>
**ದ್ರಮಂ ಭಾಸುರಸೌಧರ್ಮ್ಮಾಗಮರ್ಪಿ ಸ್ಥಿತಿಯಿನಮರಶೈಲೇಂ**<br>
**ದ್ರಮಂ ಸತ್ಪತಾಕೋತ್ಕರದಿಂ ನಾಟ್ಯಾಂಗಮಂ ಪೋಲ್ತೆಸೆಲುದು**<br>
**ಭುವನ ಸ್ವಾಮಿ ನೇಮೀಶವಾಸಂ**

ಕಿರಿಯೋಜಣಶ್ರೇಷ್ಠಿ ಮತ್ತು ವೀರಕ್ಕ ದಂಪತಿಗಳಿಗೆ ಮೂವರು ಮಕ್ಕಳು; ಅವರು ಕ್ರಮವಾಗಿ ಸಂಗರಸ, ಅನತಕ್ಕ, ಕಲ್ಲಪಾಂಗ ಎಂಬುವವರು. ಈ ಮೂವರಲ್ಲಿ ದ್ವಿತೀಯಳಾದ ಅನತಕ್ಕಳನ್ನು ಕಂಚಣಸೆಟ್ಟಿಗೆ ಕೊಟ್ಟು ವಿವಾಹವಾಡಲಾಗಿತ್ತು. ಈ ಕಂಚಣಸೆಟ್ಟಿಯು ಭಟ್ಕಳದ ಸೆಟ್ಟಿಕಾರರಲ್ಲಿ ಮುಖ್ಯನಾದ ಸಂಘಕೊಚ್ಚನೆಂಬುವವನ ವಂಶಕ್ಕೆ ಸೇರಿದವನು. ಇವನ ಮಡದಿ '..ಹೊಳೆಯಲ್ಲಿ' ಚೈತ್ಯಾಲಯವನ್ನು ಕಟ್ಟಿಸಿದ್ದಳು ಹಾಗೂ ದಾನಪೂಜಾದಿ ಸೇವೆಗಳಿಂದ ಪ್ರಸಿದ್ಧಳಾಗಿದ್ದಳು. ಈಕೆಯ ಹೆಸರು ಮಾಳಧಿಕಾರಿತಿ. ಸಂಘಕೊಚ್ಚ ಮತ್ತು ಮಾಳಧಿಕಾರಿತಿ ದಂಪತಿಗಳ ಮಗ ಪಾರಿಸಣಧಿಕಾರಿ; ಮಗಳು ಗುಂಮಟದೇವಿ, ಈ ಗುಂಮಟದೇವಿಯ ಮಗನೇ ಕಂಚಣಸೆಟ್ಟಿ. ಕಂಚಣಸೆಟ್ಟಿ ಮತ್ತು ಅನತಕ್ಕ ದಂಪತಿಗಳ ಪುತ್ರಿಯರೇ ದೇವರಸಿ ಮತ್ತು ಮಲ್ಲಿದೇವಿ. ದೇವರಸಿಯು 'ಕಾಯಜರಾಯನ ಮೋಹಸಹಾಯದ ಶಕ್ತಿಯವೋಲ್' ರೂಪವತಿಯಾಗಿದ್ದರೆ, ಮಲ್ಲಿದೇವಿಯು 'ಮದನಪತಾಕೆಯವೊಲ್' ಸುಂದರಿಯಾಗಿದ್ದಳು. ಈ ಇರ್ವರು ಸಹೋದರಿಯರು ಈ ಮುಂಚೆಯೇ ಹೇಳಿದ ಅಂಬ್ವಣಶ್ರೇಷ್ಠಿಯ ಮಡದಿಯರು.

ಇಷ್ಟನ್ನು ಒಟ್ಟಾರೆಯಾಗಿ ಗ್ರಹಿಸಿದರೆ, ಅಂಬ್ವಣಸೆಟ್ಟಿಯ ಪೂರ್ವಿಕರು ಹಾಗೂ ಆತನ ಮಡದಿಯರ ಪೂರ್ವಿಕರು ಪರಸ್ಪರ ಸಂಬಂಧಿಕರು ಹಾಗೂ ಎರಡೂ ಮನೆತನದವರು ಜೈನಧರ್ಮದ ಅನನ್ಯ ಪೋಷಕರೆಂಬುದು ತಿಳಿಯುತ್ತದೆ. ಈ ಎರಡು ಶ್ರೇಷ್ಠಿ ಮನೆತನಗಳಾಗಿದ್ದುವಲ್ಲದೆ ಪರಂಪರಾಗತವಾಗಿಯೋ ಅಥವಾ ಸ್ವಸಾಮರ್ಥ್ಯ, ಬುದ್ಧಿಬಲಗಳ ಕಾರಣವಾಗಿಯೋ 'ರಾಜಶ್ರೇಷ್ಠಿ' ಪದವಿಗಳಲ್ಲಿದ್ದರು. ಜೊತೆಗೆ ಈ ಮನೆತನಗಳೊಂದಿಗೆ ವೈವಾಹಿಕ ಸಂಬಂಧಗಳ್ನು ಬೆಳೆಸಿದ ನರಸಣ್ಣನಾಯಕನ ಕುಟುಂಬ, ತಗರಸಿಯ ಕುಟುಂಬ ಮತ್ತು ಸಂಘಕೊಚ್ಚನ ಕುಟುಂಬಗಳು ಸಹ ಇವರಂತೆಯೇ ಜಿನಧರ್ಮದನುಯಾಯಿಗಳಾಗಿದ್ದು, ಕೀರ್ತಿಗಳಿಸಿದ್ದುದು ವೇದ್ಯವಾಗುತ್ತದೆ. ಈ ಅಂಶಗಳಿಗೆ ಸುವರ್ಣಕಳಶಪ್ರಾಯವಾದ ಸಂಗತಿಯೆಂದರೆ, ನಾಗಮ್ಮ, ವೀರಕ್ಕ, ಅನತಕ್ಕ, ದೇವರಸಿ, ಮಲ್ಲಿದೇವಿಯರು ತಮ್ಮ ಕುಲಕ್ಕೆ ಅಕ್ಷರಶಃ ಶ್ರೇಷ್ಠ ವಧುಗಳಾಗಿ ತಮ್ಮ ಅಸ್ಮಿತೆಯನ್ನು ಸೂಕ್ಷ್ಮವಾಗಿ ಧ್ವನಿಪೂರ್ಣವಾಗಿರಿಸಿರುವುದು ಈ ಶಾಸನದಲ್ಲಿ ಹೊರಹೊಮ್ಮಿದೆ; ಇದು ಈ ಕುಟುಂಬಗಳಲ್ಲಿನ ಸ್ತ್ರೀಪ್ರಾಧಾನ್ಯತೆಯನ್ನು ಬಿಂಬಿಸುತ್ತದೆ.

ಇದೊಂದು ಶಾಸನದಲ್ಲಿ ಮಾತ್ರ ಈ ಮನೆತನದ ಇಷ್ಟೊಂದು ವಿಚಾರಗಳು ದಾಖಲಾಗಿದ್ದು, ಬೇರೆಲ್ಲೂ ಈ ಬಗ್ಗೆ ನನಗೆ ಸದ್ಯಕ್ಕೆ ಮಾಹಿತಿ ದೊರೆತಿಲ್ಲ. ಆದ್ದರಿಂದ ಬಹುಶಃ ಈ ಗೋವರ್ಧನಗಿರಿ ಅಥವಾ ಅದರ ಆಸುಪಾಸಿನಲ್ಲಿಯೇ ಈ ಮನೆತನವು ನೆಲೆಸಿದ್ದಿರಬಹುದು ಎಂದು ಭಾವಿಸುತ್ತೇನೆ.

**ಭಾಷಿಕ ವಿಚಾರ**

ಹಳಗನ್ನಡದಲ್ಲಿದ್ದ ವ್ಯಂಜನಾಂತ ಶಬ್ದಗಳು ಬಹುತೇಕ ಈ ಶಾಸನದಲ್ಲಿ ಸ್ವರಾಂತವಾಗಿದೆ. ಉದಾ: ಇತ್ತಲ್> ಇತ್ತಲು, ಇರ್ವರ್> ಇರ್ವರು, ಮಗಳ್> ಮಗಳು, ಆದರ್> ಆದರು ಇತ್ಯಾದಿ. ಅಂತೆಯೇ ಸ್ವರಭಕ್ತಿಯುಳ್ಳ ರೂಪಗಳು ಕಂಡುಬಂದಿವೆ. ಉದಾ: ಸೌಕರ್ಯ> ಸೌಕರಿರ್ಯ್ಯ. ಕೆಲವೆಡೆ ವಿಜಾತೀಯ ಸಂಯುಕ್ತಾಕ್ಷರಗಳು ದ್ವಿತ್ವ ರೂಪವನ್ನು ಪಡೆದಿವೆ. ಉದಾ: ಪ್ರವರ್ತನ> ಪ್ರವರ್ತ್ತನ, ಚತುರ್ವಿಧ> ಚತುರ್ವ್ವಿಧ, ಅವರ್ಗೆ> ಅವರ್ಗ್ಗೆ ಇತ್ಯಾದಿ. ಕೆಲವು ಪ್ರಯೋಗಗಳಲ್ಲಿ ಸಬಿಂದುಕಗಳು ಅಬಿಂದುಕಗಳಾಗಿದ್ದರೆ ಮತ್ತೆ ಕೆಲವು ಕಡೆಗಳಲ್ಲಿ ಸಬಿಂದುಕಗಳು ಬಳಕೆಯಾಗಿವೆ. ಉದಾ: ದಾಂಟಿಸುವವರ, ಅಂಣ್ಣನಾಗಲ್ವೇಡಿ ಇತ್ಯಾದಿ. ಹೀಗೆ ಭಾಷಿಕವಾಗಿಯೂ ಈ ಶಾಸನ ಮುಖ್ಯವಾಗಿದೆ. ನಡುಗನ್ನಡ ಕಾಲಘಟ್ಟದ ಭಾಷಾಲಕ್ಷಣಗಳಿಗೆ ಉತ್ತಮ ಉದಾಹರಣೆಯೂ ಆಗಿದೆ.

**ಸಾಹಿತ್ಯಿಕ ಸೊಬಗು**

'ಇದು ಸಿರಿಗೆ ತವರ್ಮ್ಮನೆಯೆನಿಸಿದ ನಗರೀಸೀಮೆಯಾದ ಮಾಗೋಡು' ಎಂಬಲ್ಲಿ ಉತ್ಪ್ರೇಕ್ಷಾಲಂಕಾರವು, 'ಕೀರ್ತಿಯ ಮೂರ್ತಿಯಂತೆ ಪುಣ್ಯದ ಪುಂಜದಂತೆ', 'ಅನಂಗನ ಜನಸಿರಿಯಂತೆ', 'ಮದನಪತಾಕೆಯವೊಲ್' ಎಂಬಿವುಗಳಲ್ಲಿ ಉಪಮಾಲಂಕಾರವೂ, 'ಪುಲ್ಲಶರಾಕಾರ'ಎಂಬಲ್ಲಿ ರೂಪಕಾಲಂಕಾರಗಳು ಶಾಸನದಲ್ಲಿ ಅದ್ಭುತವಾಗಿ ಮೇಳೈಸಿವೆ. 'ಕಾಮನಿಭಂ', 'ಜನಪದಪಲ್ಲವಕಮನೀಯ ಭಕ್ತಿಲತಿಕಾ ಭೋಗಂ' ಇತ್ಯಾದಿ ವರ್ಣನೆಗಳು ಅಸದೃಶ್ಯವೂ ಅಪೂರ್ವವೂ ಎನಿಸುತ್ತವೆ. ಅಲ್ಲಲ್ಲಿನ ವರ್ಣನೆಗಳಲ್ಲಿ ಶೃಂಗಾರರಸವು, ಶಾಂತರಸವು ಸೊಗಸಾಗಿ ಆಸ್ವಾದ್ಯಕ್ಕೆ ನಿಲುಕುತ್ತದೆ. ಔಚಿತ್ಯಪೂರ್ಣವಾದ ಪದಪ್ರಯೋಗಗಳು ಮನಮುಟ್ಟುವಂತಿವೆ. ಒಟ್ಟು ಶಾಸನದಲ್ಲಿ ಜಿನಮಾರ್ಗಾಚಾರಿಗೆ ಶಾಂತಿ, ಸಮೃದ್ಧಿ, ಕೀರ್ತಿಗಳು ಶಾಶ್ವತವಾಗಿ ನೆಲೆಯಾಗುತ್ತವೆ ಎಂಬ ಅಂಶ ಧ್ವನಿತವಾಗಿದೆ.

**ಛಂಧೋಬಂಧಗಳು**

ಒಟ್ಟು 117 ಸಾಲುಗಳ ಈ ಶಾಸನದಲ್ಲಿ ಶಾರ್ದೂಲವಿಕ್ರೀಡಿತ ವೃತ್ತ, ಮಾಲಿನಿವೃತ್ತ, ಇಂದ್ರವಜ್ರವೃತ್ತ, ಮಹಾಸ್ರಗ್ಧರೆ, ಉತ್ಪಲಮಾಲೆಗಳು ತಲಾ ಒಂದೊಂದು ಶುದ್ಧಲಕ್ಷಣ ಸಮನ್ವಿತವಾಗಿ ಪ್ರಯೋಗವಾಗಿವೆ. ಮತ್ತೇಭವಿಕ್ರೀಡಿತ ವೃತ್ತಗಳು ಮೂರು ಬಳಕೆಯಾಗಿದ್ದು, ಅವುಗಳಲ್ಲಿ ಒಂದು ತುಂಬ ಅಶುದ್ಧವಾಗಿದೆ. ಎಂಟು ಕಂದಪದ್ಯಗಳು ಶುದ್ಧವಾಗಿ ಪ್ರಯೋಗವಾಗಿದೆ. ಕೆಲವೆಡೆಗಳಲ್ಲಿ ಬಂದಿರುವ ಗದ್ಯವು ಉಚಿತಪೂರ್ಣವೆನಿಸುತ್ತದೆ. ಕೆಲವೇ ಕೆಲವು ಅಪಲಿಖಿತಗಳನ್ನು ಹೊರತು ಪಡಿಸಿದರೆ ಒಟ್ಟು ಶಾಸನದ ಬಂಧ ಗಟ್ಟಿಯಾಗಿದೆ ಎನ್ನಬಹುದು. ಶಾಸನದ ಸಂಪುಟಕಾರರು ಸೂಚಿಸದೇ ಇದ್ದರೂ ಸಹ ಒಂದು ಮಹಾಸ್ರಗ್ಧರಾವೃತ್ತ ಹಾಗೂ ಒಂದು ಕಂದಪದ್ಯ ಪ್ರಕೃತ ಶಾಸನವಲ್ಲಡಗಿರುವುದು ನನಗೆ ಗೋಚರವಾಗಿದೆ. ಅವು ಹೀಗಿವೆ:

| | | | | | | | |
|---|---|---|---|---|---|---|---|
| ಸ | ತ | ತ | ನ | ಸ | ರ | ರ | |
| UU– | ––U | ––U | UUU | UU– | –U– | –U– | – |
| ಹರಿವಂ | ಶಾರಿಷ್ಟ | ನೇಮಿಸ್ಥಿ | ರನಿವ | ಸನದಂ | ದೂರ್ಜ್ಜಯಂ | ತಾದ್ರಿಯಿಂ | ಭಾ |

| | | | | | | | |
|---|---|---|---|---|---|---|---|
| ಸ | | ತ | ನ | ಸ | ರ | ರ | |
| UU– | –U–U | ––U | UUU | UU– | –U– | –U– | – |
| ಸ್ವರರ | ತ್ನಸ್ಪರುಶ್ಯ | ಕೂಷೋಂನ್ನ | ತಿಯಿನ | ನುದನಂ | ರೋಹಣಾ | ದ್ರೀಂದ್ರಮಂ | ಭಾ |

| | | | | | | | |
|---|---|---|---|---|---|---|---|
| ಸ | ತ | ತ | ನ | ಸ | ರ | ರ | |
| UU– | ––U | ––U | UUU | UU– | –U– | –U– | – |
| ಸುರಸೌ | ಧರ್ಮ್ಮಾಗ | ಮರ್ಷಿಸ್ಥಿ | ತಿಯಿನ | ಮರಶ್ಯೆ | ಲೇಂದ್ರಮಂ | ಸತ್ಪತಾ | ಕೋ |

| | | | | | | | |
|---|---|---|---|---|---|---|---|
| ಸ | ತ | ತ | ನ | ಸ | ರ | ರ | |
| UU– | ––U | ––U | UUU | UU– | –U– | –U– | – |
| ತ್ಕರದಿಂ | ನಾಟ್ಯಾಂಗ | ಮಂ ಪೋಲ್ತೆ | ಸಲುದು | ಭುವನ | ಸ್ವಾಮಿ ನೇ | ಮೀಶವಾ | ಸಂ |

ಈ ಪದ್ಯವು ಮಹಾಸ್ರಗ್ಧರಾ ವೃತ್ತದಲ್ಲಿ ಪ್ರಯೋಗವಾಗಿದೆ. ಇಲ್ಲಿ ಪ್ರತಿಪಾದದಲ್ಲಿಯೂ ನಿಯಮದಂತೆ 'ಸತತನಸರರ' ಎಂಬ ಅಕ್ಷರಗಣಗಳು ಬಂದು ಕೊನೆಯಲ್ಲಿ ಒಂದು ಗುರು ಉಳಿದಿದೆ. ಆದರೆ 2ನೇ ಪಾದದ 2ನೇ ಗಣದಲ್ಲಿ ಶಬ್ದದೋಷವಿದ್ದು ಇದನ್ನು

| |
|---|
| ––U |
| ತ್ನಸ್ಪರ್ಶ್ಯ |

ಎಂದು ತಿದ್ದಿಕೊಂಡರೆ ಈ ಛಂಧೋಬಂಧವು ಪೂರ್ಣವಾಗಿ ಶುದ್ಧಲಕ್ಷಣಾನ್ವಿತವಾಗುತ್ತದೆ.

| | | | |
|---|---|---|---|
| 4 | 4 | 4 | |
| –UU | U–U | UUUU | = 12 ಮಾತ್ರೆ |
| ಆಕೆಯ | ನುಜಾತೆ | ಮಹನಪ | |

| | | | | | |
|---|---|---|---|---|---|
| 4 | 4 | 4 | 4 | 4 | |
| –UU | –UU | UUUU | UU– | UU– | = 20 ಮಾತ್ರೆ |
| ತಾಕೆಯ | ವ್ವೊಲ್ ಜನ | ದಮನದ | ಕೊನೆಯೊಳ್ | ನಿಮಿರ್ದ್ದ<br>(ಶಿಥಿಲದ್ವಿತ್ವ) | |


| | | | |
|---|---|---|---|
| 4 | 4 | 4 | |
| –UU | U–U | –́ – | = 12 ಮಾತ್ರೆ |
| ಲೋಕೆ ಸು | ತೆ ಪುಟ್ಟಿ | ದಳ್ ಸೀ | |

| | | | |
|---|---|---|---|
| –UU – | U–U | –́ – | UU– |
| ಲೋನ್ನತೆ ಮ | ಲ್ಲಿದೇವಿ | ಯೆಂಬೀ | ಪೆಸರಿಂ |

ಈ ಕಂದ ಪದ್ಯದ ನಾಲ್ಕನೆಯ ಪಾದದಲ್ಲಿನ ಮೊದಲೆರಡು ಗಣಗಳಲ್ಲಿ ದೋಷವಿದೆ. ಉಳಿದಂತೆ ಇದು ಲಕ್ಷಣಶುದ್ಧವಾಗಿದೆ.

ಈ ಶಾಸನದ ಕಾಲ (ಕ್ರಿ.ಶ. 15–16ನೆಯ ಶತಮಾನವೆಂದು ಈಗಾಗಲೇ ಹೇಳಿದೆ. ಸಾಮಾನ್ಯವಾಗಿ ಕನ್ನಡ ಕಾವ್ಯಗಳಲ್ಲಿ ಈ ಕಾಲಘಟ್ಟದಲ್ಲಿ ಅಲ್ಲಲ್ಲಿ ಪ್ರಯೋಗಗೊಳ್ಳುತ್ತಿದ್ದ ಕಂದ–ವೃತ್ತಗಳು ಈ ಶಾಸನವೊಂದರಲ್ಲಿಯೇ ಇಷ್ಟೊಂದು ಪ್ರಯೋಗವಾಗಿರುವುದು ವಿಶೇಷವಾಗಿದೆ.

## ವಂಶಾವಳಿ


1. ಕಾಮಯ್ಯದಂಡನಾಯಕ
ರಾಮಣ್ಣಹೆಗ್ಗಡೆ + ರಾಮಕ್ಕ (ಸತಿ)
(ಹಿರಿಯ ಸತಿ) ತಂಗಮ/ತಂಗಣ + ಯೋಜಣಶ್ರೇಷ್ಠಿ + ರಾಮಕ್ಕ (ಕಿರಿಯ ಸತಿ)
ರಾಮಣಶ್ರೇಷ್ಠಿ + (ಸತಿ) ರಾಮಕ್ಕಾಂಬಾ
ಕಲ್ಲಸೆಟ್ಟಿ
2. ನರಸಣ್ಣನಾಯಕನ ಕುಟುಂಬ
ನೇಮಣಸೆಟ್ಟಿ + ಮಾರಕ್ಕ
ನಾಗಮ್ಮ + ಸಾತಮ್ಮ + ನಾಗಪಾಂಕ/ನಾಗಪ್ಪ ಶ್ರೇಷ್ಠಿ
(ಕಿರಿಯ ಸತಿ) (ಹಿರಿಯ ಸತಿ)
ಅಂಬ್ಬಣಸೆಟ್ಟಿ + ಇಬ್ಬರು ಮಡದಿಯರು ದೇವರಸಿ
ಮಲ್ಲಿಶೆಟ್ಟಿ
ಪದ್ಮರಸಿ
2ನೇ ದೇವರಸಿ
ತಮ್ಮಣಾಂಕ
ತೋಟಿಯಣ್ಣಸೆಟ್ಟಿ
ಕಲ್ಲಪ್ಪಶ್ರೇಷ್ಠಿ
ಯೋಜಣಶ್ರೇಷ್ಠಿ + ವೀರಕ್ಕ (ಸತಿ)
ಸಂಗರಸ
ಅನತಕ್ಕ + (ಪತಿ) ಕಂಚಣಸೆಟ್ಟಿ (ಇಬ್ಬರು ಮತ್ರಿಯರು)
ಕಲ್ಲಪಾಂಗ
ಮಲ್ಲಿದೇವಿ / ಮಲ್ಲಮ್ಮ
3. ತಗರಸಿಯ ಕುಟುಂಬ
ಮಾಬುಗೌಡ
ದೇವಿಸಾವಣ
4. ಸಂಘಕೊಟ್ಟ + ಮಾಳಧಿಕಾರಿಯ ಕುಟುಂಬ
ಪಾರಿಸಣಧಿಕಾರಿ
ಗುಮಟದೇವ

# ಕಾನಿಕಾರನಹಳ್ಳಿಯ ನಾಡಪ್ರಭುಗಳು

**ಎಸ್.ಹೆಚ್. ಗೋವರ್ಧನ**
ಸಂಶೋಧನ ವಿದ್ಯಾರ್ಥಿ
ಡಾ.ಡಿ.ವಿ. ಗುಂಡಪ್ಪ ಕನ್ನಡ
ಅಧ್ಯಯನ ಕೇಂದ್ರ
ತುಮಕೂರು ವಿಶ್ವವಿದ್ಯಾನಿಲಯ
ತುಮಕೂರು
ಮೊ: 9535762464
sunkamgovardhan@gmail.com

ಹಾಸನ ಜಿಲ್ಲೆಯ ಭಾಗದಲ್ಲಿ ಆಳ್ವಿಕೆ ನಡೆಸಿದ ಸ್ಥಳೀಯ ಅರಸುಮನೆತನಗಳಲ್ಲಿ ಅತ್ಯಂತ ನಿರ್ಲಕ್ಷಿತರಾದ ಅರಸರೆಂದರೆ ಕಾನಿಕಾರನಹಳ್ಳಿಯ ನಾಡಪ್ರಭುಗಳು. ಇವರು ಇಂದಿನ ಹಾಸನ ಜಿಲ್ಲೆಯ ತಾಲ್ಲೂಕು ಕೇಂದ್ರವಾದ ಚೆನ್ನರಾಯ ಪಟ್ಟಣವನ್ನು ಕೇಂದ್ರವಾಗಿಟ್ಟುಕೊಂಡು ಅದರ ಸುತ್ತಮುತ್ತಲಿನ ಪ್ರದೇಶವನ್ನು 17ನೆಯ ಶತಮಾನದಲ್ಲಿ ಆಳಿದವರು. ಮೈಸೂರು ಅರಸರಿಗೆ ಅತ್ಯಂತ ನಿಷ್ಠರಾಗಿದ್ದುಕೊಂಡು ಅವರ ಅಭ್ಯುದಯವೇ ತಮ್ಮ ಏಳಿಗೆಯೆಂದು ಬಗೆದು ಅನೇಕ ರಾಜಕಾರಣ, ಧರ್ಮಕಾರಣಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡವರು. ಚನ್ನರಾಯಪಟ್ಟಣದ ಸಮಗ್ರ ಅಭಿವೃದ್ಧಿಗೆ ಇವರು ಹಾಕಿದ ಭದ್ರಬುನಾದಿಯೇ ಮುಖ್ಯವಾದ ಕಾರಣವೆಂದರೆ ತಪ್ಪಾಗುವುದಿಲ್ಲ. ಮೈಸೂರು ಅರಸರೊಂದಿಗೆ ಕೂಡಿಕೊಂಡು ಇವರು ನಡೆಸಿದ ಹಲವಾರು ಯುದ್ಧಗಳು ಅತ್ಯಂತ ಫಲಪ್ರದವಾದುದಾಗಿದ್ದವು.

ಕಾನಿಕಾರನಹಳ್ಳಿಯ ನಾಡಪ್ರಭುಗಳನ್ನು ಉಲ್ಲೇಖಿಸುವ ಚಾರಿತ್ರಿಕ ದಾಖಲೆಗಳು ಅತ್ಯಲ್ಪವಾದುದುರಿಂದ ಇವರ ಬಗ್ಗೆ ಹೆಚ್ಚಿನ ಸಂಶೋಧನೆಗಳು ನಡೆದಿಲ್ಲ. ಬಿ. ಎಲ್. ರೈಸ್ ಅವರು ಎಪಿಗ್ರಾಫಿಯಾ ಕರ್ನಾಟಿಕಾದ ಮುನ್ನುಡಿಯಲ್ಲಿ ' ಮೈಸೂರು ಅರಸರ ಬಗ್ಗೆ

ಬರೆಯುತ್ತಾ ಇವರ ಬಗ್ಗೆಯೂ ಪ್ರಾಸಂಗಿಕವಾಗಿ ಸ್ವಲ್ಪ ದಾಖಲಿಸಿದ್ದಾರೆ. ಮೈಸೂರು ವಿಶ್ವವಿದ್ಯಾನಿಲಯದ ಮೂಲಕ ಪರಿಷ್ಕೃತಗೊಂಡು ಪ್ರಕಟವಾದ ಎಪಿಗ್ರಾಫಿಯಾ ಕರ್ನಾಟಿಕಾದ ಸಂಪುಟದ ಪೀಠಿಕೆಯಲ್ಲಿ ಕಾನಕಾನಹಳ್ಳಿ ಪ್ರಭುಗಳು ಎಂಬ ಉಪಶೀರ್ಷಿಕೆಯಲ್ಲಿ ಸ್ವಲ್ಪ ಬರೆಯಲಾಗಿದೆ. [2] ಇವರ ಬಗ್ಗೆ ಸ್ವಲ್ಪ ಹೆಚ್ಚಿನ ಮಾಹಿತಿಯನ್ನು ಕೊಟ್ಟ ಮೊದಲಿಗರೆಂದರೆ ಹಿರಿಯರಾದ ಟಿ.ವಿ. ವೆಂಕಟಾಚಲ ಶಾಸ್ತ್ರಿಗಳವರು. ಇವರು ತಮ್ಮ ಪುಸ್ತಕದಲ್ಲಿ [3] ಇವರ ಬಗ್ಗೆ ಮಾಹಿತಿಯನ್ನು ಒದಗಿಸಿದ್ದಾರೆ. ಇವುಗಳನ್ನು ಹೊರತು ಪಡಿಸಿದರೆ ನನ್ನ ಗಮನಕ್ಕೆ ಬಂದಂತೆ ಪೂರ್ಣಪ್ರಮಾಣದಲ್ಲಿ ಮೊಟ್ಟಮೊದಲ ಬಾರಿಗೆ ಇಲ್ಲಿ ಅವರ ಬಗ್ಗೆ ಈ ಸಂಶೋಧನ ಲೇಖನವು ಪ್ರಕಟವಾಗುತ್ತಿದೆ.

ಈ ಲೇಖನವು ಕಾನಿಕಾರನಹಳ್ಳಿಯ ನಾಡಪ್ರಭುಗಳನ್ನು ಮುನ್ನಲೆಗೆ ತರುವ ಗುರುತರವಾದ ಉದ್ದೇಶವನ್ನು ಹೊಂದಿದೆ. ದೊರೆತಿರುವ ಅಲ್ಪ ಮಾಹಿತಿಯನ್ನು ಆಧರಿಸಿ ಆದಷ್ಟೂ ವಿವರವಾಗಿ ಇವರ ಚರಿತ್ರೆಯನ್ನು ಕಟ್ಟಿಕೊಡಲು ಇಲ್ಲಿ ಪ್ರಯತ್ನಿಸಲಾಗಿದೆ. ಈ ವಂಶದ ದೊರೆಗಳನ್ನು ಉಲ್ಲೇಖಿಸುವ ಚಾರಿತ್ರಿಕ ದಾಖಲೆಗಳೆಂದರೆ ಶಾಸನಗಳೇ. ಇವರ ಕಾಲದ ಯಾವ ತಾಮ್ರ ಶಾಸನಗಳೂ ಇದುವರೆಗೂ ಲಭ್ಯವಾಗಿಲ್ಲ. ತಾಮ್ರಶಾಸನಗಳ ಬಗ್ಗೆ ಮುಖ್ಯವಾಗಿ ಪ್ರಸ್ತಾಪಿಸಲು ಕಾರಣ ಅವುಗಳಲ್ಲಿ ವಂಶಾವಳಿಗಳನ್ನು ಅವರ ಇನ್ನಿತರ ಬಿರುದುಗಳನ್ನು ಸಮಗ್ರವಾಗಿ ದಾಖಲಿಸಲಾಗಿರುತ್ತದೆ. ಇವರ ಇತಿಹಾಸಕ್ಕೆ ಪೂರಕವಾಗುವಂತಹ ಕೇವಲ ಹತ್ತು ಹನ್ನೆರಡು ಶಿಲಾಶಾಸನಗಳು ಮಾತ್ರ ಲಭ್ಯವಿವೆ. ಅದರಲ್ಲೂ ದುರಂತವೆಂದರೆ ಕೇವಲ 1642ರಿಂದ ಆರಂಭಿಸಿ 1670ರವರೆಗಿನ ಕೇವಲ ಮೂರು ದಶಕಗಳ ಕಾಲದ ಇವರ ಶಾಸನಗಳು ಇವರ ವಂಶೀಯರ ಬಗೆಗೆ ವಿಶೇಷವಾದ ಕೆಲವು ಮಾಹಿತಿಗಳನ್ನು ಮಾತ್ರ ಒದಗಿಸುತ್ತವೆ. ಇವುಗಳೊಂದಿಗೆ ಮೈಸೂರು ಸಂಸ್ಥಾನದ ಇತಿಹಾಸದ ಪುಟಗಳು, ಬಿಜಾಪುರ ಸುಲ್ತಾನರ ಇತಿಹಾಸ ಹಾಗೂ ನೆರೆಯ ಪಾಳೆಯಪಟ್ಟುಗಳ ಇತಿಹಾಸವನ್ನು ಆಧಾರವಾಗಿ ಇಟ್ಟುಕೊಂಡು ಈ ನಾಡಪ್ರಭುಗಳ ಇತಿಹಾಸವನ್ನು ಕಟ್ಟಿಕೊಡಲು ಇಲ್ಲಿ ಪ್ರಯತ್ನಿಸಲಾಗಿದೆ. ಇವುಗಳ ಮೂಲಕ ಈ ಸೀಮೆಯಲ್ಲಿ ಕಾನಿಕಾರನಹಳ್ಳಿಯ ನಾಡಪ್ರಭುಗಳಿಂದ ತಮ್ಮ ಸಮಕಾಲೀನ ಯುಗಕ್ಕೆ ಸಲ್ಲಿಸಲ್ಪಟ್ಟ ಕಾಣಿಕೆಯೇನು ಹಾಗೂ ಅವರ ಕಾಲದಲ್ಲಿ ರೂಪುಗೊಂಡ ರಾಜಕೀಯ ಸಂಗತಿಗಳೊಡನೆ ಧಾರ್ಮಿಕ ಮತ್ತು ಸಾಮಾಜಿಕ ಇತಿಹಾಸದ ಮೇಲೆ ಬೀರಲಾದ ಪ್ರಭಾವವಾದರೂ ಏನು ಎಂಬುದನ್ನು ಕುರಿತು ಈ ವಂಶೀಯರ ಬಗ್ಗೆ ಹೊಸಬೆಳಕು ಚೆಲ್ಲಿದಂತಾಗುತ್ತದೆ.

### ಹಿನ್ನೆಲೆ

ಚನ್ನರಾಯಪಟ್ಟಣದ ಹಳೆಯ ಹೆಸರು ಕೊಳತೂರು. ಹೊಯ್ಸಳರ ಕಾಲಘಟ್ಟದಲ್ಲಿ ರೂಪುಗೊಂಡ ಈ ಗ್ರಾಮವನ್ನು ಕ್ರಿ.ಶ. 1186ರಲ್ಲಿಯೇ ಕೊಳತೂರು ಅಗ್ರಹಾರವನ್ನಾಗಿ ಪರಿವರ್ತಿಸಲಾಯಿತು. ಈ ಕೊಳತೂರು ಅಗ್ರಹಾರಕ್ಕೆ ಅಮೃತನಾಥಪುರ ಎಂಬ ಹೆಸರೂ ಇತ್ತು. ಹೊಯ್ಸಳರ ಕಾಲಘಟ್ಟದಲ್ಲಿ ಈ ಕೊಳತೂರು ರಾಜಧಾನಿಯ ಕೇಂದ್ರವಾಗಿರದೆ ಕಬ್ಬುಹುನಾಡಿನಲ್ಲಿ ಅಂತರ್ಗತವಾಗಿದ್ದ ಸಾಮಾನ್ಯವಾದ ಗ್ರಾಮವೊಂದಾಗಿತ್ತು. ಈ ಊರಿನ ಮೂಲಕ ಪ್ರಮುಖ ಹೆದ್ದಾರಿಯೊಂದು ಹಾದುಹೋಗುತ್ತಿದ್ದ ಕಾರಣವಾಗಿ ಇದೊಂದು ಪ್ರಮುಖ ವ್ಯಾಪಾರಿ ಕೇಂದ್ರವಾಗಿ ನಂತರದ ಕಾಲದಲ್ಲಿ ಪ್ರಸಿದ್ಧಿಯಾಯಿತು. ದಿಂಡಗೂರಿನ

ಕ್ರಿ.ಶ. 1220ರ ಶಾಸನವು 'ಕೊಳತೂರಿನ ಹೆದ್ದಾರಿಯನ್ನು' ಪ್ರಸ್ತಾಪಿಸುತ್ತದೆ. ಈ ಕೊಳತೂರಿನ ಶಾಂತಿಸಮುದ್ರ ಕೆರೆಯಿಂದಾಗಿ ಈ ಪ್ರದೇಶದ ಕೃಷಿ ಚಟುವಟಿಕೆಗಳೂ ಗರಿಗೆದರಿದಂತಾಗಿದ್ದು ಇಲ್ಲಿನ ಶಾಸನಗಳಿಂದ ತಿಳಿದು ಬರುತ್ತದೆ. ಹಾಗಾಗಿ ಈ ಊರನ್ನು ತಮ್ಮ ವಶಕ್ಕೆ ಪಡೆಯಲು ಹಲವಾರು ಪಾಳೆಯಪಟ್ಟುಗಳೇ ಏಕೆ ಪ್ರಸಿದ್ಧ ಆಳರಸರೂ ಹಂಬಲಿಸುತ್ತಿದ್ದರು.

ರಾಜ ಒಡೆಯರಿಂದ ಪುನರುತ್ಥಾನಗೊಂಡ ಮೈಸೂರು ಸಂಸ್ಥಾನವು ಸಂಪದ್ಭರಿತವಾದ ಪ್ರದೇಶಗಳನ್ನು ತಮ್ಮ ಆಡಳಿತಕ್ಕೆ ಸೇರಿಸಿಕೊಳ್ಳಲು ಆರಂಭಿಸಿ ತಮ್ಮ ಅಸ್ತಿತ್ವವನ್ನು ಸ್ಥಾಪಿಸಿಕೊಳ್ಳಬೇಕಾಯಿತು. ಆಗ ಅಸ್ತಿತ್ವದಲ್ಲಿದ್ದ ಪ್ರಬಲರನ್ನು ಸೋಲಿಸುವುದರ ಮೂಲಕ ಇವರು ಪ್ರವರ್ಧಮಾನರಾಗಬೇಕಾಗಿತ್ತು. ಆಗ ಮೈಸೂರು ಸಂಸ್ಥಾನದ ವಿರೋಧಿಗಳಾಗಿದ್ದ ಹೊಳೆನರಸೀಪುರದ ಪಾಳೆಯಗಾರರನ್ನು ಸದೆ ಬಡಿಯುವುದು ಇವರಿಗೆ ಮೊದಲ ಆದ್ಯತೆಯಾಗಿತ್ತು. ಹಾಗಾಗಿ ಕ್ರಿ.ಶ. 1584ರಲ್ಲಿ ರಾಜ ಒಡೆಯರು[1578–1617] ಹೊಳೆನರಸೀಪುರ ಪಾಳೆಯುಗಾರರಿಗೆ ಸೇರಿದ ಅಕ್ಕಿಹೆಬ್ಬಾಳುವನ್ನು ವಶಪಡಿಸಿಕೊಳ್ಳುವುದರ ಮೂಲಕ ಅವರ ಪ್ರಮುಖ ವಿರೋಧಿಗಳಾಗಿ ರೂಪುಗೊಂಡರು.

ಕ್ರಿ.ಶ. 1600ರಲ್ಲಿ ಹೊಳೆನರಸೀಪುರ ಪಾಳೆಯಗಾರನಾಗಿದ್ದ ಲಕ್ಷ್ಮಪ್ಪ ನಾಯಕನು ಪುಟ್ಟಗಿರಿಜ ಹೆಬ್ಬಾರುವಿನಿಂದ ಕೊಳತೂರು ಅಗ್ರಹಾರವನ್ನು ಕೊಂಡುಕೊಂಡು ತನ್ನ ಮಗನಾದ ಚನ್ನರಾಯನ ಹೆಸರಿನಲ್ಲಿ ಚನ್ನರಾಯಪಟ್ಟಣ ಎಂದು ಪುನರ್ನಾಮಕರಣವನ್ನು ಮಾಡಿ, ಚನ್ನರಾಯಸ್ವಾಮಿ ದೇವಾಲಯವನ್ನು ನಿರ್ಮಿಸಿ ತನ್ನ ಮಗನಾದ ಚನ್ನರಾಯನಿಗೆ ಜಾಗೀರಾಗಿ ನೀಡಿದನು. ಆಗಿನಿಂದ ಕೊಳತೂರು ಎಂದು ಕರೆಯಲಾಗುತ್ತಿದ್ದ ಗ್ರಾಮವು ಚನ್ನರಾಯಪಟ್ಟಣವೆಂದು ಹೆಸರುವಾಸಿಯಾಯಿತು. ಮತ್ತು ಅದು ಹೊಳೆನರಸೀಪುರದ ಪಾಳೆಯಗಾರರ ವಶವಾಯಿತು.

ಕ್ರಿ.ಶ. 1631ರಲ್ಲಿ ಮೈಸೂರು ದೊರೆ 5ನೇ ಚಾಮರಾಜ ಒಡೆಯರು[1617–1637], ಹೊಳೇನರಸೀಪುರದ ಪಾಳೆಯಗಾರರನ್ನು ಸದೆಬಡಿದು ಅವರಿಂದ ಕಪ್ಪ–ಕಾಣಿಕೆಗಳನ್ನು ಪಡೆದುಕೊಂಡರು. ಆದರೆ ಹೊಳೆನರಸೀಪುರದ ಪಾಳೆಯಗಾರರು ಮತ್ತೆ ತಲೆಎತ್ತಿ ಮೈಸೂರಿನ ವಿರೋಧವನ್ನು ಕಟ್ಟಿಕೊಂಡರು. ಕ್ರಿ.ಶ. 1637ರಲ್ಲಿ ಹೊಳೇನರಸೀಪುರದ ಪಾಳೇಗಾರರನ್ನು ಸೋಲಿಸಿ ಅವರ ವಶದಲ್ಲಿದ್ದ ಚನ್ನರಾಯಪಟ್ಟಣವನ್ನು 5ನೇ ಚಾಮರಾಜ ಒಡೆಯರು ಮೈಸೂರು ಸಂಸ್ಥಾನಕ್ಕೆ ಸೇರಿಸಿಕೊಂಡರು. ಇದರಿಂದ ಕುಪಿತರಾದ ಹೊಳೆನರಸೀಪುರದ ಪಾಳೆಯಗಾರರು ಇಕ್ಕೇರಿಯ ಅರಸರು ಹಾಗೂ ಬಿಜಾಪುರದ ಸುಲ್ತಾನರ ಮೊರೆಹೊಕ್ಕು ಮತ್ತೆ ಪ್ರವರ್ಧಮಾನರಾಗಿ ಬೆಳೆಯತೊಡಗಿದರು. ಇದೊಂದು ರೀತಿಯಲ್ಲಿ ಮೈಸೂರು ಸಂಸ್ಥಾನಕ್ಕೆ ದೊಡ್ಡ ತಲೆನೋವಾಗಿ ಪರಿಣಮಿಸಿತು.

ಕ್ರಿ.ಶ. 1644ರಲ್ಲಿ ಹೊಳೆನರಸೀಪುರದ ಪಾಳೇಯಗಾರರು ಮೈಸೂರು ಅರಸರಿಗೆ ಅವಿಧೇಯರಾಗಿ ನಡೆದುಕೊಂಡು ಕಪ್ಪ–ಕಾಣಿಕೆಗಳನ್ನು ನೀಡದೇ ಸೊಕ್ಕಿನಿಂದ ಬೀಗುತ್ತಿದ್ದರು. ಆಗ ಮೈಸೂರು ದೊರೆಯಾದ ಕಂಠೀರವ ನರಸರಾಜ ಒಡೆಯರು[ ಕ್ರಿ.ಶ. 1638–1659] ತಮ್ಮ ದಳವಾಯಿಯಾದ ನಂಜರಾಜನ ಮೂಲಕ ನರಸಿಂಹ ನಾಯಕನನ್ನು ಸೋಲಿಸಿ ಕ್ರಿ.ಶ. 1644ರ ಏಪ್ರಿಲ್‌ನಲ್ಲಿ ಹೊಳೆನರಸೀಪುರವನ್ನು ಧ್ವಂಸ ಮಾಡುವ ಮೂಲಕ ತಮ್ಮನ್ನು ತಾವು ಉಳಿಸಿಕೊಂಡರು. ಇದಾದ ನಂತರ ಮೈಸೂರು ಸಂಸ್ಥಾನಕ್ಕೆ

ಕಂಟಕ ಪ್ರಾಯನಾಗಿದ್ದ ಚಂಗಾಳ್ವ ದೊರೆ ವೀರರಾಜಯ್ಯನು[ಕ್ರಿ.ಶ. 1619–1644] ಗರ್ವದಿಂದ ತಿರುಗಿಬಿದ್ದನು. ಆಗ ಹೊಳೆನರಸೀಪುರವನ್ನು ಧ್ವಂಸ ಮಾಡಿದ ಯುದ್ಧತಂಡವು ಅಲ್ಲಿಂದ ಮುನ್ನುಗ್ಗಿ ಸತತ ಪರಿಶ್ರಮದಿಂದ ಪಿರಿಯಾಪಟ್ಟಣವನ್ನು ಮತ್ತಿ ಅದನ್ನು ಧ್ವಂಸಗೊಳಿಸುವುದರ ಜೊತೆಗೆ ಚಂಗಾಳ್ವನನ್ನೂ ಕೊನೆಗಾಣಿಸಲಾಯಿತು. ಈ ಹೋರಾಟಗಳಲ್ಲಿ ಮೈಸೂರಿನ ವಿರೋಧಿಗಳಾಗಿದ್ದ ಇಬ್ಬರೂ ಅರಸರಿಗೆ ಸೋಲುಂಟಾಯಿತು. ಹೊಳೆನರಸೀಪುರದ ಪಾಳೇಯಗಾರರಿಗೆ ಬಿಜಾಪುರದ ಸುಲ್ತಾನರು ನೆರವನ್ನು ನೀಡಿದ್ದರೆ, ಪಿರಿಯಾಪಟ್ಟಣದವರಿಗೆ ಇಕ್ಕೇರಿಯ ಅರಸರು ಸಹಾಯ ಮಾಡಿದ್ದರೂ ಅವರಿಗೇ ಸೋಲಾಯಿತು. ಸೋಜಿಗದ ಸಂಗತಿಯೆಂದರೆ ಹೊಳೆನರಸೀಪುರದ ಯುದ್ಧದಲ್ಲಿ ಬಿಜಾಪುರದ 8 ಸಾವಿರ ಕುದುರೆ, ಸೈನಿಕರು ಬೆಂಬಲವಾಗಿ ನಿಂತಿದ್ದರು. ಇಷ್ಟಾದರೂ ಮೈಸೂರು ಒಡೆಯರಿಗೆ ಅಪ್ರತಿಮವಾದ ವಿಜಯವು ಪ್ರಾಪ್ತವಾಯಿತು. ಇಲ್ಲಿಂದ ಮುಂದೆ ಅಂತೂ ಇಂತೂ ತೆವಳಿಕೊಂಡು ಸಾಗಿದ ಹೊಳೆನರಸೀಪುರದ ಪಾಳೆಯಗಾರರ ಸಂತತಿಯವರ ಆಳ್ವಿಕೆಯು ಕ್ರಿ.ಶ. 1667ರಲ್ಲಿ ದೇವರಾಜ ಒಡೆಯರಿಂದ [1659–1673] ಕೊನೆಗೊಂಡಿತು.

## ಮೈಸೂರು ಒಡೆಯರಿಗೆ ದೊಡ್ಡಯ್ಯನ ಸಹಾಯ

ಇಷ್ಟೆಲ್ಲಾ ಹಿನ್ನೆಲೆಯನ್ನು ಇಲ್ಲಿ ಉಲ್ಲೇಖಿಸಲು ಒಂದು ಪ್ರಮುಖವಾದ ಕಾರಣವಿದೆ. ಈ ಹೊಳೆನರಸೀಪುರ ಹಾಗೂ ಪಿರಿಯಾಪಟ್ಟಣ ಕಾಳಗಗಳಲ್ಲಿ ಮೈಸೂರು ಸಂಸ್ಥಾನದ ಪರ ನಿಂತು ಹೋರಾಡಿದವರು ಕಡಿಮೆ ಮಂದಿ. ಈ ಎರಡೂ ಯುದ್ಧಗಳನ್ನು ಗೆದ್ದದ್ದು ದಳವಾಯಿ ನಂಜರಾಜನ ದೊಡ್ಡ ಸಾಹಸವೇ ಸರಿ. ಅದರಲ್ಲಿ ಎರಡು ಮಾತಿಲ್ಲ. ಆದರೆ ಅವನೊಂದಿಗೆ ಸಹಾಯಕರಾಗಿ ನಿಂತು ಹೋರಾಟ ನಡೆಸಿದ ಕಾರ್ಯಪಡೆಯ ಸ್ಥಾನವೂ ದೊಡ್ಡದೇ ಆಗಿದೆ. ಅಂತಹ ಸಣ್ಣ–ಪುಟ್ಟ ಅರಸರುಗಳಲ್ಲಿ ಬಹಳ ಪ್ರಮುಖನಾದವನೆಂದರೆ ದೊಡ್ಡಯ್ಯ ಎಂಬ ಅಪ್ರತಿಮನಾದ ಹೋರಾಟಗಾರ. ಈ ದೊಡ್ಡಯ್ಯ ಬೇರೆ ಯಾರೂ ಆಗಿರದೆ ಕಾನಿಕಾರನಹಳ್ಳಿಯ ನಾಡಪ್ರಭುವಾಗಿದ್ದನು. ಇವನನ್ನು ಗೋವಿಂದ ವೈದ್ಯನು ತನ್ನ 'ಕಂಠೀರವ ನರಸರಾಜ ವಿಜಯ' [4] ಎಂಬ ಐತಿಹಾಸಿಕ ಕಾವ್ಯದಲ್ಲಿ ನೆನಪಿಸಿಕೊಂಡಿದ್ದಾನೆ. ಈ ಕಾವ್ಯದ ರಚನೆಯಾಗಿದ್ದು ಕ್ರಿ.ಶ. 1648ರಲ್ಲಿ ಎಂಬುದನ್ನೂ ಕೂಡ ಗಮನಿಸಬೇಕು. ಅಂದರೆ ಈ ಯುದ್ಧಗಳು ಆಗಿ ಕೇವಲ ನಾಲ್ಕು ವರ್ಷಗಳಾಗಿದ್ದವು ಎಂದರೆ ಇದರ ಅಧಿಕೃತತೆಯನ್ನು ನಾವು ಮನಗಾಣಬೇಕಾಗಿದೆ.

ಪಿರಿಯಾಪಟ್ಟಣದ ಯುದ್ಧದಲ್ಲಿ ಪಾಲುಗೊಂಡ ಈ ದೊಡ್ಡಯ್ಯನನ್ನು ಗೋವಿಂದ ವೈದ್ಯನು ಅಭಿಮಾನದಿಂದ ದೊಡ್ಡೇಂದ್ರನೆಂದು ಕರೆದಿದ್ದಾನೆ. ಹಾಗೂ ಅವನನ್ನು ಈ ರೀತಿ ಕೊಂಡಾಡಿದ್ದಾನೆ.

**ವರ ಚನ್ನರಾಯಪಟ್ಟಣದ ದೊಡ್ಡೇಂದ್ರನು**
**ತುರುಗೆರೆಯಾಳ್ವ ಹಂಪೇಂದ್ರ**
**ಪಿರಿದೆತ್ತಿಸಿದ ಬಲು ಮೇರುವೆ ಮೆರೆದುದು**
**ಸುರಚಿರ ನೀಲಾದ್ರಿಯಂತೆ** [5]

ಎಂದು ದಾಖಲಿಸುತ್ತದೆ. ಹಾಗೆಯೇ ಈತ ಬಿಜಾಪುರದ ಸುಲ್ತಾನರೊಡನೆ ಹೋರಾಡಿ ತುರುಕರ ಭಟರ ಸೇನೆಯನ್ನು ಭಂಗಿಸಿ ಅವರ ನಾಸಾಚ್ಛೇದ ಮಾಡಿದ ಸಂಗತಿಯನ್ನು [6] ಅಂದರೆ ಅವರ ಮೂಗು ಮುರಿದ ವಿಷಯವನ್ನು ಕೂಡ ಈ ಕಾವ್ಯವು ವಿಶೇಷವಾಗಿ ಪ್ರಸ್ತಾಪಿಸುತ್ತದೆ. ಹಾಗೂ ಇದೇ ಕಾವ್ಯದಲ್ಲಿ ಬಿಜಾಪುರದ ಆದಿಲ್‌ಷಾಹಿಗಳು ಶ್ರೀರಂಗಪಟ್ಟಣದ ಕಡೆ ನುಗ್ಗಿ ಬರುತ್ತಿದ್ದಾಗ ಕಂಠೀರವ ನರಸರಾಜ ಒಡೆಯರು ಒಂದು ಮಂತ್ರಾಲೋಚನೆಯ ಸಭೆಯನ್ನು ನಡೆಸಿದ ಬಗ್ಗೆ ಉಲ್ಲೇಖವಿದೆ. ಇದಕ್ಕೆ ನಾಡಿನ ಮೂಲೆಮೂಲೆಗಳಿಂದ ಹಲವಾರು ಮೈಸೂರು ಸಂಸ್ಥಾನಕ್ಕೆ ನಿಷ್ಠರಾಗಿದ್ದ ಸೇನಾನಿಗಳು ಬಂದಿದ್ದರು. ಆಗ ಚೆನ್ನರಾಯಪಟ್ಟಣದ ಆಳ್ವಿಕೆಯನ್ನು ಮಾಡುತ್ತಿದ್ದ ದೊಡ್ಡಯ್ಯನು "ಕದಳಿಯ ವನವ ಕಾಡಾನೆ ಹೊಕ್ಕಂದದೆ ಸಡೆದೆಬ್ಬಿಸಿ ಖಳಬಲವ ಮುದವ ಬೀರುವೆನು" [7] ಎಂದು ವಾಗ್ದಾದ ನೀಡುವ ಸಂಗತಿಯು ವಿಶೇಷವಾಗಿದೆ.

ಈ ಯುದ್ಧಗಳ ಪರಿಣಾಮದಿಂದ ದೊಡ್ಡಯ್ಯನ ಪರಾಕ್ರಮವು ಕಂಠೀರವ ನರಸರಾಜ ಒಡೆಯರಿಗೆ ಮನದಟ್ಟಾಯಿತು. ತಮಗೆ ಸಹಾಯ ಮಾಡಿದ ಹಲವು ಮನ್ನೆಯರನ್ನು ತಮಗೆ ಅಧೀನವಾಗಿ ಆಡಳಿತವನ್ನು ನಡೆಸಲು ಅನುವು ಮಾಡಿಕೊಡುವುದರ ಮೂಲಕ ಅವರನ್ನು ವಲಯಾಧಿಕಾರಿಗಳನ್ನಾಗಿ ಮಾಡಿದ ಸಂಗತಿಯು ನಮಗೆ ತಿಳಿದು ಬರುತ್ತದೆ ಇದೇ ವಿಷಯವನ್ನು ಚನ್ನರಾಯಪಟ್ಟಣದ ಶಾಸನವೊಂದೂ ಸಹ ತಿಳಿಸುತ್ತದೆ. ಈ ಶಾಸನವು ಕಂಠೀರವ ನರಸರಾಜ ಒಡೆಯರು ತಮಗೆ ನಿಷ್ಠೆಯನ್ನು ತೋರಿಸಿದ ದೊಡ್ಡಯ್ಯನಿಗೆ ಚನ್ನರಾಯಪಟ್ಟಣದ ಆಳ್ವಿಕೆಯನ್ನು ನೀಡಲಾದ ಸಂಗತಿಯನ್ನು ತಿಳಿಸುತ್ತದೆ.

ಇಲ್ಲಿ ನಮಗೆ ಮುಖ್ಯವಾದ ಪ್ರಶ್ನೆಯೊಂದು ಏಳುತ್ತದೆ. ಅದೇನೆಂದರೆ ದೊಡ್ಡಯ್ಯನು ಈಗಾಗಲೇ ಚನ್ನರಾಯಪಟ್ಟಣದಲ್ಲಿ ಆಡಳಿತವನ್ನು ನಡೆಸುತ್ತಿದ್ದನು ಎಂದು ಕಂಠೀರವ ನರಸರಾಜ ವಿಜಯದ ಒಕ್ಕಣೆಯಿಂದಲೇ ನಮಗೆ ತಿಳಿಯುತ್ತದೆ. ಹಾಗಾದರೆ ಮೇಲೆ ತಿಳಿಸಿದ ಎರಡು ಯುದ್ಧಗಳ ನಂತರ ಅಂದರೆ 1644ರ ನಂತರ ಚನ್ನರಾಯಪಟ್ಟಣದ ಆಡಳಿತವನ್ನು ಒಡೆಯರು ದೊಡ್ಡಯ್ಯನಿಗೆ ವಹಿಸಿಕೊಟ್ಟರೇ ಅಥವಾ ದೊಡ್ಡಯ್ಯನು ಚನ್ನರಾಯಪಟ್ಟಣದಲ್ಲಿ ಸಾಮಾನ್ಯ ಅಧಿಕಾರಿಯಂತೆ ಕಾರ್ಯನಿರ್ವಹಿಸುತ್ತಿದ್ದು 1644ರ ನಂತರ ಈತನಿಗೆ ಚನ್ನರಾಯಪಟ್ಟಣದ ಸೀಮೆಯ ಆಡಳಿತವನ್ನು ನೀಡಿದರೇ ಎಂಬುದನ್ನು ಗಮನಿಸಬೇಕಾಗಿದೆ. ಅದನ್ನು ಮುಂದೆ ಚರ್ಚಿಸಲಾಗುತ್ತದೆ.

## ಬಿಜಾಪುರ ಸೈನ್ಯ ಮತ್ತು ಚನ್ನರಾಯಪಟ್ಟಣ

ತಮ್ಮತಮ್ಮಲ್ಲೇ ಕಿತ್ತಾಡುತ್ತಿದ್ದ ಹಿಂದೂ ಅರಸರುಗಳನ್ನು ಮುಗಿಸಲು ಬಿಜಾಪುರದ ಆದಿಲ್‌ಷಾಹಿ ಅರಸರುಗಳಿಗೆ ಹೆಚ್ಚಿನ ಕಷ್ಟವೇನೂ ಆಗಲಿಲ್ಲ. ಹಾಗೆ ನೋಡಿದರೆ ಅವರಿಗೆ ಸುಲಭವಾದ ದಾರಿಗಳು ತಿಳಿದದ್ದು ಕೂಡ ಈ ಸಣ್ಣಪುಟ್ಟ ಪಾಳೆಯಗಾರರಿಂದಲೇ ಎಂಬುದು ಇವರ ವೈಫಲ್ಯಕ್ಕೆ ಹಿಡಿದ ಕನ್ನಡಿಯಾಗಿದೆ. ಬಸವಾಪಟ್ಟಣದ ಕೆಂಗನಾಯಕನು ಇಕ್ಕೇರಿಯ ವೀರಭದ್ರನಾಯಕನನ್ನು ಸೋಲಿಸುವ ದೆಸೆಯಿಂದ ಬಿಜಾಪುರದ ಅರಸರಿಗೆ ದಕ್ಷಿಣ ಕರ್ನಾಟಕದ ರುಚಿ ತೋರಿಸಿದ. ಅದನ್ನು ಅನುಭವಿಸಿದ ಈ ಅರಸರು ನಂತರ ದಕ್ಷಿಣ ಕರ್ನಾಟಕವನ್ನು ತೊರೆಯಲು ಮನಸಿಲ್ಲದೆ ಹಲವು ಆಕ್ರಮಣಗಳನ್ನು ಕೈಗೊಂಡರು. [8 & 9]

ಬಿಜಾಪುರದ ಆದಿಲ್‌ಶಾಹಿ ಅರಸರಲ್ಲಿ ಪ್ರಖ್ಯಾತನಾದ ದೊರೆ ಎರಡನೇ ಇಬ್ರಾಹಿಂನ ಮಗನಾದ ಮಹಮದ್ ಆದಿಲ್ ಶಾಹ್[ಕ್ರಿ.ಶ. 1627–1656] ದಕ್ಷಿಣ ಕರ್ನಾಟಕದಲ್ಲಿ ತನ್ನ ರಾಜ್ಯವನ್ನು ವಿಸ್ತರಿಸಿದ. ಇದಕ್ಕೆ ಸಹಕರಿಸಿದವರೆಂದರೆ ಅಪ್ರತಿಮ ಸೇನಾನಿಗಳಾಗಿದ್ದ ರಣದುಲ್ಲಾಖಾನ್ ಮತ್ತು ಷಹಾಜಿ.

ಕ್ರಿ.ಶ. 1637–38ರಲ್ಲಿ ಆರಂಭವಾದ ಇವರ ಮೊದಲ ದಂಡಯಾತ್ರೆಯು ಕ್ರಿ.ಶ. 1639ರಲ್ಲಿ ಆಗಾಗಲೇ ಅತ್ಯಂತ ಸಂಪದ್ಭರಿತವಾಗಿದ್ದ ಬೆಂಗಳೂರನ್ನು ವಶಪಡಿಸಿಕೊಳ್ಳುವುದರ ಮೂಲಕ ಮೊದಲು ಸಫಲವಾಗಿದ್ದು ಇವರ ಉತ್ಸಾಹವನ್ನು ಇಮ್ಮಡಿಸಿತು. ಮೈಸೂರಿನ ದೊರೆ ಕಂಠೀರವ ನರಸರಾಜನಿಗೆ ಸೇರಿದ ಶ್ರೀರಂಗಪಟ್ಟಣಕ್ಕೆ 1639ರ ಜನವರಿಯಲ್ಲಿ ಮುತ್ತಿಗೆ ಹಾಕಿದ ಈ ಸೈನ್ಯವು ಅದೇ ಜನವರಿ 31 ರಂದು ಒಪ್ಪಂದವೊಂದನ್ನು ಮಾಡಿಕೊಂಡಿತು. ಇದಾದ ನಂತರವೂ ಕಾವೇರಿಯಿಂದ ಭರಪೂರಿತವಾಗಿದ್ದ ಈ ಪ್ರದೇಶವನ್ನು ವಶಪಡಿಸಿಕೊಳ್ಳಲು ಅವರು ಹಾತೊರೆಯುತ್ತಿದ್ದರು. ಇದರ ಪರಿಣಾಮವಾಗಿ 1643ರಲ್ಲಿ ಎರಡನೇ ದಂಡಯಾತ್ರೆಯನ್ನು ಕೈಗೊಳ್ಳಲಾಯಿತು. ಅದರ ತರುವಾಯ ಮುಸ್ತಾಫಾಖಾನ್‌ನ ನೇತೃತ್ವದಲ್ಲಿ 1646ರಲ್ಲಿ ಮೂರನೇ ದಂಡಯಾತ್ರೆ ಅದರ ನಂತರ ಮತ್ತೆ ಅವನದೇ ನೇತೃತ್ವದಲ್ಲಿ 1648ರಲ್ಲಿ ನಾಲ್ಕನೇ ದಂಡಯಾತ್ರೆಗಳು ಜರುಗಿದವು. ಈ ಮೂರನೇ ಹಾಗೂ ನಾಲ್ಕನೇ ದಂಡಯಾತ್ರೆಗಳಲ್ಲಿ ಬಿಜಾಪುರದ ಸೈನ್ಯವು ಚನ್ನರಾಯಪಟ್ಟಣವನ್ನು ತಮ್ಮ ವಶಕ್ಕೆ ತೆಗೆದುಕೊಂಡವು. ಅದನ್ನು ಹಾಳು ಮಾಡಿದವು. ಅಲ್ಲಿದ್ದನ್ನೆಲ್ಲಾ ಲೂಟಿ ಮಾಡಿದವು. 1648ರ ನಾಲ್ಕನೆಯ ದಂಡಯಾತ್ರೆಯನ್ನು ಎದುರಿಸಿದ ಕಂಠೀರವ ನರಸರಾಜ ಒಡೆಯರು ಬಿಜಾಪುರದೊಡನೆ ಒಂದು ಒಪ್ಪಂದವೊಂದನ್ನು ಮಾಡಿಕೊಳ್ಳಬೇಕಾಯಿತು. ಆ ಪ್ರಕಾರ ಕಾನಿಕಾರನಹಳ್ಳಿ ನಾಡಪ್ರಭುಗಳ ಆಡಳಿತಕ್ಕೆ ಸೇರಿದ ಚನ್ನರಾಯಪಟ್ಟಣದ ಆಳ್ವಿಕೆಯು ಬಿಜಾಪುರದ ಸುಲ್ತಾನರ ಪಾಲಾಗದೇ ಮೈಸೂರು ಅರಸರ ಪಾಲಿಗೆ ದಕ್ಕುವಂತಾಯಿತು. ಮೈಸೂರಿನಿಂದ ಚನ್ನರಾಯಪಟ್ಟಣದವರೆಗಿನ ರಾಜ್ಯ ಮೈಸೂರು ಅರಸರ ಪಾಲಾಯಿತು. ಈ ಯುದ್ಧದಲ್ಲಿಯೂ ಮೈಸೂರ ಅರಸರ ಪರವಾಗಿ ಯುದ್ಧಮಾಡಿ ಚನ್ನರಾಯಪಟ್ಟಣವನ್ನು ಉಳಿಸಿಕೊಳ್ಳಲು ಸಾಧ್ಯವಾದದ್ದೇ ಈ ಕಾನಿಕಾರನಹಳ್ಳಿಯ ನಾಡಪ್ರಭುಗಳ ಸಹಕಾರದಿಂದ ಎಂಬ ಸಂಗತಿಯನ್ನು ನಾವು ಗಮನಿಸಬೇಕು.

## ಕಾನಿಕಾರನಹಳ್ಳಿಯ ನಾಡಪ್ರಭುಗಳ ಮೂಲ

ಕಾನಿಕಾರನಹಳ್ಳಿಯ ನಾಡಪ್ರಭುಗಳ ಮೂಲ ಯಾವುದು? ಎಂಬ ಪ್ರಶ್ನೆಯೇಳುತ್ತದೆ. ಇವರನ್ನು ಶಾಸನಗಳು "ಚನ್ನಪಟ್ಟಣದ ಸ್ಥಳದ ತುಂಗಣಿನಾಡ ಸೀಮೆಯ ಅಧಿಪತಿಗಳಾದ ಕಾನಿಕಾರನಹಳ್ಳಿಯ ನಾಡಪ್ರಭುಗಳು" ಎಂದು ಕರೆಯುತ್ತವೆ. ಶಾಸನಗಳಿಂದ ನಮಗೆ ಅತ್ಯಂತ ಸ್ಪಷ್ಟವಾಗಿ ತಿಳಿದುಬರುವ ಸಂಗತಿಯೆಂದರೆ ಈ ಚನ್ನರಾಯಪಟ್ಟಣದ ಸೀಮೆಯನ್ನು ಮೈಸೂರು ಅರಸರು ಇವರಿಗೆ ಆಳ್ವಿಕೆಯನ್ನು ನಡೆಸಲು ನೀಡಿದರು. ಬಹುಶಃ ಇವರು ಬೇರೆಕಡೆಯಿಂದ ಇಲ್ಲಿಗೆ ವಲಸೆ ಬಂದಂತೆ ತೋರುತ್ತದೆ. ಅವರು ಬಂದಿದ್ದಾದರೂ ಎಲ್ಲಿಂದ?

ಕಾನಿಕಾರನಹಳ್ಳಿಯ ನಾಡಪ್ರಭುಗಳಿಗೆ ಸೇರಿದ ಎಲ್ಲಾ ಶಾಸನಗಳು ಕೂಡ ಚನ್ನರಾಯಪಟ್ಟಣ ತಾಲ್ಲೂಕಿನಲ್ಲಿಯೇ ಇದೆ. ಅಷ್ಟೇ ಏಕೆ ಚನ್ನರಾಯಪಟ್ಟಣದಲ್ಲಿಯೇ ಹಲವು ಶಾಸನಗಳಿದ್ದು ಇಲ್ಲಿಗೆ ಹತ್ತಿರವಿರುವ ಕೆಲವು ಗ್ರಾಮಗಳಲ್ಲಿ ಮಾತ್ರ ಈ ವಂಶೀಯರ ಶಾಸನಗಳು ದಾಖಲಾಗಿವೆ. ಆದರೆ ಈ ಪರಿಸರದಲ್ಲಿ ಎಲ್ಲಿಯೂ ಕಾನಿಕಾರನಹಳ್ಳಿ ಎಂಬ ಗ್ರಾಮವಾಗಲೀ, ತುಂಗಣಿ ಎಂಬ ಗ್ರಾಮವಾಗಲೀ ಇಲ್ಲ. ಹಾಗಾದರೆ ಇವರ ಮೂಲವಾದರೂ ಎಲ್ಲಿ ಎಂಬ ಪ್ರಶ್ನೆಯು ಏಳುತ್ತದೆ. ಇದಕ್ಕೆ ಉತ್ತರವಾಗಿ ಇದುವರೆಗೂ ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿದ್ದು ಪ್ರಸ್ತುತ ರಾಮನಗರ ಜಿಲ್ಲೆಯಲ್ಲಿರುವ ಕನಕಪುರವೇ ಇವರ ಮೂಲಸ್ಥಳವೆಂಬುದನ್ನು ನಾವು ಗಮನಿಸಬೇಕು. ಕನಕಪುರದ ಹಿಂದಿನ ಹೆಸರು ಕಾನಕಾನಹಳ್ಳಿಯೇ ಆಗಿತ್ತು. ಬೆಂಗಳೂರು ಜಿಲ್ಲೆಯ ಶಾಸನ ಸಂಪುಟದಲ್ಲೂ ಈ ತಾಲ್ಲೂಕಿನ ಶಾಸನಗಳನ್ನು ಈ ಹೆಸರಿನಿಂದಲೇ ಕರೆದಿರುವುದು ಎಲ್ಲರಿಗೂ ತಿಳಿದಿರುವ ಸಂಗತಿಯೇ ಆಗಿದೆ. ಈ ಕಾನಕಾನಹಳ್ಳಿಯು ಕ್ರಿ.ಶ. 13ನೆಯ ಶತಮಾನದಿಂದ 16ನೆಯ ಶತಮಾನದವರೆಗೆ ಕಾಣಿಕಾರನಹಳ್ಳಿ ಎಂಬ ಹೆಸರಿನಿಂದ ಪ್ರಸಿದ್ಧವಾಗಿದ್ದ ಸಂಗತಿಯನ್ನು ಬೆಂಗಳೂರು ಜಿಲ್ಲೆಯ ಕನಕಪುರ ತಾಲ್ಲೂಕಿನ ಶಾಸನಗಳಿಂದ ತಿಳಿಯಬಹುದಾಗಿದೆ. ಇನ್ನೂ ಮುಖ್ಯವಾದ ಸಂಗತಿಯೆಂದರೆ ಈ ಕನಕಪುರಕ್ಕೆ ಸನಿಹದಲ್ಲಿಯೇ ತುಂಗಣಿ ಎಂಬ ಗ್ರಾಮವಿದ್ದು ಈ ಗ್ರಾಮವು ತುಂಗಣಿ ನಾಡು ಎಂಬ ಆಡಳಿತ ಘಟಕದ ಕೇಂದ್ರವಾಗಿತ್ತು.

ಕನಕಪುರದ ಬಳಿಯ ತುಂಗಣಿ ನಾಡಿನ ಆಳ್ವಿಕೆಯನ್ನು ಮಾಡುತ್ತಾ ಇದ್ದ ಈ ವಂಶೀಯರು ಮೈಸೂರು ಅರಸರ ಕೃಪೆಗೆ ಪಾತ್ರರಾಗಿ ಅಲ್ಲಿಂದ ಚನ್ನರಾಯಪಟ್ಟಣದಲ್ಲಿ ತಮ್ಮ ಅಧಿಕಾರವನ್ನು ಮುಂದುವರೆಸಿದಾಗ ತಮ್ಮ ಮೂಲನೆಲೆಯ ಹೆಸರನ್ನೂ ಹಾಗೆಯೇ ಉಳಿಸಿಕೊಂಡಿದ್ದು ವಿಶೇಷವಾದ ಸಂಗತಿಯಾಗಿದೆ. ಕನಕಪುರದ ಅಂದಿನ ಹೆಸರು ಕಾಣಿಕಾರನಹಳ್ಳಿಯಾಗಿತ್ತು. ಅದು ತುಂಗಣಿನಾಡಿಗೆ ಒಳಪಟ್ಟ ಗ್ರಾಮವಾಗಿತ್ತು. ಇದು ಅಂದಿಗೆ ಚನ್ನಪಟ್ಟಣದ ಸೀಮೆಯಲ್ಲಿ ಅಂತರ್ಗತವಾಗಿತ್ತು. ಈ ಸೀಮೆಯ ಕೇಂದ್ರವಾದ ಚನ್ನಪಟ್ಟಣವು ಇಂದಿಗೆ ಬೆಂಗಳೂರು–ಮೈಸೂರು ಹೆದ್ದಾರಿಯಲ್ಲಿರುವ ರಾಮನಗರ ಜಿಲ್ಲೆಯ ತಾಲ್ಲೂಕಿನ ಕೇಂದ್ರವಾದ ಚೆನ್ನಪಟ್ಟಣವೇ ಆಗಿದೆ.

ಹಾಗಾಗಿ ಕಾನಿಕಾರನಹಳ್ಳಿಯ ನಾಡಪ್ರಭುಗಳು ಮೂಲತಃ ಕನಕಪುರಕ್ಕೆ ಸೇರಿದವರಾಗಿದ್ದು ಇಲ್ಲಿ ಆಡಳಿತವನ್ನು ಕೂಡ ನಡೆಸುತ್ತಿದ್ದಿರಬೇಕು. ಇಲ್ಲಿನ ಇವರ ಆಡಳಿತವು ಮೈಸೂರು ಒಡೆಯರ ಗಮನಕ್ಕೆ ಬಂದಿತ್ತು. ಮೈಸೂರು ಸೈನ್ಯದೊಂದಿಗೆ ಇವರು ಸಂಬಂಧವನ್ನು ಹೊಂದಿದ್ದಿರಬೇಕು. ಮೈಸೂರು ಒಡೆಯನಾದ ಕಂಠೀರವ ನರಸರಾಜ ಒಡೆಯರು ಇವರ ಹಿರಿಮೆಯನ್ನು ಚೆನ್ನಾಗಿ ಬಲ್ಲವರಾದ್ದರಿಂದ ಚನ್ನರಾಯಪಟ್ಟಣದ ಮೂಲಕ ಆಗಬಹುದಾದ ದಾಳಿಗಳನ್ನು ತಡೆಯಲೆಂದು ಅವರಿಗೆ ಚನ್ನರಾಯಪಟ್ಟಣದ ಆಡಳಿತವನ್ನು ವಹಿಸಿಕೊಟ್ಟಂತೆ ತೋರುತ್ತದೆ. ಆ ಮುಂದೆಯೂ ಈ ವಂಶೀಯರು ತಮ್ಮ ಕುಲನಾಮದಂತೆ ತಮ್ಮ ಮೂಲನೆಲೆಯನ್ನು ಉಳಿಸಿಕೊಂಡೇ ತಮ್ಮೆಲ್ಲಾ ಶಾಸನಗಳಲ್ಲೂ ತಮ್ಮನ್ನು ತಾವು "ಚನ್ನಪಟ್ಟಣದ ಸ್ಥಳದ ತುಂಗಣಿನಾಡ ಸೀಮೆಯ ಅಧಿಪತಿಗಳಾದ ಕಾನಿಕಾರನಹಳ್ಳಿಯ ನಾಡಪ್ರಭುಗಳು" ಎಂದು ಕರೆದುಕೊಂಡರು. ಹಾಗೂ ತಮ್ಮ ಮೂಲನೆಲೆಯೊಂದಿಗೆ ತಮ್ಮ ಸಂಬಂಧವನ್ನು ಉಳಿಸಿಕೊಂಡಂತೆ ತೋರುತ್ತದೆ.

## ಕಾನಿಕಾರನಹಳ್ಳಿಯ ನಾಡಪ್ರಭುಗಳು

ಲಭ್ಯವಿರುವ ಶಾಸನಗಳ ಹಿನ್ನೆಲೆಯಲ್ಲಿ ಹೇಳುವುದಾದರೆ ಕಾನಿಕಾರನಹಳ್ಳಿಯ ನಾಡಪ್ರಭುಗಳು 17ನೆಯ ಶತಮಾನದ ಮಧ್ಯಭಾಗದಲ್ಲಿ ಹಾಸನ ಜಿಲ್ಲೆಯ ಚನ್ನರಾಯಪಟ್ಟಣದ ಸುತ್ತಮುತ್ತಲಿನ ಪ್ರದೇಶಗಳನ್ನು ಆಳಿದ ಪ್ರಮುಖ ಸ್ಥಳೀಯ ಅರಸರಾಗಿದ್ದಾರೆ. ನಮಗೆ ಇದುವರೆಗೂ ಸಿಕ್ಕಿರುವ ಶಾಸನಗಳ ಆಧಾರದಿಂದ ಅವರ ಶಾಸನಗಳ ಅವಧಿ ಕೇವಲ ಮೂರು ದಶಕಗಳಷ್ಟು ಮಾತ್ರ. ಇವರನ್ನು ಉಲ್ಲೇಖಿಸುವ ಮೊದಲ ಶಾಸನದ ಕಾಲ ಕ್ರಿ.ಶ. 1642 ಆಗಿದ್ದರೆ [10] ಇವರ ಕೊನೆಯ ಶಾಸನದ ಕಾಲ ಕ್ರಿ.ಶ. 1670 ಆಗಿದೆ. [11]

ಮೈಸೂರು ಒಡೆಯರುಗಳಲ್ಲಿ ಕಂಠೀರವ ನರಸರಾಜ ಒಡೆಯರು[ಕ್ರಿ.ಶ. 1638–1659], ದೊಡ್ಡದೇವರಾಜ ಒಡೆಯರುಗಳ[1659–1673] ಕಾಲದಲ್ಲಿ ವಿಶೇಷವಾಗಿ ಪ್ರವರ್ಧಮಾನರಾಗಿದ್ದ ಕಾನಿಕಾರನಹಳ್ಳಿಯ ನಾಡಪ್ರಭುಗಳು ನಂತರದ ಕಾಲಘಟ್ಟದಲ್ಲಿ ಇತಿಹಾಸದ ಪುಟಗಳಲ್ಲಿ ಸರಿಯಾದ ದಾಖಲೆಗಳಿಲ್ಲದೇ ಕಣ್ಮರೆಯಾದಂತೆ ತೋರುತ್ತಾರೆ. ಶಾಸನಗಳು ಚನ್ನರಾಯಪಟ್ಟಣದ ಸೀಮೆಯ ಆಡಳಿತವನ್ನು ಕಾನಿಕಾರನಹಳ್ಳಿಯ ನಾಡಪ್ರಭುವಾದ ದೊಡ್ಡಯ್ಯನಿಗೆ ಮೈಸೂರು ದೊರೆ ಕಂಠೀರವ ನರಸರಾಜ ಒಡೆಯರೇ ನೀಡಿದರು [12] ಎಂದು ತಿಳಿಸುವುದರಿಂದ ದೊಡ್ಡಯ್ಯನಿಗಿಂತ ಹಿಂದಿನವರು ಇಲ್ಲಿಂದ ಆಳ್ವಿಕೆ ನಡೆಸಿಲ್ಲದಿರುವುದು ನಮಗೆ ಖಾತ್ರಿಯಾಗುವುದರಿಂದ ಅವರ ಬಗ್ಗೆ ನಾವು ತಲೆ ಕೆಡಿಸಿಕೊಳ್ಳಬೇಕಾಗಿಲ್ಲವೆಂದು ಹೇಳಬೇಕಾಗುತ್ತದೆ.

ಚನ್ನರಾಯಪಟ್ಟಣದ ಗದ್ದೆ ರಾಮೇಶ್ವರ ದೇವಾಲಯದಲ್ಲಿರುವ ಶಾಸನವು ಕಾನಿಕಾರನಹಳ್ಳಿಯ ನಾಡಪ್ರಭುಗಳು ಬೆಳ್ಳಿ ಕುಲೋದ್ಭವರೆಂಬ ಮಾಹಿತಿಯನ್ನು ಒದಗಿಸಿದರೆ ಅದೇ ಚನ್ನರಾಯಪಟ್ಟಣದ ಒಳಗೇರಮ್ಮ ದೇಗುಲದ ಮುಂದೆ ಇರುವ ಶಾಸನವು ಇವರ ಕುಲದೇವರು ಕತ್ತಿವೀರಭದ್ರೇಶ್ವರ, ಭದ್ರಕಾಳಮ್ಮ ಮತ್ತು ಮಾಬಳೇಶ್ವರ ಸ್ವಾಮಿ ಎಂಬ ವಿಷಯವನ್ನು ತಿಳಿಸುತ್ತದೆ. ಇಲ್ಲಿ ಉಲ್ಲೇಖಿತವಾಗಿರುವ ಮಾಬಳೇಶ್ವರ ಎಂಬುದು ಮಹಾಬಲೇಶ್ವರನ ಗ್ರಾಮ್ಯ ರೂಪ ಎಂಬುದನ್ನು ಗಮನಿಸಬೇಕಾಗಿದೆ. ಇವರ ಶಾಸನಗಳಲ್ಲಿ ದೊಡ್ಡಯ್ಯನ ತಂದೆಯಾದ ಚನ್ನವೀರಯ್ಯನ ಪ್ರಸ್ತಾಪವು ಬಂದಿರುವಾಗ ಆತನು ಗೌಡಕುಲಕ್ಕೆ ಸೇರಿದವನು ಎಂಬ ಮಾಹಿತಿಯನ್ವಯ ಇವರು ಗೌಡಕುಲಕ್ಕೆ ಸೇರಿದವರು ಎಂಬ ಮಾಹಿತಿಯನ್ನು ಗಮನಿಸಬೇಕಾಗಿದೆ. ಇವರ ಬಹುತೇಕ ಎಲ್ಲಾ ಶಾಸನಗಳು ಶೈವ ದೇವಾಲಯಗಳಲ್ಲಿಯೇ ಇರುವುದರಿಂದಲೂ ಹಾಗೂ ಇವರೆಲ್ಲ ಶಾಸನಗಳಲ್ಲಿಯೂ ಶೈವ ಪರವಾದ ಸಂಗತಿಗಳೇ ಇರುವುದರಿಂದಲೂ, ಶಾಸನಗಳಲ್ಲಿ ಶೈವಪರವಾದ ಶ್ಲೋಕಗಳೇ ಬಂದಿರುವುದರಿಂದಲೂ ಇವರನ್ನು ಶೈವ ಸಂಪ್ರದಾಯದ ಅನುಯಾಯಿಗಳೆಂದು ತಿಳಿಯಬಹುದಾಗಿದೆ. ಚನ್ನರಾಯಪಟ್ಟಣದಲ್ಲಿರುವ ಚಂದ್ರಮೌಳೀಶ್ವರ ದೇವಾಲಯವು ಇವರ ಕಾಲದಲ್ಲಿ ರೂಪುಗೊಂಡ ಅತ್ಯಂತ ವಿಶೇಷವಾದ ದೇವಾಲಯವಾಗಿದೆ. ಸಾಮಾನ್ಯವಾಗಿ ಬಹುತೇಕ ಶಿವಾಲಯಗಳಲ್ಲಿ ಗರ್ಭಗುಡಿಗಳಲ್ಲಿ ಶಿವಲಿಂಗಗಳನ್ನು ಪ್ರತಿಷ್ಠಾಪಿಸಿ ಪೂಜಿಸುವ ಸಂಪ್ರದಾಯವಿರುತ್ತದೆ. ಆದರೆ ಈ ದೇವಾಲಯದಲ್ಲಿ ಸುಮಾರು 5 ಅಡಿ ಎತ್ತರದ ಚಂದ್ರಮೌಳೀಶ್ವರ ಶಿವನ ಮೂರ್ತಿಯಿದೆ. ಶಿವನನ್ನು ಮೂರ್ತಿಯ ರೂಪದಲ್ಲಿ ಆರಾಧಿಸುವ ಸ್ಥಳಗಳು ಅತ್ಯಂತ ಕಡಿಮೆಯಿರುವುದರಿಂದ ಈ ದೇವಾಲಯಕ್ಕೆ ವಿಶೇಷವಾದ

ಮಹತ್ತ್ವವಿದೆ. ಮತ್ತು ಈ ದೇವಾಲಯದ ಇನ್ನೂ ಮುಖ್ಯವಾದ ವಿಶೇಷತೆಯೆಂದರೆ ಕಾನಿಕಾರನಹಳ್ಳಿಯ ನಾಡಪ್ರಭುಗಳ ಎರಡು ಮೂರು ಪ್ರತಿಮೆಗಳನ್ನು ಇಲ್ಲಿ ಅವರ ಕಾಲದಲ್ಲಿಯೆ ಮಾಡಲಾಗಿದೆ. ಶಾಸನಗಳ ಆಧಾರದ ಮೇಲೆ ಇವರ ವಂಶಾವಳಿಯನ್ನು ಈ ರೀತಿ ರಚಿಸಬಹುದಾಗಿದೆ.

ಚನ್ನವೀರಯ್ಯ
|
ದೊಡ್ಡಯ್ಯ
|
|----------------------|
ಚನ್ನವೊಡೆಯ ಬಸವಯ್ಯ
|
ಆಲೂರು ಭೀಮ

**ಚನ್ನವೀರಯ್ಯ**

ಚನ್ನವೀರಯ್ಯನಿಗೆ ಸಂಬಂಧಿಸಿದಂತೆ ಯಾವುದೇ ಶಾಸನಗಳಿಲ್ಲ. ಈತನು ಕಾನಿಕಾರನಹಳ್ಳಿಯ ನಾಡಪ್ರಭುವಾಗಿ ಆಳಿರುವ ಸಾಧ್ಯತೆಗಳಿಲ್ಲ. ಆದರೆ ಈತ ಗೌಡಕುಲಕ್ಕೆ ಸೇರಿದವನು ಎಂದು ಮಾತ್ರ ತಿಳಿಯಬಹುದಾಗಿದೆ. ಈತ ಕಾನಿಕಾರನಹಳ್ಳಿಯ ಖ್ಯಾತ ಪ್ರಭುವಾದ ದೊಡ್ಡಯ್ಯನ ತಂದೆಯಾಗಿದ್ದನು. ಬಹುಶಃ ಈತ ಚನ್ನರಾಯಪಟ್ಟಣಕ್ಕೆ ಬಂದಿರಲಾರನು. ಅವನು ಮೂಲತಃ ಕಾಣಿಕಾರನಹಳ್ಳಿಯಲ್ಲಿಯೇ ಇದ್ದಿರಬಹುದು.

**ದೊಡ್ಡಯ್ಯ**

ಚನ್ನರಾಯಪಟ್ಟಣದ ಸೀಮೆಯ ತುಂಗಣಿನಾಡ ಕಾನಿಕಾರನಹಳ್ಳಿಯ ನಾಡಪ್ರಭುವಾದ ದೊಡ್ಡಯ್ಯನು ಈ ವಂಶದ ಅತ್ಯಂತ ಪ್ರಖ್ಯಾತನಾದ ಅರಸನಾಗಿದ್ದನು. ಕ್ರಿ.ಶ. 1648ರ ಶಾಸನವು [13] ಕಂಠೀರವ ನರಸರಾಜ ಒಡೆಯರು ಚನ್ನರಾಯಪಟ್ಟಣದ ಸೀಮೆಯ ಆಡಳಿತವನ್ನು ದೊಡ್ಡಯ್ಯನಿಗೆ ವಹಿಸಿಕೊಟ್ಟ ಸಂಗತಿಯನ್ನು ತಿಳಿಸುತ್ತದೆ. ಆದರೆ ಇವರಿಗೆ ಈ ಪ್ರದೇಶದ ಆಳ್ವಿಕೆ ದೊರೆತದ್ದು ಕ್ರಿ.ಶ. 1648ರಲ್ಲಿ ಅಲ್ಲ. ಬದಲಿಗೆ 1642ಕ್ಕೆ ಮುಂಚೆಯೇ ಎಂಬುದನ್ನು ಈ ಹಿಂದೆಯೇ ತಿಳಿಸಲಾಗಿದೆ. ಕ್ರಿ.ಶ. 1642ರ ಶಾಸನದಲ್ಲಿಯೇ ಈ ಸ್ಥಳದ ಪ್ರಸ್ತಾಪವಿದೆ. ಕಂಠೀರವ ನರಸರಾಜ ಒಡೆಯರು ಪಟ್ಟಕ್ಕೆ ಬಂದದ್ದು 1638ರಲ್ಲಿ ಆಗಿರುವುದರಿಂದ 1638ರಿಂದ 1642 ರವರೆಗಿನ ಈ ನಾಲ್ಕು ವರ್ಷಗಳಲ್ಲಿ ಯಾವಾಗಲೋ ಇವರಿಗೆ ಈ ಸೀಮೆಯ ಆಡಳಿತವನ್ನು ನೀಡಲಾಗಿದೆ. ಬಹುಶಃ 1640ರಲ್ಲಿಯೇ ಈ ಘಟನೆ ನಡೆದಿರಬಹುದು ಎಂಬುದು ಮುಖ್ಯವಾದ ಸಂಗತಿಯಾಗಿದೆ.

ಈ ದೊಡ್ಡಯ್ಯನು ಕಂಠೀರವ ನರಸರಾಜ ಒಡೆಯರಿಗೆ ಅತ್ಯಂತ ಬೇಕಾಗಿದ್ದ ವ್ಯಕ್ತಿಯಾಗಿದ್ದನು. ಹೊಳೇನರಸೀಪುರ ಮತ್ತು ಪಿರಿಯಾಪಟ್ಟಣದ ಕಾಳಗಗಳಲ್ಲಿ ಮೈಸೂರು

ಒಡೆಯರ ಪರವಾಗಿ ಯುದ್ಧವನ್ನು ಮಾಡಿದ ದೊಡ್ಡಯ್ಯನು ಮೈಸೂರು ಸಂಸ್ಥಾನಕ್ಕೆ ವಿಜಯವನ್ನು ತಂದುಕೊಡುವಲ್ಲಿ ಪ್ರಮುಖವಾದ ಕಾರಣಕರ್ತನಾಗಿದ್ದನು. ಕ್ರಿ.ಶ. 1648ರಲ್ಲಿ ರಚಿತವಾದ ಕಂಠೀರವ ನರಸರಾಜ ವಿಜಯವೆಂಬ ಐತಿಹಾಸಿಕ ಕಾವ್ಯದಲ್ಲಿ ಉಲ್ಲೇಖಿತನಾಗಿರುವ 'ಚನ್ನರಾಯಪಟ್ಟಣದ ದೊಡ್ಡೇಂದ್ರ' ಎಂಬ ವ್ಯಕ್ತಿಯು ಇವನೇ ಆಗಿದ್ದಾನೆ. ಹೊಳೇನರಸೀಪುರದ ಕಾಳಗದ ಕಾಲವನ್ನು 1644 ಎಂದು ತಿಳಿಯಬಹುದಾಗಿದೆ. ಹಾಗಾಗಿ ಬಹುಶಃ ಕಂಠೀರವ ನರಸರಾಜ ವಿಜಯದ ಕವಿಯಾದ ಗೋವಿಂದ ವೈದ್ಯನು ಇವನನ್ನು ನೋಡಿರಲೂಬಹುದು ಎಂದೆನಿಸುತ್ತದೆ.

ದೊಡ್ಡಯ್ಯನ ಮೊದಲ ಆದ್ಯತೆಯು ಚನ್ನರಾಯಪಟ್ಟಣಕ್ಕೆ ಸುಭದ್ರವಾದ ಕೋಟೆಯನ್ನು ನಿರ್ಮಾಣ ಮಾಡುವುದೇ ಆಗಿತ್ತು. ಕೋಟೆಯನ್ನು ನಿರ್ಮಿಸುವುದೆಂದರೆ ಶತ್ರುದಾಳಿಗಳಿಗೆ ಸಜ್ಜಾಗಿ ಅವರಿಂದ ಸರ್ವ ರೀತಿಯಲ್ಲೂ ರಕ್ಷಣೆಯನ್ನು ಹೊಂದುವುದು. ಹಾಗೂ ತಮ್ಮ ಒಡೆತನದ ಭೂಮಿಯ ಎಲ್ಲಾ ದಾಖಲೆಗಳನ್ನೂ ಹಾಗೂ ಸಂಪತ್ತನ್ನು ಈ ಕೋಟೆಯಲ್ಲಿ ರಕ್ಷಿಸುವುದೇ ಆಗಿತ್ತು. ಆದ್ದರಿಂದ ಆತನು ಕ್ರಿ.ಶ. 1647ರಲ್ಲಿ ಇಲ್ಲಿ ಕಲ್ಲಿನ ಕೋಟೆಯನ್ನು ಕಟ್ಟಿಸಲು ಆರಂಭಿಸಿದ್ದನು. ಒಂದು ಕೋಟೆಯನ್ನು ನಿರ್ಮಾಣ ಮಾಡುವಷ್ಟು ಪ್ರಬಲ ಸ್ಥಳೀಯ ಅರಸರಾಗಿದ್ದುದು ಕಾನಿಕಾರನಹಳ್ಳಿಯ ನಾಡಪ್ರಭುಗಳ ಹೆಚ್ಚುಗಾರಿಕೆಯಾಗಿದೆ. ಈ ಕೋಟೆಯನ್ನು ಕಸುಲುಗೆರೆಯ ಸ್ಥಳದ ಕೆಂಪಣ್ಣಗೌಡನ ಪಾರುಪತ್ಯದಲ್ಲಿ ಕಟ್ಟಿಸಲಾಯಿತು.[14] ಆ ಸಂದರ್ಭದಲ್ಲಿ ಕೋಟೆಯ ಜೊತೆಗೆ ಒಂದು ಕೊಳವನ್ನೂ ಮತ್ತು ಕಲ್ಲುಮಠವನ್ನೂ ಕೆಂಪಣ್ಣಗೌಡನು ನಿರ್ಮಿಸಿದನು. ಈ ಕೋಟೆಯನ್ನೇ ಕ್ರಿ.ಶ. 1648ರಲ್ಲಿ ಬಿಜಾಪುರದ ಸೈನ್ಯವು ಮುತ್ತಿ ಧ್ವಂಸಗೊಳಿಸಿದ್ದು.

ಅದರಲ್ಲೂ ಬಿಜಾಪುರದಂತಹ ಸೈನ್ಯಕ್ಕೆ ಈ ಚನ್ನರಾಯಪಟ್ಟಣದ ಮೇಲೆ ದಾಳಿ ಮಾಡಬೇಕೆಂದು ಅನಿಸುವುದಾದರೆ ಆ ಸೀಮೆಯ ಸಂಪತ್ತು ಎಷ್ಟರ ಮಟ್ಟಿಗೆ ಇರಬಹುದು ಎಂದು ಅನಿಸುತ್ತದೆ. ಮುಸ್ತಾಫಾಖಾನನ ನೇತೃತ್ವದಲ್ಲಿ ಮೈಸೂರು ಸಂಸ್ಥಾನಕ್ಕೆ ಸೇರಿದ್ದ ಚನ್ನರಾಯಪಟ್ಟಣವನ್ನು ಬಿಜಾಪುರದ ಅರಸರು ಲೂಟಿ ಮಾಡಿದರು. ಕ್ರಿ.ಶ. 1648ರಲ್ಲಿ ನಡೆದ ಈ ದಂಡಯಾತ್ರೆಯ ಸಂದರ್ಭದಲ್ಲಿ ಕಂಠೀರವ ನರಸರಾಜ ಒಡೆಯರು ಮಾಡಿಕೊಂಡ ಒಪ್ಪಂದದಂತೆ ಇದುವರೆಗೂ ಕಾನಿಕಾರನಹಳ್ಳಿಯ ನಾಡಪ್ರಭುಗಳ ವಶದಲ್ಲಿದ್ದ ಚನ್ನರಾಯಪಟ್ಟಣವು ಮತ್ತೆ ಇವರ ಅಧಿಕಾರಕ್ಕೇ ಬಂದಿತು. ಈ ಸಂದರ್ಭದಲ್ಲಿ ದೊಡ್ಡಯ್ಯನು ಹಲವು ಸುಧಾರಣಾ ಕಾರ್ಯಗಳನ್ನು ಕೈಗೊಂಡನು. ಈ ದೊಡ್ಡಯ್ಯನು ಮಾಡಿದ ಇನ್ನೂ ಮುಖ್ಯವಾದ ಕೆಲಸವೆಂದರೆ ಬಿಜಾಪುರದ ಸುಲ್ತಾನರ ದಂಡಿನಿಂದ ಹಾಳಾಗಿದ್ದ ಚನ್ನರಾಯಪಟ್ಟಣದ ಕೋಟೆಯನ್ನು ಅತ್ಯಂತ ಭದ್ರವಾದ ರೀತಿಯಲ್ಲಿ ಮರುನಿರ್ಮಾಣ ಮಾಡಿದ್ದು ವಿಶೇಷವಾದದ್ದು. 1648ರ ಯುದ್ಧವು ಮುಗಿದ ತಕ್ಷಣ ಈ ಕೋಟೆಯ ದುರಸ್ತಿ ಕಾರ್ಯವನ್ನು ಮೊದಲು ಕೈಗೊತ್ತಿಕೊಂಡ ದೊಡ್ಡಯ್ಯನು ಕೋಟೆಯನ್ನು ಅತ್ಯಂತ ಶೀಘ್ರವಾಗಿ ಪೂರೈಸಿದನು. ಈ ಸಂದರ್ಭದ ನೆನಪಿಗಾಗಿಯೇ ಫಿರಂಗಿ ಮಠವನ್ನು ಕಟ್ಟಿಸಿ ಅಲ್ಲಿ ಎರಡು ತಲೆಯ ಬಸವಣ್ಣನನ್ನು ಪ್ರತಿಷ್ಠೆ ಮಾಡಿದನು. ಈ ಮಠದ ಮುಂದೆ ಕೊಳವನ್ನು ನಿರ್ಮಿಸಿ ದೇವರಿಗೆ ಮೂರು ಅಂಕಣದ ಗುಡಿಯನ್ನು ಕಟ್ಟಿಸಿ ಗುಡಿಯ ಮುಂದೆ ಉಯ್ಯಾಲೆ ಕಂಬವನ್ನು ನಿಲ್ಲಿಸಲಾಯಿತು. ಇಲ್ಲಿನ ಕೆರೆಯಲ್ಲಿ ಗಂಗೆ ಬಸವನನ್ನು

ಪ್ರತಿಷ್ಠೆ ಮಾಡಲಾಯಿತು. ದೊಡ್ಡಯ್ಯನು ತಮ್ಮ ಕುಲದೇವರ ಪ್ರತಿಷ್ಠೆಯನ್ನು ಹುಲಿಮುಖದ ಚಾವಡಿಯಲ್ಲಿ ನೆರವೇರಿಸಿ ಮತ್ತೆ ಇಂತಹ ದಾಳಿಗಳಂತಹ ದುರ್ಘಟನೆಗಳು ಜರುಗದಂತೆ ಪ್ರಾರ್ಥಿಸಿರಬೇಕು. ಹಾಗಾಗಿ ತಮ್ಮ ಕುಲದೇವರುಗಳಾದ ಕತ್ತಿ ವೀರಭದ್ರೇಶ್ವರ, ಭದ್ರಕಾಳಮ್ಮ, ಮಾಬಳೇಶ್ವರ ದೇವರ ಪ್ರತಿಷ್ಠೆಯನ್ನು ಮಾಡಿಸಿದನು.

ಕ್ರಿ.ಶ. 1651ರಲ್ಲಿ ಬಿಜಾಪುರದ ಸುಲ್ತಾನರಿಗೂ ಮತ್ತು ಮೈಸೂರಿನ ಸೈನ್ಯಕ್ಕೂ ನಡುವೆ ಮತ್ತೆ ಯುದ್ಧವೊಂದು ಜರುಗಿದ ಸಂಗತಿಯನ್ನು ನಾವು ಇಲ್ಲಿನ ಶಾಸನಗಳ ಮೂಲಕ ಮನಗಾಣಬಹುದು. ಮತ್ತೆ ಚನ್ನರಾಯಪಟ್ಟಣಕ್ಕಾಗಿ ನಡೆದ ಈ ಕಾಳಗದಲ್ಲಿ ಮಡಿದ ಅಣತಿಯ ಚನ್ನಣ್ಣನಿಗೆ ಕಾನಿಕಾರನಹಳ್ಳಿಯ ನಾಡಪ್ರಭುವಾದ ದೊಡ್ಡಯ್ಯನು ದಾನವೊಂದನ್ನು ನೀಡಿದ್ದನ್ನು ಕ್ರಿ.ಶ. 1651 ರ ಫೆಬ್ರವರಿ 8ರ ಶಾಸನವು [15] ತಿಳಿಸುತ್ತದೆ. ಚನ್ನಣ್ಣನು ದೊಡ್ಡಯ್ಯನ ಬಳಿ ಇದ್ದ ಅತೀ ಪ್ರಮುಖನಾದ ಯುದ್ಧಾಳುಗಳಲ್ಲಿ ಒಬ್ಬ ಎಂದರೆ ತಪ್ಪಾಗುವುದಿಲ್ಲ. ದೊಡ್ಡಯ್ಯನು ತಾನು ಮೈಸೂರು ಸಂಸ್ಥಾನದ ಅಧೀನ ರಾಜನಾದರೂ ತನ್ನ ಕೈಕೆಳಗಿನ ಭಟರನ್ನು ಅತ್ಯಂತ ಅಚ್ಚುಕಟ್ಟಾಗಿ ನೋಡಿಕೊಳ್ಳುತ್ತಿದ್ದ ಸಂಗತಿಯನ್ನು ಹಾಗೂ ಯುದ್ಧದ ಪರಿಣಾಮಗಳಿಂದ ಉಂಟಾಗಬಹುದಾದ ಜೀವನಷ್ಟ ಮುಂತಾದ ತೊಂದರೆಗಳಿಗೆ ಇವನು ತಕ್ಷಣ ಸ್ಪಂದಿಸುತ್ತಿದ್ದ ವಿಷಯವನ್ನು ನಾವು ಇದರಿಂದ ಮನಗಾಣಬಹುದಾಗಿದೆ. ಈ ಅಣತಿಯ ಶಾಸನವನ್ನು ಹಾಕಿಸಿದವನು ಲಕ್ಕಣ್ಣಯ್ಯನವರ ಮಗನಾದ ಚಂದಯ್ಯ.

ಇದೇ ವರ್ಷ ಅಂದರೆ ಕ್ರಿ.ಶ. 1651ರ ಮೇ 24ಕ್ಕೆ ಸೇರಿದ ದಿಂಡಗೂರಿನ ಶಾಸನವೊಂದು [16] ಬಿಜಾಪುರದ ಸುಲ್ತಾನರ ದಾಳಿಯ ವಿಷಯವನ್ನು ಸ್ಪಷ್ಟವಾಗಿ ನಮೂದಿಸುತ್ತದೆ. ಈ ಮೇಲ್ಕಂಡ ದಿನಾಂಕದಂದು ಚನ್ನಪಟ್ಟಣದ ಸೀಮೆಯನ್ನು ಸುಲ್ತಾನರು ಹವಾಲಾ ಮಾಡಿದ್ದಾಗ ಹೋರಾಡಿ ಜಯಗಳಿಸಿದುದರ ಕುರುಹಾಗಿ ಕಾನಿಕಾರನಹಳ್ಳಿಯ ನಾಡಪ್ರಭುವಾದ ದೊಡ್ಡಯ್ಯನು ನಾಗಭಕ್ತರ ಪ್ರತಿಷ್ಠೆಯನ್ನು ಮಾಡಿಸಿ ಅದಕ್ಕೆ ಮಂಟಪವೊಂದನ್ನು ನಿರ್ಮಿಸಿದ ಸಂಗತಿಯನ್ನು ತಿಳಿಸುತ್ತದೆ. ಸಾಮಾನ್ಯವಾಗಿ ನಾಗರಕಲ್ಲಿನ ಪ್ರತಿಷ್ಠೆಯನ್ನು ಹರಕೆ ಹೊತ್ತವರೇ ಮಾಡಿಸುವುದು ವಾಡಿಕೆ. ದೊಡ್ಡಯ್ಯನು ಯಾವುದೇ ವೈಯಕ್ತಿಕ ಸಮಸ್ಯೆಗಳಿಗೆ ಹರಕೆ ಹೊರದೇ ಬಹುಶಃ ಸುಲ್ತಾನರ ವಿರುದ್ಧ ಜಯಗಳಿಸಿದರೆ ನಾಗರಕಲ್ಲಿನ ಪ್ರತಿಷ್ಠೆ ಮಾಡಿಸುವುದಾಗಿ ಹರಕೆ ಹೊತ್ತಿದ್ದನೋ ಏನೋ ಎಂಬಂತೆ ಇಲ್ಲಿ ನಾಗಭಕ್ತರ ಪ್ರತಿಷ್ಠೆಯನ್ನು ಮಾಡಿಸಿ ಅದಕ್ಕೆ ಮಂಟಪವೊಂದನ್ನು ನಿರ್ಮಿಸಿರುವುದನ್ನು ನೋಡಿದರೆ ಅವನು ನಾಡಿಗಾಗಿ ಎಷ್ಟರ ಮಟ್ಟಿಗೆ ಮುಡಿಪಾಗಿದ್ದ ಎಂಬುದನ್ನು ತಿಳಿಯಬಹುದಾಗಿದೆ.

ಒಂದರ ನಂತರ ಒಂದು ಯುದ್ಧಗಳಲ್ಲಿ ನಿರಂತರವಾಗಿ ಭಾಗವಹಿಸುತ್ತಿದ್ದ ದೊಡ್ಡಯ್ಯನ ಬಹುಪಾಲು ಆಯಸ್ಸು ಯುದ್ಧಗಳಲ್ಲೇ ಕಳೆದುಹೋಗಿರಬೇಕು ಎಂದೆನಿಸುತ್ತದೆ. ಹಾಗೂ ಶ್ರೀರಂಗಪಟ್ಟಣದಲ್ಲಿ ನಡೆಯುತ್ತಿದ್ದ ಬಹುತೇಕ ಮಂತ್ರಾಲೋಚನೆ ಸಭೆಗಳಲ್ಲೂ ಈತನು ನಿಯಮಿತವಾಗಿ ಭಾಗವಹಿಸಲೇಬೇಕಾದಷ್ಟು ಅನಿವಾರ್ಯ ನಾಯಕನಾಗಿದ್ದನು ಎಂಬುದನ್ನು ಓಂದೆಯೇ ಗಮನಿಸಲಾಗಿದೆ. ಈತ ಅಪ್ರತಿಮ ದೈವಭಕ್ತನಾಗಿದ್ದನು. ಶೈವಮತಾವಲಂಭಿಯಾಗಿದ್ದನು ಎಂಬುದಕ್ಕೆ ಈತನು ನಿರ್ಮಿಸಿದ ಶೈವ ದೇವಾಲಯಗಳೇ ಪ್ರಮುಖ ಸಾಕ್ಷಿಯಾಗಿದೆ.

## ಚನ್ನ ಒಡೆಯ

ದೊಡ್ಡಯ್ಯನ ಮಗನಾದ ಚನ್ನವೊಡೆಯನ ಉಲ್ಲೇಖವಿರುವ ಕೇವಲ ಏಕೈಕ ಶಾಸನವೊಂದು ನಮಗೆ ಲಭ್ಯವಾಗಿದೆ. ಈತ ಕೂಡ ದೊಡ್ಡಯ್ಯನೊಡನೆಯೇ ಆಡಳಿತದಲ್ಲಿ ಸಹಕರಿಸಿರಬೇಕು. ದೊಡ್ಡಯ್ಯನ ನಂತರ ಚನ್ನರಾಯಪಟ್ಟಣದ ಆಡಳಿತವನ್ನು ಮುಂದುವರೆಸಿದನು ಎಂಬುದು ಮುಖ್ಯವಾದ ಸಂಗತಿಯಾಗಿದೆ. 1642ರ ಮಾರ್ಚಿ 15ರ ಚನ್ನರಾಯಪಟ್ಟಣದ ಶಾಸನದಲ್ಲಿಯೇ [17] ಈತನ ಉಲ್ಲೇಖವಿದೆ. ದೊಡ್ಡಯ್ಯನು ತನ್ನ ತಂದೆಯ ಹೆಸರನ್ನೇ ತನ್ನ ಮಗನಿಗೂ ಇಟ್ಟಂತೆ ತೋರುತ್ತದೆ. ದೊಡ್ಡಯ್ಯನಿಗಿಂತಲೂ ಮುಂಚೆಯೇ ಇವನ ಉಲ್ಲೇಖವಿರುವ ಶಾಸನವೊಂದು ನಮಗೆ ಸಿಕ್ಕಿರುವುದು ವಿಶೇಷವಾದ ಸಂಗತಿಯಾಗಿದೆ. ಹಾಗಾಗಿಯೇ ಈತನು ದೊಡ್ಡಯ್ಯನ ಕಾಲದಲ್ಲಿ ಆಡಳಿತವನ್ನು ನಡೆಸದೇ ಇದ್ದರೂ ಕನಿಷ್ಠ ಪಕ್ಷ ಅವನ ಅಧೀನ ಅಧಿಕಾರಿಯಾಗಿ ಕಾರ್ಯನಿರ್ವಹಿಸುತ್ತಿದ್ದನು ಎಂಬುದರಲ್ಲಿ ಎರಡು ಮಾತಿಲ್ಲ.

ಈ ಶಾಸನವು ಮೈಸೂರು ದೊರೆ ಕಂಠೀರವ ನರಸರಾಜ ಒಡೆಯರ ಆಳ್ವಿಕೆಯ ಕಾಲದಲ್ಲಿ ಕಾನಿಕಾರನಹಳ್ಳಿಯ ಪ್ರಭು ದೊಡ್ಡಯ್ಯನವರ ಕುಮಾರ ಚನ್ನವಡೆಯರವರು ಕೆರೆಯ ತೂಬನ್ನು ನಿರ್ಮಿಸಿ, ಗಂಗೆ ಬಸವೇಶ್ವರನ ಪ್ರತಿಷ್ಠೆ ಮಾಡಿಸಿ ಮಂಟಪವನ್ನು ಕಟ್ಟಿಸಿದ ಸಂಗತಿಯನ್ನು ತಿಳಿಸುತ್ತದೆ. ಈತ ನಿರ್ಮಿಸಿದ ತೂಬು ಚನ್ನರಾಯಪಟ್ಟಣದಲ್ಲಿಯೇ ಇದ್ದ ಕೆರೆಗೇ ಆಗಿದೆ. ಅಲ್ಲಿ ಗಂಗೆ ಬಸವೇಶ್ವರನನ್ನು ಪ್ರತಿಷ್ಠೆ ಮಾಡಿದರು ಎಂದರೆ ಅದು ಸಾಮಾನ್ಯವಾಗಿ ಕೋಡಿ ಬಸವಣ್ಣ ಎಂದು ಕರೆಯುವ ಬಸವಣ್ಣನನ್ನು ಪ್ರತಿಷ್ಠೆ ಮಾಡಿಸಿದ್ದಾರೆ. ಸಾಮಾನ್ಯವಾಗಿ ಕೋಡಿ ಬೀಳುವುದೆಂದರೆ ಕೆರೆಯ ನೀರು ತುಂಬಿಹೋಗಿ ಇನ್ನೊಂದು ಕೆರೆಗೆ ಹೋಗುವುದು ಎಂದೇ ಅರ್ಥ. ಇಂತಹ ಕೋಡಿ ಬೀಳುವ ಕೆರೆಯ ನೀರನ್ನು ತಾವೇ ಅಂದರೆ ತಮ್ಮ ಊರಿಗೇ ಅನುಕೂಲವಾಗುವಂತೆ ಕೃಷಿಗಾಗಿ ಉಪಯೋಗಿಸಿಕೊಳ್ಳುವ ಕಾರಣದಿಂದ ಚನ್ನವಡೆಯನು ಈ ಕೆರೆಗೆ ತೂಬನ್ನು ನಿರ್ಮಿಸಿ ಕೃಷಿ ಚಟುವಟಿಕೆಗಳಿಗೆ ಇಂಬು ನೀಡಿದನು ಎಂಬ ವಿಷಯವು ಬಹು ಮುಖ್ಯವಾದುದು. ಇನ್ನೊಂದು ವಿಶೇಷವಾದ ಸಂಗತಿಯೆಂದರೆ ಸಾಮಾನ್ಯವಾಗಿ ನಾಡಪ್ರಭುಗಳಾದ ಗೌಡಪ್ರಜೆಗಳಾದ ಇವರು ಮೈಸೂರಿನ ಒಡೆಯರ ಮೇಲಿನ ಮಮತೆಯಿಂದಾಗಿ ಮಗನಾದ ಚನ್ನನಿಗೆ ಒಡೆಯ ಎಂಬ ಉಪಾದಿಯನ್ನು ಒದಗಿಸಿರುವುದು ಅದಕ್ಕೆ ಮೈಸೂರಿನ ಒಡೆಯರೂ ಕೂಡ ಸಮ್ಮತಿಸಿರಬಹುದು ಎಂಬ ಊಹೆಗೆ ಇಂಬು ನೀಡುತ್ತದೆ.

## ಆಲೂರು ಭೀಮ

ಆಲೂರು ಭೀಮನು ಕಾನಿಕಾರನಹಳ್ಳಿಯ ನಾಡಪ್ರಭುಗಳಿಗೆ ಯಾವ ರೀತಿಯ ಸಂಬಂಧಿ ಎಂಬುದು ಶಾಸನಗಳಲ್ಲಿ ಸ್ಪಷ್ಟವಾಗಿ ನಮೂದಾಗಿಲ್ಲವಾದರೂ ಕೆಲವು ಆಂತರಿಕ ಕಾರಣಗಳಿಂದ ಈತ ಈ ವಂಶದವನೇ ಇರಬೇಕೆಂದು ತೋರುತ್ತದೆ. ಬಹುಶಃ ಈತ ದೊಡ್ಡಯ್ಯನ ಮಗನಾದ ಚನ್ನವೊಡೆಯನ ಮಗನಾಗಿರಬಹುದು. ಈತನ ಶಾಸನದಿಂದಲೇ ಈ ವಂಶದವರು ಬೆಳ್ಳಿ ಕುಲದವರು ಎಂಬ ಬಹಳ ಮುಖ್ಯವಾದ ಅಂಶವು ನಮಗೆ ತಿಳಿದುಬರುವುದು.

ಕ್ರಿ.ಶ. 1648ರ ಏಪ್ರಿಲ್ 17ಕ್ಕೆ ಸೇರಿದ ಚನ್ನರಾಯಪಟ್ಟಣದ ಗದ್ದೆ ರಾಮೇಶ್ವರ ದೇವಾಲಯದಲ್ಲಿರುವ ಶಾಸನವು [18] ಚನ್ನವೀರಯ್ಯನ ಮಗನಾದ ದೊಡ್ಡಯ್ಯನು ಚನ್ನರಾಯಪಟ್ಟಣದಲ್ಲಿ ತುರುಕರಿಂದ ಯುದ್ಧವಾಗಿ ಬಿದ್ದುಹೋದ ಕೋಟೆಯನ್ನು ಪುನರ್ನಿರ್ಮಾಣ ಮಾಡಿದಾಗ ಅವನ ಮೊಮ್ಮಗನಾದ ಆಲೂರು ಭೀಮನು ಮಠ, ಮಂಟಪ, ಸಂಧ್ಯಾ ಮಂಟಪ, ಕೊಳ, ಬಾವಿ, ಬಸವನ ಕಂಬ, ಉಯ್ಯಾಲೆ ಕಂಬ, ದೇವತಾ ವಿಗ್ರಹಗಳನ್ನು ಪ್ರತಿಷ್ಠೆ ಮಾಡಿಸಿದ ಸಂಗತಿಯನ್ನು ತಿಳಿಸುತ್ತದೆ.

ಇದೇ ವಿಷಯವನ್ನು ಚನ್ನರಾಯಪಟ್ಟಣದ ದೊಡ್ಡಕೊಳದ ಮಂಟಪದ ಬೋದಿಗೆಗೆ ಸೇರಿಸಿರುವ ಕಲ್ಲುಗಳ ಮೇಲೂ ಬರೆಯಲಾಗಿದೆ. [19] ಅಂದರೆ ಅವನು ಕಟ್ಟಿಸಿದ ಕೊಳ ಇನ್ನಾವುದೂ ಆಗಿರದೇ ಇದೇ ದೊಡ್ಡ ಕೊಳವಾಗಿದೆ. ಈ ಆಲೂರು ಭೀಮನ ಹೆಸರಿನಲ್ಲಿರುವ ಆಲೂರು ಎಂಬ ಗ್ರಾಮವೂ ಕೂಡ ಹಾಸನ ಜಿಲ್ಲೆಯದ್ದಾಗಿರದೇ ಕನಕಪುರ ತಾಲ್ಲೂಕಿನಲ್ಲಿರುವ ಆಲೂರೇ ಆಗಿದೆ. ಇದರಿಂದ ನಾವು ಅವರು ಚನ್ನರಾಯಪಟ್ಟಣದಿಂದ ಆಳ್ವಿಕೆ ನಡೆಸುತ್ತಿದ್ದರೂ ಕನಕಪುರದ ಅಂದರೆ ಅಂದಿನ ಕಾಣಿಕಾರನಹಳ್ಳಿಯ ಸಂಬಂಧವನ್ನು ಮಾತ್ರ ತೊರೆದಿರಲಿಲ್ಲ ಎಂಬುದು ಸ್ಪಷ್ಟವಾಗುತ್ತದೆ.

**ಬಸವಯ್ಯ**

ದೊಡ್ಡಯ್ಯನನ್ನು ಹೊರತುಪಡಿಸಿದರೆ ಈ ವಂಶದ ಅತ್ಯಂತ ಖ್ಯಾತಿಯ ಅರಸನೆಂದರೆ ಬಸವಯ್ಯ. ಈತನು ದೊಡ್ಡಯ್ಯನ ಎರಡನೆಯ ಮಗನೆಂದು ತೋರುತ್ತದೆ. ಈತನ ಬಗ್ಗೆ ನಮಗೆ ನಾಲ್ಕು ಶಾಸನಗಳು ದೊರೆತಿರುವುದು ಮುಖ್ಯವಾಗಿದೆ. ಈ ಶಾಸನಗಳ ಮೂಲಕ ಇವನ ಧಾರ್ಮಿಕ ಸೇವೆಗಳನ್ನು ನಾವು ಅರಿಯಬಹುದಾಗಿದೆ.

ಕ್ರಿ.ಶ. 1650ರ ಅಕ್ಟೋಬರ್ 21ಕ್ಕೆ ಸೇರಿದ ಬಾಗೂರಿನ ಶಾಸನವು ಕಂಠೀರವ ನರಸರಾಜ ಒಡೆಯರ ಕಾಲದಲ್ಲಿ ಅವರ ಕಾರ್ಯಕರ್ತನಾಗಿ ಸಾತಿ ಗ್ರಾಮವನ್ನು ಕೋಟೂರಯ್ಯನವರು ಆಳ್ವಿಕೆ ನಡೆಸುತ್ತಿದ್ದ ಸಂಗತಿಯನ್ನು ತಿಳಿಸುತ್ತದೆ. ಈತನು ಬಹುಶಃ ಕಾನಿಕಾರನಹಳ್ಳಿಯ ನಾಡಪ್ರಭುವಾದ ಬಸವಯ್ಯನ ಅಧೀನನಾದ ಅಧಿಕಾರಿಯಿರಬೇಕು. ಈ ಸಾತಿಗ್ರಾಮದ ಆಳ್ವಿಕೆಗೆ ಸೇರಿದ ಆಣಿಬಾಗೂರಿನಲ್ಲಿದ್ದ ಗೋಪಾಲಸ್ವಾಮಿ ದೇವಾಲಯಕ್ಕೆ ಈ ಕಾಲದಲ್ಲಿ ನವರಂಗ, ಪಟ್ಟಸಾಲೆ, ಪ್ರಾಕಾರವನ್ನು ನಿರ್ಮಿಸಲಾದ ಸಂಗತಿಯನ್ನು ಈ ಶಾಸನವು ಒದಗಿಸುತ್ತದೆ. [20]

ಈ ಗುಡಿಯನ್ನು ಕಟ್ಟಿಸಲು ಪ್ರಾರಂಭಿಸಿದವನು ಯಳವಂದೂರಿನ ಲಿಂಗಯ್ಯ. ನವರಂಗ, ಪ್ರಾಕಾರ, ಪಟ್ಟಸಾಲೆ ಮುಂತಾದ ಸಮಸ್ತ ಕೆಲಸವನ್ನು ಮಾಡಿಸಿದವನು ಕೊಟ್ಟೂರಯ್ಯನ ಕುಮಾರನಾದ ನಂಜಯ್ಯ. ಇದಕ್ಕೆ ಸಹಾಯ ಮಾಡಿದವರು ಈ ಸ್ಥಳದ ಶಾನುಭೋಗನಾದ ನಾರಿಯಪ್ಪಯ್ಯ ಹಾಗೂ ಚಿಕ್ಕರಸಯ್ಯನ ಅರಮನೆಯ ಸೇನುಭೋಗ ಮೈಲಾರಯ್ಯನ ಮಗನಾದ ಗೋವಿಂದಯ್ಯನಿಂದ. ಆದರೆ ದೇವಾಲಯದ ಸಮಸ್ತ ಕೆಲಸವೂ ನಡೆದದ್ದು ಕಾನಿಕಾರನಹಳ್ಳಿಯ ನಾಡಪ್ರಭುವಾದ ದೊಡ್ಡಯ್ಯನ ಮಗನಾದ ಬಸವಯ್ಯನ ಅಧೀನತೆಯಲ್ಲಿ ಎಂಬುದು ಮುಖ್ಯವಾದ ಸಂಗತಿಯಾಗಿದೆ. ಈತ ಇಲ್ಲಿನ ದೇವಾಲಯಕ್ಕೆ ಈ ಪ್ರದೇಶದ ಕಾರ್ಯಕರ್ತರನ್ನು ಉಪಯೋಗಿಸಿಕೊಳ್ಳದೇ ತಮ್ಮ

ಊರಿಗೆ ಹತ್ತಿರವಿರುವ ಯಳಂದೂರಿನ ಕಡೆಯಿಂದ ಕೆಲಸಗಾರರನ್ನು ಕರೆಸಿರುವುದನ್ನು ನಾವು ಗಮನಿಸಬೇಕು.

ಕ್ರಿ.ಶ. 1661ರ ನವೆಂಬರ್ 25ರ ಜಂಬೂರಿನ ಶಾಸನವು [21] ಕಾನಿಕಾರನಹಳ್ಳಿಯ ನಾಡಪ್ರಭುವಾದ ದೊಡ್ಡಯ್ಯನವರ ಕುಮಾರನಾದ ಬಸವಯ್ಯನವರು ಜಂಬೂರಿನಲ್ಲಿದ್ದ ಜಕ್ಕೇಶ್ವರ ಸ್ವಾಮಿಯುವರ ದೇವಾಲಯುಕ್ಕೆ ಸ್ವಾಮಿಯ ಅರ್ಧಾಂಗಿಯಾದ ಕಮಲಾಂಬಿಕೆಯಮ್ಮನ ಗುಡಿಯನ್ನು ಕಟ್ಟಿಸಿಕೊಟ್ಟ ಸಂಗತಿಯನ್ನು ವಿವರಿಸುತ್ತದೆ.

ಕ್ರಿ.ಶ. 1663ರ ಮೇ 6ರ ಶಾಸನವು [22] ಮೈಸೂರು ದೊರೆ ದೇವರಾಜ ಒಡೆಯರ ಕಾಲದಲ್ಲಿ ಕಾನಿಕಾರನ ಹಳ್ಳಿಯ ಪ್ರಭು ದೊಡ್ಡಯ್ಯನವರ ಕುಮಾರನಾದ ಬಸವಯ್ಯನವರು ಚಂದ್ರಶೇಖರ ಸ್ವಾಮಿಯ ದೇವಾಲಯವನ್ನು ಕಟ್ಟಿಸಿ ದೇವರನ್ನು ಪ್ರತಿಷ್ಠೆ ಮಾಡಿಸಿದ ಸಂಗತಿಯನ್ನು ತಿಳಿಸುತ್ತದೆ. ಜೊತೆಗೆ ಇಲ್ಲಿಯೇ ಕಾಡಬಸವೇಶ್ವರನ ದೇವಾಲಯವನ್ನು ಸಹ ಕಟ್ಟಿಸಿದರು ಎಂದು ಕೂಡ ತಿಳಿಸುತ್ತದೆ. ಈ ಶಾಸನದ ಕೆಳಭಾಗದಲ್ಲಿ ಗೌರಮ್ಮನವರು ಪ್ರಮಾದೀಚ ಸಂವತ್ಸರದಲ್ಲಿ ಈ ಚಂದ್ರಶೇಖರ ಸ್ವಾಮಿ ದೇವಾಲಯಕ್ಕೆ ಬಿಂಡೇನಹಳ್ಳಿ ಗ್ರಾಮವನ್ನು ದಾನ ನೀಡಿದ ಸಂಗತಿಯೂ ತಿಳಿದುಬರುತ್ತದೆ. ಒಂದೇ ಶಾಸನದಲ್ಲಿ ಮೇಲೆ ಬಸವಯ್ಯನ ಶಾಸನವಿದ್ದು ಕೆಳಗೆ ಗೌರಮ್ಮನವರ ಶಾಸನವಿರುವುದರಿಂದ ಈ ಗೌರಮ್ಮನವರು ಬಸವಯ್ಯನ ಪತ್ನಿಯಿರಬೇಕೆಂದು ಊಹಿಸುವುದು ತಪ್ಪಲ್ಲವೆಂದು ಭಾವಿಸುತ್ತೇನೆ.

ಈ ಬಸವಯ್ಯನ ಹೆಂಡತಿಯನ್ನು ಪುಣ್ಯಸ್ತ್ರೀ ಎಂದು ಕರೆಯುವ ಶಾಸನವೊಂದು ಮೈಸೂರು ಜಿಲ್ಲೆಯ ಬೆಟ್ಟದಪುರದಲ್ಲಿದೆ. [23] ಬೆಟ್ಟದಪುರದ ಬೆಟ್ಟದ ಅನ್ನದಾನಿ ಮಲ್ಲಿಕಾರ್ಜುನ ದೇವಾಲಯದ ಬಳಿ ಇರುವ ನಂದಿಮಂಟಪವನ್ನು ಕಾನಿಕಾರನಹಳ್ಳಿಯ ಪ್ರಭು ದೊಡ್ಡಯ್ಯನವರ ಕುಮಾರನಾದ ಬಸವಯ್ಯನ ಪುಂಣ್ಯಸ್ತ್ರೀ ಮುದ್ದುಮಲ್ಲಾಜಮ್ಮನವರು ಮಾಡಿಸಿದ ಸಂಗತಿಯನ್ನು ಇಲ್ಲಿನ ಶಾಸನವೊಂದು ದಾಖಲಿಸುತ್ತದೆ. ಈಕೆಯ ಇನ್ನೊಂದು ಶಾಸನವೂ [24] ಕೂಡ ಇದೇ ದೇವಾಲಯದಲ್ಲಿ ಇದ್ದು ಈಕೆ ಅನ್ನದಾನಿ ಮಲ್ಲಿಕಾರ್ಜುನ ಸ್ವಾಮಿಯವರ ಶ್ರೀಪಾದಕ್ಕೆ ಮುದ್ದುಮಲ್ಲಾಜಮ್ಮನವರ ತೋರಣದ ಸೇವೆಯನ್ನು ಮಾಡಿಸಿಕೊಟ್ಟ ಸಂಗತಿಯನ್ನು ತಿಳಿಸುತ್ತದೆ.

ಕ್ರಿ.ಶ. 1670ರ ಫೆಬ್ರವರಿ 24ಕ್ಕೆ ಸೇರಿದ ಶಾಸನವೇ [25] ನಮಗೆ ತಿಳಿದಿರುವ ಮಟ್ಟಿಗೆ ಕಾನಿಕಾರನಹಳ್ಳಿಯ ನಾಡಪ್ರಭುಗಳಿಗೆ ಸಂಬಂಧಿಸಿದಂತೆ ಕಡೆಯ ಶಾಸನವಾಗಿದೆ. ಚನ್ನರಾಯಪಟ್ಟಣದ ಚನ್ನಕೇಶವ ದೇವಾಲಯದ ಗರುಡಗಂಭದ ಕಟ್ಟೆಯ ಮೇಲಿರುವ ಈ ಶಾಸನವು ಪ್ರಭು ದೊಡ್ಡಯ್ಯನ ಮಗನಾದ ಬಸವಯ್ಯನು ಚನ್ನರಾಯಪಟ್ಟಣದ ಕೋಟೆಯಲ್ಲಿರುವ ಚನ್ನರಾಯಸ್ವಾಮಿ ದೇವಾಲಯಕ್ಕೆ ದೀಪಮಾಲೆ ಕಂಬವನ್ನು ಮಾಡಿಸಿಕೊಟ್ಟ ಸಂಗತಿಯನ್ನು ತಿಳಿಸುತ್ತದೆ.

ಹಾಗೆ ನೋಡಿದರೆ ದೊಡ್ಡಯ್ಯನಷ್ಟು ಬಸವಯ್ಯ ರಾಜಕೀಯ ಗೊಂದಲಗಳಿಗೆ ಈಡಾದಂತೆ ತೋರುವುದಿಲ್ಲ. ಇವನ ಬಹುತೇಕ ಎಲ್ಲ ಶಾಸನಗಳು ಇವನು ಕೈಗೊಂಡ ಧಾರ್ಮಿಕ ಕಾರ್ಯಗಳನ್ನು ತಿಳಿಸುವುದೇ ವಿನಃ ಯಾವುದೇ ರಾಜಕೀಯ ಸಂಗತಿಗಳನ್ನು ತಿಳಿಸುವುದಿಲ್ಲ. ಇವನ ಕಾಲದಲ್ಲಿ ಅತ್ಯುತ್ತಮವಾದ ಹಲವಾರು ದೇವಾಲಯಗಳು

ನಿರ್ಮಾಣವಾಗುವುದರ ಜೊತೆಗೆ ಈಗಾಗಲೇ ನಿರ್ಮಾಣವಾದ ದೇವಾಲಯಗಳಿಗೆ ಹಲವು ರೀತಿಯಲ್ಲಿ ಸೇರ್ಪಡೆಗಳು ಆಗತೊಡಗಿದವು.

ಒಟ್ಟಿನಲ್ಲಿ ಕಾನಿಕಾರನಹಳ್ಳಿಯ ನಾಡಪ್ರಭುಗಳು ತಮ್ಮ ಮೂಲನೆಲೆಯಾದ ಅಂದಿನ ಕಾಣಿಕಾರನಹಳ್ಳಿಯಿಂದ (ಇಂದಿನ ಕನಕಪುರ) ಚನ್ನರಾಯಪಟ್ಟಣಕ್ಕೆ ಬಂದು ಮೂರು ದಶಕಗಳವರೆಗೆ ಇಲ್ಲಿನ ಆಡಳಿತವನ್ನು ಅತ್ಯಂತ ಅದ್ಭುತವಾದ ರೀತಿಯಲ್ಲಿ ನಡೆಸಿರುವುದಕ್ಕೆ ಶಾಸನಾಧಾರಗಳಿದ್ದರೂ ಇನ್ನೂ ಹೆಚ್ಚಿನ ಅವಧಿಯಲ್ಲಿ ಆಳಿರಬಹುದು. ಅದಕ್ಕೆ ಚಾರಿತ್ರಿಕ ದಾಖಲೆಗಳು ಇನ್ನೂ ದಾಖಲಾಗಿಲ್ಲವೆಂದು ಹೇಳಬೇಕಾಗುತ್ತದೆ.

ಮಹಾಪರಾಕ್ರಮಿಗಳಾಗಿ ಯುದ್ಧಗಳಲ್ಲಿ ಭಾಗವಹಿಸಿದಂತೆಯೇ ದಾನಪರರಾಗಿ, ದೈವಭಕ್ತರಾಗಿ, ಅನೇಕ ದೇವಾಲಯಗಳಿಗೆ ಅನೇಕ ರೀತಿಯಲ್ಲಿ ಧಾರ್ಮಿಕ ಕಾರ್ಯಕ್ರಮಗಳನ್ನು ನೆರವೇರಿಸಿದರು. ಶೈವ ದೇವಾಲಯಗಳಿಗೆ ಹೆಚ್ಚಿನ ನೆರವನ್ನು ನೀಡಿರುವುದು ನಿಜವಾದರೂ ವೈಷ್ಣವ ದೇವಾಲಯಗಳಿಗೇನೂ ವಂಚನೆ ಮಾಡಿಲ್ಲದಿರುವುದಕ್ಕೆ ಚನ್ನರಾಯಸ್ವಾಮಿಯ ದೇವಾಲಯಕ್ಕೂ ಇವರಿಂದ ದಾನದತ್ತಿಗಳು ಪ್ರಾಪ್ತವಾಗಿರುವ ಹಿನ್ನೆಲೆಯಲ್ಲಿ ಗಮನಿಸಬಹುದಾಗಿದೆ. ಇದರೊಂದಿಗೆ ಕೆರೆ ನಿರ್ಮಾಣ, ತೂಬುಗಳನ್ನು ಇರಿಸುವುದು ಮುಂತಾದ ಸಾರ್ವಜನಿಕ ಕಾರ್ಯಗಳನ್ನು ಕೂಡ ಈ ವಂಶೀಯರು ಮಾಡಿ ಜನಾನುರಾಗಿಗಳಾಗಿದ್ದರು ಎಂದು ಹೇಳಬಹುದು.

---

**ಆಕರ ಸೂಚಿ ಮತ್ತು ಕೊನೆ ಟಿಪ್ಪಣಿಗಳು**

1. ಬಿ. ಲೂಯಿ ರೈಸ್ ; **ಎಪಿಗ್ರಾಫಿಯಾ ಕರ್ನಾಟಿಕಾ** ; **ಸಂಪುಟ 5** ; **ಭಾಗ 1. ಹಾಸನ ಡಿಸ್ಟ್ರಿಕ್ಟ್‌ನಲ್ಲಿರುವ ಶಾಸನಗಳು** ; ಬೆಂಗಳೂರು ; 1902.
2. **ಎಪಿಗ್ರಾಫಿಯಾ ಕರ್ನಾಟಿಕಾ(ಪರಿಷ್ಕೃತ)** ;**ಸಂಪುಟ 10** ; ಮೈಸೂರು ವಿಶ್ವವಿದ್ಯಾನಿಲಯ ; ಮೈಸೂರು ; 1997.
3. ಟಿ. ಪಿ. ವೆಂಕಟಾಚಲ ಶಾಸ್ತ್ರಿ ; **ಕನಕಪುರ ಎಂಬ ಕಾನಕಾನಹಳ್ಳಿಯ ಚರಿತ್ರೆ** ; ಪುಸ್ತಕ ಶಕ್ತಿ ಪ್ರಕಾಶನ ; ಬೆಂಗಳೂರು ; 2007.
4. **ಕಂಠೀರವ ನರಸರಾಜ ವಿಜಯ** ; ಮೈಸೂರು ವಿಶ್ವವಿದ್ಯಾಲಯ ; ಮೈಸೂರು ;
5. **ಕಂಠೀರವ ನರಸರಾಜ ವಿಜಯ** ; 18ನೆಯ ಸಂಧಿ ; 71ನೆಯ ಪದ್ಯ ; ಮೈಸೂರು ;
6. **ಕಂಠೀರವ ನರಸರಾಜ ವಿಜಯ** ; 13ನೆಯ ಸಂಧಿ ; 60ನೆಯ ಪದ್ಯ ; ಮೈಸೂರು ;
7. **ಕಂಠೀರವ ನರಸರಾಜ ವಿಜಯ** ; 12ನೆಯ ಸಂಧಿ ; 81ನೆಯ ಪದ್ಯ ; ಮೈಸೂರು ;
8. ಬಿಜಾಪುರದ ಇತಿಹಾಕ್ಕೆ ಸಂಬಂಧಿಸಿದ ಇಸವಿಗಳಿಗಾಗಿ ನಾನು **ಕನ್ನಡ ವಿಷಯ ವಿಶ್ವಕೋಶ** ಹಾಗೂ ಕೃಷ್ಣ ಕೊಲ್ಹಾರ ಕುಲಕರ್ಣಿಯವರ ಪುಸ್ತಕಗಳನ್ನು ಆಶ್ರಯಿಸಿದ್ದೇನೆ.
9. ಕೃಷ್ಣ ಕೊಲ್ಹಾರ ಕುಲಕರ್ಣಿ ; **ಬಿಜಾಪುರ ಆದಿಲ್ ಶಾಹಿ** ; ಸಿಕ್ಯಾಬ ; ಬಿಜಾಪುರ : 2002.
10. **ಎಪಿಗ್ರಾಫಿಯಾ ಕರ್ನಾಟಿಕಾ(ಪರಿಷ್ಕೃತ)** ; **ಸಂಪುಟ 10** ; ಚನ್ನರಾಯಪಟ್ಟಣ 17. ಮೈಸೂರು ವಿಶ್ವವಿದ್ಯಾನಿಲಯ ; ಮೈಸೂರು ; 1997
11. ಅದೇ ; ಚನ್ನರಾಯಪಟ್ಟಣ 4.
12. ಅದೇ ; ಚನ್ನರಾಯಪಟ್ಟಣ 14.

13. ಅದೇ ; ಚನ್ನರಾಯಪಟ್ಟಣ 14.
14. ಅದೇ ; ಚನ್ನರಾಯಪಟ್ಟಣ 20.
15. ಅದೇ ; ಚನ್ನರಾಯಪಟ್ಟಣ 81.
16. ಅದೇ ; ಚನ್ನರಾಯಪಟ್ಟಣ 38.
17. ಅದೇ ; ಚನ್ನರಾಯಪಟ್ಟಣ 17.
18. ಅದೇ ; ಚನ್ನರಾಯಪಟ್ಟಣ 11.
19. ಅದೇ ; ಚನ್ನರಾಯಪಟ್ಟಣ 15.
20. ಅದೇ ; ಚನ್ನರಾಯಪಟ್ಟಣ 50.
21. ಅದೇ ; ಚನ್ನರಾಯಪಟ್ಟಣ 43.
22. ಅದೇ ; ಚನ್ನರಾಯಪಟ್ಟಣ 7.
23. **ಮೈಸೂರು ಪುರಾತತ್ವ ವರದಿ** 1943–ಪುಟ 29.
24. ಅದೇ ;
25. **ಎಪಿಗ್ರಾಫಿಯಾ ಕರ್ನಾಟಿಕಾ(ಪರಿಷ್ಕೃತ)** ; **ಸಂಪುಟ 10** ; ಚನ್ನರಾಯಪಟ್ಟಣ 4. ಮೈಸೂರು ವಿಶ್ವವಿದ್ಯಾನಿಲ
; ಮೈಸೂರು ; 1997

# ರೈತ್‌ವಾರಿ ಪದ್ಧತಿ – ದಕ್ಷಿಣ ಕನ್ನಡದಲ್ಲಿ ಕಂಪೆನಿ ರಾಜ್ ಸ್ಥಾಪನೆ

1799ರಲ್ಲಿ ಟಿಪ್ಪುವಿನ ಮರಣಾನಂತರ ಇಂಗ್ಲಿಷ್ ಈಸ್ಟ್ ಇಂಡಿಯಾ ಕಂಪೆನಿಯ ಅಧಿಕಾರ ವಿಸ್ತೃತ ರೂಪದಲ್ಲಿ ಹೊಸ ಪ್ರದೇಶವನ್ನೊಳಗೊಂಡಂತೆ ಸ್ಥಾಪನೆಯಾಗುತ್ತದೆ. ಉತ್ತರ ಕನ್ನಡ ಮತ್ತು ದಕ್ಷಿಣ ಕನ್ನಡವನ್ನು ಒಳಗೊಂಡ ಕೆನರ ಪ್ರದೇಶವು ಕಂಪೆನಿಯ ಪಾಲಾಗುತ್ತದೆ. 1800 ರಲ್ಲಿ ಆಡಳಿತಾತ್ಮಕ ಅನುಕೂಲಕ್ಕಾಗಿ ಕೆನರವನ್ನು ಉತ್ತರ ವಿಭಾಗ (ಉತ್ತರ ಕನ್ನಡ) ಮತ್ತು ದಕ್ಷಿಣ ವಿಭಾಗ (ದಕ್ಷಿಣ ಕನ್ನಡ) ಎಂದು ವಿಭಾಗಿಸಲಾಗುತ್ತದೆ. ವಾಣಿಜ್ಯ ವ್ಯವಹಾರಗಳಲ್ಲಿ ತೊಡಗಿಕೊಂಡಿದ್ದ ಕಂಪೆನಿ ಆಡಳಿತಾತ್ಮಕ ಕಂಪೆನಿಯಾಗಿ ಬದಲಾಗುತ್ತದೆ. ಈ ಬದಲಾವಣೆ ಭಾರತವನ್ನು ಕುರಿತಂತೆ ಅತ್ಯಂತ ವಿಸ್ತೃತ ಜ್ಞಾನ ಪಡೆಯುವ ಅವಶ್ಯಕತೆಯನ್ನುಂಟು ಮಾಡುತ್ತದೆ. ಈ ಜ್ಞಾನ ಸಂಚಯನ ಪ್ರಕ್ರಿಯೆಯು ಕಂದಾಯ ವರದಿಗಳು ಮತ್ತು ಅದರ ಕುರಿತು ಬ್ರಿಟಿಷ್ ಅಧಿಕಾರಿಗಳ ಮಧ್ಯೆ ನಡೆಯುವ ಸಂವಾದಗಳ ಮೂಲಕ ಆರಂಭವಾಗುತ್ತದೆ.

**ಸತೀಶಗಟ್ಟಿ**
ಸಂಶೋಧನಾ ವಿದ್ಯಾರ್ಥಿ
ಇತಿಹಾಸ ವಿಭಾಗ
ಜ್ಞಾನಭಾರತಿ
ಬೆಂಗಳೂರು ವಿಶ್ವವಿದ್ಯಾನಿಲಯ
ಬೆಂಗಳೂರು

ಆಧುನಿಕೋತ್ತರವಾದದ ಚಿಂತಕರು ಪೂರ್ವದ ಕುರಿತಾದ ಯುರೋಪಿನ ಬರವಣಿಗೆಗಳು. ಪೂರ್ವವನ್ನು ಅರ್ಥೈಸುವ. ಪಶ್ಚಿಮವನ್ನು ವಿವರಿಸುವ ವಿಧಾನಕ್ಕಿಂತ ವಿರುದ್ಧವಾದ ರೀತಿಯಲ್ಲಿ ವಿವರಿಸುವದರ ಮೂಲಕ ಪೂರ್ವದ.

ಮೇಲೆ ಪಶ್ಚಿಮದ ಅಧಿಕಾರ ಸ್ಥಾಪಿಸಲಾಗುತ್ತದೆ ಎಂದು ತಿಳಿಸುತ್ತಾರೆ. ಈ ವಾದ ಆರಂಭಿಕ ಹಂತದಿಂದ ಸಾಮ್ರಾಜ್ಯಶಾಹಿ ಹಂತದವರೆಗಿನ ಪೂರ್ವದ ಕುರಿತ ಯುರೋಪಿನ ಬರವಣಿಗೆಗಳಲ್ಲಿ ಯಾವುದೇ ಬದಲಾವಣೆಗಳನ್ನು ಗುರುತಿಸುವುದಿಲ್ಲವೆಂದು ಟೀಕೆಗೆ ಒಳಗಾಗಿದೆ. ಭಾರತದಲ್ಲಿ ಈ ವಾದದ ಪ್ರಮುಖ ಟೀಕಾಕಾರರು 'ರಿವಿಸ್‌ನಿಷ್ಟ್ ಹಿಸ್ಟೋರಿಯೋಗ್ರಾಫಿ' ಎಂದು ಕರೆಯುವ ಇತಿಹಾಸಕಾರರ ಗುಂಪಿಗೆ ಸಂಬಧಿಸಿದವರಾಗಿದ್ದಾರೆ. ಇವರ ಪ್ರಕಾರ ವಸಾಹತು ಕಾಲದ ಜ್ಞಾನವು ವಸಾಹತು ಪೂರ್ವ ಸ್ಥಳೀಯ ಜ್ಞಾನ ಸಂಚಯನದ ಮಾದರಿಯನ್ನೇ ಅನುಸರಿಸುತ್ತದೆ ಎಂದು ತಿಳಿಸುತ್ತಾರೆ. ಇವರಿಗೆ ವಸಾಹತು ಪೂರ್ವ ಮತ್ತು ವಸಹಾತು ಕಾಲದ ಮಾಹಿತಿ ಸಂಗ್ರಹಣೆಯಲ್ಲಿ ಯಾವುದೇ ವತ್ಯಾಸವನ್ನು ಕಾಣುವುದಿಲ್ಲ. ಭಾರತೀಯರೆ ಮಾಹಿತಿದಾರರಾಗಿ ವಸಹಾತುಕಾಲದ ಜ್ಞಾನ ಸಂಚಯನಕ್ಕೆ ಕಾರಣಕರ್ತರಾಗುತ್ತಾರೆ ಎಂದು ತಿಳಿಸುತ್ತಾರೆ. ಸೈದ್‌ನ ಸಿದ್ಧಾಂತದ ಇನ್ನೋರ್ವ ಟೀಕಾಕಾರರಾದ ಕೇಟ್ ಟೆಲ್ಟ್ಚರ್ ರವರು ವಾಣಿಜ್ಯ ವಸಹಾತುಷಾಹಿ ಮತ್ತು ಸಾಮ್ರಾಜ್ಯ ವಸಹಾತುಷಾಹಿಯಲ್ಲಿರುವ ವತ್ಯಾಸಗಳನ್ನು ವಿವರಿಸುತ್ತಾರೆ. ಇವರ ಪ್ರಕಾರ ವಾಣಿಜ್ಯ ವಸಹಾತುಷಾಹಿ ಕಾಲಘಟ್ಟದಲ್ಲಿ ಪೂರ್ವದ ಅಥವಾ ಭಾರತದ ಕುರಿತಾದ ಯುರೋಪಿನ ಬರವಣಿಗೆಗಳಲ್ಲಿ 'ಸಾಮ್ಯತೆ ಮತ್ತು ಭಿನ್ನತೆ' ವಿಧಾನಗಳನ್ನು ಅನುಸರಿಸಿ ವಿವರಿಸಲಾಗುತ್ತದೆ ಎಂದು ತಿಳಿಸುತ್ತಾರೆ. ವಾಣಿಜ್ಯ ವಸಾಹತುಷಾಹಿ ಕಾಲದ ಯುರೋಪಿಯನ್ ಬರವಣಿಗೆಗಳು ತಾವಿರುವ ಸೀಮಿತ ನೆಲೆಗಳಲ್ಲಿ ಸ್ಥಳೀಯ ರಾಜರುಗಳು, ಭಾಷೆ, ಜನರು ಮತ್ತು ಧರ್ಮ ಸಂಪ್ರದಾಯವನ್ನು ತಿಳಿಯುವ ಪ್ರಯತ್ನವನ್ನು ಮಾಡುತ್ತವೆ. ಕಂದಾಯ ಮತ್ತು ಗ್ರಾಮಗಳ ಕುರಿತಾಗಿ ಪೋರ್ಚುಗೀಸರ ಆಡಳಿತದ ಅಧಿಕಾರವಿದ್ದ ಗೋವಾದಲ್ಲಿ ಅಧ್ಯಯನ ಮಾಡಲಾಗುತ್ತದೆ. ವಾಣಿಜ್ಯ ವಸಾಹತುಷಾಹಿ ಕಾಲಘಟ್ಟದಲ್ಲಿ ವ್ಯಾಪಾರಿ ಉತ್ಪನ್ನ ಮತ್ತು ವಸ್ತುಗಳು, ಅವುಗಳು ಲಭ್ಯವಿರುವ ನಗರಗಳು, ಮಾರ್ಗಗಳು ಹಾಗೂ ಪ್ರಮುಖ ಸ್ಥಳೀಯ ರಾಜರುಗಳ ಕುರಿತು ವಿವರಣೆ ನೀಡಲಾಗುತ್ತದೆ. ರಾಜರುಗಳು ಮತ್ತು ಜನರ ಕುರಿತಾದ ವಿವರಣೆಗಳು ಕೂಡಾ ಅವರ ಶ್ರೀಮಂತಿಕೆ ಮತ್ತು ಅಲ್ಲಿ ಜರಗುವ ವ್ಯಾಪಾರದ ಕುರಿತಾಗಿರುತ್ತದೆ. ಈ ಕಾಲಘಟ್ಟದಲ್ಲಿ ಪ್ರಮುಖವಾಗಿ ಕರಾವಳಿ ತೀರದ ನಗರಗಳನ್ನು ಪ್ರಮುಖವಾಗಿ ವಿವರಿಸಲಾಗುತ್ತದೆ. ಹಳ್ಳಿಗಳ ವಿವರಣೆ ತುಂಬಾ ಸೀಮಿತವಾಗಿರುತ್ತದೆ. ಅದೇ ವಸಹಾತುಷಾಹಿ ಆಡಳಿತದ ಅಧಿಕಾರವಾಗಿ ಬದಲಾದ ನಂತರ ಯುರೋಪಿಯನ್ (ಬ್ರಿಟಿಷ್) ಬರವಣಿಗೆಗಳ ಸ್ವರೂಪ ಬದಲಾಗುತ್ತದೆ. ವ್ಯಾಪಾರದ ಬದಲು ಕಂದಾಯ ಸಂಗ್ರಹಣೆ ಮಹತ್ವ ಪಡೆಯುತ್ತದೆ. ಕಂದಾಯ ಸಂಗ್ರಹಣೆ ಮತ್ತು ಆಡಳಿತಾತ್ಮಕ ಜ್ಞಾನಕ್ಕಾಗಿ ಕಂಪೆನಿ ಸರಕಾರ ಸ್ಥಳೀಯರ ಕುರಿತು ವಿಸ್ತೃತ ಜ್ಞಾನ ಪಡೆಯುವ ಅವಶ್ಯಕತೆಯುಂಟಾಗುತ್ತದೆ. ಈ ಹಿನ್ನಲೆಯಲ್ಲೇ ಬರ್ನಾಡ್ ಕಾನ್‌ರವರು ಟಿಪ್ಪುವಿನ ಸೋಲಿನ ನಂತರ ಕಂಪೆನಿ ಸರಕಾರ ಭಾರತದ ಇತಹಾಸದ ಕುರಿತ ದಾಖಲೆಗಳನ್ನು ಶೋಧಿಸುವ ವ್ಯವಸ್ಥಿತ ಪ್ರಯತ್ನಕ್ಕೆ ಕೈ ಹಚ್ಚಿತ್ತು ಎಂದು ತಿಳಿಸುತ್ತಾರೆ. ಕಂಪೆನಿ ಸ್ವರೂಪವು ಆಡಳಿತ ಸಂಸ್ಥೆಯಾಗಿ ಬದಲಾಗಿ ಸಾಮ್ರಾಜ್ಯಶಾಹಿ ರೂಪ ಪಡೆದಾಗ, ಆಡಳಿತ ಮಾಡಲು ಮತ್ತು ಸಮರ್ಥಿಸಿಕೊಳ್ಳಲು ಜ್ಞಾನವನ್ನು ಬಳಸಿಕೊಳ್ಳಲಾಗುತ್ತದೆ. ಈ ಹಂತದಲ್ಲೂ ಕೂಡ ಭಾರತದ ಕುರಿತಾದ ಯುರೋಪಿನ ಬರವಣಿಗೆಗಳು ಏಕರೂಪವನ್ನು ಹೊಂದಿರುವುದಿಲ್ಲ. ಆದರೆ ಯುರೋಪಿನ ಅಥವಾ

ಬ್ರಿಟಿಷರ ಎಲ್ಲಾ ಬರವಣಿಗೆಗಳು ಅಂತಿಮವಾಗಿ ಕಂಪೆನಿ ಆಡಳಿತದ ವಿಸ್ತರಣೆ ಮತ್ತು ಮುಂದುವರಿಕೆಯನ್ನು ಪ್ರತಿಪಾದಿಸುತ್ತದೆ. ಈ ಹಿನ್ನೆಲೆಯಲ್ಲಿ ಸರ್ ಥಾಮಸ್ ಮನ್ರೋರವರ ದಕ್ಷಿಣ ಕನ್ನಡದಲ್ಲಿ ಜಾರಿಗೆ ತಂದ 'ರೈತವಾರಿ ಪದ್ಧತಿ' ಯನ್ನು ವಿವರಿಸುವ ಪ್ರಯತ್ನ ಮಾಡಲಾಗಿದೆ.

ರೈತ್‌ವಾರಿ ಪದ್ಧತಿಯ ಕುರಿತು ಇರುವ ಯುರೋಪಿನ ಬರವಣಿಗೆಗಳು ಹಲವಾರು ಸಂಪುಟಗಳಲ್ಲಿವೆ. ರೈತ್‌ವಾರಿ ಕುರಿತಾದ ಬ್ರಿಟಿಷ್ ಬರವಣಿಗೆಗಳೇ ಈ ಕಂದಾಯ ಪದ್ಧತಿಯ ಪರ ಮತ್ತು ವಿರುದ್ಧ ಎನ್ನುವ ಸಂವಾದದ ಮೂಲಕ ನಡೆಯುತ್ತದೆ. ಸರ್ ಥಾಮಸ್ ಮನ್ರೋ, ವಿಲಿಯಂ ಥ್ಯಾಕರೆ ಮತ್ತು ರೆವನ್‌ಷಹಾ ರೈತ್‌ವಾರಿ ಪರ ವಾದಿಸಿದರೆ ಅದೇ ಜೆ. ಹಾಡ್ಜ್‌ಸನ್, ಜೆ. ಬ್ರಿಗ್ಸ್ ಹಾಗೂ ಪುಲ್ಲಾರ್ಟನ್ ರವರು ಬಂಗಾಳದ ಮಾದರಿ ಖಾಯಂ ಭೂ ಜಮೀನುದಾರಿ ಪದ್ಧತಿಯನ್ನು ಜಾರಿಗೆ ತರಲು ಪ್ರಯತ್ನಿಸುತ್ತಾರೆ ಮತ್ತು ರೈತ್‌ವಾರಿ ಪದ್ಧತಿಯನ್ನು ವಿರೋಧಿಸುತ್ತಾರೆ. ಈ ಲೇಖನದಲ್ಲಿ ಪ್ರಮುಖವಾಗಿ ದಕ್ಷಿಣ ಕನ್ನಡಕ್ಕೆ ಸಂಬಂಧಿಸಿದ ಹತ್ತೊಂಬತ್ತನೇ ಶತಮಾನದ ಆರಂಭಿಕ ದಶಕಗಳ ರೈತವಾರಿ ಕುರಿತಾಗಿರುವ ಬ್ರಿಟಿಷ್ ಬರವಣಿಗೆಗಳನ್ನು ಮಾತ್ರ ಪರಿಶೀಲಿಸಲಾಗಿದೆ.

### ರೈತವಾರಿ ಮತ್ತು ಮನ್ರೋ

1799ರಲ್ಲಿ ಮನ್ರೋರವರನ್ನು ಕೆನರದ ಕಲೆಕ್ಟರ್ ಆಗಿ 'ಮಿಲಿಟರಿ ಕಲೆಕ್ಟರ್ಸ್' ಗುಂಪಿನಿಂದ ನೇಮಕ ಆಗಿ ಜುಲೈ 1799 ರಿಂದ ಅಕ್ಟೋಬರ್ 1800 ರವರೆಗೆ ಅಧಿಕಾರದಲ್ಲಿರುತ್ತಾರೆ. ಬಾರಮಹಲ್‌ನಲ್ಲಿ ಅಲೆಕ್ಸಾಂಡರ್ ರೀಡ್ ಮತ್ತು ಕೆನರದಲ್ಲಿ ಥಾಮಸ್ ಮನ್ರೋರವರನ್ನು ಮದ್ರಾಸ್ ಪ್ರಸಿಡೆನ್ಸಿಯ 'ಸಿವಿಲ್ ಕಲ್‌ಕ್ಟರ್'ಗೆ ಬದಲಾಗಿ ಮಿಲಿಟರಿ ಕಲೆಕ್ಟರ್‌ಗಳಾಗಿ ಅವರಿಗಿರುವ ಸ್ಥಳೀಯ ಭಾಷೆಗಳ ಜ್ಞಾನದ ಕಾರಣದಿಂದ ಆಯ್ಕೆ ಮಾಡಲಾಗುತ್ತದೆ. ಮನ್ರೋರವರಿಗೆ ಕನ್ನಡ ಮತ್ತು ತೆಲುಗು ಚೆನ್ನಾಗಿ ತಿಳಿದಿತ್ತು. ಅದೇ ಸಿವಿಲ್ ಕಲೆಕ್ಟರ್‌ಗಳು ಸ್ಥಳೀಯರ ಜೊತೆಗೆ ಸಂವಹನಕ್ಕಾಗಿ ದುಬಾಷಿಗಳ ಮೇಲೆ ಅವಲಂಬಿತರಾಗಬೇಕಾದುದರಿಂದ ಅವರನ್ನು 'ದುಬಾಷಿ ಕಲೆಕ್ಟರ್'ಗಳೆಂದು ಕರೆಯಲಾಗುತ್ತಿತ್ತು. 1789ರಲ್ಲಿ ಸರ್ ಜಾನ್ ಶೋರ್ ರವರು ಎರಡು ರೀತಿಯ ಕಂದಾಯ ಪದ್ಧತಿಯ ಕುರಿತು ತಿಳಿಸುವಾಗ ಮೊದಲ ಬಾರಿಗೆ 'ಭೂಮಿಯನ್ನು ಅಳತೆಗೊಳಪಡಿಸಿ, ವರ್ಗೀಕರಿಸಿ ರೈತರಿಂದ ಸರಕಾರಕ್ಕೆ ನೇರವಾಗಿ ಕಂದಾಯ ಪಾವತಿಸುವ ಪದ್ಧತಿ'ಯ ಕುರಿತು ತಿಳಿಸುತ್ತಾರೆ. ರೈತವಾರಿ ಪದ್ಧತಿಯನ್ನು ಮದ್ರಾಸ್ ಪ್ರೆಸಿಡೆನ್ಸಿಯ ಬಾರಮಹಲ್‌ನಲ್ಲಿ ಮೊದಲ ಬಾರಿಗೆ ಅನುಷ್ಠಾನಕ್ಕೆ ತರುವವರು ಅಲೆಕ್ಸಾಂಡರ್ ರೀಡ್. ಬೇರೆ ಕಂದಾಯ ಪದ್ಧತಿಗಳ ಅನುಷ್ಠಾನದ ಬಗೆಗೆ ಆಲೋಚಿಸುತ್ತಿದ್ದ ಮನ್ರೋರವರು ತುಂಬಾ ತಡವಾಗಿ ರೈತವಾರಿ ಪದ್ಧತಿಯ ಕುರಿತು ಆಸಕ್ತಿ ವಹಿಸುತ್ತಾರೆ. ಈ ಕಾರಣದಿಂದಲೇ ಡ್ರೈಕ್ಸ್ ಮತ್ತು ನಿರ್ಮಲ್ ಮುಖರ್ಜಿ ಮನ್ರೋರವರ ರೈತವಾರಿಯ ಕುರಿತ ತಡವಾಗಿ ಬದಲಾದ ಆಸಕ್ತಿಯನ್ನು 'ತಡವಾದ ಮತಾಂತರ' ಎಂದೇ ಕರೆಯುತ್ತಾರೆ. ಮನ್ರೋರವರು ಉಳಿದ ಜಿಲ್ಲೆಗಳಿಗೆ ಹೋಲಿಸಿದರೆ ದಕ್ಷಿಣ ಕನ್ನಡದಲ್ಲಿ ಖಾಸಗಿ ಆಸ್ತಿಯ ಕಲ್ಪನೆ ವಿಜಯನಗರ ಕಾಲದಿಂದಲೂ ಇದೆ ಎಂದು ತಿಳಿಸುತ್ತಾರೆ. ಇದಕ್ಕಾಗಿ ಕಪ್ಪು ಕಡತಗಳು, ಶಾಸನಾತ್ಮಕ ಸಾಕ್ಷ್ಯಗಳನ್ನು ಒದಗಿಸುತ್ತಾರೆ. ದಕ್ಷಿಣ ಕನ್ನಡದಲ್ಲಿ ಖಾಸಗಿ ಆಸ್ತಿಯ ಕಲ್ಪನೆ 'ಇರುವುದರಿಂದ ಕಂಪೆನಿ ಸರಕಾರ ರೈತವಾರಿ



ಸತೀಶಗಟ್ಟಿ

ಪದ್ಧತಿ ಜಾರಿಗೆ ತರಬೇಕೆಂದು ತಿಳಿಸುತ್ತಾರೆ. ಅದೇ ನಂತರದಲ್ಲಿ 'ಸೀಡೆಡ್ ಡಿಸ್ಟ್ರಿಕ್' ನಲ್ಲಿ ಕಲೆಕ್ಟರ್ ಆದಾಗ ಅಲ್ಲಿರುವ ಪ್ರಬಲ ಪಾಳೇಗಾರರನ್ನು ಮಣಿಸಲು ಭೂಮಿಯ ಮಾಲಕತ್ವ ಸರಕಾರದ್ದಾಗಿದೆ. ಆದುದರಿಂದ ರೈತವಾರಿ ಪದ್ಧತಿ ಜಾರಿಗೆ ತರಬೇಕೆಂದು ತಿಳಿಸುತ್ತಾರೆ. ಯಾವಾಗ ಅಸ್ತಿತ್ವದಲ್ಲಿರುವ ನ್ಯಾಯಾಂಗ ವ್ಯವಸ್ಥೆ ರೈತವಾರಿ ಪದ್ಧತಿಗೆ ಹೊಂದಿಕೊಳ್ಳುವುದಿಲ್ಲವೋ ಆಗ ನ್ಯಾಯಾಂಗ ವ್ಯವಸ್ಥೆಯ ಸುಧಾರಣೆ ತರಬೇಕೆಂದು ತಿಳಿಸುತ್ತಾರೆ. ಮನ್ರೋರವರಿಗೆ ಕೃಷಿ ಜಮೀನು ದಕ್ಷಿಣ ಕನ್ನಡದ ರೀತಿಯಲ್ಲಿ ಖಾಸಗಿ ಆಸ್ತಿಯಾಗಿರಲಿ ಅಥವಾ ಸೀಡೆಡ್ ಡಿಸ್ಟ್ರಿಕ್ಟ್ ರೀತಿಯಲ್ಲಿ ಸರಕಾರಿ ಭೂಮಿಯಾಗಿರಲಿ ರೈತವಾರಿ ಪದ್ಧತಿ ಜಾರಿಗೆ ತರುವುದು ಪ್ರಮುಖವಾಗಿರುತ್ತದೆ. ನ್ಯಾಯಾಂಗ ವ್ಯವಸ್ಥೆಯ ಜೊತೆ ತಿಕ್ಕಾಟವಾದಾಗ ರೈತವಾರಿಯೇ ಮಹತ್ವವನ್ನು ಪಡೆಯುತ್ತದೆ. ಮನ್ರೋರವರು ಸ್ಥಳೀಯ ಜನರಿಂದ ಸಾಹೇಬ, ದೊರೆ ಎಂದು ಕರೆಸಿಕೊಳ್ಳುತ್ತಾರೆ. ಆದುದರಿಂದ ಅವರ ಸ್ಥಿತಿಗತಿಗಳನ್ನು ಸುಧಾರಿಸಲು ರೈತವಾರಿ ಪದ್ಧತಿ ಜಾರಿಗೆ ತರಲು ಪ್ರಯತ್ನಿಸುತ್ತಾರಾ ಅಥವಾ ಇನ್ನಿತ್ತರ ಕಾರಣಗಳೇನಾದರೂ ಇವೆಯಾ ಎನ್ನುವುದನ್ನು ಶೋಧಿಸುವುದೇ ಈ ಲೇಖನದ ಉದ್ದೇಶವಾಗಿದೆ.

## ಮೂಲವರ್ಗದಾರರು, ಗೇಣಿದಾರರು, ಕೃಷಿಕಾರ್ಮಿಕರು ಮತ್ತು ಗುಲಾಮರು

ಧರ್ಮ ಕುಮಾರ್ ಹೇಳುವ ಪ್ರಕಾರ ರೈತವಾರಿಯೆಂದರೆ ಸಣ್ಣ ಭೂಮಾಲೀಕರು ತಾವೇ ಸರಕಾರಕ್ಕೆ ಕಂದಾಯ ಪಾವತಿಸುವುದೇ ಆಗಿದೆ. ಅವರು ಮುಂದುವರಿದು ಈ ರೈತರಲ್ಲಿ ಶ್ರೀಮಂತ ಮತ್ತು ಬಡವರನ್ನು ಗುರುತಿಸುತ್ತಾರೆ ಹಾಗೂ ದಕ್ಷಿಣ ಕನ್ನಡದ ಶ್ರೀಮಂತ ರೈತರನ್ನು 'ಮೂಲವರ್ಗದಾರ' ರೆಂದು ಕರೆಯುತ್ತಾರೆ ಮತ್ತು ಇವರು ಪ್ರಮುಖವಾಗಿ ಬ್ರಾಹ್ಮಣ ವರ್ಗದವರೇ ಆಗಿರುತ್ತಾರೆಂದು ತಿಳಿಸುತ್ತಾರೆ. ಎನ್.ಎಸ್.ಭಟ್ ರವರು ರೈತವಾರಿಯೆಂದರೆ ಸಣ್ಣ ಭೂ ಹಿಡುವಳಿ ಹೊಂದಿದ ಭೂ ಮಾಲೀಕರ ಜೊತೆ ಮಾಡಿಕೊಂಡ ಒಪ್ಪಂದ ಮತ್ತು ಇಲ್ಲಿ ಯಾವುದೇ ಮಧ್ಯವರ್ತಿಯಿಲ್ಲದೆ ರೈತರೇ ಸರಕಾರಕ್ಕೆ ನೇರವಾಗಿ ಭೂ ಕಂದಾಯವನ್ನು ಪಾವತಿಸುತ್ತಾರೆ. ಭಟ್‌ರವರ ಪ್ರಕಾರ ನಿಜವಾದ ರೈತರ ಜೊತೆ ರೈತವಾರಿ ಕಂದಾಯ ಒಪ್ಪಂದ ನಡೆದಿರುವ ಅವಕಾಶ ಸೀಮಿತ ಎಂದು ತಿಳಿಸುತ್ತಾರೆ. ಯಾಕೆಂದರೆ ಕೃಷಿ ಭೂಮಿಯ ಬಹುಪಾಲು ಮೂಲವರ್ಗದಾರರೆಂಬವರ ನಿಯಂತ್ರಣದಲ್ಲಿತ್ತು ಎಂದು ತಿಳಿಸುತ್ತಾರೆ. ಮನ್ರೋ ಪ್ರಕಾರ ರೈತ್‌ವಾರಿ ಪದ್ಧತಿಯೆಂದರೆ. ಯಾವುದೇ ಮಧ್ಯವರ್ತಿಯಿಲ್ಲದೆ ರೈತರೇ ಸರಕಾರಕ್ಕೆ ನೇರವಾಗಿ ಭೂ ಕಂದಾಯವನ್ನು ಪಾವತಿ ಮಾಡುವುದೇ ಆಗಿದೆ. ಮನ್ರೋರವರ ರೈತರ ಮತ್ತು ರೈತವಾರಿಯ ಕುರಿತ ವ್ಯಾಖ್ಯಾನ ಗೊಂದಲಕಾರಿಯಾಗಿರುವುದರಿಂದ ಅವರ ವಿರೋಧಿಗಳಷ್ಟೇ ಅಲ್ಲದೆ ಅವರ ಅನುಯಾಯಿಗಳಾದ ವಿಲಿಯಂ ಥ್ಯಾಕರೆ, ರೆವನ್‌ಷಹಾ ರೈತವಾರಿಯನ್ನು ಅರ್ಥೈಸುವುದು ಕಷ್ಟ ಎಂದು ತಿಳಿಸುತ್ತಾರೆ. ಈ ಗೊಂದಲಕ್ಕೆ ರೈತರು ಎನ್ನುವುದು ಒಂದೇ ರೀತಿಯ, ಒಂದೇ ಮಾದರಿಯ ರೀತಿಯಲ್ಲಿ ಇರದೆ ಇರುವುದೇ ಆಗಿದೆ. ದಕ್ಷಿಣ ಕನ್ನಡದಲ್ಲಿ ರೈತರ ಗುಂಪನ್ನು ಮನ್ರೋ ತಿಳಿಸುವ ಸಣ್ಣ ಭೂಮಾಲೀಕರು ಅಥವಾ ಮೂಲವರ್ಗದಾರರು, ಗೇಣಿದಾರರು, ಕೃಷಿ ಕಾರ್ಮಿಕರು ಮತ್ತು ಗುಲಾಮರು ಎಂದು ವರ್ಗೀಕರಿಸಬಹುದು. ಗೇಣಿದಾರರಲ್ಲಿ ಹಲವಾರು ವಿಂಗಡಣೆಗಳಿವೆ.

ಮನ್ರೋ ತಮ್ಮ ಪತ್ರಗಳಲ್ಲಿ ದಕ್ಷಿಣ ಕನ್ನಡದಲ್ಲಿ ಸಣ್ಣ ಭೂ ಮಾಲೀಕರ ಮತ್ತು ಸಣ್ಣ ಭೂ ಹಿಡುವಳಿಯ ಪರವಾಗಿ ವಾದಿಸುತ್ತಾನೆ. ಬಂಗಾಲ ಮಾದರಿಯ ಬೃಹತ್ ಜಹಗೀರು ಮತ್ತು ಜಮೀನುದಾರಿ ಪದ್ಧತಿಯನ್ನು ದಕ್ಷಿಣ ಕನ್ನಡದಲ್ಲಿ ಜಾರಿಗೆ ತರುವುದನ್ನು ಪ್ರಬಲವಾಗಿ ವಿರೋಧಿಸುತ್ತಾನೆ. ಬಂಗಾಲ ಮಾದರಿಯ ಅನುಷ್ಠಾನ ಮನ್ರೋ ಪ್ರಕಾರ ಜಿಲ್ಲೆಯನ್ನು ಕನಿಷ್ಠ ಪಕ್ಷ ಎರಡು ಶತಮಾನಗಳ ಕಾಲ ಹಿಂದಕ್ಕೆ ತಳ್ಳುತ್ತದೆ ಮತ್ತು ಶಸ್ತ್ರಾಸ್ತ್ರ ಹೊಂದಿದ ಪ್ರಬಲ ಪಾಳೆಯಗಾರರ ಉಗಮಕ್ಕೆ ಕಾರಣವಾಗಿ ಕಂಪೆನಿ ಸರಕಾರದ ಅಸ್ತಿತ್ವಕ್ಕೆ ಮಾರಕವಾಗುತ್ತದೆ. ಮನ್ರೋ ಮತ್ತು ಥ್ಯಾಕರೆ ಪ್ರಕಾರ ಜಮೀನುದಾರಿ ಪದ್ಧತಿ ಭಾರತದಲ್ಲಿರದ ಮತ್ತು ಯುರೋಪಿನಿಂದ ಎರವಲು ಪಡೆದಿರುವುದೇ ಆಗಿದೆ ಎಂದು ತಿಳಿಸುತ್ತಾನೆ. ಈ ರೀತಿಯ ಪ್ರಯತ್ನವನ್ನು ಭಾರತೀಯ ವಿಷಯಗಳನ್ನು ಇಂಗ್ಲಿಷ್ ಕಣ್ಣಿಂದ ನೋಡುವ ಪ್ರಯತ್ನ ಎಂದು ಕರೆಯಲಾಗುತ್ತದೆ. ಮನ್ರೋ, ದಕ್ಷಿಣ ಕನ್ನಡದಲ್ಲಿ ಬಂಗಾಳ ಮಾದರಿಯ ಭೂ ಹಿಡುವಳಿಗಳು ಅಸ್ತಿತ್ವದಲ್ಲಿರುವ ವಿಭಾಗಗಳಾದ 'ಮಾಗಣೆ'ಗಳನ್ನು ಮರುವಿಂಗಡಣೆ ಅಥವಾ ಜೊತೆ ಸೇರಿಸುವುದಕ್ಕೆ ಕಾರಣವಾಗುತ್ತದೆ. ಪ್ರತಿಯೊಂದು ಮಾಗಣೆಯು ಪ್ರತ್ಯೇಕ ಸಮುದಾಯ (ಜಾತಿ) ಗಳಿಗೆ ಸಂಬಂದಿಸಿದೆ ಯಾವುದೇ ವಿಭಾಗವನ್ನು ಈ ಮಾಗಣೆಗಳಲ್ಲಿರುವ ಸಮುದಾಯ ವಿರೋಧಿಸುತ್ತದೆಯೆಂದು ಮತ್ತು ಜಿಲ್ಲೆಯ ಆಡಳಿತಕ್ಕೆ ತೊಂದರೆಯಾಗುತ್ತದೆಂದು ಮನ್ರೋ ತಿಳಿಸುತ್ತಾನೆ. ದಕ್ಷಿಣ ಕನ್ನಡದ ಇತಿಹಾಸ (ವಿಜಯನಗರ ಅರಸರ ಕಾಲದಿಂದಲೂ ಇರುವ ರೈತವಾರಿ) ಸಂಪ್ರದಾಯ, ಮೌಲ್ಯಗಳು, ಕೃಷಿ ಚಟುವಟಿಕೆಗಳು ಸಣ್ಣ ಭೂ ಹಿಡುವಳಿಗಳಿಗೆ ಪೂರಕವಾಗಿದೆಯೆಂದು ಥ್ಯಾಕರೆ ವಾದಿಸುತ್ತಾನೆ. ಇನ್ನು ಮುಂದೆ ಹೋಗಿ ಸ್ಥಳೀಯ ಶ್ರೀಮಂತ ವರ್ಗ ಸ್ವಭಾವತ ಸಣ್ಣ ಭೂಮಾಲೀಕರಾಗಿ ರೂಪಿಸಿಲ್ಪಟ್ಟಿದ್ದಾರೆ ಎಂದು ತಿಳಿಸುತ್ತಾನೆ. ಸಣ್ಣ ಭೂ ಹಿಡುವಳಿಯನ್ನು ಹೊಂದಿದ ಒಬ್ಬ ಶ್ರೀಮಂತ ರೈತ ಬುಕಾನನ್ ಪ್ರಕಾರ 140 ರಿಂದ 175 ಎಕರೆ ಕೃಷಿ ಭೂಮಿಯನ್ನು ಹೊಂದಿರುತ್ತಾನೆ. ಸಣ್ಣ ಭೂಮಾಲೀಕರ ಪರವಾಗಿ ಮನ್ರೋ ಮತ್ತು ಆತನ ಬೆಂಬಲಿಗರ ವಾದಕ್ಕೆ ಪ್ರಮುಖ ಕಾರಣವೆಂದರೆ ಜಮೀನುದಾರರ ಹಾಗೆ ಸಣ್ಣ ಭೂಮಾಲೀಕರು ಅತ್ಯಂತ ಸುಲಭವಾಗಿ ಸರಕಾರದ ವಿರುದ್ದ ಜೊತೆ ಸೇರುವುದು ಅಸಾಧ್ಯ ಮತ್ತು ಅವರನ್ನು ನಿಯಂತ್ರಣದಲ್ಲಿಡುವುದು ಮತ್ತು ಆಡಳಿತಕ್ಕೆ ಒಳಪಡಿಸಬಹುದು ಎನ್ನುವುದೇ ಆಗಿದೆ. ಇದೇ ಅರ್ಥದಲ್ಲಿ ಸ್ಟೈನ್‌ರವರು ಸ್ಥಳೀಯ ಸಮಾಜದ ಶ್ರೀಮಂತ ವರ್ಗ ಬೃಹತ್ ಮತ್ತು ರಕ್ಷಣೆಗೊಳಪಟ್ಟ ಬ್ರಿಟಿಷ್ ಮಾದರಿಯ ಭೂ ಮಾಲೀಕರಾಗಿರದೇ, ರಷ್ಯನ್ ಮಾದರಿಯ ಸಂಪೂರ್ಣ ಸರಕಾರಕ್ಕೆ ಅಧೀನವಾಗಿರುವ ಶ್ರೀಮಂತ ವರ್ಗವಾಗಿದೆ ಎಂದು ತಿಳಿಸುತ್ತಾರೆ. ಮನ್ರೋಗೆ ಕುಂಬ್ಳೆ, ವಿಟ್ಲ ಮತ್ತು ನೀಲೇಶ್ವರದ ಸ್ಥಳೀಯ ರಾಜರುಗಳ (ಮನ್ರೋ ಇವರನ್ನು ರಾಜರು ಅಥವಾ ಜಮೀನುದಾರರು ಎಂದು ಪರಿಗಣಿಸದೆ ಕೇವಲ ಕಂದಾಯ ಸಂಗ್ರಹಣೆಯ ಅಧಿಕಾರಿಗಳು ಎಂದು ಕರೆಯುತ್ತಾನೆ) ದಂಗೆಗಳ ಅನುಭವ ಸರಕಾರದ ನಿಯಂತ್ರಣಕ್ಕೆ ಒಳಗಾಗುವ ಸಣ್ಣ ಭೂ ಹಿಡುವಳಿಗಳ ಪರವಾಗಿ ವಾದಿಸುವಂತೆ ಮಾಡುತ್ತದೆ. ರೈತವಾರಿಯ ವಿರುದ್ಧ ಜಮೀನುದಾರಿಯ ಪದ್ಧತಿಯ ಕುರಿತು ವಾದಿಸುವ ಜೆ. ಹಾಡ್ಜ್‌ಸನ್ ಈ ಸ್ಥಳೀಯ ರಾಜರನ್ನು, ಮನ್ರೋ ದಕ್ಷಿಣ ಕನ್ನಡದಲ್ಲಿ ಬ್ರಿಟಿಷ್ ಅಧಿಕಾರ ಸ್ಥಾಪನೆಗೆ ಮುಂಚೆ ಸ್ಥಳೀಯ ರಾಜರೆಂದು ಪರಿಗಣಿಸಿದ್ದ ಎಂದು ತೋರಿಸಿಕೊಡುತ್ತಾರೆ.

ದಕ್ಷಿಣ ಕನ್ನಡದಲ್ಲಿ ಸಣ್ಣ ಭೂ ಮಾಲೀಕರಾದ ಮೂಲವರ್ಗದಾರರಲ್ಲದೆ, ಇನ್ನಿತರ ರೈತಾಪಿ ವರ್ಗಗಳಿರುತ್ತವೆ. ಅವರೆಂದರೆ ಗೇಣಿದಾರರು, ಕೃಷಿ ಕಾರ್ಮಿಕರು ಮತ್ತು ಗುಲಾಮರು ಆಗಿರುತ್ತಾರೆ. ಗೇಣಿದಾರರಲ್ಲಿ ಮೂಲಗೇಣಿ, ಚಾಲಿಗೇಣಿ ಮತ್ತು ವ್ಯಾಯ್ದೆ ಗೇಣಿ ಎನ್ನುವ ವರ್ಗಗಳಿರುತ್ತದೆ. ಮೂಲವರ್ಗದಾರರು ತಮ್ಮ ಜಮೀನನ್ನು ಗೇಣಿದಾರರಿಗೆ ನಿಗದಿ ಪಡಿಸಿದ ಗೇಣಿಗೆ ನೀಡುತ್ತಾರೆ. ಮೂಲಗೇಣಿ ಹಕ್ಕು (Tenants for ever or fixed tenants) ಹೊಂದಿದ ಗೇಣಿದಾರ ರೈತನನ್ನು ಮನ್ರೋ ಎರಡನೇ ದರ್ಜೆಯ ಭೂಮಾಲೀಕ ಎಂದು ಕರೆಯುತ್ತಾನೆ. ಥ್ಯಾಕರೆ ಕೂಡಾ ಮೂಲಗೇಣಿ ಹೊಂದಿದ ರೈತರನ್ನು ಕಂಪೆನಿ ಸರಕಾರದ ಸೃಷ್ಟಿ ಮತ್ತು ಭೂ ಮಾಲೀಕರ ಸಂಖ್ಯೆಯ ಹೆಚ್ಚಳಕ್ಕೆ ಈ ವರ್ಗ ಪ್ರಮುಖ ಕಾರಣವೆಂದು ಪರಿಗಣಿಸುತ್ತಾರೆ ಹಾಗೂ ಇವರ ಸ್ಥಿತಿಗತಿ ಮೂಲವರ್ಗದಾರರಿಗಿಂತಲೂ ಚೆನ್ನಾಗಿರುತ್ತದೆಂದು ತಿಳಿಸುತ್ತಾರೆ. ನಿಯಮದ ಪ್ರಕಾರ ಮೂಲಗೇಣಿದಾರರು ಪಾವತಿಸುವ ಭೂ ಕಂದಾಯವನ್ನು ಮೂಲವರ್ಗದಾರರು ಹೆಚ್ಚಳ ಮಾಡುವಂತಿರಲಿಲ್ಲ ಹಾಗೂ ಅವರನ್ನು ಒಕ್ಕಲು ಎಬ್ಬಿಸುವಂತಿರಲಿಲ್ಲ. ಕೆಲವೊಂದು ಸಂದರ್ಭಗಳಲ್ಲಿ ಮೂಲವರ್ಗದಾರರು ಮೂಲಗೇಣಿದಾರರ ಹಕ್ಕನ್ನು ಮನ್ನಿಸದೆ ಅವರನ್ನು ಚಾಲಿಗೇಣಿದಾರರು ಎಂದು ಪರಿಗಣಿಸುತ್ತಿದ್ದರು.

ಚಾಲಿಗೇಣಿದಾರರು(Tenants at will) ತಮ್ಮ ಭೂ ಹಿಡುವಳಿಯ ಮೇಲೆ ನಿರ್ಬಂದಿತ ಹಕ್ಕನ್ನು ಹೊಂದಿರುತ್ತಾರೆ. ಮೂಲವರ್ಗದಾರರಿಗೆ ಚಾಲಿಗೇಣಿದಾರರ ಮೇಲೆ ಹೆಚ್ಚಿನ ನಿಯಂತ್ರಣವಿರುತ್ತದೆ. ಕಂದಾಯ ಹೆಚ್ಚಳ ಮಾಡುವ ಮತ್ತು ಒಕ್ಕಲೆಬ್ಬಿಸುವ ಅಧಿಕಾರವಿರುತ್ತದೆ. ಚಾಲಿಗೇಣಿದಾರರು ಎರಡು ತಲೆಮಾರುಗಳ ಕಾಲ ಅಥವಾ ಐವತ್ತು ವರ್ಷಗಳ ಕಾಲ ಒಂದೇ ಭೂಮಿಯಲ್ಲಿ ಕೃಷಿ ಮಾಡುತ್ತಿದ್ದರೆ ಅವರನ್ನು ಮೂಲಗೇಣಿಗಳಾಗಿ ಪರಿಗಣಿಸುವ ಅವಕಾಶ ನೀಡುತ್ತದೆ. ಆದರೆ ಮೂಲವರ್ಗದಾರರು ಚಾಲಿಗೇಣಿದಾರರಿಗೆ ಇಂತಹ ಅವಕಾಶವನ್ನೇ ನೀಡುವುದಿಲ್ಲ. ಅವರ ಕೃಷಿ ಭೂಮಿಯನ್ನು ಬದಲಾಯಿಸಲಾಗುತ್ತದೆ. ವಾಯ್ದೆ ಗೇಣಿದಾರರು ನಿಗದಿತ ವರ್ಷಗಳಿಗೆ ಕೃಷಿ ಮಾಡುವ ಅವಕಾಶ ಪಡೆದ ವರ್ಗವಾಗಿರುತ್ತದೆ. ಕಂಪೆನಿ ಅಧಿಕಾರಿಗಳ ಅಂಕೆ ಸಂಖ್ಯೆಗಳು ಮೂಲಗೇಣಿದಾರರು ಮತ್ತು ಚಾಲಿಗೇಣಿದಾರರು ಅತ್ಯಂತ ಹೆಚ್ಚಿನ ಪ್ರಮಾಣದಲ್ಲಿರುವುದನ್ನು ಹಾಗೂ ಮೂಲವರ್ಗದಾರರ ಸಂಖ್ಯೆಗಳು ತುಂಬಾ ಕಡಿಮೆ ಇರುವುದನ್ನು ಸೂಚಿಸುತ್ತದೆ.

ದಕ್ಷಿಣ ಕನ್ನಡದಲ್ಲಿ ಮೂಲವರ್ಗದಾರರು ಮತ್ತು ಗೇಣಿದಾರರಲ್ಲದೆ. ಕೃಷಿ ಗುಲಾಮರ ಅಸ್ತಿತ್ವವಿರುತ್ತದೆ. ಧರ್ಮ ಕುಮಾರ್ ಅವರ ಪ್ರಕಾರ ಕೃಷಿ ಗುಲಾಮರೆಂದು ಪರಿಗಣಿಸಲಾದ ದಲಿತವರ್ಗದಲ್ಲಿ ಮೂರುವರ್ಗಗಳಿರುತ್ತದೆ. ಅವರೆಂದರೆ ಮೇರ. ಮುಂಡಾಲ ಅಥವಾ ಬಾಕುಡ ಮತ್ತು ಮೊಗೇರ. ಮೂಲದ ದಲಿತರು ಮತ್ತು ಸಾಲದ ದಲಿತರು ಎನ್ನುವ ಇನ್ನೊಂದು ವರ್ಗೀಕರಣದ ಕುರಿತಾಗಿಯೂ ಧರ್ಮ ಕುಮಾರ್ ತಿಳಿಸುತ್ತಾರೆ. ಮೂಲದ ದಲಿತ ಮೂಲವರ್ಗದಾರರ ಕೃಷಿ ಭೂಮಿಗಳಿಗೆ ವಂಶಪಾರಂಪರ್ಯವಾಗಿ ಜೊತೆಯಾಗಿದ್ದರೆ ಅದೇ ಸಾಲದ ದಲಿತರು. ಸಾಲ ಪಡೆದು ಕೆಲಸ ಮಾಡುವ ದಲಿತ ವರ್ಗವಾಗಿದ್ದಾರೆ. ಬುಕನನ್ ಕೋರರ್. ಕೊರವರ್ ಅಥವಾ ಕೊರಗ ಮತ್ತು ಹಸಲರು ಎನ್ನುವ ಕೃಷಿ ಕಾರ್ಮಿಕರ ಕುರಿತಾಗಿ ತಿಳಿಸುತ್ತಾರೆ. ದಕ್ಷಿಣ ಕನ್ನಡದಲ್ಲಿ ಧರ್ಮ ಕುಮಾರ್‌ರವರ ಪ್ರಕಾರ ಕೃಷಿ ಕಾರ್ಮಿಕರಾಗಿ ದುಡಿಯುವ ದಲಿತ ವರ್ಗದ ಗುಲಾಮರ ಪ್ರಮಾಣ ಶೇಕಡಾ 11.9

ರಷ್ಟಿರುತ್ತದೆ. ಈ ದಲಿತ ವರ್ಗದ ಜೊತೆ ಕೃಷಿ ಕಾರ್ಮಿಕರು ಎಂಬ ಗುಂಪಿನ ಮೂರು ಜಾತಿಗಳು ಮತ್ತು ದಿನ ಮಜೂರಿಯ ಕಾರ್ಮಿಕರೆನ್ನುವ ಎಂಟು ಜಾತಿಗಳು ಸೇರಿದರೆ ಭೂ ಮಾಲೀಕತ್ವ ಹೊಂದದ ಕೃಷಿ ಕಾರ್ಮಿಕರ ಪ್ರಮಾಣ ಶೇಕಡಾ 15.4 ರಷ್ಟರಾಗುತ್ತದೆ. ಕೃಷಿ ಗುಲಾಮರಿರದ ಕೃಷಿ ಭೂಮಿಯು ಪ್ರಮುಖ ಆಸ್ತಿಯೆಂದು ಪರಿಗಣಿತವಾಗಿರುವುದಿಲ್ಲ. ಕೃಷಿ ಗುಲಾಮರು ಕೃಷಿ ಭೂಮಿಯ ಜೊತೆಗೆ ಮಾರಾಟವಾಗುವ 'ವಸ್ತು' ವಾಗಿ ಪರಿಗಣಿತರಾಗುತ್ತಾರೆ. ಬ್ರಿಟಿಷ್ ಅಧಿಕಾರಿಗಳು ಪ್ರಕಟಿಸಿದ ಗುಲಾಮರ ಕುರಿತ ವರದಿಗಳು ದಕ್ಷಿಣ ಕನ್ನಡದಲ್ಲಿ ಗುಲಾಮರು ಎದುರಿಸುತ್ತಿರುವ ಕ್ರೌರ್ಯವನ್ನು ತೆರೆದಿಡುತ್ತದೆ. ಕೆನರದ ಗುಲಾಮರನ್ನು 'ಪಶುಗಳಂತೆ' ಮಾರಾಟ ಮಾಡಲಾಗುತ್ತಿತ್ತು ಎಂದು ವರದಿ ಮಾಡಲಾಗುತ್ತದೆ. ಕಂಪೆನಿಯ ಕೆಲವೊಂದು ಅಧಿಕಾರಿಗಳು ಕೃಷಿ ಕಾರ್ಯಗಳಿಗೆ ಗುಲಾಮರ ಅಸ್ತಿತ್ವ ಅತ್ಯಂತ ಅವಶ್ಯಕವೆಂದು ತಿಳಿಸುತ್ತಾರೆ. ಕಂಪೆನಿ ಅಧಿಕಾರಿಗಳು, ನ್ಯಾಯಲಯ ಯಾವತ್ತೂ ಗುಲಾಮರ ಜೊತೆಗಿನ ವಿವಾದಗಳಲ್ಲಿ ಮೂಲವರ್ಗದಾರರ ಪರ ನಿಲ್ಲುತ್ತಾರೆ. ಉದಾಹರಣೆಗೆ 1801 ರಲ್ಲಿ ದಕ್ಷಿಣ ಕನ್ನಡದ ಕಲೆಕ್ಟರ್ ದಲಿತರು ಕೃಷಿ ಕಾರ್ಯದ ಬದಲಿಗೆ ಸೇನೆಗೆ ಸೈನಿಕರಾಗಿ ಸೇರುವುದನ್ನು ವಿರೋದಿಸುತ್ತಾನೆ. 1819 ರಲ್ಲಿ ದಕ್ಷಿಣ ಕನ್ನಡದಲ್ಲಿ ನ್ಯಾಯಾಲಯ ಗುಲಾಮ ರೈತರನ್ನು ಕೃಷಿ ಭೂಮಿಯ ಜೊತೆ ಅಥವಾ ಪ್ರತ್ಯೇಕವಾಗಿ ಮಾರಾಟ ಮಾಡುವ ಅವಕಾಶವನ್ನು ಮಾಲೀಕರಿಗೆ ನೀಡುತ್ತದೆ. ಈ ವರ್ಗಗಳಿಗೆ ಯುರೋಪಿನ ಗುಲಾಮರೆನ್ನುವ ಪದ ಬಳಸಿದರೂ ಧರ್ಮ ಕುಮಾರ್ ಪ್ರಕಾರ ಭಾರತದ ಕೃಷಿ ಗುಲಾಮನ ಪರಿಸ್ಥಿತಿ ಜಾತಿ ಪದ್ದತಿಯ ಜೊತೆ ತಳುಕು ಹಾಕಿಕೊಂಡಿರುತ್ತದೆ ಮತ್ತು ಜಾತಿ ಪದ್ದತಿಯು ಯಾವುದೇ ವಿರೋಧವಿಲ್ಲದೆ ಕೃಷಿ ಗುಲಾಮತನವನ್ನು ದಲಿತರು ಮತ್ತು ಕೃಷಿ ಕಾರ್ಮಿಕರು ಒಪ್ಪಿಕೊಳ್ಳುವ ಹಾಗೆ ಮಾಡುತ್ತದೆ. ದಕ್ಷಿಣ ಕನ್ನಡದ ರೈತವರ್ಗದಲ್ಲಿ ಕೇವಲ ಮೂಲವರ್ಗದಾರರಷ್ಟೇ ಅಲ್ಲದೇ ಗೇಣಿದಾರ ವರ್ಗಗಳಾದ ಮೂಲಗೇಣಿ, ಚಾಲಿಗೇಣಿ, ವ್ಯಾಯ್ದೆಗೇಣಿ ಮತ್ತು ಕೃಷಿ ಕಾರ್ಮಿಕರು ಹಾಗೂ ಗುಲಾಮರಿರುತ್ತಾರೆ.

ಈ ರೀತಿಯ ಸಂಕೀರ್ಣ ವ್ಯವಸ್ಥೆಯಲ್ಲಿ ರೈತವಾರಿ ಪದ್ದತಿ ನಿಜವಾದ ರೈತರು ಮತ್ತು ಕಂಪೆನಿ ಸರಕಾರದ ಮಧ್ಯೆ ನಡೆಯದೆ, ಭೂಮಿಯ ದಾಖಲೆಯನ್ನು ಹೊಂದಿದ ಭೂ ಮಾಲೀಕ ವರ್ಗ ಮತ್ತು ಕಂಪೆನಿ ಸರಕಾರದ ಮಧ್ಯೆ ನಡೆಯುತ್ತದೆ. ದಕ್ಷಿಣ ಕನ್ನಡದ ಭೂ ಮಾಲೀಕ ವರ್ಗವಾದ ಮೂಲವರ್ಗದಾರರು ಸರಕಾರಕ್ಕೆ ಸಣ್ಣ ಭೂ ಮಾಲೀಕ ವರ್ಗವಾಗಿರುವ ರೈತರಾಗಿದ್ದರೆ ಅದೇ ದಕ್ಷಿಣ ಕನ್ನಡದ ಇನ್ನುಳಿದ ಕೃಷಿಕ ವರ್ಗಗಳಿಗೆ ಕಂಪೆನಿ ಸರಕಾರದ ಮತ್ತು ಜಾತಿ ನಿಯಮಗಳ ಬೆಂಬಲ ಪಡೆದ ಜಮೀನುದಾರರೇ ಆಗಿರುತ್ತಾರೆ.

## ನಿಯಂತ್ರಣ ವ್ಯವಸ್ಥೆಯಾಗಿ ಮತ್ತು ವಸಾಹತುಷಾಹಿಯನ್ನು ನ್ಯಾಯಬಧ್ಧಗೊಳಿಸುವ ವಿಚಾರಧಾರೆಯಾಗಿ ರೈತವಾರಿ ಪದ್ದತಿ ರೈತವಾರಿ ಪದ್ದತಿ

ಕೇವಲ ಕಂದಾಯ ವ್ಯವಸ್ಥೆಯಾಗದೆ 'ನಿಯಂತ್ರಣ ವ್ಯವಸ್ಥೆ' ಯಾಗಿ ಕಾರ್ಯನಿರ್ವಹಿಸುತ್ತದೆ. ರೈತವಾರಿಯನ್ನು ಸ್ಥಳೀಯ ಕಂದಾಯ ಪದ್ದತಿಯೆಂದು ಪ್ರಸ್ತುತಗೊಳಿಸಿ ಆ ಮೂಲಕ ಸ್ಥಳೀಯ ರಾಜಕೀಯ, ಆರ್ಥಿಕ ಮತ್ತು ಸಾಮಾಜಿಕ ವ್ಯವಸ್ಥೆಯನ್ನು ನಿಯಂತ್ರಿಸಲಾಗುತ್ತದೆ. ರೈತವಾರಿ ಪದ್ದತಿಯ ಮೂಲಕ ಸಣ್ಣ

ಭೂಮಾಲೀಕರನ್ನು ಅಥವಾ ಮೂಲವರ್ಗದಾರರನ್ನು ಸ್ವತಂತ್ರ ಸ್ಥಾನಮಾನದಿಂದ ಕೆಳಗಿಳಿಸಿ 'ಖಾಸಗಿ ಆಸ್ತಿ' ಯ ಹಕ್ಕನ್ನು ನೀಡುವುದರ ಮೂಲಕ ಕಂಪೆನಿಯ ಅಧೀನವಿರುವ ಮತ್ತು ನಿಯಂತ್ರಣಕ್ಕೆ ಒಳಪಟ್ಟ ಭೂ ಮಾಲೀಕ ವರ್ಗಗಳನ್ನಾಗಿ ಪರಿವರ್ತಿಸಲಾಗುತ್ತದೆ. ಮೂಲವರ್ಗದಾರರಲ್ಲಿ ಮತ್ತು ಮೂಲಗೇಣಿದಾರರಿಂದಲೇ ಕಂಪನಿಯ ಗ್ರಾಮೀಣ ಅಧಿಕಾರಿ ವರ್ಗಗಳಾದ ಪಟೇಲ ಮತ್ತು ಶಾನುಭೋಗರನ್ನು ನೇಮಿಸಲಾಗುತ್ತದೆ. ಇವರ ಅಧಿಕಾರ ಕಂಪೆನಿ ಸರಕಾರದ ನಿಯಂತ್ರಣದ ಮೇಲೆ ನಿಂತಿರುತ್ತದೆ. ರೈತವಾರಿ ಹೆಸರಿನಲ್ಲಿ ಸ್ಥಳೀಯ ಪ್ರಬಲವರ್ಗಗಳು ಆಳುವ ವರ್ಗವಾಗಿ ಬದಲಾಗುತ್ತದೆ. ಈ ಕಾರಣದಿಂದಲೇ ನಿಕೋಲಸ್ ಬಿ. ಡಿರ್ಕ್ಸರವರು ರೈತವಾರಿಯನ್ನು ಕಂಪೆನಿ ಸರಕಾರ ಮತ್ತು ಪ್ರಬಲ ರೈತಾಪಿ ವರ್ಗಗಳ ಕಂದಾಯ ಪದ್ಧತಿಯೆಂದು ತಿಳಿಸುತ್ತದೆ. ರೈತವಾರಿ ಪದ್ಧತಿ ಸ್ಥಳೀಯರನ್ನು ನಿಯಂತ್ರಿಸುವ ಕಾರ್ಯನಿರ್ವಹಿಸುವ ಕಾರಣದಿಂದಲೇ ಲಂಡನ್‌ನಲ್ಲರುವ ಬೋರ್ಡ್ ಅಫ್ ಕಂಟ್ರೋಲ್ ಈ ಪದ್ಧತಿಯನ್ನು ಬೆಂಬಲಿಸುತ್ತದೆ. ರೈತವಾರಿ ಪದ್ಧತಿ ಗ್ರಾಮೀಣ ಸಮಾಜದಲ್ಲಿ ಬಿರುಕನ್ನುಂಟು ಮಾಡಲು ಕಂಪೆನಿ ಅಧಿಕಾರಿಗೆ ಅವಕಾಶ ನೀಡುತ್ತದೆ. ಒಂದು ಗ್ರಾಮದ ಮಾಹಿತಿಯನ್ನು ನೆರೆಹೊರೆಯ ಗ್ರಾಮದವರಿಂದ ಹಾಗೂ ಒಂದು ಮನೆಯ ಮಾಹಿತಿಯನ್ನು ನೆರೆಹೊರೆಯವರಿಂದ ಪಡೆಯಲಾಗುತ್ತದೆ. ಕಂದಾಯ ವಿಷಯಗಳಿಗೆ ಸಂಬಂಧಿಸಿದಂತೆ ಬೇರೆಯವರ ಕುರಿತಾಗಿ ಗ್ರಾಮೀಣ ಜನರು ಸರಿಯಾದ ಮಾಹಿತಿಯನ್ನೇ ನೀಡುತ್ತಾರೆ ಎಂದು ಮನ್ರೋ ಅಭಿಪ್ರಾಯ ಪಡುತ್ತಾನೆ. ಈ ರೀತಿಯಲ್ಲಿ ರೈತವಾರಿ ವ್ಯವಸ್ಥೆ ಗ್ರಾಮೀಣ ಜನರ ಬದುಕನ್ನು ಹತ್ತಿರದಿಂದ ಗಮನಿಸುವ ವ್ಯವಸ್ಥೆಯಾಗಿದೆ.

ರೈತವಾರಿ ಪದ್ಧತಿ ಎಂದು ಕರೆದರೂ ನಿಜವಾದ ರೈತರ ಪರವಾಗಿರದ ಈ ಪದ್ಧತಿಯನ್ನು ಯಾಕಾಗಿ ಜಾರಿಗೆ ತರಲಾಯಿತು ಎನ್ನುವ ಪ್ರಶ್ನೆ ಉದ್ಭವವಾಗುತ್ತದೆ. ಮನ್ರೋ ಪ್ರಕಾರ ಖಾಯಂ ಭೂ ಜಮೀನುದಾರಿ ಪದ್ಧತಿಯಲ್ಲಿ ಕಂಪೆನಿ ಅಧಿಕಾರಿಗೆ ಸ್ಥಳೀಯ ಕಂದಾಯ ಪದ್ಧತಿ, ಸಂಪ್ರದಾಯಗಳ ಕುರಿತು ತಿಳಿಯುವುದಿಲ್ಲ. ನೇರ ಅನುಭವವಿರದ ಈ ಅಧಿಕಾರಿಗಳಿಗೆ ತುರ್ತುಪರಿಸ್ಥಿತಿಯ ಸಂದರ್ಭದಲ್ಲಿ ಸಮರ್ಥವಾಗಿ ಕಾರ್ಯನಿರ್ವಹಿಸಲು ಅಸಾಧ್ಯವಾಗುತ್ತದೆ. ರೈತವಾರಿ ಪದ್ಧತಿಯು ಕಂಪೆನಿಯ ಅಧಿಕಾರಿಗಳನ್ನು ಗ್ರಾಮದ ಜನರ ಜೊತೆ ತೊಡಗಿಕೊಳ್ಳವುಂತೆ ಮಾಡುತ್ತದೆ. ಈ ಕಾರಣದಿಂದಲೇ ಮನ್ರೋ ಕಂಪೆನಿಯ ಎಲ್ಲಾ ವಿಭಾಗದ ಅಧಿಕಾರಿಗಳು ಕಂದಾಯ ಇಲಾಖೆಯಲ್ಲಿ ಕಡ್ಡಾಯವಾಗಿ ಕಾರ್ಯನಿರ್ವಹಿಸುವಂತೆ ಮಾಡಬೇಕು ಎಂದು ತಿಳಿಸುತ್ತಾನೆ. ಮನ್ರೋ ತನ್ನ 15 ಆಗಸ್ಟ್ 1801 ರ ವರದಿಯಲ್ಲಿ ಕಂಪೆನಿಯ ಅಧಿಕಾರಿಗಳು ಚಟುವಟಿಕೆಯಿಂದ ಕೂಡಿದ ಬುದ್ದಿವಂತ ಕಲೆಕ್ಟರ್‌ರನ್ನಾಗಿ ಮಾಡಲು ರೈತವಾರಿ ಪದ್ಧತಿ ಪ್ರಮುಖ ಪಾತ್ರ ವಹಿಸುತ್ತದೆ ಎಂದು ತಿಳಿಸುತ್ತಾನೆ. ಕಂಪೆನಿಯ ಯುವ ಅಧಿಕಾರಿಗಳಿಗೆ ಆಡಳಿತದ ತರಬೇತಿ ನೀಡುವ ವ್ಯವಸ್ಥೆಯಾಗಿ ಕೂಡಾ ರೈತವಾರಿ ಕಾರ್ಯನಿರ್ವಹಿಸುತ್ತದೆ. ಈ ಮೂಲಕವೇ ವಿಲಿಯಂ ಥ್ಯಾಕರೆ , ಜೇಮ್ಸ್ ಕೊಚಾರಾನ್, ಅಲೆಕ್ಸಾಂಡರ್ ಸ್ಟೊಡಾರ್ಟ್ ತರಬೇತಿ ಹೊಂದಿ ಮನ್ರೋ ಗುಂಪು ಎನ್ನುವ ವರ್ಗ ರಚನೆಯಾಗುತ್ತದೆ.

ಆರಂಭದ ಹಂತದಿಂದಲೂ ರೈತವಾರಿ ಪದ್ಧತಿಯ ಪ್ರತಿಪಾದಕರು ಇದು ಭಾರತೀಯ ರೈತನ ಪರವಾಗಿರುವ ಪದ್ಧತಿಯೆಂದೇ ವಾದಿಸುತ್ತಾರೆ. ಈ ಕಾರಣದಿಂದಲೇ ಕ್ರಮೇಣವಾಗಿ ರೈತವಾರಿ ಪದ್ಧತಿ ರೈತರ ಪರವಾಗಿರುವ ಪದ್ಧತಿಯೆಂದು ಒಪ್ಪುವುದರ ಮೂಲಕ ಕಂಪೆನಿಯ

ಆಡಳಿತವನ್ನು ನ್ಯಾಯಬದ್ಧಗೊಳಿಸಲಾಗುತ್ತದೆ. ಸ್ವಾತಂತ್ರ ಪೂರ್ವದಲ್ಲಿ ಭಾರತೀಯ ಇತಿಹಾಸಕಾರರಾದ ವೆಂಕಟಸುಬ್ಬ ಕೆ. ಎನ್ ರವರು ಮನ್ರೋರವರ ರೈತವಾರಿ ಪದ್ದತಿ, ರೈತರಿಗೆ ನ್ಯಾಯಬದ್ದ ಪದ್ಧತಿಯಾಗಿದೆಯೆಂದು ತಿಳಿಸುತ್ತಾರೆ. ಅದೇ ಸ್ವಾತಂತ್ರ್ಯದ ನಂತರ ರಾಷ್ಟ್ರೀಯವಾದಿ ಇತಿಹಾಸಕಾರರಾದ ಆರ್.ಸಿ. ಮುಜುಂದಾರ್‌ರವರು ಮನ್ರೋರವರು 1820–1827 ರಲ್ಲಿ ಮದ್ರಾಸ್ ಪ್ರೆಸಿಡೆನ್ಸಿಯಲ್ಲಿ ಗರ್ವನರ್ ಆಗಿ ಕಾರ್ಯನಿರ್ವಹಿಸುವಾಗ ರೈತವಾರಿ ಕಂದಾಯ ಪದ್ದತಿಯ ವಿಸ್ತರಣೆ, ಆ ಮೂಲಕ ಕಂದಾಯ ದರವನ್ನು ಕಡಿಮೆ ಮಾಡಲು ಹಾಗೂ ಇನ್ನಿತ್ತರ ಅಭಿವೃದ್ಧಿಗಳ ಮೂಲಕ ಕೃಷಿ ಕ್ಷೇತ್ರದ ಬಡತನವನ್ನು ನಿವಾರಿಸುವ ಪ್ರಯತ್ನವೇ ಆಗಿದೆಯೆಂದು ತಿಳಿಸುತ್ತಾರೆ. ಈ ವಾದಗಳು ರೈತವಾರಿ ನಿಜವಾದ ಉದ್ದೇಶ ಅರಿಯದೆ ವಸಾಹತುಷಾಹಿ ಆಡಳಿತವನ್ನು ನ್ಯಾಯಬದ್ಧಗೊಳಿಸುತ್ತದೆ. ರೈತವಾರಿ ಪದ್ದತಿ ಪೂರ್ವದ ಅಂದರೆ ಭಾರತದ ಜೊತೆ ಗುರುತಿಸಿಕೊಳ್ಳುತ್ತಲೇ ಕಂಪೆನಿ ರಾಜ್‌ನ ಆಳ್ವಿಕೆಯನ್ನು ದಕ್ಷಿಣ ಭಾರತದಲ್ಲಿ ಸ್ಥಾಪಿಸುತ್ತದೆ. ಮನ್ರೋ ಅಭಿಪ್ರಾಯಗಳು ಮತ್ತು ರೈತವಾರಿ ಕಂದಾಯ ವ್ಯವಸ್ಥೆ ತೋರಿಕೆಗೆ ರೈತರ ಪರವೆಂದು ತೋರ್ಪಡಿಸುತ್ತದೆ, ಆದರೆ ನಿಜವಾದ ಉದ್ದೇಶ ಕಂಪೆನಿಯ ಆಡಳಿತವನ್ನು ದೀರ್ಘ ಅವಧಿಯವರಗೆ ಸುಭದ್ರವಾಗಿ ಸ್ಥಾಪಿಸುವುದೇ ಆಗಿದೆ.

---

**ಆಕರ ಸೂಚಿ ಮತ್ತು ಕೊನೆ ಟಿಪ್ಪಣಿಗಳು**


1. ಭಟ್ ಶ್ಯಾಮ್ ಎನ್, 'ಎ ಸ್ಟಡಿ ಇನ್ ಕೊಲೋನೀಯಲ್ ಎಡ್ಮಿನಿಸ್ಟ್ರೇಷನ್ ಆ್ಯಂಡ್ ರೀಜನಲ್ ರೆಸ್ಪಾನ್ಸ್, ಮಿತ್ತಲ್ ಪಬ್ಲಿಕೇಷನ್ಸ್, 1998 ಪು. 4–5
2. ಸೈದ್ ಎಡ್ವರ್ಡ್, 'ಒರಿಯಂಟಲಿಸಮ್, ಪೆಂಗ್ವಿನ್, 1985
3. ಸಿ.ಎ.ಬೈಲಿ, 'ಎಂಪೈರ್ ಆ್ಯಂಡ್ ಇನ್‌ಫಾರ್‌ಮೇಷನ್: ಇಂಟಲಿಜೆನ್ಸ್ ಗ್ಯಾದರಿಂಗ್ ಆ್ಯಂಡ್ ಸೋಷಿಯಲ್ ಕಮ್ಯುನಿಕೇಷನ್ ಇನ್ ಇಂಡಿಯ, 1780–1870', ಸಿಯುಪಿ, 1996, ರಿಚರ್ಡ್ ಎಂ ಈಟನ್, ಎಸ್ಸೆಸ್ ಆನ್ ಇಸ್ಲಾಂ ಆ್ಯಂಡ್ ಇಂಡಿಯನ್ ಹಿಸ್ಟರಿ, "ರಿಇಮ್ಯಾಜಿನಿಂಗ್ ಒದರ್‌ನೆಸ್: ಎ ಪೋಸ್ಟ ಮಾರ್ಟಮ್ ಪಾರ್ ದಿ ಪೋಸ್ಟಮಾರ್ಡನ್ ಇನ್ ಇಂಡಿಯಾ' ಒಯುಪಿ, 2000, ಥಾಮಸ್ ಆರ್ ಟ್ರಾಟ್‌ಮ್ಯಾನ್,
4. ಸಿ.ಎ.ಬೈಲಿ.'ಎಂಪೈರ್ ಆ್ಯಂಡ್ ಇನ್‌ಫಾರ್‌ಮೇಷನ್: ಇಂಟಲಿಜೆನ್ಸ್ ಗ್ಯಾದರಿಂಗ್ ಆ್ಯಂಡ್ ಸೋಷಿಯಲ್ ಕಮ್ಯುನಿಕೇಷನ್ ಇನ್ ಇಂಡಿಯ, 1780–1870', ಸಿಯುಪಿ, 1996, ರಿಚರ್ಡ್ ಎಂ ಈಟನ್, ಎಸ್ಸೆಸ್ ಆನ್ ಇಸ್ಲಾಂ ಆ್ಯಂಡ್ ಇಂಡಿಯನ್ ಹಿಸ್ಟರಿ, " ರಿಇಮ್ಯಾಜಿನಿಂಗ್ ಒದರ್‌ನೆಸ್: ಎ ಪೋಸ್ಟ ಮಾರ್ಟಮ್ ಪಾರ್ ದಿ ಪೋಸ್ಟಮಾರ್ಡನ್ ಇನ್ ಇಂಡಿಯಾ' ಒಯುಪಿ, 2000, ಥಾಮಸ್ ಆರ್ ಟ್ರಾಟ್‌ಮ್ಯಾನ್, ದಿ ಮದ್ರಾಸ್ ಸ್ಕೂಲ್ ಆಫ್ ಒರಿಯಂಟಲಿಸಮ್, ಪ್ರೊಡ್ಯೂಸಿಂಗ್ ನಾಲೆಡ್ಜ್ ಇನ್ ಸೌತ್ ಇಂಡಿಯ, ಒಯುಪಿ, ನೂಡೆಲ್ಲಿ, 2009
5. ಯೇಪಿಯರ್ ಎ.ಬಿ ಆ್ಯಂಡ್ ಇನ್‌ಸ್ ಜಿ ಜಪನಾವ್ ಕ್ಯಾಥೋಲಿಕ್ ಒರಿಯಂಟಲಿಷಮ್ ಪೋರ್ಚುಗೀಸ್ ಎಂಪೈರ್ ಇಂಡಿಯನ್ ನಾಲೆಡ್ಜ್ (16 – 18 ಸೆಂಚುರೀಸ್) ಒಯುಪಿ. ನೂಡೆಲ್ಲಿ. 2015
6. ಕಾನ್ ಬರ್ನಾಡ್, ಕೊಲೋನಿಯಲಿಷಮ್ ಆ್ಯಂಡ್ ಇಟ್ಸ್ ಫಾರ್ಮ್ಸ್ ಆಫ್ ನಾಲ್ಡ್‌ಜ್, ದಿ ಬ್ರಿಟಿಷ್ ಇಂಡಿಯ, ನೂಯಾರ್ಕ್, ಪು. 80
7. ಸ್ಟೈನ್ ಬರ್ಟನ್, ಥಾಮಸ್ ಮನ್ರೋ, ದಿ ಒರಿಜಿನ್ಸ್ ಆಫ್ ದಿ ಕೊಲೋನಿಯಲ್ ಸ್ಟೇಟ್ ಆ್ಯಂಡ್ ಹಿಸ್ ವಿಷನ್ ಆಫ್ ಎಂಪ್ಯರ್, ಡೆಲ್ಲಿ, 1989 ಪು. 95
8. ಅದೇ ಪು. 190–191
9. ಅದೇ ಪು. 48

10. ಅದೇ ಪು. 100

11. ಅದೇ 106

12. ಧರ್ಮ ಕುಮಾರ್, ಲ್ಯಾಂಡ್ ಆ್ಯಂಡ್ ಕಾಸ್ಟ್ ಇನ್ ಸೌತ್ ಇಂಡಿಯಾ, ಮನೋಹರ್, 1992, ಪು. 21–22, ಪು. 90

13. ಭಟ್ ಶ್ಯಾಮ್ ಎನ್, ಪೂರ್ವೋಕ್ತ, ಪು. 21–22, ಪು. 90

14. ಫರ್ಮಿಂಜರ್ ವಾಲ್ಟರ್ ಕೆಲ್ಲಿ, ಎಡ್., ಅಫೈರ್ಸ್ ಆಫ್ ದಿ ಈಸ್ಟ್ ಇಂಡಿಯಾ ಕಂಪೆನಿ, (ಬೀಯಿಂಗ್ ದಿ ಪಿಫ್ತ್ ರಿಪೋರ್ಟ್ ಫ್ರಮ್ ದಿ ಸಿಲೆಕ್ಟ್ ಕಮಿಟಿ ಆಫ್ ದಿ ಹೌಸ್ ಆಫ್ ಕಾಮನ್ಸ್, 28 ಜುಲೈ, ಸಂಪುಟ – 111, 1812, ಡೆಲ್ಲಿ, ಪು. 575

15. ಅದೇ, ಪು. 450

16. ಅದೇ ಪು. 577

17. ಧರ್ಮ ಕುಮಾರ್, ಪೂರ್ವೋಕ್ತ, ಪು. 28

18. ಸ್ಟೈನ್ ಬರ್ಟನ್, ಪೂರ್ವೋಕ್ತ, ಪು. 263

19. ಫರ್ಮಿಂಜರ್ ವಾಲ್ಟರ್ ಕೆಲ್ಲಿ, ಎಡ್., ಪೂರ್ವೋಕ್ತ, ಪು. 478

20. ಭಟ್ ಶ್ಯಾಮ್ ಎನ್, ಪೂರ್ವೋಕ್ತ, ಪು. 90–91

21. ಫರ್ಮಿಂಜರ್ ವಾಲ್ಟರ್ ಕೆಲ್ಲಿ, ಎಡ್., ಪೂರ್ವೋಕ್ತ, ಪು. 311

22. ಅದೇ ಪು. 333

23. ಅದೇ. ಪು. 333

24. ಅದೇ. ಪು. 326

25. ಭಟ್ ಶ್ಯಾಮ್ ಎನ್, ಪೂರ್ವೋಕ್ತ, ಪು. 90–91

26. ಫರ್ಮಿಂಜರ್ ವಾಲ್ಟರ್ ಕೆಲ್ಲಿ, ಎಡ್., ಪೂರ್ವೋಕ್ತ, ಪು. 322

27. ಧರ್ಮ ಕುಮಾರ್, ಪೂರ್ವೋಕ್ತ, ಪು. 39–40

28. ಅದೇ, ಪು. 53

29. ಗಾರ್ಡನ್ ಆರ. ಪೇಪರ್ಸ್ ರಿಲೇಟಿವ್ ಟು ಸ್ಲೇವರಿ ಇನ್ ಇಂಡಿಯಾ, ಇಂಡಿಯಾ ಬೋರ್ಡ್, 1834, ಪು. 42

30. ಧರ್ಮ ಕುಮಾರ್, ಪೂರ್ವೋಕ್ತ, ಪು. 67

31. ಅದೇ ಪು. 71

32. ಅದೇ ಪು. 34. ಪು. 68

33. ಬಂದೋಪಾಧ್ಯಾಯ ಶೇಖರ್, ಫ್ರಂ ಪ್ಲಾಸಿ ಟು ಪಾರ್ಟಿಷನ್, ಎ ಹಿಸ್ಟರಿ ಆಫ್ ಮಾರ್ಡನ್ ಇಂಡಿಯ, ನೂಡೆಲ್ಲಿ, 2004, ಪು. 88

34. ಅರ್ಬುತ್‌ನಾಟ್ ಅಲೆಂಕ್ಸಾಂಡರ್ ಜೆ. ಎಡ್., ಮೇಜರ್ ಜನರಲ್ ಸರ್ ಥಾಮಸ್ ಮನ್ರೋ, ಸೆಲೆಕ್ಷನ್ಸ್ ಫ್ರಂ ಹಿಸ್ ಮಿನಿಟ್ಸ್ ಆ್ಯಂಡ್ ಆದರ್ ಆಫಿಸಿಯಲ್ ರೈಟಿಂಗ್ಸ್, ಸಂಪುಟ. 1, ಲಂಡನ್ 1881, ಪು. 248–250

35. ಸ್ಟೈನ್ ಬರ್ಟನ್, ಪೂರ್ವೋಕ್ತ, ಪು. 164

36. ಅದೇ, ಪು. 92

37. ಶಾಸ್ತ್ರಿ ವೆಂಕಟಸುಬ್ಬ ಕೆ.ಎನ್. 'ದಿ ಮನ್ರೋ ಸಿಸ್ಟಮ್ ಆಫ್ ಬ್ರಿಟಿಷ್ ಸ್ಟೇಟ್ಸ್‌ಮ್ಯಾನ್‌ಶಿಪ್ ಇ ಇಂಡಿಯಾ', ಮೈಸೂರು, 1939 ಪು. xlix

38. ಸ್ಟೈನ್ ಬರ್ಟನ್, ಪೂರ್ವೋಕ್ತ, ಪು. 357

# ಕೆನರಾ-ಕೊಡಗು ರೈತ ಬಂಡಾಯ: ಚರಿತ್ರೆಯ ವಿವಿಧ ಒಳನೋಟಗಳು

**ಪ್ರಭಾಕರ್ ನೀರ್‌ಮಾರ್ಗ**
ಉಪಕುಲಸಚಿವರು/
ಸಂಶೋಧನ ವಿದ್ಯಾರ್ಥಿ
ಇತಿಹಾಸ ವಿಭಾಗ
ಮಂಗಳೂರು ವಿಶ್ವವಿದ್ಯಾನಿಲಯ
ಮಂಗಳೂರು
ಮೊ: 9449083206

ಪ್ರಸ್ತುತ ನಮ್ಮ ಸಾಮಾಜಿಕ ಚರಿತ್ರೆಯನ್ನು ಪುನರ್‌ರಚಿಸುವ ಅನಿವಾರ್ಯತೆಯಿದೆಯೇ? ಇದಕ್ಕೆ ಇರುವ ನಿರ್ದಿಷ್ಟ ಕಾರಣಗಳೇನು? ಇಲ್ಲಿ ಮುಖ್ಯವಾಗಿ ಪುನರ್‌ರಚನೆ ಎಂದರೇ ಯಾವ ವಿಷಯದಕುರಿತು ಪುನರ್‌ರಚನೆ ಯಾಗ ಬೇಕಾಗಿದೆ? ಮತ್ತು ಅದರಲ್ಲಿ ಇರುವ ಲೋಪದೋಷಗಳೇನು? ಬಹುಮುಖ್ಯ ವಾಗಿ ಪುನರ್‌ರಚನೆಗೆ ಸಂಬಂಧಿಸಿದಂತೆ ನಮ್ಮಲ್ಲಿ ಇರುವ ಆಧಾರಗಳು ಯಾವುವು? ಆ ಆಧಾರಗಳನ್ನು ಯಾವ ರೀತಿಯಲ್ಲಿ ವಿಶ್ಲೇಷಿಸ ಬೇಕಾಗಿದೆ. ಹಾಗೂ ಅಲ್ಲಿ ವಿನಿಯೋಗಿಸುವ ಸಂಶೋಧನ ವಿಧಾನ ಯಾವುದು? ಎನ್ನುವುದರ ಕುರಿತಂತೆ ಒಂದು ನಿರ್ದಿಷ್ಟವಾದ ಚರ್ಚೆಯ ಅವಶ್ಯಕತೆಯಿದೆ. ಈ ಕಾರಣದಿಂದಾಗಿ ಚರಿತ್ರೆಯ ಪುನರ್‌ರಚನೆಯು ಕೆಳಸ್ತರದಿಂದಲೇ ಆಗಬೇಕು ಎನ್ನುವುದು ಈಗಾಗಲೇ ಚಾಲನೆಯಲ್ಲಿ ಇರುವ ಸಿದ್ಧಾಂತವಾಗಿದೆ. ಏಕೆಂದರೆ ನಮ್ಮ ಸಮಾಜದ ಸಂರಚನೆಯಲ್ಲಿ ಬಹುಪಾಲು ಕೆಳವರ್ಗದವರಿಂದ ಕೂಡಿದೆ. ಹೀಗಾಗಿ ನಮ್ಮ ಇತಿಹಾಸ ಯಾವಾಗಲೂ ಬಲಾಢ್ಯರ ಅಧೀನದಲ್ಲಿದೆ. ಆದ್ದರಿಂದಲ್ಲೇ ಇತಿಹಾಸಕ್ಕೆ ಮೊದಲು ಬಲಾಢ್ಯರಿಂದ ಸ್ವಾತಂತ್ರ್ಯ ದೊರೆಯಬೇಕಾಗಿದೆ. ಇಲ್ಲಿ ಕೆಳಸ್ತರದ ಇತಿಹಾಸಕ್ಕೆ ಹೆಚ್ಚಿನ ಪ್ರಾಮುಖ್ಯತೆಯನ್ನು

ನೀಡಿರುವುದಕ್ಕೆ ಮೂಲ ಕಾರಣವೇನೆಂದರೇ ತೆರೆಯ ಮರೆಗೆ ಸರಿದಿರುವ ಕೆಳವರ್ಗವನ್ನು ಸಮಾಜದ ಮುಖ್ಯವಾಹಿನಿಗೆ ತರುವುದು ಈ ಲೇಖನದ ಮುಖ್ಯತರ್ಕವಾಗಿದೆ.

ಕೆನರಾ ಕೊಡಗು ಇತಿಹಾಸ ರಚನಾಶಾಸ್ತ್ರವನ್ನು ಹಲವಾರು ಇತಿಹಾಸಕಾರರು ಸಂಶೋಧಕರು ಹಾಗೂ ಇತರರು ಸಮಗ್ರವಾಗಿ ಶೋಧಿಸಿ ವಿಶ್ಲೇಷಿಸಿದ್ದಾರೆ. ಈ ಹಂತದಲ್ಲಿ ಕೆಲವು ಕಡೆಯಲ್ಲಿ ಸಂಶೋಧಕರು ತಮ್ಮ ಮಹತ್ವಾಕಾಂಕ್ಷೆಯನ್ನು ಈಡೇರಿಸಿಕೊಂಡಿರುತ್ತಾರೆ. ಕೆನರಾ ಕೊಡಗು ಭವ್ಯವಾದ ಇತಿಹಾಸವನ್ನು ಹೊಂದಿದೆ. ಅದಕ್ಕೆ ಮುಖ್ಯಕಾರಣ ಲಭ್ಯವಿರುವ ವಿಪುಲವಾದ ಆಕರ ಗ್ರಂಥಗಳು ಮತ್ತು ಅನೇಕ ವಿದ್ವಾಂಸರು ಹಾಗೂ ಸಂಶೋಧಕರು ಅದನ್ನು ಪೋಷಿಸುತ್ತಾ ಬಂದಿರುವುದೇ ಆಗಿದೆ; ಕೆನರಾನ ಕೊಡಗು ಇತಿಹಾಸವು ಬೇರೆ ಬೇರೆ ಸಾಂಸ್ಥಿಕ ಚೌಕಟ್ಟುಗಳು ಆಧರಿಸಿವೆ. ಹೀಗಾಗಿ ಅದರ ಇತಿಹಾಸ ರಚನೆಯಲ್ಲಿ ಇರುವ ಪ್ರಾದೇಶಿಕತೆ, ಸೈದ್ಧಾಂತಿಕತೆಗಳ ಸೆಳವುಗಳನ್ನು ಗ್ರಹಿಸಿ ಅವುಗಳು ಕೆನರಾ ಕೊಡಗಿನ ಇತಿಹಾಸ ರಚನೆಯಲ್ಲಿ ಎಷ್ಟರ ಮಟ್ಟಿಗೆ ಪ್ರತಿಬಿಂಬಿಸಿವೆ ಎಂಬುವುದನ್ನು ಅರಿಯಬೇಕಾಗಿದೆ; ಇತಿಹಾಸ ರಚನಾಶಾಸ್ತ್ರದ ಆಧುನಿಕ ಮುಖವನ್ನು ನಾವು ಕಾಣುವುದು ನಮ್ಮ ವಸಾಹತುಶಾಹಿ ಕಾಲ ಘಟ್ಟದಲ್ಲಿಯೇ; ಏಕೆಂದರೆ ಅಲ್ಲಿಯವರೆಗೆ ನಿಖರವಾದ ಅಧ್ಯಯನ ಕ್ರಮವನ್ನು ನಾವು ರೂಢಿಸಿಕೊಳ್ಳದೆ ಇರುವುದಾಗಿದೆ. ಹೀಗಾಗಿ ಇತಿಹಾಸದ ವಸ್ತು, ಆಕರ ಸಂಗ್ರಹ, ರಚನ ವಿಧಾನ ಹಾಗೂ ಸೈದ್ಧಾಂತಿಕ ನೆಲೆಗಳು ವಸಾಹತುಶಾಹಿಗಳು ನಮಗೆ ನೀಡಿದ ಪಾಶ್ಚಿಮಾತ್ಯ ಜ್ಞಾನ ಸಂವೇದನೆಯಾಗಿದೆ. ಹೀಗಾಗಿ ಸಾಮ್ರಾಜ್ಯೀಕರಣದ ಸಂಕೀರ್ಣ ಪ್ರತಿಕ್ರಿಯೆಗಳ ಸ್ಥೂಲ ವೈಯಕ್ತಿಕ ನೆಲೆಗಳು ಕುತೂಹಲಜನ್ಯವಾದರೂ. ಒಟ್ಟಾಗಿ ನೋಡಿದಾಗ ಅವು ಅನೇಕ ರಾಜಕೀಯ ಹಾಗೂ ಸೈದ್ಧಾಂತಿಕ ಅಂಶಗಳನ್ನು ಸ್ಪಷ್ಟವಾಗಿ ಅಥವಾ ಅಸ್ಪಷ್ಟವಾಗಿ ಪ್ರತಿಬಿಂಬಿಸುತ್ತದೆ.

ಈ ನೆಲೆಯಲ್ಲಿ ಕೆನರಾಕೊಡಗು ರಚನಾಶಾಸ್ತ್ರದ ಅಧ್ಯಯನ ಕ್ರಮವನ್ನು ಅವಲೋಕಿಸಿದಾಗ ಹಲವಾರು ಗೊಂದಲಗಳು ಕಂಡುಬರುತ್ತದೆ. ಅಂದರೇ ಮುಖ್ಯವಾಗಿ ಈ ಪ್ರದೇಶಗಳಲ್ಲಿನ ವಿಭಿನ್ನ ಆರ್ಥಿಕ, ಸಾಮಾಜಿಕ ಹಾಗೂ ಸಾಂಸ್ಕೃತಿಕ ವಿಭಿನ್ನತೆಯೂ ಕಾಲದಿಂದ ಕಾಲಕ್ಕೆ ಪರಿವರ್ತನೆಯನ್ನು ಹೊಂದಿದ ವಿಭಿನ್ನ ಸಂವೇದನೆಯನ್ನು ಅದು ಪ್ರತಿಬಿಂಬಿಸುತ್ತದೆ. ಆದರೆ ವಸಾಹತುಪೂರ್ವದಲ್ಲಿ ಒಂದೇ ಗಡಿಯನ್ನು ಹೊಂದಿದ ಈ ಪ್ರದೇಶವು ನಂತರದಲ್ಲಿ ಕಂಡುಬಂದ ಆಡಳಿತಾತ್ಮಕ ಬದಲಾವಣೆಯಿಂದ ಹಲವಾರು ಮಾರ್ಪಾಡುಗಳು ಒಮ್ಮೆಲೇ ನಿರ್ಮಾಣವಾದವು: ಇದರಲ್ಲಿ ಬಹುಮುಖ್ಯವಾದ ಅಂಶವೆಂದರೇ ಈ ಪ್ರದೇಶದಲ್ಲಿ ಕಂಡುಬಂದ ವಸಾಹತುಶಾಹಿ ವಿರುದ್ಧ ಸಾಮಾನ್ಯ ರೈತರ ಹೋರಾಟಗಳು ಪ್ರಸ್ತುತ ವಿಭಿನ್ನ ನೆಲೆಯಲ್ಲಿ ಅನಾವರಣಗೊಂಡಿದೆ. ಕೆನರಾಕೊಡಗು ಆಕರ್ಷಣೆಗೆ ಮುಖ್ಯ ಕಾರಣವೆಂದರೆ ಇಲ್ಲಿನ ವೈವಿಧ್ಯತೆ ಈ ಪ್ರಾಂತ್ಯದಲ್ಲಿ ನೆಲೆಸಿರುವ ವಿವಿಧ ಸಮುದಾಯಗಳನ್ನು ಗಮನಿಸಿದಾಗ ಇಲ್ಲಿನ ಸಾಂಸ್ಕೃತಿಕ ಭಿನ್ನತೆ. ಭಾಷಾ ವೈವಿಧ್ಯ. ಧಾರ್ಮಿಕ ಅನೇಕತೆ. ಸಮೂದಾಯಿಕ ಮತ್ತು ಭೌಗೋಳಿಕ ವ್ಯತ್ಯಾಸಗಳು ಸ್ಪಷ್ಟವಾಗಿ ಗೋಚರಿಸುತ್ತವೆ. ಈ ಎಲ್ಲಾ ಅಂಶಗಳು ಸಂಶೋಧಕರನ್ನು ಆಕರ್ಷಿಸುತ್ತವೆ. ಹೀಗಾಗಿ ಅನೇಕತೆಯಲ್ಲಿ ಏಕತೆಯನ್ನು ಕಾಣುವ ನಮ್ಮ ದೇಶದ ಬೇರೆ ಪ್ರದೇಶಗಳಿಗೆ ಹೋಲಿಸಿದಾಗ ಇಲ್ಲಿ ವಿಭಿನ್ನತೆಗಳು ಹೆಚ್ಚು ಕಂಡುಬರುತ್ತವೆ. ಇದು ಸಂಶೋಧಕರಿಗೆ ಆಸಕ್ತಿದಾಯಕ ವಿಷಯ ಮಾತ್ರವಲ್ಲ ಸವಾಲೂ ಹೌದು.ಕೆನರಾ ಕೊಡಗು ಸಾಮಾಜಿಕ ಮತ್ತು ಆರ್ಥಿಕ

ಸಂಶೋಧನೆಗಳಿಗೆ ವಿಫುಲವಾದ ಅವಕಾಶವನ್ನು ನೀಡಿದೆ. ಹಾಗೆಯೇ ಈ ಪ್ರದೇಶಗಳ ಕುರಿತಾಗಿ ಸಾಕಷ್ಟು ಸಂಶೋಧನೆಗಳು ನಡೆದಿದ್ದರೂ ವೈಜ್ಞಾನಿಕವಾಗಿ ಮತ್ತು ವಿಸ್ತೃತ ಸಂಶೋಧನೆಗಳ ಸಂಖ್ಯೆ ಬಹಳ ಕಡಿಮೆ; ಮುಖ್ಯವಾಗಿ ರಾಜಕೀಯ ಪಲ್ಲಟಗಳ ವಿಭಿನ್ನ ಸ್ವರೂಪಗಳ ವಿವಿಧ ಸ್ಥಿತಿಗತಿಗಳಿಗೆ ಸಂಬಂಧಿಸಿದ ಸಂಶೋಧನೆಗಳಿಗೆ ಹೆಚ್ಚಿನ ಒತ್ತು ಕೊಡುವ ಅನಿವಾರ್ಯತೆಯಿದೆ. ಈ ದೆಸೆಯಲ್ಲಿ ಪ್ರಸ್ತುತದ ಲೇಖನದಲ್ಲಿ ರಾಜಕೀಯ ಪಲ್ಲಟಗಳಿಂದ ನಿರ್ಲಕ್ಷ್ಯಕ್ಕೆ ಒಳಗಾದ ಇತಿಹಾಸಕ್ಕೆ ಹೆಚ್ಚಿನ ಮಹತ್ವವನ್ನು ನೀಡಲಾಗಿದೆ.

ಕೊಡಗು ಕೆನರಾದ ಇತಿಹಾಸ ರಚನೆಯಲ್ಲಿ ಕ್ರೈಸ್ತಮಿಷನರಿಗಳ ಕೊಡುಗೆ ಅಪಾರವಾಗಿದೆ.[1] ಕೆನರಾಕೊಡಗು ಜಿಲ್ಲೆಗಳ ಇತಿಹಾಸ ಕಥನವು ವಸಹಾತುಶಾಹಿಗಳ ಆಳ್ವಿಕೆಗೆ ಬಂದಾಗಲೇ ಆರಂಭವಾಗಿತ್ತು. ಅಂದರೇ ಆಡಳಿತದ ಅನಿವಾರ್ಯತೆಗಾಗಿ, ಇಲ್ಲಿನ ವಸ್ತು ಸ್ಥಿತಿಗಳು, ಸಾಮಾಜಿಕ ಮತ್ತು ಆರ್ಥಿಕ ವ್ಯವಸ್ಥೆಗಳನ್ನು ಅರಿತುಕೊಳ್ಳಲು ಹಿರಿಯ ಅಧಿಕಾರಿಗಳನ್ನು ನೇಮಿಸಿ ವರದಿಗಳ ಮೂಲಕ ವಿವರ ಪಡೆದಿದ್ದರು. ವಸಾಹತುಶಾಹಿ ಬರಹಗಾರರು ತಮ್ಮ ಕ್ರೈಸ್ತ ಮಿಶನರಿಗಳ ಸಹಾಯದಿಂದ ಈ ಉಭಯ ಜಿಲ್ಲೆಗಳ ಇತಿಹಾಸವನ್ನು ರಚಿಸಲು ಆರಂಭಿಸಿದರು. ವಸಾಹತು ಬರವಣಿಗೆಗಳಾದ ಆಡಳಿತ ವರದಿಗಳು, ಗೆಸೆಟಿಯರ್, ದೃಢಿಕೃತ ಅಂಕಿ ಅಂಶಗಳು, ಅಧಿಕಾರಿಗಳ ವರದಿಗಳು ಇತ್ಯಾದಿಗಳಿಂದ ಈ ಭಾಗದ ಸಮಗ್ರ ಇತಿಹಾಸದ ಅಧ್ಯಯನ ಮಾಡಲು ಅವಕಾಶವಾಗಿದೆ.

1857ರ ಸ್ವಾತಂತ್ರ್ಯ ಸಂಗ್ರಾಮವನ್ನು ಸಿಪಾಯ್ ಮ್ಯೂಟಿನಿ ಅಥವಾ ಸಿಪಾಯಿ ದಂಗೆಯಿಂದ ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮವೆಂದು ಕರೆಯಲಾಗುತ್ತದೆ. ಹಾಗೆಯೇ ಭಾರತದ ಸ್ವಾತಂತ್ರ್ಯದ ಆರಂಭದ ಹೆಜ್ಜೆಗಳೆನ್ನುತ್ತಾರೆ; ಇದು ನಿಜವೇ? ಏಕೆಂದರೆ ಆ ಸಂದರ್ಭದಲ್ಲಿ ನಮ್ಮವರಿಗೆ ರಾಷ್ಟ್ರೀಯತೆಯ ಕುರಿತಂತೆ ಅವರ ಮನಃಸ್ಥಿತಿ ಹೇಗಿತ್ತು? ಹಾಗೆಯೇ ಅದಕ್ಕಿಂತ ಮೊದಲು ಇಂತಹ ಹೋರಾಟಗಳು ನಡೆದಿರಲಿಲ್ಲವೇ? ಹಾಗಾದರೆ ಅವುಗಳಿಗೆ ಅಂತಹ ಮಾನ್ಯತೆಯನ್ನು ಯಾಕೆ ನೀಡಲಾಗಿಲ್ಲ? ಅದಕ್ಕೇನಾದರೂ ಕಾರಣಗಳಿವೆಯೇ? ಎಂದು ಅವಲೋಕಿಸುವ ಅನಿವಾರ್ಯತೆಯಿದೆ. ಏಕೆಂದರೆ ಇದಕ್ಕೆ ಮುಖ್ಯ ಕಾರಣ ನಮ್ಮ ಇತಿಹಾಸಕಾರರು ಹೆಚ್ಚು ಶೋಧಕ್ಕೆ ಹೋಗದೆ ಆರಂಭದ ಕೆಲವು ಹೋರಾಟಗಳ ಸಣ್ಣ ಇಣುಕು ನೋಟವನ್ನು ಮಾತ್ರ ಮಾಡಿ ತಮ್ಮದೇ ಆದ ನೆಲೆಯಲ್ಲಿ ಇತಿಹಾಸವನ್ನು ರಚಿಸುವುದರ ಮೂಲಕ ಅದೊಂದು ನವೀನ ಸಿದ್ಧಾಂತವೆಂದು ಪ್ರಚಾರಪಡಿಸುತ್ತಾರೆ. ಆದರೆ, ಬ್ರಿಟಿಷ್ ಲೇಖಕರು ಭಾರತದ ಬಂಡಾಯದ ಬಗ್ಗೆ ಬರೆದ ಲೇಖನ, ಕೆಲವು ಪ್ರಶ್ನೆಗಳ ತೀಕ್ಷ್ಣ ವಿಶ್ಲೇಷಣೆಗಳು ಬಂಡಾಯವನ್ನು ಅರ್ಥೈಸಿಕೊಳ್ಳಲು ನಮಗೆ ಸಹಾಯ ಮಾಡುತ್ತದೆ ನಿಜ, ಆದರೂ ಅವು ವಸಾಹತುಶಾಹಿ ನೆಲೆಯನ್ನು ಬಿಟ್ಟು ಬರುವುದಿಲ್ಲ. ಒಟ್ಟಿನಲ್ಲಿ ಯಾವುದೇ ಐತಿಹಾಸಿಕ ಬಂಡಾಯವನ್ನು ಒಂದು ಕಾವ್ಯದ ಹಾಗೆ ಅಚ್ಚುಕಟ್ಟಿನ ಚೌಕಟ್ಟಿನ ಒಳಗೆ ನೋಡಲು ಸಾಧ್ಯವಿಲ್ಲ; ಏಕೆಂದರೆ ಎಲ್ಲಾ ಬಂಡಾಯ. ಹೋರಾಟಗಳಲ್ಲಿ ಅಸಹನೆ, ಕುಟಿಲತೆ, ಲೋಭ, ಅಧಿಕಾರದಾಹ, ಮೋಹ, ತಂತ್ರಗಾರಿಕೆ ಮತ್ತು ಕಾರ್ಯವಿಧಾನಗಳಿಂದ ಕೂಡಿರುತ್ತದೆ. ಅದರೊಂದಿಗೆ ದಂಗೆಯೂ ಧನಾತ್ಮಕ ಹಾಗೂ ಋಣಾತ್ಮಕವಾದ ಸಂಬಂಧವನ್ನು ಹೊಂದಿರುತ್ತದೆ. ಹಾಗೆಯೆ ಮಾನವನೊಂದಿಗೆಯೇ ಬೆಳೆದು ಬಂದಿರುವ ಗುಣಲಕ್ಷಣಗಳಾದ ಒಳ್ಳೆಯ ಮತ್ತು ಕೆಟ್ಟ ಉದ್ದೇಶಗಳ ಜೊತೆಗೆಯೇ ಗುರುತೇ ಸಿಗದಂತೆ ಮಿಳಿತವಾಗಿರುತ್ತವೆ.

ನಮ್ಮ ಸಾಮಾಜಿಕ ಮತ್ತು ರಾಜಕೀಯ ಪ್ರಜ್ಞೆಯೂ ಸಂಶೋಧನೆಯ ಮೇಲೆ ಆಧಾರವಾಗಿಲ್ಲ, ಬದಲಿಗೆ ಯೂರೋಪಿನವರ ಕಥೆಗಳನ್ನು ಆಧರಿಸಿವೆ. ನಮ್ಮ ಸಮಕಾಲೀನ ಇತಿಹಾಸದ ವಿವರಣೆಯಲ್ಲಿ ಸ್ವಾತಂತ್ರ್ಯ ಸಂಗ್ರಾಮ, ಈ ಹೋರಾಟಕ್ಕೆ ಸ್ಪಂದಿಸಿದ ಸ್ಥಳೀಯ ಹೋರಾಟಗಳ ಕೊಡುಗೆ ಏನು? ಎಂಬುವುದರ ಅಧ್ಯಯನದಿಂದ,[2] ಏಕಮುಖಿ ಅಭಿಪ್ರಾಯಗಳ ಪುನರಾವರ್ತಿತ ಬಂಡಾಯವೆಂದರೇ ಸಾಮುದಾಯಿಕ ಪ್ರತ್ಯೇಕತೆಯನ್ನು ಹೋಲುವುದರೊಂದಿಗೆ ವರ್ಗ ಸಂಘರ್ಷದ ಅನಿವಾರ್ಯತೆಯನ್ನು ನಿರ್ಮಿಸುತ್ತದೆ.[3] ಕೆನರಾ ಕೊಡಗು ದಂಗೆಯ ಕುರಿತಂತೆ ಲೇಖಕರು ವೈಯುಕ್ತಿಕ ಉದ್ದೇಶಗಳ ಈಡೇರಿಕೆ ಹಾಗೆಯೇ ವರ್ಗ ಪ್ರತಿಷ್ಠೆಯನ್ನು ವಿವರಿಸುತ್ತಾರೆ, ವಿನಹಃ ದಂಗೆಯಲ್ಲಿ ಭಾಗವಹಿಸಿದ ಅನ್ಯಕೋಮಿನ ಬಂಡಾಯಗಾರರ ಶೌರ್ಯ ಮತ್ತು ಸಾಧನೆಗಳನ್ನು ವಿವರಿಸಲು ವಿಫಲರಾಗಿದ್ದಾರೆ. ಕೆನರಾ ಕೊಡಗು ಬಂಡಾಯದ ಕುರಿತಂತೆ ನಡೆಯುತ್ತಿರುವ ಅಧ್ಯಯನಗಳು ಮತ್ತು ಚಿಂತನೆಯ ಕುರಿತು ಇರುವ ನಿರೂಪಣೆಯೂ ಹಲವರಿಗೆ ಒಂದು ತೆರನಾದ ಅಸಮಾಧಾನದಿಂದ ಕೂಡಿದೆ. ಇದನ್ನು ತಿಳಿಯಲು ಈ ಬಂಡಾಯಕ್ಕೆ ಕುರಿತಂತೆ ಈವರೆಗೆ ಬಂದಿರುವ ನಿರೂಪಣೆಯಲ್ಲಿ ಇರುವ ದೋಷ ಏನು? ಈ ದೋಷಪೂರಿತ ವಿವರಗಳ ಹಿಂದೆ ಇರುವ ಗ್ರಹಿಕೆ ಯಾವುದು? ಎನ್ನುವ ಅಂಶಗಳಿಂದ ಹೊಸದಾಗಿ ಶೋಧಿಸಿಕೊಳ್ಳುವ ಅನಿವಾರ್ಯತೆಯಿಂದಾಗಿ ಸಮಕಾಲೀನ ಬರವಣಿಗೆಯಲ್ಲಿ ಬಹುತ್ವ ಏಕತ್ವದ ರೂಪೀಕರಣದ ಸಂಸ್ಕೃತಿಯಲ್ಲಿ ಪ್ರತ್ಯೇಕತೆ ಮತ್ತು ಅನನ್ಯತೆಯನ್ನು ಈ ಲೇಖನದಲ್ಲಿ ಗುರುತಿಸಿರುತ್ತೇನೆ. ಬ್ರಿಟಿಷರು ದಂಗೆಯ ಚರಿತ್ರೆಯನ್ನು ಬರೆಯಲು ಭಾರತೀಯರಿಗೆ ಕೊನೆಯವರೆಗೂ ಅವಕಾಶ ನೀಡಲಿಲ್ಲ. ಬರೆದವರೆಲ್ಲ ಬ್ರಿಟಿಷ್‌ರು, ಅವರ ಸೈನ್ಯಾಧಿಕಾರಿಗಳು ದಂಗೆಯ ಬಗ್ಗೆ ತಿಳಿಯಬೇಕಾದರೆ, ಸರ್ಕಾರಿ ಮಿಲಿಟರಿ ದಾಖಲೆಗಳನ್ನು ನೋಡಬೇಕು. ನಮ್ಮ ಇತಿಹಾಸವನ್ನು ನಮ್ಮವರ ದೃಷ್ಟಿಯಲ್ಲೇ ತಿಳಿಯಲು ಹೆಚ್ಚಿನ ಸಾಹಿತ್ಯ ಲಭ್ಯವಿಲ್ಲ. ಪುಸ್ತಕ ರಚಿಸಬೇಡ ಎಂದೇನೋ ವಿದ್ವಾಂಸರಿಗೆ ಹೇಳಿ ಬಿಡಬಹುದು. ಆದರೆ ಜನಪದದಲ್ಲಿ ಆಗುವ ಸಾಹಿತ್ಯ ಸೃಷ್ಟಿ ಸರ್ವ ಸ್ವತಂತ್ರವಾಗಿದ್ದು ಅದನ್ನು ಯಾರು ತಡೆಯಲಾಗುವುದಿಲ್ಲ. ಇತಿಹಾಸಕಾರ ಇವನ್ನು ಆಕರವಾಗಿ ಬಳಸಿದಾಗ ದೇಶಿ ಚರಿತ್ರೆಯ ರಚನೆಗೆ ವಿಶ್ವಾಸಾರ್ಹತೆಯ ಮೆರುಗು ಬರುತ್ತದೆ. ಜನಪದ ಸಾಹಿತ್ಯದ ಆಕರಗಳು, ಸ್ವಭಾವದಲ್ಲೇ ಪರೋಕ್ಷ ಪ್ರಯೋಗ ಮಾಡುತ್ತವೆ. ಮೋಹನ್‌ಕೃಷ್ಣ ರೈಯವರು ಹೇಳುವಂತೆ ವಸಾಹತುಶಾಹಿ, ಸಾಮ್ರಾಜ್ಯಶಾಹಿ ಮತ್ತು ಬಂಡವಾಳಶಾಹಿಗಳ ವಿರುದ್ಧ ನಡೆದ ದಂಗೆ, ಯುದ್ಧ, ಹೋರಾಟಗಳನ್ನು ಒಟ್ಟಾರೆಯಾಗಿ ಪ್ರತಿಭಟನೆ ಎಂದು ಭಾವಿಸಲಾಗಿದೆ. ಇಲ್ಲಿ ಸ್ಥಳೀಯ ಜನ, ನಾಡು, ಧರ್ಮ, ಸಂಸ್ಕೃತಿ, ಭಾಷೆ, ಮೊದಲಾದ ಸಂಗಾತಿಗಳ ಮೂಲಕ ರಾಷ್ಟ್ರೀಯತೆಯ ಮನೋಭಾವ, ಜಾಗೃತ ಪ್ರಜ್ಞೆಯನ್ನು ಗುರುತಿಸಬೇಕಾಗಿದೆ.[4] 1837ರ ಬಂಡಾಯದಲ್ಲಿ ಭಾಗವಹಿಸಿದ ರೈತರನ್ನು ಸಾಮುದಾಯಿಕವಾಗಿ ಚಿತ್ರಿಸಿ ಬೇರೆ ಬೇರೆ ಸಮುದಾಯದ ಜಾತಿ, ಅನ್ಯಧರ್ಮಿಯರ ಭಾವನಾತ್ಮಕ ಹೋರಾಟವನ್ನು ಗಮನಿಸದಿರುವುದು ಹಾಸ್ಯಸ್ಪದವಾಗಿದೆ. ಕೆನರಾಕೊಡಗು ಬಂಡಾಯವು ನಾಗರಿಕ ದಂಗೆಯಾಗಿ ತನ್ನನ್ನು ಗುರುತಿಸಿಕೊಳ್ಳುವ ಬದಲು ಗೌಡರ ದಂಗೆ, ತುಳು ಭಾಷಿಕರ ದಂಗೆ, ಕೊಡವರ ದಂಗೆ ಎಂದು ಬಿಂಬಿತವಾಗಿರುವುದು ಇತಿಹಾಸ ಕಲಿಕೆಯಲ್ಲಿ ಒಂದು ಕಪ್ಪುಚುಕ್ಕಿಯಂತೆ ಕಾಣುತ್ತಿದೆ. ಈ ಬಂಡಾಯದಲ್ಲಿ ರೈತರ ಧೈರ್ಯವೊಂದೇ ಆಯುಧದಂತಿದ್ದು ಬ್ರಿಟಿಷರಿಗೆ ಸೋಲಿಸಿದರೆ

ಉತ್ತಮ ದರ್ಜೆಯ ಸೈನಿಕ ಸಾಮಾಗ್ರಿಗಳ ಕೊರತೆಯಿಂದ ಆರಂಭದಲ್ಲಿ ಅನುಭವಿಸಿದ ಗೆಲುವನ್ನು ಕಾಯ್ದುಕೊಳ್ಳಲು ವಿಫಲರಾದರು ಎಂದು ತಿಳಿಯಬಹುದು. ಬಂಡಾಯಕ್ಕೆ ಕುರಿತಂತೆ ಆಂಗ್ಲರ ವರದಿಗಳಲ್ಲಿ ಕೆಲವು ನಾಯಕರನ್ನು ಮಾತ್ರ ಗಮನಿಸಿ ವರದಿ ತಯಾರಿಸಿದ್ದು ಅಲ್ಲಿ ಪೂರ್ವಾಗ್ರಹದ ಕೊರತೆಯನ್ನು ಕಾಣಬಹುದು. ಅದನ್ನು ಅನುಸರಿಸಿ ಕೆಲವರು ಪೂರ್ಣಶೋಧ ಮಾಡದೆ ಬರೆದರು. ಅಲ್ಲಿ ಸಮಗ್ರ ಚಿಂತನೆಗೆ, ಶೋಧನೆಗೆ ಮುಂದಾಗಲಿಲ್ಲ. ಚಿಕ್ಕವೀರರಾಜೇಂದ್ರ ರಾಜನ ಚಿತ್ರಣವೂ ವಿಭಿನ್ನ ರೀತಿಯಲ್ಲಿ ಬರಲು ಸಾಹಿತ್ಯಿಕ ದೃಷ್ಟಿ ಅಥವಾ ಒಂದು ಸಾಹಿತ್ಯಿಕ ಅಭಿಪ್ರಾಯ ಎನ್ನಬಹುದು. ಇತಿಹಾಸದಲ್ಲಿ ಕಲ್ಪನೆಯೂ ಒಂದು ಎಚ್ಚರದ ಕಾರ್ಯ, ಈ ಕಲ್ಪನೆಗೆ ಹೆಚ್ಚಿನ ಐತಿಹಾಸಿಕ ಆಕರಗಳು ದೊರಕಿದ್ದರೆ, ತನ್ನ ಸಾಂಸ್ಕೃತಿಕ ಮೌಲ್ಯವನ್ನು ಹೆಚ್ಚಿಸಿಕೊಳ್ಳುತ್ತದೆ. ಹಾಗೆಯೇ ಈ ಕಲ್ಪನೆಗೆ ದಾಖಲೆಗಳ ಕೊರತೆ ಕಂಡುಬಂದಾಗ ಅದು ಸಂಘರ್ಷಕ್ಕೆ ಕಾರಣವಾಗುತ್ತದೆ. ಒಂದು ನೆಲೆಯಲ್ಲಿ ನೋಡುವುದಾದರೆ, ಕೊಡಗಿನ ಇತಿಹಾಸದ ರಚನೆಯನ್ನು ಉದ್ದೇಶಿಸಿ ವಿಶೇಷವಾದ ಅಧ್ಯಯನ ಮಾಡಿದ ಪ್ರಯತ್ನಗಳನ್ನು ಕಾಣಬಹುದು. ದಂಗೆಯ ಕುರಿತು ದುರ್ಬಲ ವರ್ಗದವರ ಸಾಮಾಜಿಕ ಮತ್ತು ರಾಜಕೀಯ ಸುಧಾರಣೆಯನ್ನು ವಿಶ್ಲೇಷಿಸಲಿಲ್ಲ. ಈ ದೆಸೆಯಿಂದ ಪ್ರಸ್ತುತ ಲೇಖನದ ಮೂಲಕ ಚರ್ಚಿಸಲು ಪ್ರಾರಂಭಿಸಲಾಗಿದೆ.

ರಾಷ್ಟ್ರ ಪ್ರಜ್ಞೆ ಇಂದು ನಮ್ಮೆಲ್ಲರ ಪ್ರಜ್ಞೆಯ ಅಂಶವೆನಿಸಿದ್ದು ಚಿರಂತನ ಸತ್ಯ; ಆದರೆ, ವಸಾಹತುಶಾಹಿ ಆಡಳಿತದ ಕೆನರಾಕೊಡಗಿನ ರೈತರಿಗೆ ಯಾವುದೇ ರೀತಿಯ ರಾಷ್ಟ್ರೀಯ ಪ್ರಜ್ಞೆಯಿರಲಿಲ್ಲ ಎಂಬುವುದು ಈ ಸಂದರ್ಭದಲ್ಲಿ ವಿಶ್ಲೇಷಿಸುವ ಅಂಶವಾಗಿದೆ. ಹೀಗಾಗಿ ಈ ರೈತರಿಗೆ ರಾಷ್ಟ್ರೀಯತೆಯ ಬದಲಿಗೆ ತಮ್ಮ ಅನನ್ಯತೆಯನ್ನು ಬಿಂಬಿಸುವುದು ಬಹುಮುಖ್ಯವಾದ ಮಾನದಂಡವಾಗಿತ್ತು. ಪ್ರಸ್ತುತದ ದಿನಗಳಲ್ಲಿ ಕೆನರಾಕೊಡಗು ರೈತದಂಗೆ ಒಂದೊಂದು ಸಮುದಾಯಗಳಲ್ಲಿ ನವೀನ ಸ್ವರೂಪವನ್ನು ಪಡೆಯುತ್ತಿದೆ ಎನ್ನುವುದು ಮಾತ್ರ ವಿಷಾದನೀಯವಾಗಿದೆ. ಹೀಗಾಗಿ ಈ ನಾಡಿನ ರೈತರ ಹೋರಾಟವು ಚೈತನ್ಯ ಪೂರ್ಣವಾಗಿ ಉಳಿದು ಇತರರಿಗೆ ಸ್ಫೂರ್ತಿದಾಯಕ ಅಂಶವಾಗಿ ಸ್ವಾತಂತ್ರ್ಯದ ಸವಿನೆನಪನ್ನು ಮರುನಿರ್ಮಿಸುವ ಅನಿವಾರ್ಯತೆಯನ್ನು ಉಂಟುಮಾಡಿದೆ; ಇಲ್ಲಿ ಗಮನಿಸಬೇಕಾದ ಅಂಶವೆಂದರೇ ಹೋರಾಟ ಎಂಬುವುದು ಮಾನವ ಜೀವನದ ಅನುಪಮ ಸೊತ್ತು ಮತ್ತು ಸಕಲ ಜೀವಿಗಳ ಜನ್ಮಸಿದ್ಧ ಹಕ್ಕು. ಅದು "1837ರ ರೈತ ಸಂಗ್ರಾಮವೇ ಆಗಿರಲಿ; 1857ರ ಸ್ವಾತಂತ್ರ್ಯ ಸಂಗ್ರಾಮವೇ ಆಗಿರಲಿ" ಈ ಪ್ರದೇಶದ ಹೋರಾಟದಲ್ಲಿ ಪಾಲ್ಗೊಂಡ ರೈತರ ಶೌರ್ಯ, ಸಾಹಸ, ಸಮಯೋಚಿತ ಪ್ರಜ್ಞೆ, ರಾಷ್ಟ್ರೀಯ ಪ್ರಜ್ಞೆ, ಸ್ವಾತಂತ್ರ್ಯದ ಬಗೆಗಿರುವ ಅದಮ್ಯ ಕಳಕಳಿಯನ್ನು ಸ್ಮರಿಸುವಲ್ಲಿ, ಅವರ ವೀರಗಾಥೆಗಳನ್ನು ಮೆಲುಕು ಹಾಕುವಲ್ಲಿ ಸಮಗಾಗುವ ರೋಮಾಂಚಕಾರಿ ಅಂಶಗಳು ವಿಶೇಷವಾಗಿದೆ. ಈ ರೈತರು ಕೈಗೊಂಡ ಹೋರಾಟದಲ್ಲಿ ತಮ್ಮ ಅಳಿವುಉಳಿವಿಗೆ ಹೆಚ್ಚಿನ ಉತ್ತೇಜನವಿತ್ತರೇ ವಿನಹಃ ಮತ್ಯಾವುದೇ ಚಿಂತನೆಗಳಿಗಾಗಿ ಅಲ್ಲ. ಆದರೆ ಬಲಾಢ್ಯ ಇತಿಹಾಸಕಾರರು ತಮ್ಮ ಸಮುದಾಯವನ್ನು ಇತಿಹಾಸದಲ್ಲಿ ಕಂಡುಬಂದ ವಿವಿಧ ಹೋರಾಟಗಳೊಂದಿಗೆ ಗುರುತಿಸುವ ಮೂಲಕ ಕೊಡಗು ಕೆನರಾ ರೈತ ಬಂಡಾಯವನ್ನು ಏಕ ಜನಾಂಗದಹೋರಾಟವೆಂದು ಬಿಂಬಿಸುವ ಪ್ರಯತ್ನಗಳು ನಮ್ಮ ಸುತ್ತಲಿನ ಪರಿಸರದಲ್ಲಿ ಕಂಡುಬರುತ್ತಿವೆ. ಇದಕ್ಕೆ ಮುಖ್ಯ ಕಾರಣ ರಚನಾಶಾಸ್ತ್ರ ಮತ್ತು ಪಾಶ್ಚಾತ್ಯ ಸಂಸ್ಕೃತಿಯ

ಪ್ರಭಾವವಾಗಿದೆ. ಹೀಗಿದ್ದರೂ ನಮ್ಮ ಸಾಂಸ್ಕೃತಿಕ ಪದ್ಧತಿಯಲ್ಲಿ ಹಲವಾರು ಬದಲಾವಣೆಗಳು ಆಗಿದ್ದರೂ, ಒಂದು ನೂತನ ದೃಷ್ಟಿಕೋನದ ಮೂಲಕ ನಮಗೆ ರಾಷ್ಟ್ರೀಯ ಭಾವನೆಯನ್ನು ಜಾಗ್ರತಗೊಳಿಸಿದ ವೀರರೈತರ ಕುರಿತಂತೆ ಅಧ್ಯಯನ ಮಾಡಲು ಆಸಕ್ತಿಯನ್ನು ಉಂಟುಮಾಡಿದೆ. ಆ ಮೂಲಕ ವಸಾಹತುಶಾಹಿಗಳ ವಿರುದ್ಧ ಹೋರಾಟದಲ್ಲಿ ಸಕ್ರಿಯವಾಗಿ ತಮ್ಮನ್ನು ತೊಡಗಿಸಿಕೊಂಡ ರೈತರು ಸಮಾನ ಹಕ್ಕು, ಜೊತೆಗೆ ತಮ್ಮ ಸಮಾಜದ ಉನ್ನತಿಗಾಗಿ ಸಂಘಟಿತರಾಗಿ ಹೋರಾಡಿರುತ್ತಾರೆ; ಆದರೆ ನಾವಿಂದು ಆ ಜನಸಾಮಾನ್ಯರ ಸಾಮೂಹಿಕ ಹೋರಾಟವನ್ನು ಸಾಮುದಾಯಿಕ ಹೋರಾಟವೆಂದು ಬಿಂಬಿಸಲು ಹೊರಟಿದ್ದೇವೆ; ಆ ಸಾಹಸ ಪೂರ್ಣ ಹೋರಾಟಗಳು ಉಪೇಕ್ಷೆಗೆ ಗುರಿಯಾಗಿ ಇಂದು ನಮಗಾಗಿ ಹೋರಾಡಿದವರನ್ನು ಗೌರವಿಸುವ ಬದಲು ತಮ್ಮ ಸ್ವಕಾರ್ಯ ಸಾಧನೆಗಾಗಿ ಹೆಚ್ಚು ಒತ್ತು ನೀಡುತ್ತಿದ್ದೇವೆ. ಜಗತ್ತಿನ ಯಾವುದೇ ಚರಿತ್ರೆಯನ್ನು ಪರಿಶೀಲಿಸಿದಲ್ಲಿ ಕೆಲವೊಂದು ಪ್ರಧಾನ ಅಂಶಗಳಿಂದ ಅದು ತನ್ನನ್ನು ತಾನು ಅನಾವರಣ ಮಾಡಿಕೊಂಡಿರುತ್ತದೆ. ತಮ್ಮದೇ ಆದ ವಿಶೇಷತೆಗಳ ಮೂಲಕ ಇತರರಿಗಿಂತ ತಾವು ಹೇಗೆ ಭಿನ್ನ ಎಂದು ತೋರಿಸಿಕೊಡುವಲ್ಲಿ ಪ್ರಧಾನ ಪಾತ್ರ ವಹಿಸುತ್ತದೆ. ಈ ದೆಸೆಯಲ್ಲಿ ಕೆನರಾ ಕೊಡಗು ರೈತ ದಂಗೆಯೂ ಸಹ ತಮ್ಮ ವಿಭಿನ್ನ ಅನನ್ಯತೆ ಹಾಗೂ ಅಸ್ಮಿತೆಯ ಪರಿಕಲ್ಪನೆಗಳ ಮೂಲಕ ತನ್ನನ್ನು ತಾನು ಗುರುತಿಸಿಕೊಂಡಿದೆ ಹಾಗೂ ನಿರಂತರ ಬದಲಾವಣೆಗಳಿಗೆ ಒಳಗಾಗುತ್ತಿದೆ ಎಂದು ಅನಂತ ರಾಮರಾವ್ ತಮ್ಮ **'ಸ್ವಾತಂತ್ರ್ಯ ಸ್ವರ್ಣ ರೇಖೆ'**ಲೇಖನದಲ್ಲಿ ಹೇಳಿಕೊಂಡಿದ್ದಾರೆ.

### ಕೆನರಾ ಕೊಡಗಿನ ರೈತಬಂಡಾಯದ ವಿವಿಧ ನೆಲೆಗಳು

ಕೆನರಾಕೊಡಗು ರೈತರಿಗೆ ಬ್ರಿಟಿಷ್ ದಾಸ್ಯದಿಂದ ಹೊರಬರಬೇಕು ಎಂಬ ನಿರ್ದಿಷ್ಟವಾದ ಆಶಯವಿತ್ತೆ? ವಾಸ್ತವದಲ್ಲಿಕೆನರಾ ಕೊಡಗು ರೈತ ಬಂಡಾಯ ಇತಿಹಾಸದಲ್ಲಿ ಯಾವ ರೀತಿಯಲ್ಲಿ ಗುರುತಿಸಿಕೊಂಡಿದೆ? ಹಾಗೆಯೇ ಈ ಸಂದರ್ಭದಲ್ಲಿ ದಕ್ಷಿಣ ಭಾರತದ ಬೇರೆ ಬೇರೆ ಭಾಗಗಳಲ್ಲಿ ನಡೆದ ಬ್ರಿಟಿಷ್ ವಿರೋಧಿ ದಂಗೆಯ ಒಟ್ಟಾರೇ ಚಿತ್ರಣ ಯಾವುದು ಮತ್ತು ಪ್ರಸ್ತುತದ ಗ್ರಹಿಕೆಗಳೇನು? ಜೊತೆಗೆ ಈ ಎಲ್ಲಾ ಬಂಡಾಯದ ನೇತೃತ್ವವನ್ನು ವಹಿಸಿದ ಮುಖಂಡರಿಗೆ ಸ್ವಾತಂತ್ರ್ಯ ಹೋರಾಟವನ್ನೇ ಆರಂಭಿಸಿದ್ದೇವೆ ಎಂಬ ಭಾವನೆಯಿತ್ತಾ? ಕೊನೆಯದಾಗಿ, ಈ ರೈತ ಬಂಡಾಯದ ವಾಸ್ತವತೆ ಮತ್ತು ವಸ್ತು ನಿಷ್ಠತೆಗಳೇನು? ಎನ್ನುವುದನ್ನು ಶೋಧಿಸಬೇಕಾಗಿದೆ.

ಬ್ರಿಟಿಷ್ ಭಾರತವನ್ನು ಯಶಸ್ವಿಯಾಗಿ ಆಕ್ರಮಿಸಿ, ತಮ್ಮ ವಸಾಹತುಶಾಹಿ ಪ್ರಭುತ್ವವನ್ನು ಸ್ಥಾಪಿಸಿದ ಪ್ರಕ್ರಿಯೆಗೆ ವಿರುದ್ಧವಾಗಿ ಭಾರತೀಯರು ತಮ್ಮ ಅತೃಪ್ತಿಯನ್ನು ಮತ್ತು ಅಸಮಧಾನವನ್ನು ಆರಂಭದಿಂದಲೇ ವ್ಯಕ್ತಪಡಿಸಿರುವುದಕ್ಕೆ ಹಲವಾರು ದಾಖಲೆಗಳಿವೆ. ಈ ಎಲ್ಲಾ ದಾಖಲೆಗಳ ಸರಿಯಾದ ಮೌಲೀಕರಣವಾಗಬೇಕಾಗಿದೆ. ಕೆನರಾ ಕೊಡಗು ದಂಗೆಯನ್ನು ಸೂಕ್ಷ್ಮವಾಗಿ ಅವಲೋಕಿಸಿದರೆ, ಎಲ್ಲಾ ದಂಗೆಗಳಿಗೆ ಆಧಾರವಾಗಿದ್ದು ಶ್ರೀಮಂತ ಜಮೀನ್ದಾರರು ಮತ್ತು ಸಣ್ಣ ಪುಟ್ಟ ರೈತ ಮುಖಂಡರ ನಡುವೆ ಇದ್ದ ಪರಂಪರಾಗತವಾದ ಸಂಬಂಧಗಳು ಮತ್ತು ವಿಧೇಯತೆಗಳು ಬೇರೆ ಬೇರೆಯ ಸ್ವರೂಪದಲ್ಲಿ ಪ್ರಾದೇಶಿಕ ಐಕ್ಯತೆಯನ್ನು ಹೊಂದಿತ್ತು. ಆದರೆ ಪ್ರಸ್ತುತ ಅಥವಾ ಆಧುನಿಕತೆಯ ರಾಷ್ಟ್ರೀಯತೆಯ ಪ್ರಜ್ಞೆಯಾಗಲಿ, ವಸಾಹತುಶಾಹಿಯ ಸ್ವರೂಪ ಮತ್ತು ಲಕ್ಷಣಗಳ ಇತ್ತೀಚಿನ ಅರಿವಾಗಲಿ, ನೂತನ ಸಾಮಾಜಿಕ ಸಂಬಂಧಗಳ ಆಧಾರಗಳ ಮೇಲೆ ಹೊಸ ಸಮಾಜವನ್ನು

ಕಟ್ಟಬೇಕೆಂಬ ಭಾವನೆಯಾಗಲಿ ಈ ದಂಗೆಗಳಲ್ಲಿ ಭಾಗವಹಿಸಿದ ನಾಯಕರಿಗೆ ಮತ್ತು ಜನಸಾಮಾನ್ಯರಿಗೆ ಇರಲಿಲ್ಲ. ಅದರೊಂದಿಗೆ ನಾಯಕತ್ವದ ವಿಚಾರದಲ್ಲೂ ಅವರ ಹೋರಾಟ ಅತೀ ದುರ್ಬಲ ಮತ್ತು ಅನಿವಾರ್ಯವಾಗಿ ಸಂಪ್ರಾದಾಯಿಕ ಸ್ವರೂಪವನ್ನು ಹೊಂದಿತ್ತು. ಹಾಗೆಯೆ ತಮ್ಮ ಸುತ್ತ ಬದಲಾಗುತ್ತಿರುವ ವಿಶ್ವದ ಅರಿವು ಸ್ವಲ್ಪವೂ ಅವರಲ್ಲಿ ಕಾಣುತ್ತಿರಲಿಲ್ಲ. ಮುಖ್ಯವಾಗಿ ಈ ಎಲ್ಲಾ ದಂಗೆಗಳು ಹಿಂದುಳಿದ ಸ್ವರೂಪದಲ್ಲಿತ್ತು. ಈ ಕುರಿತಂತೆ ಸಂಶೋಧಕ ಎಂ.ಜಿ ನಾಗರಾಜ್‌ರವರ **ಕರ್ನಾಟಕ ರೈತ ಚಳುವಳಿ** ಎಂಬ ಆರು ಸಂಪುಟಗಳಲ್ಲಿ ರೈತದಂಗೆಯನ್ನು ವಿವರಿಸಿದ್ದಾರೆ. ಇದರಲ್ಲಿ ಅವರ ಮೊದಲ ಸಂಪುಟವು ಕೆನರಾಕೊಡಗು ರೈತದಂಗೆಯನ್ನು ವಿವರಿಸುವಾಗ ಅವರು ಹೇಳುವಂತೆ, ಈ ದಂಗೆಯಲ್ಲಿ ಸ್ವಾತಂತ್ರ್ಯ ಹೋರಾಟ ಎಂಬ ಹೆಸರು ಪ್ರಧಾನವಾಗಿ ನಿಂತಿದ್ದರೂ, ಅಲ್ಲಿ ರೈತಕ್ರಾಂತಿಯು ಅದರ ಆಂತರಿಕ ಶಕ್ತಿಯಾಗಿ ಮೂಡಿತ್ತೆಂಬುದನ್ನು ಮರೆಯುವಂತಿಲ್ಲ ಎಂದು ಹೇಳಿರುತ್ತಾರೆ. ಒಟ್ಟಿನಲ್ಲಿ ರೈತದಂಗೆಯಾಗಿ ಮೂಡಿಬಂದ ಈ ಬಂಡಾಯವು ನಂತರ ದಿನಗಳಲ್ಲಿ ರಾಜಕೀಯ ಹಾಗೂ ಸಾಮಾಜಿಕ ಉನ್ನತೀಕರಣಕ್ಕಾಗಿ ಸಮುದಾಯಿಕ ದಂಗೆಯಾಗಿ ಕಂಡುಕೊಂಡಿತ್ತು;

ವಸಾಹತುಶಾಹಿ ಇತಿಹಾಸಕಾರರು ರೈತರನ್ನು ಪ್ರಾಮಾಣಿಕರು ಶಾಂತಿ ಪ್ರಿಯರಾದ ಜನರನ್ನು ಭೂಮಾಲೀಕರು, ವ್ಯಾಪಾರಿಗಳು ಹಾಗೂ ಲೇವಾದೇವಿಗಾರರ ವಿವಿಧ ರೀತಿಯ ಶೋಷಣೆಗೆ ಒಳಗಾದ ಹಾಗೂ ತಮ್ಮನ್ನು ರಕ್ಷಿಸಿದ, ತಮಗೆ ಸಹಾಯ ಮಾಡಿದ ಅತ್ಯಂತ ನಂಬಿಗಸ್ಥ ಸಮುದಾಯವೆಂದು ಬಿಂಬಿಸಿದ್ದಾರೆ.[5] ವಸಾಹತುಶಾಹಿ ಆಡಳಿತಗಾರರು ಕೂಡ ತಾವು ರೈತರನ್ನು ನಗರದ ದುಷ್ಟ ಜನರಿಂದ ರಕ್ಷಿಸುವುದು ಮೂಲ ಉದ್ದೇಶ ಎಂದು ಭಾವಿಸಿಕೊಂಡಿದ್ದರು.[6] ಆದರೆ ರಾಷ್ಟ್ರೀಯವಾದಿ ಇತಿಹಾಸಕಾರರು ವಸಾಹತುಶಾಹಿಗಳ ಶೋಷಣೆ ಅವರ ನಿಧಾನಗತಿಯ ಅಭಿವೃದ್ಧಿಯ ಬಗ್ಗೆ ಬೆಳಕು ಚೆಲ್ಲಿದರು.[7] ಹಾಗೆಯೇ ವಸಾಹತುಶಾಹಿಗಳು ಭಾರತದ ರೈತರು ಬಹಳ ಸರಳ ಸ್ವಭಾವದವರಾಗಿದ್ದು ಅವರಿಗೆ ವಸಾಹತುಶಾಹಿ ಆಡಳಿತದ ಶೋಷಣೆಗಳ ಕುರಿತು ಹೆಚ್ಚಿನ ಅರಿವು ಇರಲಿಲ್ಲ ಎಂದು ಹೇಳಿರುತ್ತಾರೆ.[8]

ಇತಿಹಾಸಕಾರರು ಅತೀ ಮುಖ್ಯವಾದ ಹಾಗೂ ಹೊಸತಾದ ಅನುಸಂಧಾನದಲ್ಲಿ ಗುಡ್ಡಕಾಡು ಹಾಗೂ ರೈತರ ಹೋರಾಟಗಳನ್ನು ಕೆಳಸ್ತರದ ಇತಿಹಾಸವೆಂದು ಪರಿಗಣಿಸಿದ್ದಾರೆ. ಗುಹಾ ಇವರು ಮೇಲ್ವರ್ಗದ ವಿರುದ್ಧದ ಜನತೆಯ ರಾಜಕೀಯ ಹೋರಾಟವೆಂದು ವ್ಯಾಖ್ಯಾನಿಸಿದ್ದಾರೆ. ಅವರು ಈ ಹಿಂದಿನ ವಸಾಹತುಶಾಹಿ, ರಾಷ್ಟ್ರೀಯವಾದ ಹಾಗೂ ಮಾರ್ಕ್ಸಿಸ್ಟ್‌ವಾದಗಳೆಲ್ಲವು ಮೇಲ್ವರ್ಗ ಇತಿಹಾಸವೆಂದು ಅದು ಯಾವಾಗಲೂ ಮೇಲ್ವರ್ಗದವರು ಭಾರತೀಯ ರಾಷ್ಟ್ರೀಯತೆಯನ್ನು ಕಟ್ಟಿದ ಬಗ್ಗೆ ಹಾಡಿ ಹೊಗಳುತ್ತವೆಯೇ ಹೊರತು ಕೆಳಸ್ತರದ ಜನರ ಕೊಡುಗೆಗಳನ್ನು ಸಂಪೂರ್ಣವಾಗಿ ನಿರ್ಲಕ್ಷಿಸಿವೆ; ಗುಹಾ ಅವರ ಪ್ರಕಾರ ಎರಡು ವಿಧದ ರಾಜಕೀಯವಿದ್ದು ಒಂದು ಮೇಲ್ವರ್ಗದ ರಾಜಕೀಯ. ಇನ್ನೊಂದು ಜನತೆಯ ಅಥಾವ ಕೆಳಸ್ತರದ ಜನರ ರಾಜಕೀಯ; ಆದರೆ ಅದನ್ನು ಸಮಗ್ರವಾಗಿ ಪರಿಗಣಿಸಲು ಸಾಧ್ಯವಿಲ್ಲ ಎಂದು ಹೇಳುತ್ತಾರೆ.[9] ಹೀಗಾಗಿ ಕೆಳಸ್ತರದ ರಾಜಕೀಯ ಸಿದ್ಧಾಂತಗಳು ಮತ್ತು ಯೋಚನೆಗಳು ಹಾಗೂ ಕಾರ್ಯಕ್ರಮಗಳು ದಂಗೆ. ಪ್ರತಿಭಟನೆ ಹಾಗೂ ಪ್ರತಿರೋಧಗಳ ಮೂಲಕ ವ್ಯಕ್ತವಾಗಿದೆ.

ಕೆನರಾಕೊಡಗು ಜಿಲ್ಲೆಗಳ ಇತಿಹಾಸವು ವಸಹಾತುಶಾಹಿ ಬರವಣಿಗೆಗಳಿಂದ ಆರಂಭವಾಗುತ್ತದೆ.[10] ಕ್ರಿ.ಶ 1800ರಲ್ಲಿ ಭಾರತದ ಗೌರ್ವನರ್ ಜನರಲ್ ಲಾರ್ಡ್ ವೆಲ್ಲೆಸ್ಲಿ ಬಂಗಾಳ ಪ್ರಾಂತ್ಯದಲ್ಲಿ ಸರ್ಜನ್ ಆಗಿ ಕಾರ್ಯನಿರ್ವಹಿಸುತ್ತಿದ ಫ್ರಾನ್ಸಿಸ್ ಬುಕನನ್ ದಕ್ಷಿಣ ಭಾರತದ ಪ್ರಾಂತ್ಯಗಳಾದ ಮೈಸೂರು, ಕೊಡಗು ಮತ್ತು ಕೆನರಾ ಪ್ರದೇಶಗಳಿಗೆ ಪ್ರವಾಸ ಕೈಗೊಳ್ಳಲು ನಿಯೋಜಿಸಿ ಆ ಪ್ರದೇಶಗಳ ಆಸಕ್ತಿದಾಯಕ ಇತಿಹಾಸ, ಧಾರ್ಮಿಕ, ಆರ್ಥಿಕ ಮತ್ತು ಸಾಮಾಜಿಕ ಸ್ಥಿತಿಗತಿಗಳ ಕುರಿತು ವಿಸ್ತೃತವಾದ ವರದಿ ರಚಿಸಲು ಆದೇಶಿಸುತ್ತಾನೆ. ಈ ಹಿನ್ನಲೆಯಿಂದ ರಚಿಸಲ್ಪಟ್ಟ ಬುಕನನ್ ವರದಿ ಅತಿ ಅಮೂಲ್ಯವೂ ಹಾಗೂ ಆಸಕ್ತಿದಾಯಕವೂ ಆಗಿದೆ. ಇದರಲ್ಲಿ ಈ ಭಾಗದ ಕುರಿತು ಉಪಯುಕ್ತ ಮಾಹಿತಿಗಳು ಅಡಕವಾಗಿದೆ. ಈ ವರದಿ ಪ್ರಪ್ರಥಮ ಅಧಿಕೃತ ಸರ್ಕಾರಿ ವಸಹಾತು ದಾಖಲೆಯಾಗಿದೆ.[11] 1801ರಲ್ಲಿ ಜೆ.ಜೆ. ರೆವೆನ್ ಶಾ ಕೆನರಾ ಪ್ರದೇಶದ ಕಲೆಕ್ಟರ್ ಆಗಿದ ಅವಧಿಯಲ್ಲಿ *Madras Board of Revenue*ಎನ್ನುವ ವರದಿಯಲ್ಲಿಸರ್ಕಾರಕ್ಕೆ ಜಿಲ್ಲೆಯ ಕಂದಾಯ ವ್ಯವಸ್ಥೆ ಹಾಗೂ ಕೃಷಿ ವ್ಯವಸ್ಥೆ ಬಗ್ಗೆ ವಿಸ್ತೃತವಾಗಿ ವಿವರಿಸಿರುತ್ತಾನೆ.[12] 1818ರಲ್ಲಿ ಮದ್ರಾಸ್ ಕಂದಾಯ ಇಲಾಖೆ ದಾಖಲಿಸಿದ ಮಿನಿಟ್ಸ್‌ಗಳಲ್ಲಿ ಕರಾವಳಿ ಪ್ರದೇಶದಲ್ಲಿ ಕೃಷಿಪದ್ಧತಿ, ಗೇಣಿಪದ್ಧತಿ, ಕೃಷಿ ಕಾರ್ಮಿಕರ ಬದುಕನ್ನು ಕುರಿತು ಸಮೀಕ್ಷೆ, ಗಡಿ ವರದಿಗಳನ್ನು ಸಲ್ಲಿಸಿದ್ದು ಗಮನಾರ್ಹವಾಗಿದೆ. 1819ರ ಥಾಮಸ್ ಹಾರಿಸ್ ಕೆನರಾ ಜಿಲ್ಲೆಯ ಕಲೆಕ್ಟರ್ ಮತ್ತು ಬೋರ್ಡ್ ಆಫ್ ರೆವಿನ್ಯೂ ಅಧ್ಯಕ್ಷರಾಗಿ ಸರ್ಕಾರ ಹಾಗೂ ಸದಸ್ಯರಿಗೆ ಸಲ್ಲಿಸಿದ ವರದಿಯಲ್ಲಿ ಕೆನರಾ ಜಿಲ್ಲೆಯ ಕೃಷಿ ಪದ್ದತಿ, ಕೃಷಿ ಸಮಸ್ಯೆಗಳ ಬಗ್ಗೆ ಉಲ್ಲೇಖಿಸಿರುತ್ತಾನೆ.[13] ಜಾನ್ ಸ್ಟೋಕ್‌ನ *Reports on the Revision of Assessment and the Disturbances Kuts in Canara 1830-31*ರಲ್ಲಿ ದಂಗೆಗೆ ಕಾರಣವಾದ ಅಂಶಗಳನ್ನು ಚರ್ಚಿಸಿದ್ದಾರೆ. ವಸಾಹತುಶಾಹಿ ಧೋರಣೆಯಾದ ಒಡೆದು ಆಳುವ ನೀತಿಯನ್ನು ಅಳವಡಿಸಿ ತಮ್ಮ ವಸಹಾತುಶಾಹಿ ಪ್ರಭುತ್ವದ ಹಿಡಿತವನ್ನು ಬಲಗೊಳಿಸಲು ಸ್ಥಳೀಯ ಸಮುದಾಯದವರನ್ನು ಬಳಸಿಕೊಂಡಿದ್ದರು ಎಂದು ಉಲ್ಲೇಖಿಸಲಾಗಿದೆ. ಇದು ಕೆನರಾ ಜಿಲ್ಲೆಯ ಇತಿಹಾಸ ರಚನೆಯ ಕ್ರಮವನ್ನು ತಿಳಿದುಕೊಳ್ಳಲು ಸಹಕಾರಿಯಾಗಿದೆ. *Remission of the Jama Ryots who Joined in Arms on against in Segments of 1834*ನಲ್ಲಿ ಕೆನರಾ ಕೊಡಗು ದಂಗೆಯ ಕುರಿತು ಮಾಹಿತಿ ನೀಡುವುದರೊಂದಿಗೆ ಕೊಡವರ ಹಾಗೂ ಬ್ರಿಟಿಷ್‌ರ ನಡುವಿನ ನಿಷ್ಠೆ ಮತ್ತು ವಿನಯತೆಯ ಕುರಿತು ಮಾಹಿತಿ ನೀಡುತ್ತದೆ. ಬ್ರಿಟಿಷ್‌ರು ಕೊಡಗಿನ ಆಡಳಿತವನ್ನು ನಿರ್ವಹಿಸಿದ ತರುವಾಯ ದೇಶೀಯರ ನಿರಂಕುಶ ಪ್ರಭುತ್ವದಿಂದ ದೇಶೀಯರಲ್ಲಿ ಸುಧಾರಣೆ ಹಾಗೂ ಪರಿವರ್ತನೆವೆಂಬುವುದು ಕಂಡುಬಂದಿರುವುದಿಲ್ಲ. ಅದರೊಂದಿಗೆ ಕೊಡಗಿನ ಜನರ ಹಿತರಕ್ಷಣೆ ಹಾಗೂ ಬ್ರಿಟಿಷ್ ಆಡಳಿತದ ರಕ್ಷಣೆಗಾಗಿ *Rules For The Conduct of The District Functionaries In Coorg(1834).* ಕಾಯಿದೆಯುನ್ನು ಅನುಷ್ಠಾನಗೊಳಿಸಿ ದೇಶೀಯರಿಗೆ ಹೊಸ ಆಡಳಿತದ ಮೂಲಕ ಆರಂಭದ ಬದಲಾವಣೆಗೆ ಕಾರಣರಾದರು.[16] ಮುಂದೆ, ಲೆವಿನ್ ಕೆನಾರ ಕೊಡಗಿನ ದಂಗೆಗೆ ಕಂಡುಬಂದ ನಿರ್ದಿಷ್ಟವಾದ ಕಾರಣಗಳೇನು ಎಂಬುವುದರ ಕುರಿತುತನ್ನ ವರದಿಯಾದ *Report on the insurrections raised by Puttapasappa and others in the South*

*Canara Dist 1837* ಇವರು ರೈತರ ದಂಗೆಗೆ ಅವರ ಆರ್ಥಿಕ, ಸಾಮಾಜಿಕ ಹಾಗೂ ರಾಜಕೀಯ ಅಸಹಾಯಕತೆಯನ್ನು ಉಲ್ಲೇಖಿಸುತ್ತಾನೆ ಅದರೊಂದಿಗೆ ಈ ದಂಗೆಯಲ್ಲಿ ಭಾಗವಹಿಸಿದ ರೈತರನ್ನು ದಾಳಿಕೋರರು ಮತ್ತು ಅತೃಪ್ತಿ ರೈತರ ಹೋರಾಟವೆಂದು ಹೇಳುವ ಮೂಲಕ ವಸಾಹತು ಆಡಳಿತವನ್ನು ಸಮರ್ಥಿಸಿಕೊಳ್ಳುತ್ತಾನೆ.[17] ರೆವೆರೆಂಡ್ ಮೋಂಗ್ಲಿಂಗ್ *Coorg Memories (1855)*ಕೊಡಗಿನ ಭೌಗೋಳಿಕ ಮತ್ತು ಅನಾಗರಿಕ ಸಮುದಾಯದ ಕುರಿತು ಮೃದು ಧೋರಣೆಯ ಅನಿವಾರ್ಯತೆಯ ಕುರಿತು ತಿಳಿಸುತ್ತಾನೆ.[18] *History of Coorg an Unpublished Manuscripts (1856)*ಈ ವರದಿಯೂ ಕೊಡಗಿನ ಕುರಿತಂತೆ ಇರುವ ಬಹು ಉಪಯುಕ್ತವಾದ ಮಾಹಿತಿಯಾಗಿದೆ. ಇದು ವಸಾಹತುಶಾಹಿ ಆಡಳಿತ ಆರಂಭದಲ್ಲಿ ಕಂಡುಬಂದ ದಂಗೆಯ ಕುರಿತಂತೆ ಮಾಹಿತಿ ನೀಡುವುದರೊಂದಿಗೆ ವಸಾಹತುಶಾಹಿ ಅಧಿಕಾರಿಗಳಿಗೆ ಆರಂಭದಲ್ಲಿ ಒದಗಿ ಬಂದ ವಿಭಿನ್ನ ಪರಿಸಿತ್ಥಿ ಮತ್ತು ಅದನ್ನು ಅಧಿಕಾರಿಗಳು ನಿರ್ವಹಿಸಿದ ರೀತಿಯ ಕುರಿತಂತೆ ಮಾಹಿತಿ ನೀಡುತ್ತದೆ.[19] ರಿಕ್ಟರ್‌ನ *Ethnographical Compendium (1887)* [20] ಕೆನರಾ ಕೊಡಗಿನ ಆಧ್ಯಾತ್ಮಿಕ ಬರಹಗಳಿಗೆ ಉತ್ತಮ ಉದಾಹರಣೆಯಾಗಿದೆ. ಮೋಗ್ಲಿಂಗ್‌ನ ಬರವಣಿಗೆಗಳು ಉಭಯ ಜಿಲ್ಲೆಯ ಗುಡ್ಡಗಾಡು ಜನಾಂಗಗಳ ಬದುಕು ಹಾಗೂ ಸಾಮಾಜಿಕ ಬದುಕಿನ ಹಾಗೂ ವಸಾಹತುಶಾಹಿ ಆಡಳಿತದ ಚಿತ್ರಣ ನೀಡಿದೆ. ರಿಕ್ಟರನ ಬರವಣಿಗೆಗಳು ಗುಡ್ಡಗಾಡು ಜನಾಂಗಗಳ ಸಾಮಾಜಿಕ ಹಾಗೂ ಆರ್ಥಿಕ ಜನಜೀವನವನ್ನು ಬಿಂಬಿಸುವ ಮೂಲಕ ವಸಾಹತುಶಾಹಿಗಳ ನಿರ್ಣಯಗಳನ್ನು ಹೆಚ್ಚಾಗಿ ಬೆಂಬಲಿಸುತ್ತಿದ್ದವು. ಮುಂದೆ ಪ್ರಕಟಗೊಂಡ ರೋಬ್ ಕೋಲ್‌ನ *Coorg Civil Law (1870)*ಇದರಲ್ಲಿ ಕೊಡಗು ಜಮ್ಮ ಭೂಮಿಯ ಸಮಸ್ಯೆಗಳು ಮತ್ತು ಕೊಡಗಿನಲ್ಲಿ ಅಸ್ತಿತ್ವದಲ್ಲಿಯಿದ ನಿರಂಕುಶ ಆಳ್ವಿಕೆ ಹಾಗೂ ರಾಜ ನೀತಿ ನಿಯಮಗಳಿಂದ ಜನರ ಸ್ಥಿತಿಗತಿಯನ್ನು ತಿಳಿಸುವುದರೊಂದಿಗೆ ವಸಾಹತು ಕಾನೂನು ನೀತಿನಿಯಮಗಳ ಕುರಿತು ಮಾಹಿತಿ ನೀಡುತ್ತದೆ.[21]

19ನೇ ಶತಮಾನದಲ್ಲಿ ಕೆನರಾ ಜಿಲ್ಲೆಯಲ್ಲಿ ಸಕ್ರಿಯವಾಗಿ ಕಾರ್ಯನಿರ್ವಹಿಸಿದ ಬಾಸೆಲ್ ಮಿಶನ್ ಇಲ್ಲಿನ ಭಾಷೆ ಬದುಕು, ಸಂಸ್ಕೃತಿ, ನಂಬಿಕೆ ಆಚರಣೆ, ಆರ್ಥಿಕ ಹಾಗೂ ಸಾಮಾಜಿಕ ಸ್ಥಿತಿಗತಿಗಳ ಕುರಿತು ವಸ್ತುನಿಷ್ಠ ವರದಿಯನ್ನು ಸಲ್ಲಿಸಿದ್ದಾರೆ. ಬಿ.ಎಲ್ ರೈಸ್ ಮತ್ತು ಜೆ.ಎಫ್ ಫ್ಲೀಟ್ ಇವರು ಪುರಾತತ್ವ ಶಾಸ್ತ್ರಜ್ಞರಾಗಿದ್ದು ತುಳುನಾಡಿನ ಇತಿಹಾಸದ ಬಗ್ಗೆ ಹಲವು ಶಾಸನಗಳ ಪಠ್ಯಗಳನ್ನು ಪ್ರಕಟಿಸಿದ್ದಾರೆ. 1894ರಲ್ಲಿ ಜಾನ್ ಸ್ಟರಕ್‌ನ *Madras District Manuals* ನಲ್ಲಿ ಕೆನರಾ ಜಿಲ್ಲೆಯ ಇತಿಹಾಸ, ಪುರಾತತ್ವ, ಕಂದಾಯ ವ್ಯವಸ್ಥೆ, ಸಮುದಾಯಗಳು, ಭೂಒಡೆತನದ ಇತಿಹಾಸ, ಅರಣ್ಯ ಸಂಪತ್ತು ಇತ್ಯಾದಿ ವಿಚಾರಗಳ ವಿವರಗಳು ಅಂಕಿ ಅಂಶಗಳೊಂದಿಗೆ ದಾಖಲಾಗಿದೆ.[22] ಎಡ್ಗರ್ ಥರ್ಸ್ಟನ್ ತಮ್ಮ *Caste and tribes of South India* ಎಂಬ ಕೃತಿಯಲ್ಲಿ ಕೆನರಾ ಜಿಲ್ಲೆಯ ಎಲ್ಲಾ ಸಮುದಾಯಗಳ ಬಗ್ಗೆ ವಾಸ್ತವಿಕ ಮಾಹಿತಿ ಸಂಗ್ರಹಿಸಿ ಸಾಮಾಜಿಕ ಇತಿಹಾಸದ ಬಗ್ಗೆ ಕೆನರಾ ಜಿಲ್ಲೆಯ ಇತಿಹಾಸ ನಿರೂಪಣೆಗೆ ಮಹತ್ವದ ಕೊಡುಗೆ ನೀಡಿದ್ದಾರೆ.[23] *Historical Summary of the British Rule in Coorg During the past Seventy years* ಈ ವರದಿಯಲ್ಲಿ ಬ್ರಿಟಿಷ್ ಆಡಳಿತದ ಆರಂಭದಲ್ಲಿ ಕಂಡುಬಂದ ದಂಗೆಯ ಕುರಿತು ಮಾಹಿತಿ ನೀಡುತ್ತದೆ.[24]

ಸ್ಥಳೀಯ ಬರಹಗಾರರು ಕೆನರಾ ಜಿಲ್ಲೆಯ ಪ್ರಾಚೀನ ಇತಿಹಾಸ ಮತ್ತು ಸಂಸ್ಕೃತಿಯ ಕುರಿತು ಮಹತ್ವದ ಬೆಳಕು ಚೆಲ್ಲಿದ್ದಾರೆ. ಕೊಡಗಿನ ಐತಿಹಾಸಿಕ ಆಳ್ವಿಕೆಯನ್ನು ರಾಜೇಂದ್ರನಾಮೆ, ಲಿಂಗರಾಜೇಂದ್ರನ ಹುಕುಂನಾಮೆ, ಐ.ಎಂ. ಮುತ್ತಣ್ಣ, ಡಿ.ಎನ್. ಕೃಷ್ಣಯ್ಯ, ನಡಿಕೇರಿಯಂಡ ಚಿಣ್ಣಪ್ಪ ಮತ್ತು ಎಂ.ಜಿ. ನಾಗರಾಜ್ ಮುಂತಾದ ಬರವಣಿಗೆಗಳಿಂದ ಹಾಲೇರಿ ಸಂಸ್ಥಾನದ ಆಡಳಿತದ ಐತಿಹಾಸಿಕತೆಯನ್ನು ಪುಷ್ಟಿಕರಿಸುತ್ತಾರೆ. ಕೊಡಗಿನ ಈಗಿನ ಭಾಗವಲ್ಲದೆ, ಇಂದಿನ ಸುಳ್ಯ, ಪುತ್ತೂರು ಪ್ರಾಂತ್ಯಗಳು ಕೊಡಗಿಗೆ ಸೇರಿ ಒಂದು ವಿಶಾಲವಾದ ಭೂ ಪ್ರದೇಶವಾಗಿತ್ತು. ವಸಾಹತುಶಾಹಿ ಆಡಳಿತದಲ್ಲಿ ಸುಳ್ಯ, ಪುತ್ತೂರು ಪರಿಸರಗಳು ಹೊಸದಾಗಿ ದಕ್ಷಿಣ ಕನ್ನಡ ಜಿಲ್ಲೆಗೆ ವರ್ಗಾವಣೆಗೊಂಡು ಕೊಡಗು ಮತ್ತು ಕೆನರಾ ಎಂಬ ಅನನ್ಯತೆಯ ಜೊತೆಗೆ ಆರ್ಥಿಕ ಏರಿಳಿತವು (ಕಂದಾಯ) ಪ್ರದೇಶದಿಂದ, ಪ್ರದೇಶಕ್ಕೆ ವಿಭಿನ್ನತೆಯನ್ನು ಸಾಧಿಸಿತು. ಈ ವಿಭಿನ್ನತೆಯು ವಸಾಹತು ಆಡಳಿತದಲ್ಲಿ ಬಂಡಾಯದ ಅನಿವಾರ್ಯತೆಯನ್ನು ನಿರ್ಮಿಸಿತು. ಈ ಹೋರಾಟವು ಅಮ್ಮತ್ತಿನಾಡು, ತಾವುನಾಡು, ಸೋಮವಾರಪೇಟೆ, ಬೆಳ್ಳಾರೆ, ಬೆಂಗುನಾಡು, ಎಡೆನಾಡು ಮತ್ತು ಪಾಡಿನಾಲ್ಕು ನಾಡು ಮುಂತಾದ ಪ್ರದೇಶಗಳಲ್ಲಿ 1834 ರಿಂದ 1837ರವರೆಗೆ ಸಾಮ್ರಾಜ್ಯಶಾಹಿ ಆಡಳಿತದ ವಿರುದ್ಧ ಹೋರಾಡಿದ ಕೆನರಾ ಕೊಡಗು ದಂಗೆ, ಈ ಪ್ರಾಂತ್ಯದ ಮೊದಲ ಸ್ವಾತಂತ್ರ್ಯ ಹೋರಾಟದ ಹೆಜ್ಜೆಯಾಗಿ ಈ ಭಾಗದ ಇತಿಹಾಸದಲ್ಲಿ ರಚನೆಗೊಂಡಿದೆ.

ಕೆನರಾ ಹಾಗೂ ಕೊಡಗುದಂಗೆಯನ್ನು ವಸ್ತುವನ್ನಾಗಿಸಿ ರಚಿಸಿರುವ ಕೃತಿಗಳು ಹಾಗೂ ಲೇಖನಗಳು ರಚನೆಗೊಂಡವು.[25] ಈ ಎಲ್ಲಾ ಕೃತಿಗಳಿಂದ 1837ರ ಹೋರಾಟ ಅಥವಾ ದಂಗೆಯ ಕುರಿತಂತೆ ಒಮ್ಮತದ ಅಭಿಪ್ರಾಯವಿಲ್ಲದೆ ವಿಭಿನ್ನ ಚಿಂತನೆಯ ಅನನ್ಯತೆಯೊಂದಿಗೆ, ಇದನ್ನು **'ದಂಗೆ'**, **'ಹೋರಾಟ'**, **'ಕೂಟಗಳ ಕಾಟ'**, **'ಕಾಟಕಾಯಿ'**, **'ಬಂಡಾಯ'**, **'ಪಿತೂರಿ'**, **'ರೈತದಂಗೆ'**, ಎನ್ನುತ್ತದೆ. ಇದಕ್ಕೆ ಪೂರಕವಾಗಿ ಕೆಲವರ ದಾರಿ ತಪ್ಪಿಸುವ ಮಾಹಿತಿ ರಹಿತ ಬರಹಗಳು, ದಿಗ್ಭ್ರಮೆ ಹುಟ್ಟಿಸುವ ಅಜ್ಞಾನಗಳು, ಹಾಗೆಯೆ ಒಬ್ಬ ವಿದ್ವಾಂಸನ ಹೇಳಿಕೆ ಹಾಗೂ ಮತ್ತೊಬ್ಬನ ಹೇಳಿಕೆಯಲ್ಲಿನ ಭಿನ್ನಭಿಪ್ರಾಯಗಳು, ಮುಖ್ಯವಾಗಿ ಸೂಕ್ತ ಸಾಕ್ಷ್ಯಾಧಾರಗಳ ಕೊರತೆ, ಮೌಖಿಕ ಚರಿತ್ರೆಯ ಅನಿವಾರ್ಯತೆಯಿಂದಾಗಿ 1837ರ ದಂಗೆಯ ಕುರಿತಂತೆ ಸ್ಪಷ್ಟವಾದ ನಿಲುವನ್ನು ಕಾಣಲು ಸಾಧ್ಯವಾಗುತ್ತಿಲ್ಲ.

ಸ್ವಾತಂತ್ರ್ಯಪೂರ್ವದಲ್ಲಿ ಸ್ಥಾಪಿತ ಹಿತಾಸಕ್ತಿಗಳು ಕೊಡಗು ಕೆನರಾ ಹೋರಾಟವನ್ನು ದರೋಡೆಯ ಪ್ರಸಂಗಕ್ಕೆ ಹೋಲಿಸಲಾಗಿದ್ದು. ದಿವಂಗತ ಬಡಕ್ಕಿಲ ಶಂಕರ ನಾರಯಣ್ಣಪ್ಪಯ್ಯನವರು ದರೋಡೆಯ ಬದಲಾಗಿ ಇದನ್ನು ಬ್ರಿಟಿಷರ ವಿರುದ್ಧ ಜನಸಾಮಾನ್ಯರು ನಡೆಸಿದ ಒಂದು ಅನನ್ಯ ಸಂಘರ್ಷ ಮತ್ತು ವಿದೇಶಿ ಆಡಳಿತದಿಂದ ಸ್ವತಂತ್ರವಾಗಲು ಮಾಡಿದ ಒಂದು ಸಾಮಾಜಿಕ ಪ್ರಯತ್ನ. "ನಿಜವಾಗಿಯೂ ಇದು ಜನರ ಬಂಡಾಯ. ಜನರು ಸರಕಾರವನ್ನು ಪ್ರತಿಭಟಿಸಿ ನಿಂತ ದಂಗೆ. ಜನರೊಂದಿಗೆ ಸರಕಾರದ ಅಧಿಕಾರಿಗಳೂ ಗ್ರಾಮಾಧಿಕಾರಿಗಳೂ ಸೇರಿದ್ದರೆಂದು ನಿರೂಪಿಸಲು ಪ್ರಯತ್ನಿಸಿದ್ದಾರೆ".[26] ಮಾಸ್ತಿ ವೆಂಕಟೇಶ್ ಅಯ್ಯಂಗಾರ್ ಚಿಕ್ಕವೀರರಾಜೇಂದ್ರ ಕೃತಿಯಲ್ಲಿ ರಾಜನನ್ನು ಒಬ್ಬ ವಿಷಯಲಂಪಟ ಮತ್ತು ದುರಂತ ನಾಯಕನಾಗಿ ಚಿತ್ರಿಸುವುದರೊಂದಿಗೆ ಚಿಕ್ಕವೀರನನ್ನು ಪರೋಕ್ಷವಾಗಿ ಟೀಕಿಸುತ್ತಾರೆ. ನಿರಂಜನರ ಕೃತಿಗಳು ಕೊಡಗು ಪ್ರಾಂತ್ಯವನ್ನು ಮರಳಿ

ಪಡೆಯಲು ಸ್ಥಳೀಯರು ಮಾಡಿದ ಹೋರಾಟವನ್ನು ಸಾಹಿತ್ಯಿಕವಾಗಿ ಕಟ್ಟಲು ಪ್ರಯತ್ನಿಸುತ್ತಾ ಅಪ್ಪಾರಂಡ ಬೋಪುವನ್ನು ಖಳನಾಯಕನಾಗಿ ಚಿತ್ರಿಸುವುದರೊಂದಿಗೆ ದಂಗೆಯ ಪರಿಸ್ಥಿತಿ ಹಾಗೆಯೇ ಸಂದರ್ಭವನ್ನು ಏಕಮುಖವಾಗಿ ನಿರೂಪಿಸುತ್ತಾ ಕಾದಂಬರಿಯ ಏಕತಾನತೆಗೆ ಹೆಚ್ಚು ಒಲವು ನೀಡಿದ್ದಾರೆ. ನಿರಂಜನರವರು ಮಂಡಿಸುವ ವಾದದಲ್ಲಿ ದಂಗೆಯ ಮುಖಂಡತ್ವ ಮತ್ತು ದಂಗೆಗೆ ಸಂಘಟಿಸಿದ ಜನರ ಕುರಿತು ವಿವರಣೆಯನ್ನು ನಿರೂಪಿಸುತ್ತಾರೆ. ಅಪರಾಂಪರ, ಕಲ್ಯಾಣಸ್ವಾಮಿ, ಪುಟ್ಟಬಸಪ್ಪ ಈ ಮೂವರು ನಾಯಕರು ಒಬ್ಬರ ನಂತರ ಒಬ್ಬರಾಗಿ ಬಂಡಾಯದ ನೇತೃತ್ವವನ್ನು ನಿಯಂತ್ರಿಸುವ ಅಭಿಲಾಷೆಯನ್ನು ತೋರುತ್ತಾರೆ. ಆದರೆ ಐ.ಎಮ್. ಮುತ್ತಣ್ಣ ಮತ್ತು ಶ್ಯಾಮ್ ಭಟ್‌ರವರು ಹೇಳುವಂತೆ ಈ ನಾಯಕರು ಅವರವರ ವೈಯುಕ್ತಿಕ ಉದ್ದೇಶಗಳನ್ನು ಈಡೇರಿಸಿಕೊಳ್ಳಲು ಸ್ಥಳೀಯ ಸಹಕಾರ ಪಡೆಯಲು ವಿಶಿಷ್ಟವಾದ ತಂತ್ರಗಳನ್ನು ರೂಪಿಸುವುದರೊಂದಿಗೆ ಬಂಡಾಯವನ್ನು ಸಂಘಟಿಸುತ್ತಾರೆ. [27] ಸಂಪಾಜೆ ದೇವಿ ಪ್ರಸಾದ್‌ರವರು ಹೇಳುವಂತೆ ಈ ಬಂಡಾಯದ ರೈತರು ಹಾಗೂ ಸ್ಥಳೀಯರಿಗೆ ತಮ್ಮ ನಾಡಿನ ಬಗ್ಗೆ ಅತೀವ ಪ್ರೇಮವಿತ್ತು ಮತ್ತು ದೇಶೀಯ ಆಳ್ವಿಕೆಯಲ್ಲಿ ನಾವು ಅನುಭವಿಸಿದ್ದ ಸ್ವಾತಂತ್ರ್ಯವನ್ನು ಮರಳಿ ಪಡೆಯುವ ಜೊತೆಗೆ ಬ್ರಿಟಿಷರ ದುರಾಡಳಿತದಿಂದ ಮುಕ್ತಗೊಳಿಸುವ ತವಕದಲ್ಲಿದ್ದರು. ರಿಕ್ಟರ್, **ಗೆಸೆಟಿಯರ್ ಆಫ್ ಕೂರ್ಗ್** ಈ ದಂಗೆಯನ್ನು ಗೌಡ ಸಮುದಾಯದ ಮನೋಭಾವವನ್ನು ವ್ಯಕ್ತಪಡಿಸುತ್ತಾನೆ. ಗೌಡರು ಮತ್ತು ಕೊಡವರು ನೋಡಲು ಒಂದೇ ರೀತಿ ಹೋಲುವುದರಿಂದ ಅವರನ್ನು ಪ್ರತ್ಯೇಕವಾಗಿ ಗುರುತಿಸುವುದು ಕಷ್ಟ ಎಂದು ದಾಖಲಿಸಿದ್ದಾನೆ. ಇದೊಂದುಜನಾಂಗೀಯ ಯುದ್ಧವಾಗಿದ್ದು. ಇದರ ಮೂಲಕ ತಮ್ಮ ಸಮುದಾಯದ ರಕ್ಷಣೆ ಮತ್ತು ಹಳೆಯ ಪದ್ಧತಿಯ ಅನುಷ್ಠಾನವೇ ಈ ದಂಗೆಯ ಉದ್ದೇಶವಾಗಿದೆ. ಈ ದಂಗೆಯನ್ನು ಗೌಡರ ದಂಗೆ ಎಂದು ಉಲ್ಲೇಖಿಸುತ್ತಾನೆ. ಕಾರಣ, ಈ ದಂಗೆಯಲ್ಲಿ ಭಾಗವಹಿಸಿದ್ದ ನಾಯಕರು ಹಾಗೆಯೇ ಬೆಂಬಲಿತರು ಒಂದೇ ಸಮುದಾಯದವರು ಆಗಿದ್ದರೆಂದು ದಾಖಲಿಸುತ್ತಾನೆ.[28]

ನಡಿಕೇರಿಯಂಡ ಚಿಣ್ಣಪ್ಪರವರ **ಪಟ್ಟೋಲೆ ಪಳಮೆಯೂ** ಆಸಕ್ತಿದಾಯಕವಾದ ಐತಿಹಾಸಿಕ ಮಾಹಿತಿಯನ್ನು ನೀಡುತ್ತದೆ. ಪಳಮೆ ಎಂದರೆ ಬಾಯಿಯಿಂದ ಬಾಯಿಗೆ ಹರಿದು ಬರುವ ಮಾತುಗಳಾಗಿದ್ದು, ಕೊಡಗಿನ ಮೌಖಿಕ ಪರಂಪರೆಯನ್ನು ಲಿಖಿತ ರೂಪಕ್ಕೆ ದಾಖಲಿಸಿರುವ ಈ ಕೃತಿಯೂ ಕೊಡಗಿನ ಅರಸರ ಆಳ್ವಿಕೆಯಲ್ಲಿ ಕೊಡವ ದಿವಾನರ ಪ್ರಭಾವವನ್ನು ವಿವರಿಸುತ್ತಾ ಚಿಕ್ಕವೀರರಾಜನನ್ನು ವಿಕೃತಕಾಮಿಯಾಗಿ ಚಿತ್ರಿಸುತ್ತಾ ಚಿಕ್ಕವೀರರಾಜ ಹೆರಿಗೆಯಾದ ಹೆಂಗಸರ ಮೊಲೆ ಹಾಲನ್ನು ಕುಡಿಯುತ್ತಿದ್ದನು ಎಂದು ಲೇವಡಿ ಮಾಡುತ್ತಾರೆ. ಹಾಗೆಯೇ ರಾಜನ ಆಳ್ವಿಕೆಯಿಂದ ರೋಸಿ ಹೋದ ಜನರು ಬ್ರಿಟಿಷ್ ಆಳ್ವಿಕೆ, ಜೊತೆಗೆ ಕೊಡಗಿನ ದಂಗೆಯನ್ನು ಹಿಮ್ಮೆಟ್ಟುವಲ್ಲಿ ಬ್ರಿಟಿಷರಿಗೆ ಸಹಕರಿಸುತ್ತಾ ಅವರ ಇನಾಮುಗಳಿಗೆ ಪಾತ್ರರಾದರು ಎಂದು ಚಿಣ್ಣಪ್ಪನವರು ಯಾವುದೇ ಪೂರ್ವಗ್ರಹವಿಲ್ಲದೆ ಉಲ್ಲೇಖಿಸುತ್ತಾರೆ.[29] ಡಿ.ಎನ್.ಕೃಷ್ಣಯ್ಯರವರ **ಕೊಡಗಿನ ಇತಿಹಾಸ** ದ ಕುರಿತು ವಿಸ್ತೃತ ಅಧ್ಯಯನವನ್ನು ಒಳಗೊಂಡಿದ್ದು, ಇದು ಅಪೂರ್ವವಾದ ಕೃತಿಯಲ್ಲದಿದ್ದರೂ ಪೂರ್ವಗ್ರಹದ ಕೊರತೆಯನ್ನು ದೂರ ಮಾಡಿದೆ. 1837ರ ಕೆನರಾ ಕೊಡಗು ಬಂಡಾಯಕ್ಕೆ ಸಂಬಂಧಿಸಿದಂತೆ ಬೆಳಕು ಚೆಲ್ಲುತ್ತಾ ರಾಜಕೀಯ ಅಂಶಗಳಿಂದ ಈ ದಂಗೆಯ ಬಗ್ಗೆ ಮಾಹಿತಿ ನೀಡುತ್ತಾರೆ. ದೇವಿ ಪ್ರಸಾದ್‌ರವರ **ಅಮರ ಸುಳ್ಯ ಸ್ವಾತಂತ್ರ್ಯ** ಸಮರ ಕೃತಿಯು ಗೌಡ ಜನಾಂಗದ

ಹಿನ್ನಲೆ, ಇತಿಹಾಸ ಮತ್ತು ಸಾಂಸ್ಕೃತಿಕ ಅನನ್ಯತೆಯನ್ನು ಪರಿಭಾವಿಸುವುದಕ್ಕೆ ಸಹಾಯಕವಾಗುವ ರೀತಿಯಲ್ಲಿ ಲೇಖನಗಳು ಪ್ರಕಟವಾಗಿವೆ. ಈ ಲೇಖನಗಳು ಗೌಡ ಜನಾಂಗದ ಪ್ರಾಚೀನ ಐತಿಹಾಸಿಕ ಕಾಲಘಟ್ಟಗಳಲ್ಲಿ ಅವರು ನಡೆಸಿದ ಹೋರಾಟ, ಸಾಮಾಜಿಕ ಇತಿಹಾಸ ಸಾಂಸ್ಕೃತಿಕ ಅನನ್ಯತೆ ಈ ವಿಷಯಗಳನ್ನು ಪುಷ್ಠಿಕರಿಸಿದ್ದಾರೆ. ಅಮರ ಸುಳ್ಯ ದಂಗೆಯ ನಂತರದ ವರ್ಷಗಳಲ್ಲಿ ಬ್ರಿಟಿಷ್ ವಿರೋಧಿಗಳೆಂದು ಗುರುತಿಸಿಕೊಂಡಿರುವುದನ್ನು ವಿವರಿಸುವ ಪ್ರಯತ್ನದೊಂದಿಗೆ ಕೊಡಗು ಮತ್ತು ಅಮರ ಸುಳ್ಯ ದಂಗೆಯನ್ನು ಕೇಂದ್ರಿಕರಿಸಿಕೊಂಡು ಸ್ವಾತಂತ್ರ್ಯ ಪೂರ್ವದ ಘಟನೆಗಳನ್ನು ಸಮಕಾಲೀನ ಸಂದರ್ಭಕ್ಕೆ ಹೊಂದಿಕೊಳ್ಳುವಂತೆ ಚಿತ್ರಿಸಿರುತ್ತಾರೆ. ಈ ದಂಗೆಯನ್ನು ಸಾಮೂದಾಯಿಕ ದಂಗೆ ಎಂದು ಉಲ್ಲೇಖಿಸಿ. ಕೊಡಗು ಬಂಡಾಯವೆಂದು ಕರೆಯಲ್ಪಡುವುದು ನಿಜವಾಗಿ ಹೇಳುವುದಾದರೆ ಗೌಡರ ಮೇಲ್ಬಿಳುವಿಕೆ ಕೊಡವರು ಮತ್ತು ಗೌಡರು ಕಾದಾಡಿ, ಗೌಡರು ವೈರಿಗಳಾದರು ಬ್ರಿಟಿಷರ ನಂಬಿಕೆ ಗಳಿಸಿದವರು ಉನ್ನತ ಪದವಿ ಗಿಟ್ಟಿಸಿಕೊಂಡರು ವಿರೋಧ ಗಳಿಸಿಕೊಂಡವರು ಅಧಃಪತನದ ಪಾತಾಳ ತಲುಪಿಸಿದರು ಎಂದು ವಿಶ್ಲೇಷಿಸುತ್ತಾರೆ. ಒಂದೆಡೆ ಗೌಡರನ್ನು ಹೊಗಳುತ್ತಾ ಮತ್ತೊಂದೆಡೆ ಕೊಡವರನ್ನು ತೆಗಳುತ್ತಾ ದಂಗೆಯಲ್ಲಿನ ವಸ್ತು ನಿಷ್ಠತೆಯನ್ನು ಮರೆಮಾಚಿ ಇತಿಹಾಸವನ್ನು ತಮ್ಮದಾಗಿಸಿಕೊಳ್ಳುವ ಪ್ರಕ್ರಿಯೆಯಲ್ಲಿ ಮುಂದಾಗಿದ್ದಾರೆ ಎಂದು ಗೋಚರಿಸುತ್ತದೆ.[30]

ಪ್ರಭಾಕರ್ ಶಿಶಿಲರವರ **ಮೂಡಣದ ಕೆಂಪು ಕಿರಣ** ಕಾದಂಬರಿಯು ಕೆನರಾ ಕೊಡಗಿನ ಪ್ರಾದೇಶಿಕತೆಯನ್ನು ಬಿಂಬಿಸುವಾಗ ಕೊಡವರ ಭಾಗವಹಿಸುವಿಕೆಯೂ ಅತಂತ್ರ ಅವಶ್ಯಕತೆಯಿಂದ ಕೂಡಿತ್ತು ಎಂದು ಹೇಳುವಾಗ ಕಲ್ಪನೆ ಮೌಲ್ಯಗಳಿಗೆ ಹೆಚ್ಚಿನ ಪ್ರಧ್ಯಾನತೆಯನ್ನು ನೀಡಿದ್ದಾರೆ. ಹಾಗೆಯೇ ವಿವಿಧ ಅಶೋತ್ತರಗಳನ್ನು ವೈಭವಿಕರಿಸುತ್ತ ನೀರಿಕ್ಷೆಗಳ ಅಡಿಪಾಯದಲ್ಲಿ ವಿಶ್ಲೇಷಿಸುತ್ತ, ಐತಿಹಾಸಿಕ ಮಹತ್ವದ ಹೋರಾಟವನ್ನು ರೈತದಂಗೆ ಎನ್ನುವುದಕ್ಕೆ ವೈಯಕ್ತಿಕ ನೆಲೆಯಲ್ಲಿ ತಮ್ಮದೇ ಅಭಿಮತವನ್ನು ನೀಡುವುದನ್ನು ಕಾಣಬಹುದು.[22] ಎನ್. ಶ್ಯಾಮ ಭಟ್ **ಸೌತ್ ಕೆನರಾ 1799–1860, ಎ ಸ್ಟಡಿ ಎನ್ ಕೊಲೋನಿಯಲ್ ಅಡ್ಮಿನಿಸ್ಟ್ರೇಷನ್ ಎಂಡ ರಿಜಿನ್‌ಲ್ ರೆಸ್ ಪಾನ್ಸ್ ಸಂಶೋಧನೆಯಲ್ಲಿ** ಕೆನರಾ ಕೊಡಗುಬಂಡಾಯದ ಕುರಿತು ವಿವಿಧ ಅಂಶಗಳನ್ನು ಸಮೀಕರಿಸಿ ಹೇಳುತ್ತಾರೆ ಕೆನರಾ ಕೊಡಗು ದಂಗೆಯೂ ರೈತ ದಂಗೆಯನ್ನು ಹೋಲುತ್ತಿದ್ದರೂ ಅದು ರೈತದಂಗೆಯಾಗಿರಲಿಲ್ಲ, ಬದಲಿಗೆ ಅದು ಶೋಷಿತವರ್ಗವು ನಡೆಸಿದ ಹೋರಾಟವಾಗಿದೆ ಎಂದು ಹೇಳುವ ಮೂಲಕ ವಸಾಹತುಶಾಹಿ ಆಳ್ವಿಕೆಯ ವಿರುದ್ಧ ರೈತ ಸಂಘಟನೆಗಳು ಮೊದಲೇ ಸಂಘಟಿತರಾಗಿದ್ದು ಇದು ತಕ್ಷಣದ ಹೋರಾಟವಲ್ಲ: ಬದಲಿಗೆ ಪೂರ್ವ ಯೋಜಿತವಾದ ದಂಗೆ ಎಂದು ಹೇಳುವ ಮೂಲಕ ಎಂದು ಎನ್. ಭಟ್‌ರು ಐತಿಹಾಸಿಕ ದಂಗೆ ಮೆರುಗು ನೀಡುವ ಮೂಲಕ ನಕಲಿ ನಾಯಕರೆಂದು ಜರಿಯುತ್ತಾರೆ.[31] ಆದರೆ, ಎಮ್.ಜಿ.ನಾಗರಾಜ್‌ರವರು ಹೇಳುವಂತೆ ಹಾಲೇರಿ ಸಂಸ್ಥಾನದ ಪುನರ್ ನಿರ್ಮಿಸಲು ಈ ದಂಗೆಯು ನಡೆದಿದೆ. ಕಲ್ಯಾಣಸ್ವಾಮಿ. ಪುಟ್ಟಬಸಪ್ಪನುನಕಲಿ ಎಂದು ವಿಶ್ಲೇಷಿಸುವುದೇಕೆ? **ಹಾಲೇರಿ ರಾಜವಂಶವು** ಎಂಬ ಗ್ರಂಥದಲ್ಲಿ ವಿವರಿಸುತ್ತಾರೆ. ಹಾಗೆಯೇ ಚಿಕ್ಕವೀರರಾಜನಿಗೆ ಆದ ವಿವಿಧ ತೊಂದರೆಯ ಕುರಿತು ಮಾಹಿತಿಯನ್ನು ಹಂಚಿಕೊಳ್ಳುವುದರ ಮೂಲಕ ದುರಂತ ನಾಯಕದ ವಿವಿಧವೃತಾಂತವನ್ನು ವಿವರಿಸುತ್ತಾರೆ. ತಿ.ತಾ ಶರ್ಮರ **ಕರ್ನಾಟಕದಲ್ಲಿ**

**ಸ್ವಾತಂತ್ರ್ಯ ಸಂಗ್ರಾಮ 1800ರಿಂದ 1857ರವರೆಗೆ ಕೃತಿಯು** ಸ್ವಾತಂತ್ರ್ಯೋತ್ಸವದ ಸಂದರ್ಭಕ್ಕೆ ಹೊಂದಿಕೊಳ್ಳುವಂತೆ ಕೆನರಾ ಕೊಡಗು ದಂಗೆಯನ್ನು ರಾಜಕೀಯ ನೆಲೆಯಲ್ಲಿ ವಿವರಗಳನ್ನು ನೀಡುತ್ತಾರೆ. ಆದರೂ ಕರ್ನಾಟಕ ಕಂಡುಬಂದ ವಿವಿಧ ದಂಗೆಯನ್ನು ಕೆನರಾ ಕೊಡಗು ದಂಗೆಯ ವಿವಿಧ ವೈಶಿಷ್ಟತೆ ಹಾಗೂ ವಿವಿಧ ಅನುಭವಗಳು ಕುರಿತು ಮಾಹಿತಿ ನೀಡುತ್ತಾರೆ.[33] ಪ್ರಭಾಕರ್ ನೀರ್‌ಮಾರ್ಗ **ಮಂಗಳೂರ ಕ್ರಾಂತಿ (2006), ಅರ್ಘ್ಯ, ತಂಬಿಲ (2003), ಪ್ರತಿಶೋಧ, ದಳವಾಳಿ ದುಗ್ಗಣ್ಣ, ಭೀಕರ ನ್ಯಾಯಕಟ್ಟೆ,** ಈ ಕಾದಂಬರಿಗಳಲ್ಲಿ ಪ್ರಾದೇಶಿಕತೆ ಹಾಗೂ ವಸಾಹತುಶಾಹಿ ಆಳ್ವಿಕೆಗೆ ಸ್ಥಳೀಯರ ಪ್ರತಿರೋಧವನ್ನು ಹೊಸ ಆಯಾಮದಲ್ಲಿ ದಾಖಲಿಸಿದ್ದಾರೆ. ಹಾಗೆಯೇ ಈ ಕಾದಂಬರಿಯು ಎಲ್ಲಾ ಜಾತಿ ಮತಗಳ ಸಂಘಟಿತ ಹೋರಾಟವೆಂದು ಚರ್ಚಿಸಲು ಪ್ರಯತ್ನಿಸುತ್ತದೆ.[34]

ಕೆ.ಆರ್. ವಿದ್ಯಾಧರ್‌ರವರ **ಅಟ್ಲೂರು ರಾಮಪ್ಪಯ್ಯ ಅತಿ ರಂಜನೆಯ ನೆಲೆಗಳು, ಕೊಡಗಿನ ಇತಿಹಾಸದ ನಿರ್ಲಕ್ಷಿತ ಅಧ್ಯಾಯ, ಕೆದಂಬಾಡಿ ರಾಮಗೌಡದಲ್ಲಿ,** ಈ ದಂಗೆಯನ್ನು ಸುಳ್ಯದ ಜನತೆಯ ಅಭಿಮಾನದ ಸಂಕೇತ ಮತ್ತು ಈ ಬಂಡಾಯದಲ್ಲಿ ಭಾಗವಹಿಸಿದ ಜನರಿಗೆ ಚಳುವಳಿಯ ಉದ್ದೇಶ ಮತ್ತು ಅದು ಕಂಡುಕೊಂಡ ಘೋರ ದುರಂತದ ಕುರಿತು ವಿವಿಧ ಸೈಧಾಂತೀಕ ನೆಲೆಯಲ್ಲಿ ಚರ್ಚಿಸುತ್ತಾರೆ ಅರಿವಿತ್ತೆಂದು ಉಲ್ಲೇಖಿಸುತ್ತಾರೆ.[35] ಹಾಗೆಯೇ ಸಾಮಾನ್ಯ ಜನರು ದಂಗೆಯಲ್ಲಿ ನೇರವಾಗಿ ಬಹುಸಂಖ್ಯೆಯಲ್ಲಿ ಭಾಗವಹಿಸದಿದ್ದರೂ ಅದರ ಬಗ್ಗೆ ಸಂವೇದನಾಶೀಲವಾಗಿ ತಮ್ಮದೇ ರೀತಿಯಲ್ಲಿ ಸಾಂಸ್ಕೃತಿಕವಾಗಿ ಪ್ರತಿಕ್ರಿಯಿಸಿದ್ದಾರೆ ದಂಗೆಗೆ ಮುಂಚೆ ಕ್ರಾಂತಿಯ ಅಶೋತ್ತರಗಳನ್ನು ಹೊತ್ತ ಸಾಹಿತ್ಯ ಚಿಂತನೆಯನ್ನು ನಡೆಸಿರುವುದನ್ನು ಕಾಣಬಹುದು. ಪುರುಷೋತ್ತಮ ಬಿಳಿಮಲೆ, **ಸುಳ್ಯ ಪರಿಸರದ ಗೌಡ ಜನಾಂಗ: ಒಂದು ಸಾಂಸ್ಕೃತಿಕ ಅಧ್ಯಯನ** (ಅಪ್ರಕಟಿತ ಪಿ.ಎಚ್.ಡಿ ಮಹಾಪ್ರಬಂಧ) ದಂಗೆಯ ವಿಫಲತೆಗೆ ಬ್ರಿಟಿಷರ ಒಡೆದು ಆಳುವ ನೀತಿಯಿಂದಾಗಿ ವಿಭಿನ್ನ ಭಿನ್ನಾಭಿಪ್ರಾಯಗಳಿಂದ ನಕಲೀಕರಣ ಮತ್ತು ದೈವೀಕರಣದ ಪ್ರಕ್ರಿಯೆಯನ್ನು ಉಲ್ಲೇಖಿಸುತ್ತ ಗೌಡ ಜನಾಂಗದ ವೈವಿಧ್ಯತೆಯನ್ನು ವಿವರಿಸುತ್ತಾರೆ.[36] ಸುಳ್ಯ ಪರಿಸರದ ಗೌಡರರು ಸೈದ್ಧಾಂತಿಕವಾಗಿ ಗೌಡರ ಅಸ್ಥಿತ್ವವನ್ನು ಮತ್ತಷ್ಟು ಪ್ರಕಾರತೆಗೊಳಿಸುವ ಪ್ರಮುಖ ಪ್ರಬಂಧವಾಗಿದೆ. ಕೊಡಗು ಕೆನರಾ ದಂಗೆಯಲ್ಲಿ ಗೌಡರು ಸಕ್ರಿಯವಾಗಿ ಭಾಗವಸುವಿಕೆಯನ್ನು ಬ್ರಿಟಿಷರಿಗೆ ಸಹಾಯಕರಿಗೆ ನಿಂತಿದ್ದ ಕೊಡವರು, ಗೌಡರ ಚಟುವಟಿಕೆಗಳನ್ನು ರಾಜದ್ರೋಹವೆಂಬತೆ ವರ್ಣಿಸಿ ಕೊಡವರ ಸಹಾಯದಿಂದ ಬ್ರಿಟಿಷರು ಗೌಡರನ್ನು ಮಟ್ಟಹಾಕಿದರು. ಈ ದಂಗೆ ಗೌಡ ಸಮುದಾಯದ ಮೇಲೆ ಬಗೆಬಗೆಯ ಪರಿಣಾಮ ಬೀರುದರೊಂದಿಗೆ ಸ್ವಾತಂತ್ರ್ಯ ಸಿಗುವವರೆಗೂ ಗೌಡರು ಬ್ರಿಟಿಷ್‌ರ ಅಪಕೃಪೆಗೆ ಒಳಗಾಗಿ ಆರ್ಥಿಕ ಮತ್ತು ಶೈಕ್ಷಣಿಕವಾಗಿ ಹಿಂದೆ ಉಳಿಯಲು ಈ ದಂಗೆಯು ಪ್ರಮುಖವಾಗಿದೆ ಎಂದು ವಿವರಿಸುತ್ತಾರೆ.[37] ಹೀಗಾಗಿ ಕೆನರಾ ಕೊಡಗು ದಂಗೆಯೂ ಐತಿಹಾಸಿಕ ಮಹತ್ವ ಸಾರಿ ಹೇಳುವ ಮೂಲಕ ಈ ದಂಗೆಯ ಪರಿಣಾಮವಾಗಿ ಸಾಮಾಜಿಕವಾಗಿ ಹಿಂದುಳಿಯ ಮುಖ್ಯ ಕಾರಣವಾಯಿತು ಎಂದು ಹೇಳುತ್ತಾರೆ.

ಕೋರನ ಸರಸ್ವತಿಯವರ **ಕೊಡಗು ಗೌಡ ಸಮುದಾಯ** ಇವರು ಪ್ರಾದೇಶಿಕ ನೆಲೆಯಲ್ಲಿ ಗೌಡ ಸಮುದಾಯದ ಸಾಂಸ್ಕೃತಿಕ ಅನನ್ಯತೆಯನ್ನು ವಿವರಿಸುತ್ತಾ, ಕೊಡಗು

ಬಹುಸಂಸ್ಕೃತಿ ಮತ್ತು ಜನಾಂಗದ ಅನನ್ಯತೆಯ ಒಂದು ಸಮುಚ್ಚಯವಾಗಿದೆ. ಕೊಡವ ಹಾಗೂ ಬುಡಕಟ್ಟು ಜನಾಂಗಗಳಿಗಿಂತ ಗೌಡ ಸಮುದಾಯವನ್ನು ಬದಲಾದ ಸಂದರ್ಭದಲ್ಲಿನ ಚಲನಶೀಲತೆಯನ್ನು ಗುರುತಿಸುವ ಉದ್ದೇಶ ಹಾಗು ಅನನ್ಯತೆಯ ನೆಲೆಯನ್ನು ಈ ಕೃತಿ ಹೊಂದಿದೆ.[38] ಎಮ್. ಕುಶಾಲಪ್ಪರವರ ಪ್ರಬಂಧಗಳು ಭಾಷಿಕವಾಗಿ ಅರೆಭಾಷಿಕ ಗೌಡ ಮತ್ತು ತುಳುಗೌಡ ಜನಾಂಗೀಯ ಬಂಡಾಯವೆಂದು ಜರಿಯುತ್ತಾರೆ.[39] ಐ.ಎಮ್. ಮುತ್ತಣ್ಣರವರು, ಕೊಡಗಿನ ದಂಗೆಯನ್ನು ಜನಸಾಮಾನ್ಯರ ದಂಗೆ ಎಂದು ಅಪರಾಂಪರ ಹಾಗೆಯೇ ಕಲ್ಯಾಣ ಸ್ವಾಮಿಯನ್ನು ನಕಲಿಗಳೆಂದು ಸುಳ್ಯ, ಪುತ್ತೂರು, ಬೆಳ್ಳಾರೆ ಹಾಗೂ ಉತ್ತರಕೊಡಗಿನ ಜನರು ಮುಕ್ತವಾಗಿ ಈ ದಂಗೆಗೆ ಸಹಾಯ ಮಾಡುತ್ತಾರೆ. ಆದರೆ ಬ್ರಿಟಿಷರು ಭಾರತದ ಇತರ ಸ್ಥಳಗಳಿಂದ ದೊಡ್ಡ ಪ್ರಮಾಣದ ಸೈನ್ಯದಿಂದ ಈ ದಂಗೆಯನ್ನು ಅಡಗಿಸಿದ್ದರು.[40] ಗೌಡದೊನಿಗೆ(1982) ಲೇಖನ ಮಾಲೆಯಲ್ಲಿ ಸೂದನ ಎಸ್. ಈರಪ್ಪ, ಪಾಲೂರುರವರ ಕೊಡಗ್‌ನ ಕ್ರಾಂತಿವೀರ ಗುಡ್ಡೆಮನೆ ಅಪ್ಪಯ್ಯ ಗೌಡ್ರುಎಂಬ ಲೇಖನದಲ್ಲಿ ಕೆನರಾ ಕೊಡಗಿನ ದಂಗೆಯ ಕುರಿತಂತೆ ಒಂದು ಉಪಯುಕ್ತವಾದ ಲೇಖನವಾದರೂ ತನ್ನದೇ ಆದ ಪೂರ್ವಗ್ರಹವನ್ನು ಹೊಂದಿದೆ ಅವರು ನೀಡುವ ಮಾಹಿತಿಗಳಿಗೆ ಸೂಕ್ತವಾದ ದಾಖಲೆಗಳನ್ನು ನೀಡದೆ ಐತಿಹಾಸಿಕ ದಂಗೆಯನ್ನು ಕಾದಂಬರಿಯಂತೆ ರಚಿಸಿರುವುದು ಇತಿಹಾಸದ ದಾಖಲೀಕರಣಕ್ಕೆ ಅಗಾಧವಾದ ಸಮಸ್ಯೆಯನ್ನು ಉಂಟುಮಾಡುತ್ತದೆ.[41]

ಈ ದಂಗೆಯಲ್ಲಿ ಭಾಗವಹಿಸಿದ ನಾಯಕರುಗಳಿಗೆ ದೂರದೃಷ್ಟಿಯಿದ್ದು, ಬ್ರಿಟಿಷ್ ವ್ಯವಸ್ಥೆಯಿಂದ ಬದಲಾವಣೆಯನ್ನು ನಿರ್ಮಿಸಿ, ನಾವು ವಿಶಿಷ್ಟ ಸಂಸ್ಕೃತಿಯಿಂದ ತಮ್ಮನ್ನು ಗುರುತಿಸಿಕೊಳ್ಳುವ ಸ್ಪಷ್ಟ ಉದ್ದೇಶದ ಬಯಕೆಯಿತ್ತು ಎಂದು ಎಚ್. ಎಂ. ಕುಮಾರಸ್ವಾಮಿರವರ ಸ್ವಾತಂತ್ರ್ಯ ಜ್ಯೋತಿ ಪ್ರಜ್ವಲಿಸಿದ ಮಲೆನಾಡಿನ ರೈತ ಬಂಡಾಯ ಎಂಬ ಲೇಖನದಲ್ಲಿ ತಿಳಿಸಿರುತ್ತಾರೆ. ಹಾಗೆಯೇ ಇಲ್ಲಿಯವರೆಗೆ ಹಲವು ಲೇಖಕರು ಈ ಸಂಘಟನೆಯನ್ನು ಮುಖ್ಯ ವಸ್ತುವಾಗಿಟ್ಟುಕೊಂಡು ಹಲವು ಕೃತಿಯನ್ನು ರಚಿಸಿದ್ದಾರೆ. ಇದರಲ್ಲಿ ತಿಳಿಯಬೇಕಾದ ಬಹಳ ಪ್ರಮುಖವಾದ ಅಂಶವೆಂದರೆ ಅಮರಸುಳ್ಯದ ಕ್ರಾಂತಿಯ ಕುರಿತು ಬರೆದ ಹೆಚ್ಚಿನ ಸಾಹಿತಿಗಳು, ಬರಹಗಾರರು ಈ ಪ್ರದೇಶದಿಂದಲೇ ಬಂದವರಾಗಿದ್ದು, ಇದರಿಂದ ತಮ್ಮ ಅನನ್ಯತೆಗೆ ಹೆಚ್ಚಿನ ಪ್ರಾಮುಖ್ಯತೆಯನ್ನು ನೀಡಿರುವುದು ಗಮನಾರ್ಹವಾಗಿದೆ. ತಬಂಡ ವಿಜಯ ಪೂಣಚ್ಚರವರ **ಆಧುನಿಕ ಕೊಡಗು 1837ರ** ಅಮರ ಸುಳ್ಯದ ದಂಗೆಯನ್ನು ಅಡಗಿಸಿದ ಜನರು ತಮ್ಮ ಉದಾತ್ತ ಚೇತನವನ್ನು ಪ್ರದರ್ಶಿಸಲು ಕೊಳ್ಳೆಯನ್ನು ನಿರಾಕರಿಸಿದ್ದಕ್ಕಾಗಿ, ಆ ಜನರನ್ನು ಸಂತುಷ್ಟಗೊಳಿಸಲು ಬ್ರಿಟಿಷ್‌ರು ಉಂಬಳಿ ಮತ್ತು ಜಮ್ಮ ಭೂಮಿಯನ್ನು ಕೊಟ್ಟರೇ ವಿನಹಃ ಮನೆ ಹಾಳು ಮಾಡುವ ಉದ್ದೇಶದಿಂದಲ್ಲ ಎಂದು ತಿಳಿಸುತ್ತಾರೆ.[42] ವಿ. ಅವಿನಾಶ್‌ರವರ **ಕೊಡಗು ಕೆನರಾ ದಂಗೆ: ಒಂದು ಇತಿಹಾಸ ಕಥನದಲ್ಲಿ** ಕೆನರಾ ಕೊಡಗಿನ ದಂಗೆ ಕುರಿತು ವಿವರಿಸುವಾಗ ಈ ದಂಗೆಯೂ ಆರ್ಥಿಕ ಮತ್ತು ಸಾಮಾಜಿಕ ದಂಗೆಯಾಗಿ ಮೂಡಿಬಂದಿದ್ದು ಮೇಲು ವರ್ಗದವರ ಪ್ರಭಾವದಿಂದ ಸಮಾಜದಲ್ಲಿ ತಮ್ಮ ಸಮುದಾಯದ ಪ್ರತಿಷ್ಠೆಗಾಗಿ ಈ ದಂಗೆಯ ಕುರಿತು ವಿವಿಧ ಚಿಂತನೆಗಳ ಮಹಾಪರ್ವವನ್ನು ಬೀರಿರುತ್ತಾರೆ ಎಂದು ಹೇಳುತ್ತಾರೆ.[43]

## ಕೊನೆ ಮಾತು

ವಸಾಹತು ಸರ್ಕಾರದ ಕಂದಾಯ ಹಾಗೂ ಆಡಳಿತದ ಧೋರಣೆಗಳು 18ನೇ ಹಾಗೂ 19ನೇ ಶತಮಾನದ ರೈತರ ಹೋರಾಟಗಳಿಗೆ ಮೂಲ ಕಾರಣವಾಗಿದೆ. ಇಲ್ಲಿ ರೈತರು ಒಂದೋ ತಮ್ಮ ಬೆಳೆ ಹಾನಿಯಿಂದ ಕಂದಾಯವನ್ನು ಕಡಿಮೆ ಮಾಡಲು ಅಥಾವ ಇಳುವರಿಗಳಿಗೆ ಬೆಲೆ ಕಡಿಮೆಯಾಗಿ ಅಸಮರ್ಪಕವಾದ ದರಗಳನ್ನು ನಿಗದಿ ಮಾಡಿದ ಕಾರಣಕ್ಕಾಗಿಯೇ ತೆರಿಗೆಯ ವಿರುದ್ಧ ಸಂಘಟನತ್ಮಾಕವಾಗಿ ನಡೆಸಿದ ಹೋರಾಟ ಒಂದೆಡೆಯಾದರೆ; ಹಾಗೆಯೇ ಸಂಪೂರ್ಣ ತೆರಿಗೆ ಪದ್ಧತಿಯನ್ನು ರದ್ದು ಮಾಡುವ ಕುರಿತಂತೆ ಕಂಡುಬಂದ ಹೋರಾಟ ಮತ್ತೊಂದು ಕಾರಣವಾಗಿದೆ. ಹೀಗಾಗಿ ರೈತರು ತಲಾ ತಲಾಂತರಗಳಿಂದ ತಾವು ಅನುಭವಿಸಿಕೊಂಡು ಬಂದ ಭೂಮಿಯ ಹಕ್ಕನ್ನು ನೀಡಲು ಒತ್ತಾಯಿಸಿದ್ದರು. ಈ ಭೂಮಾಲೀಕರು ರೈತರಿಗೆ ಭೂಮಿಯ ಹಕ್ಕನ್ನು ನೀಡುವ ಬದಲು ಅಸಮರ್ಪಕವಾಗಿ ಗೇಣಿಯನ್ನು ಹೆಚ್ಚಿಸಿದರು. ಅದಲ್ಲದೆ ಅವರನ್ನು ಒಕ್ಕಲೆಬ್ಬಿಸುವುದು, ಕಾನೂನು ಬಾಹಿರ ತೆರಿಗೆಗಳನ್ನು ವಿಧಿಸುವುದು ಹಾಗೂ ಬಲವಂತದ ಬಿಟ್ಟಿ ದುಡಿಮೆಯನ್ನು ಒಳಪಡಿಸುವುದನ್ನು ಬಲವಾಗಿ ವಿರೋಧಿಸಿದರು. ಒಟ್ಟನಲ್ಲಿ ರೈತರ ಅತೃಪಿ ಹಾಗೂ ಆರ್ಥಿಕ ಮತ್ತು ರಾಜಕೀಯ ಅಸಮಾಧಾನದ ವಿರುದ್ಧದ ದಂಗೆಯ ಕುರಿತು ಇತಿಹಾಸದ ಉದ್ದಕ್ಕೂ ಕಾಣಸಿಗುತ್ತದೆ.[44] ಇದೇ ಸನ್ನಿವೇಶವನ್ನು ಕೊಡಗು ಕೆನರಾದ ರೈತ ದಂಗೆಯಲ್ಲಿ ಕಂಡುಬರುವುದರಿಂದ ರೈತರ ಹೋರಾಟವನ್ನು 18ನೇ ಮತ್ತು 19ನೇ ಶತಮಾನದ ರಾಜಕೀಯ ಹಾಗೂ ಸಾಮಾಜಿಕ ನೆಲೆಯೊಂದಿಗೆ ನೋಡಬೇಕೇ ಹೊರತು ಆಧುನಿಕ ದಿಕ್ಕುಸೂಚಿಯೊಡನೆ ಸಮೀಕರಿಸಿ ನೋಡುವುದರಿಂದ ಇತಿಹಾಸ ಬದಲಾಗುವುದಿಲ್ಲ ಬದಲಿಗೆ ಮತ್ತೊಂದು ವರ್ಗ ಸಂಘರ್ಷದ ನಿರ್ಮಾಣಕ್ಕೆ ದಾರಿ ಮಾಡಿಕೊಡುತ್ತದೆ ಎಂಬುವುದನ್ನು ಈ ಲೇಖನದ ಮೂಲಕ ತಿಳಿಯಪಡಿಸುತ್ತೇನೆ.

---

**ಆಕರ ಸೂಚಿ ಮತ್ತು ಕೊನೆ ಟಿಪ್ಪಣಿಗಳು**

1. ಕೆನರಾದ ಬಗ್ಗೆ ಆಸಕ್ತಿ ತೋರಿ ಸಂಶೋಧನೆ ನಡೆಸಿದವರಲ್ಲಿ ಬಾಸೆಲ್ ಮಿಶನರಿಗಳೇ ಮೊದಲಿಗರು; ರೆ.ಜೆ. ಅಮ್ಮನ್, ರೆ.ಜಿ.ಕುಮರರ್ ಅವರು ತುಳು ಭಾಷೆಯ ಬಗ್ಗೆ ಮಾಡಿದ ಅಧ್ಯಯನ ನಂತರ ಕಾಣಿಸಿಕೊಳ್ಳುವುದು ರೇ. ಆಗಸ್ಟ್ ಮೇನರ್. ಜಿಲ್ಲೆಯ ಮತ್ತು ಭಾಷೆಯ ಕುರಿತು ಮೇನರ್‌ರ ಕೊಡುಗೆ ಅಪಾರ ಅವುಗಳಲ್ಲಿ ಕೆಲವನ್ನು ಉಲ್ಲೇಖಿಸುವುದಾದರೆ 500 ಗಾದೆ ಎಂಕ್‌ಲಾ ಒಂಜಿ ಇಲ್ಲ್ ಉಂಡು, ಕಲಿಗಂಗಸರ ತಯಾರಿ ಕ್ರಿಸ್ತೆರೆಗ್ ಯೋಗ್ಯದವು ಅದುಂಡಾ? *Canarese Tulu Book* ಇತ್ಯಾದಿ. ಕರಾವಳಿ ಕರ್ನಾಟಕದಲ್ಲಿ ಮುದ್ರಣದ ಹೊಸ ತಾಂತ್ರಿಕತೆಯನ್ನು ಆವಿಷ್ಕಾರಗೊಳಿಸಿರುವು ಬಾಸೆಲ್ ಮಿಶನ್. ಬಾಸೆಲ್ ಮಿಷನ್‌ನ ಆಗಮನದಿಂದ ಕನ್ನಡ, ತುಳು ಕೃತಿಗಳ ಮುದ್ರಣವಾಗತೊಡಗಿತ್ತು. ಮೊದಲ ತುಳು ನಿಘಂಟು ಮತ್ತು ಮೊದಲ ತುಳು ವ್ಯಾಕರಣ ಕ್ರಿಶ್ಚಿಯನ್ ಮಿಶನರಿಗಳಿಂದಲೇ ರಚನೆಯಾಗಿರುವುದು ಆಸಕ್ತಿದಾಯಕ.
2. ಸೂರ್ಯನಾಥ ಯು. ಕಾಮತ್., **ಸ್ವಾತಂತ್ರ್ಯ ಹೋರಾಟದ ಹಲವು ಮುಖಗಳು**, ಹುಬ್ಬಳ್ಳಿ. 1988.
3. Anantharaja Gowda., *In Pursuit of Our Roots*, 2015, p.i-v

4. ಮೋಹನ್‌ಕೃಷ್ಣ ರೈ.ಕೆ., **ಕೆನರಾದ ವಿಭಜನೆ,** ಪ್ರಸಾರಾಂಗ, ಹಂಪಿ, 2010. ಪು.26-29

5. Charterjee Partha, *'For an Indian History of Peasant struggle' Social Scientist* Vol 16 NO 11 November 1988, pp.5-6

6. Ibid P-7

7. Chandra Bipan., *`Nationalist Historians Interpreting of the National Movement in Sabyasachi Bhattacharya, ed, situating Indian history,* Delhi 1986, P 195

8. Chaterjee, partha, op cit, P 7

9. Guha Ranjit.(Ed)., *Subaltern studies Writings on South Asia History and Society* Vol I, Delhi, 1982,P.2-3

10. ಪೋರ್ಚುಗೀಸರು 16ನೇ ಶತಮಾನದಲ್ಲಿ ಕರ್ನಾಟಕದ ಕರಾವಳಿ ಜಿಲ್ಲೆಗಳಾದ ದಕ್ಷಿಣ ಕನ್ನಡ, ಉಡುಪಿ, ಕಾಸರಗೋಡು ಮತ್ತು ಉತ್ತರ ಕನ್ನಡವನ್ನು ಸೇರಿಸಿಕೊಂಡು 'ಕೆನರಾ' ಎಂದು ಕರೆದರು. 'ಕೆನರಾ' ಎಂದರೆ 'ಕನ್ನಡ' ಎಂದರ್ಥ. ಐರೋಪ್ಯರು 'ಡ' ಅಕ್ಷರದ ಬದಲು 'ರ' ಉಪಯೋಗಿಸುತ್ತಿದ್ದುದು ಸಾಮಾನ್ಯ ನಂತರ ಬ್ರಿಟಿಷರು ಕೂಡಾ ಈ ಪ್ರದೇಶವನ್ನು 'ಕೆನರಾ'ಎಂದೇ ಕರೆಯತೊಡಗಿದರು.

11. ಫ್ರಾನ್ಸಿಸ್ ಬುಕನನ್.,

12. Madras Board of Revenue

13. ಥಾಮಸ್ ಹಾರಿಸ್., ಕೆನರಾ ಜಿಲ್ಲೆಯ ಕಲೆಕ್ಟರ್ ಮತ್ತು ಬೋರ್ಡ್ ಆಫ್ ರೆವಿನ್ಯೂ

*Reports on the Revision of Assessment and the Disturbances non yes Kuts in Canara 1830-31*

*Remission of the Jama Ryots who joined in arms on against in segments of 1834*

*Rules for the Conduct of the District Functionaries in Coorg, Meracara, 30th August 1834.*

*Report on the insurrections raised by Puttapasappa and others in the South Canara Dist 1837*

ರೆವೆರೆಂಡ್ ಮೋಂಗ್ಲಿಂಗ್, *Coorg Memories (1855)*

The Calcutta Review, *History of Coorg An Unpublished Manuscripts, Vol. XXVII, London,* July- December, 1856. Pp.180-207, 478-495.

Richter.G., *Ethnographical Compendium (1887)*

ರೋಬ್ ಕೋಲ್., *Coorg Civil Law*

*Madras District Manuals*

*Caste And Tribes Of South India*

*Historical Summary of the British Rule in Coorg during the past Seventy years,* Mercara, Dated 14th August 1922

ನಮ್ಮಲ್ಲಿ ಇಂದು ನಾವಿನ್ಯ ಪೂರ್ಣ ಇತಿಹಾಸದ ಕೊರತೆಯನ್ನು ಉಂಟು ಮಾಡಿದೆ. ಏಕೆಂದರೆ ಜಿಲ್ಲೆಗಳಲ್ಲಿ ನಡೆದ ಹೋರಾಟದ ಇತಿಹಾಸವನ್ನು ತಿಳಿಯ ಬಯಸುವವರಿಗೆ ಒಂದು ರೀತಿಯ ಗೊಂದಲ ಅಥವಾ ದ್ವಂದ್ವತ್ಮಕ ಅಂಶಗಳನ್ನು ಒಮ್ಮೆಲೇ ಕಾಣಸಿಗುತ್ತದೆ. ಇದಕ್ಕೆ ಕಂಡು ಬರುವ ಪ್ರಮುಖ ಕಾರಣವೆಂದರೇ ಹೋರಾಟದ ಸ್ಥೂಲ ಚಿತ್ರಣವನ್ನು ಕಣ್ಣೆದುರು ಕಟ್ಟಿದವರು ವಸಾಹತು ಶಾಹಿ ಅಧಿಕಾರಿಗಳು ಹಾಗೂ ಬರಹಗಾರರು. ಮುಂದೆ, ಇವುಗಳನ್ನು ಅನುಕರಿಸಿ ರಚಿಸಿದ ನಮ್ಮ ದೇಶೀಯ ಬರಹಗಾರರು ಇವುಗಳಿಂದ ಸಮ್ಮತ ಗೊಂದಲಗಳು ಉಂಟು ಆಗಿರುತ್ತದೆ. ನಮ್ಮಲ್ಲಿ ಪ್ರಾದೇಶಿಕ ಸ್ವಾತಂತ್ರ್ಯ ಹೋರಾಟದ ಸಮಗ್ರ ಚಿತ್ರಗಳನ್ನು ಒದಗಿಸುವ ಇತಿಹಾಸದ ಕೊರತೆಯಿದೆ. ಈ ಕಾರಣದಿಂದಲೇ ಕೆಲವು ಪ್ರಮುಖ ಸಂಶೋಧಕರು ನಮ್ಮ ಪ್ರಾದೇಶಿಕ ವಲಯದಲ್ಲಿ ಕಂಡುಬರುವ ದಂಗೆಗಳ ಕುರಿತು ಇತಿಹಾಸ ರಚಿಸಲು ಪ್ರಾರಂಭಿಸಿದ್ದರು. ಇದರಲ್ಲಿ ಅನೇಕರು ಹೆಚ್ಚು ಶೋಧಕ್ಕೆ ಹೋಗದೆ ವಸಾಹತು ಮಾದರಿಯನ್ನು ನೀಡಿದ್ದಾರೆ. ಇನ್ನೂ ಕೆಲವರು ದಂಗೆಯನ್ನು ತಮ್ಮ ಸಮುದಾಯದ ದಂಗೆ ಎಂದು ರಚಿಸಲು ಪ್ರಾರಂಭಿಸಿರುತ್ತಾರೆ. ಹೀಗೆ ಒಂದು ದಂಗೆಯ ಕುರಿತಂತೆ ಹಲವಾರು ಹೆಸರು ಒಮ್ಮೆಲೇ ಕಂಡು ಬರುತ್ತದೆ. ಉದಾ: ದಕ್ಷಿಣ ಕನ್ನಡ ಪ್ರಾಂತ್ರ್ಯದಲ್ಲಿ ನೆಡೆದ ಬ್ರಿಟಿಷ್ ವಿರೋಧಿ ದಂಗೆಯ ಕುರಿತು **'ಅಮರ ಸುಳ್ಯ ದಂಗೆ'**, **'ಕೊಡಗು ಕೆನರಾ ದಂಗೆ'**, **'ಕೂಟಗಳ ಕಾಟ ಕಾಯಿ'**, **'ಕಲ್ಯಾಣ್ಣಪ್ಪನ ಕಾಟ ಕಾಯಿ'** ಮತ್ತು **'ರೈತದಂಗೆ'** ಎನ್ನುವ ಹೆಸರುಗಳನ್ನು ಒಮ್ಮೆಲೇ ಕಾಣಬಹುದು. ಬಿ.ವಿ. ಕಕ್ಕಿಲ್ಲಾಯ., **ಸ್ವಾತಂತ್ರ್ಯದ ಸ್ವರ್ಣ ಹೆಜ್ಜೆ ದಕ್ಷಿಣ ಕನ್ನಡ,** ಜಿಲ್ಲಾಡಳಿತ ದಕ್ಷಿಣ ಕನ್ನಡ ಜಿಲ್ಲೆ, 1998. ಪು.1–143, ಷೇಕ್ ಆಲಿ(ಸಂ) **ಕರ್ನಾಟಕ ಚರಿತ್ರೆ ಸಂ. 3–11,** ಹಂಪಿ.

ವಿದ್ಯಾಧರ್. ಕೆ. ಆರ್., ಅಟ್ಲೂರು ರಾಮಪ್ಪಯ್ಯ **ಅತಿ ರಂಜನೆಯ ನೆಲೆಗಳು, (ಪ್ರಬಂಧ)** ಮಡಿಕೇರಿ.

ನಿರಂಜನರ., **ಕಲ್ಯಾಣಸ್ವಾಮಿ,** ಮೈಸೂರು, 1956.

ರಿಕ್ಟರ್.ಜಿ., **ಗೆಸೆಟಿಯರ್ ಆಫ್ ಕೂರ್ಗ್,** 1870.

ನಡಿಕೇರಿಯಂಡ ಚಿನ್ನಪ್ಪ., **ಪಟ್ಟೋಲೆ ಪಳಮೆ,** ಬೆಂಗಳೂರು, 1995.

ಶ್ರೀ ದೇವಿ ಪ್ರಸಾದ್., **ಅಮರ ಸುಳ್ಳದ ಸ್ವಾತಂತ್ರ್ಯ ಸಮರ,** ಕನ್ನಡ ಪ್ರಪಂಚ ಪ್ರಕಾಶನ, ಪುತ್ತೂರು, 1999.

ಪ್ರಭಾಕರ್ ಶಿಶಿಲ., **ಮೂಡಣದ ಕೆಂಪು ಕಿರಣ,** (1837 ರ ಅಮರ ಸುಳ್ಯ ರೈತ ಬಂಡಾಯ) ಮೈಸೂರು, 1974.

ಶ್ಯಾಮ ಭಟ್.ಎನ್., **ಸೌತ್ ಕೆನರಾ 1799–1860, ಎ ಸ್ಟಡಿ ಎನ್ ಕೊಲೋನಿಯಲ್ ಅಡ್ಮಿನಿಸ್ಟ್ರೇಷನ್ ಅಂಡ್ ರಿಜಿನಲ್ ರೆಸ್‌ಪಾನ್ಸ್, ಮಿತ್ತಲ್ ಪಬ್ಲಿಕೆಷನ್, ನ್ಯೂಡೆಲ್ಲಿ** 1988. ಪು 178–181 ಜನರು ಅತಿಯಾದ ಭೂ ಕಂದಾಯದಿಂದ ಶೋಷಣೆಗೆ ಒಳಗಾಗಿದ್ದರು, ಇಂತಹ ಸಂದರ್ಭದಲ್ಲಿ ಸ್ವಾಮಿ ಅಪರಂಪರ ಎನ್ನುವ ಸನ್ಯಾಸಿ ಕೊಡಗಿನ ಉತ್ತರಾಧಿಕಾರಿ ಎಂದು ಹೇಳುವುದರೊಂದಿಗೆ ಸ್ಥಳೀಯರಿಗೆ ಒಂದು ಆಶಾಕಿರಣದಂತೆ

ಕಂಡುಬಂದ, ನಂತರದಲ್ಲಿ ಕಲ್ಯಾಣಸ್ವಾಮಿ ಮತ್ತು ಪುಟ್ಟಬಸಪ್ಪ ಕೊಡಗಿನ ರಾಜರ ಮಕ್ಕಳು ಎಂದು ಹೇಳುವುದರೊಂದಿಗೆ ಸ್ಥಳೀಯರ ನಂಬಿಕೆ, ಮೆಚ್ಚುಗೆಗೆ ಪಾತ್ರರಾಗುತ್ತಾರೆ; ಇದರಿಂದ ಕೆನರಾ ಕೊಡಗಿನ ಬಂಡಾಯದಲ್ಲಿ ಜನರು ರಾಷ್ಟ್ರೀಯತೆ, ಸ್ವಾತಂತ್ರ್ಯತೆಗೆ ಬದಲಾಗಿ ಹಾಲೇರಿ ಸಂಸ್ಥಾನದ ಪ್ರತಿಷ್ಠಾಪನೆ ಮತ್ತು ಪುರಾತನ ಸಾಮಾಜಿಕ ಮತ್ತು ಆರ್ಥಿಕ ನಿಯಮಗಳ ಅನುಷ್ಠಾನವೇ ಈ ಬಂಡಾಯದ ಮುಖ್ಯ ಸಿದ್ಧಾಂತವಾಗಿತ್ತು. *A Peasant Uprising in South canara (1830-1831) Proceedings of I.H.C 53rd Secession 1993 Pp.439-444, Rebellion of Kalyanaswamy (1834-37): A case of local protest against British rule, studies in Karnataka History and Culture, Mysore,* Vol. II, pp.108-113

ಶರ್ಮ ತಿ.ತಾ., **ಕರ್ನಾಟಕದಲ್ಲಿ ಸ್ವಾತಂತ್ರ್ಯ ಸಂಗ್ರಾಮ** 1800ರಿಂದ 1857ರವರೆಗೆ, ಬೆಂಗಳೂರು, 1957.

ಪ್ರಭಾಕರ್ ನೀರ್‌ಮಾರ್ಗ್., **ಮಂಗಳೂರು ಕ್ರಾಂತಿ,** ಮಂಗಳೂರು, 2006.

ಮೋಹನ್‌ಕೃಷ್ಣ ರೈ.ಕೆ., **ಚರಿತ್ರೆ ಅಧ್ಯಯನ, (ಸಂಪುಟ. 7 ಸಂಚಿಕೆ.1),** ಪ್ರಸಾರಾಂಗ ಕನ್ನಡ ವಿಶ್ವವಿದ್ಯಾನಿಲಯ, ಹಂಪಿ 2011. ಪು.48–60

ಪುರುಷೋತ್ತಮ ಬಿಲಿಮಲೆ., **ಸುಳ್ಯ ಪರಿಸರದ ಗೌಡ ಜನಾಂಗ: ಒಂದು ಸಾಂಸ್ಕೃತಿಕ ಅಧ್ಯಯನ (ಅಪ್ರಕಟಿತ ಪಿ.ಎಚ್.ಡಿ ನಿಬಂಧನೆ)** ಮಂಗಳೂರು ವಿಶ್ವವಿದ್ಯಾನಿಲಯ. ಮಂಗಳಗಂಗೋತ್ರಿ, 1985.

ಚಿನ್ನಪ್ಪಗೌಡ.ಕೆ., **ಗೌಡ ಜನಾಂಗ ಇತಿಹಾಸ ಮತ್ತು ಸಂಸ್ಕೃತಿ,** ಮಂಗಳೂರು.2003 ಪು.68

ಕೋರನ ಸರಸ್ವತಿ., **ಕೊಡಗು ಗೌಡ ಸಮುದಾಯ,** ಬೆಂಗಳೂರು. 2010

Mookonda Kushalappa., *Kodagu and Canara Rebellion* (1834 to 1837). Account of on Uprising, https://www.amazon.com/author/kushalappa.

ಮುತ್ತಣ್ಣ ಐ.ಎಮ್., ಕರ್ನಾಟಕ, ಮೈಸೂರು, 1962.

ಗೌಡದೊನಿಗೆ., **ಕೊಡಗ್‌ನ ಕ್ರಾಂತಿವೀರ ಗುಡ್ಡೆಮನೆ** ಅಪ್ಪಯ್ಯ ಗೌಡ್ರು, 1982. ಪು. 1–4

ವಿಜಯ್.ಟಿ.ಪಿ., **ಆಧುನಿಕ ಕೊಡಗು,** ಪ್ರಸಾರಾಂಗ ಕನ್ನಡ ವಿಶ್ವವಿದ್ಯಾನಿಲಯ. ಹಂಪಿ. 200 ಪು.56

ಅವಿನಾಶ್.ವಿ., **ಕೊಡಗು ಕೆನರಾ ದಂಗೆ: ಒಂದು ಇತಿಹಾಸ ಕಥನ,** ಲೋಕ ಜ್ಞಾನ. ಪು.116

Mukherjee Mridula *'Peasant Resistance and peasant consciousness in colonial India* (Subaltern and beyond) Economic and Political weekly. October 1988, P 2109.

# ಕರ್ನಾಟಕ ಏಕೀಕರಣ ಚಳವಳಿಯಲ್ಲಿ ಕಮ್ಯುನಿಸ್ಟರ ಪಾತ್ರ

**ಪ್ರಕಾಶ್ ಕೆ.**
ಸಂಶೋಧನಾ ವಿದ್ಯಾರ್ಥಿ
ಚರಿತ್ರೆ ವಿಭಾಗ
ಕನ್ನಡ ವಿಶ್ವವಿದ್ಯಾಲಯ
ಹಂಪಿ
9448574389

ಕನ್ನಡ ಭಾಷೆ ಹುಟ್ಟಿ 2 ಸಾವಿರ ವರ್ಷಗಳಿಗೂ ಮೇಲಾಗಿದೆ. ಆದರೆ ಕನ್ನಡ ಮಾತನಾಡುವವರೆಲ್ಲಾ ಒಂದೇ ಆಡಳಿತಕ್ಕೊಳಪಡಬೇಕೆಂಬ ಏಕೀಕರಣದ ಕೂಗು 20ನೇ ಶತಮಾನದಲ್ಲೇ ಹುಟ್ಟಿದ್ದು. ಇದಕ್ಕೆ ಮೊದಲು ಕನ್ನಡನಾಡು ಒಂದಾಗಬೇಕೆಂದಾಗಲೀ, ಕನ್ನಡಿಗರೆಲ್ಲಾ ಒಂದೇ ಆಡಳಿತದಡಿ ಬರಬೇಕೆಂಬ ಘೋಷಣೆ ಹುಟ್ಟಿರಲಿಲ್ಲ. ಭಾರತ ಸಮಾಜದ ಸಾಮಾಜಿಕ–ಆರ್ಥಿಕ–ರಾಜಕೀಯ ಬೆಳವಣಿಗೆಯ ನಿರ್ದಿಷ್ಟ ಕಾಲಘಟ್ಟದಲ್ಲಿ ಈ ಘೋಷಣೆ ಹುಟ್ಟಿದೆ. ಇಂತಹ ಒಂದು ಪ್ರಕ್ರಿಯೆಯನ್ನು ಲೆನಿನ್ (ಲೆನಿನ್ 1977: 243–251) ಹೀಗೆ ವಿವರಿಸಿದ್ದಾರೆ:

ಜಗತ್ತಿನೆಲ್ಲೆಡೆಯಲ್ಲಿಯೂ ಬಂಡವಾಳಶಾಹಿ ವ್ಯವಸ್ಥೆಯು ಊಳಿಗಮಾನ್ಯ ವ್ಯವಸ್ಥೆಯ ಮೇಲೆ ತನ್ನ ಅಂತಿಮ ವಿಜಯವನ್ನು ಸಾಧಿಸಿದ ಅವಧಿ ಭಾಷಾ ಜನಾಂಗಗಳ ಆಂದೋಲನಗಳೊಂದಿಗೆ ಬೆಸೆಯಲ್ಪಟ್ಟಿದೆ. ಸರಕು ಉತ್ಪಾದನೆ ಮತ್ತು ವ್ಯಾಪಾರ ಪೂರ್ಣ ವಿಜಯವನ್ನು ಸಾಧಿಸಬೇಕಾದರೆ, ಬಂಡವಾಳಶಾಹಿ ವರ್ಗ ತನ್ನ ಆಂತರಿಕ ಮಾರುಕಟ್ಟೆಯನ್ನು ಕೈವಶ ಮಾಡಿಕೊಳ್ಳಬೇಕು. ದೇಶೀಯ ಭಾಷಾ ಜನಾಂಗಗಳ ಚಳುವಳಿಗಳ ಆರ್ಥಿಕ ತಳಹದಿ ಇಲ್ಲಿದೆ. ಮನುಷ್ಯ ಮನುಷ್ಯರ ನಡುವಿನ ವ್ಯವಹಾರದಲ್ಲಿ ಭಾಷೆ ಅತ್ಯಂತ ಮಹತ್ವದ

ಸಾಧನ. ಈ ಭಾಷೆಯ ಅಭಿವೃದ್ಧಿಗೆ, ಸಾಹಿತ್ಯದ ಬೆಳವಣಿಗೆಗೆ ಇರುವ ಎಲ್ಲಾ ಅಡ್ಡಿ ಆತಂಕಗಳನ್ನು ನಿವಾರಿಸಲ್ಪಡಬೇಕು.

ಆಧುನಿಕ ಉತ್ಪಾದನಾ ವ್ಯವಸ್ಥೆಯ ಪ್ರಮಾಣಕ್ಕೆ ಸರಿಯಾದಷ್ಟು ಮುಕ್ತ ವಾಣಿಜ್ಯಕ್ಕೆ ವಿವಿಧ ವರ್ಗಗಳಿಗೆ ಸೇರಿದ ಜನತೆಯನ್ನು ಒಂದು ವಿಶಾಲವಾದ ಪ್ರದೇಶಗಳಲ್ಲಿ ಒಗ್ಗೂಡಿಸುವುದಕ್ಕೆ, ಮಾರುಕಟ್ಟೆ ಮತ್ತು ಸಣ್ಣ ದೊಡ್ಡ ಮಾಲೀಕರ ನಡುವೆ, ಕೊಳ್ಳುವವರ ಮತ್ತು ಮಾರುವವರ ನಡುವೆ ನಿಕಟ ಸಂಬಂಧ ಏರ್ಪಡಿಸುವುದಕ್ಕೆ ಭಾಷೆಯ ಅನಿರ್ಬಂಧಿತವಾದ ಬೆಳವಣಿಗೆ ಹಾಗೂ ಐಕ್ಯತೆ ಇಲ್ಲದೆ ಸಾಧ್ಯವಿಲ್ಲ.

ಈ ರೀತಿಯಾಗಿ ಸ್ವಾತಂತ್ರ್ಯೋತ್ತರ ಭಾರತದ ಒಂದು ಮಹತ್ತರ ಬೆಳವಣಿಗೆಯಾಗಿ ಮೂಡಿ ಬಂದ ರಾಜ್ಯಗಳ ಪುನರ್ವಿಂಗಡನೆ ಮತ್ತು ಭಾಷೆಯ ಆಧಾರದಲ್ಲಿ ರಾಜ್ಯಗಳನ್ನು ರಚಿಸುವ ಘಟನೆಯು ಬಹುಮುಖ್ಯವಾದ ಪ್ರಜಾಸತ್ತಾತ್ಮಕವಾದ ಬೆಳವಣಿಗೆಯಾಗಿದೆ. ಇಂತಹ ಬೆಳವಣಿಗೆ ದೇಶದಲ್ಲಿ ಮತ್ತು ರಾಜ್ಯದಲ್ಲಿ ತಂತಾನೆ ಸಂಭವಿಸಿದ್ದಲ್ಲ. ಕರ್ನಾಟಕವು ಊಳಿಗಮಾನ್ಯ ಸಮಾಜದ ಬಸಿರಲ್ಲಿ ಇನ್ನೂ ಇರುವಾಗಲೇ, ಇಲ್ಲಿ ಬ್ರಿಟಿಷರ ಸಂಪರ್ಕದೊಡನೆ ಹುಟ್ಟಿದ ಬಂಡವಾಳಶಾಹಿಯ ಅಗತ್ಯಗಳಿಗೆ ಅನುಗುಣವಾಗಿ ಕನ್ನಡ ಮಾತನಾಡುವವರೆಲ್ಲರೂ ಒಂದೇ ರಾಜಕೀಯ ಆಡಳಿತದಲ್ಲಿರಬೇಕೆಂಬ ಕೂಗು ಸಣ್ಣದಾಗಿ ಹುಟ್ಟಿ, ಬರಬರುತ್ತ ಬೆಳವಣಿಗೆಯಾಗಿ, ಶಿಕ್ಷಣದ ಪ್ರಗತಿ, ಸಾಹಿತ್ಯದ ನವೋದಯ ಹಲವು ಹಂತಗಳಲ್ಲಿ ಒಂದರ ಹಿಂದೆ ಒಂದು ಹೆಜ್ಜೆಯಿಟ್ಟು, ಒಂದು ಮತ್ತೊಂದಕ್ಕೆ ಕಾರಣವಾಗಿ, ಕೊನೆಯಲ್ಲಿ ಕರ್ನಾಟಕ ಏಕೀಕರಣದ ಕೂಗಿಗೆ ಕಾರಣವಾದವು[1].

ವ್ಯಾಪಾರಕ್ಕಾಗಿ ಬಂದ ಯೂರೋಪಿಯನ್ನರು, ಮುಖ್ಯವಾಗಿ ಬ್ರಿಟಿಷರು, ಇಲ್ಲಿನ ಪರಿಸ್ಥಿತಿಯ ಲಾಭ ಪಡೆದು ಹಣ ಮತ್ತು ಭೂಮಿ ಎರಡೂ ರೂಪದಲ್ಲಿ ವಿವಿಧ ಭಾಗಗಳನ್ನು ವಶಪಡಿಸಿಕೊಂಡರು. ವಾಣಿಜ್ಯ ವ್ಯವಹಾರ, ಕೈಗಾರಿಕೆ, ಕಾಫಿ ತೋಟಗಳು ಮುಂತಾದ ಕ್ಷೇತ್ರಗಳಲ್ಲಿ ಬಂಡವಾಳ ಹೂಡಿಕೆ ಪ್ರಾರಂಭಿಸಿದರು. ಈ ರೀತಿಯಾಗಿ ಹಿಡಿತ ಸ್ಥಾಪಿಸಿದ ಬ್ರಿಟಿಷರು ಇಲ್ಲಿ ರೂಪಿಸಿದ ಪ್ರಾಂತ್ಯಗಳು ಅವುಗಳ ವಿಸ್ತೀರ್ಣವಾಗಲೀ, ಭಾಷೆ ಅಥವಾ ಸಂಸ್ಕೃತಿಯಾಗಲೀ, ಆಡಳಿತದ ಅನುಕೂಲತೆಯಾಗಲೀ ಅಥವಾ ದೇಶದ ಐಕ್ಯತೆಯಾಗಲೀ, ಆಧಾರವಾಗಿದ್ದು ರಚನೆಯಾದದ್ದಲ್ಲವೆಂಬುದು ಸ್ಪಷ್ಟವಾಗಿದೆ. ಕೆಲವು ಬಹುಭಾಷಾ ಪ್ರಾಂತಗಳಾಗಿದ್ದವು. ಕೆಲವು ದೊಡ್ಡದಾಗಿಯೂ ಇನ್ನು ಅತಿ ಚಿಕ್ಕ ಪ್ರಾಂತಗಳಾಗಿಯೂ ಇದ್ದವು. ಈ ಪ್ರಾಂತಗಳನ್ನು ಬ್ರಿಟಿಷ್ ಸಾಮ್ರಾಜ್ಯಶಾಹಿಯು ತನ್ನ ಅನುಕೂಲಕ್ಕೆ ತಕ್ಕಂತೆ ಕೃತ್ರಿಮವಾಗಿ ರಚಿಸಿತ್ತೆಂಬುದು ಚರಿತ್ರೆ ಎತ್ತಿ ತೋರಿಸುತ್ತದೆ.

ಕನ್ನಡ ನಾಡು ಒಂದಾಗಬೇಕೆಂಬ ಹೋರಾಟ 1905 ರಲ್ಲಿ ಆರಂಭವಾಯಿತು. 1905 ರಲ್ಲಿ ಬಂಗಾಳದ ವಿಭಜನೆಯ ವಿರುದ್ಧ ನಡೆದ ಹೋರಾಟವೇ ಭಾಷಾವಾರು ಪ್ರಾಂತ ರಚನೆಯ ಬೇಡಿಕೆಗೆ ನಾಂದಿಯಾಯಿತು. ಬಂಗಾಳದ ಚಳುವಳಿಯ ಪರಿಣಾಮ ಕರ್ನಾಟಕದ ಜನತೆಯ ಮೇಲೂ ಆಯಿತು (ರಾಮರಾವ್ 1956: 3). ಏಕೀಕರಣ ಚಳುವಳಿಯ ಪಿತಾಮಹರಾದ ಆಲೂರು ವೆಂಕಟರಾಯರು ಉಲ್ಲೇಖಿಸುವಂತೆ : 1905 ರಿಂದ 1915 ರ ತನಕ, ಕನ್ನಡಿಗರೆಲ್ಲರ ಐಕ್ಯತೆಯನ್ನು ಸಾಧಿಸುವುದರ ಸಲುವಾಗಿ ನಾವು ಹಲವಾರು ಸಂಘ ಸಂಸ್ಥೆಗಳನ್ನು ಕಟ್ಟುವುದಕ್ಕೆ ಹೆಚ್ಚಿನ ಲಕ್ಷ್ಯ ಕೊಡಬೇಕಾಯಿತು. 1917

ರಲ್ಲಿ ಮಾಂಟೇಗು ಕ್ಲೆಂಫೋರ್ಡ್ ಸುಧಾರಣಾ ಸಮಿತಿ ಬಂತು. ಕರ್ನಾಟಕ ಏಕೀಕರಣವಾಗಬೇಕೆಂದು ನಾವು ಮೊದಲನೇ ಸಲ ಈ ಕಮಿಟಿಯ ಮುಂದೆ ಮನವಿ ಮಾಡಿಕೊಂಡೆವು. ನಮ್ಮ ಜೀವನದ ಕನಸಾದ ಐಕ್ಯ ಕರ್ನಾಟಕದ ಸಾಧನೆಯ ಚಳುವಳಿ ಅಂದಿನಿಂದ ಪ್ರಾರಂಭವಾಯಿತು

ಎಂದಿದ್ದಾರೆ. 1915 ರಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಸ್ಥಾಪನೆಯಾದಾಗಿನಿಂದ ಈ ಚಳವಳಿ ಹೆಚ್ಚಾಗಿ ಬೆಳೆಯಿತು. ಭಾರತದ ರಾಷ್ಟ್ರೀಯ ಹೋರಾಟದ ಅಂಗವಾಗಿಯೇ ಭಾಷಾವಾರು ಪ್ರಾಂತ ರಚನೆಯ ಹೋರಾಟವೂ ಬೆಳೆಯಿತು. 1920–21 ರಲ್ಲಿ ಅಸಹಕಾರ ಚಳುವಳಿ ನಡೆದಾಗ ಇದು ಬಲಗೊಂಡಿತು. ಪರಿಣಾಮವಾಗಿ ಭಾಷಾವಾರು ಆಧಾರದ ಮೇಲೆ ಕಾಂಗ್ರೆಸ್ ಪ್ರಾಂತ ಸಮಿತಿಗಳನ್ನು ರಚಿಸಿತು. ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಂಸ್ಥೆಯೂ ಆಗ ಸ್ಥಾಪನೆಯಾಯಿತು. 1928 ರಲ್ಲಿ ನೆಹರೂ ಸಮಿತಿಯು ಕರ್ನಾಟಕ ಪ್ರಾಂತವಾಗಬೇಕೆಂದು ಸ್ಪಷ್ಟವಾಗಿ ತಿಳಿಸಿತು. 1937 ರಲ್ಲಿ ಬೊಂಬಾಯಿ ಮತ್ತು ಮದ್ರಾಸ್ ಅಸೆಂಬ್ಲಿಗಳಲ್ಲಿ ಈ ಪ್ರಾಂತಗಳ ರಚನೆಯಾಗಬೇಕೆಂಬ ನಿರ್ಣಯಗಳಾದವು.

ಸ್ವಾತಂತ್ರ್ಯ ಪೂರ್ವದಲ್ಲಿ ಭಾಷಾವಾರು ಪ್ರಾಂತ್ಯಗಳ ಪರವಾಗಿದ್ದ ಕಾಂಗ್ರೆಸ್ ಸ್ವಾತಂತ್ರ್ಯ ಬಂದ ನಂತರ ತಾನೇ ಕೊಟ್ಟ ಆಶ್ವಾಸನೆಗಳನ್ನು ಮುರಿಯುತ್ತಾ ಬಂದಿತು. ಸಂವಿಧಾನ ರೂಪುಗೊಳ್ಳುತ್ತಿದ್ದ ಸಂದರ್ಭದಲ್ಲಿ ಭಾಷಾವಾರು ಪ್ರಾಂತಗಳ ರಚನೆಗೆ ಎಲ್ಲ ಕಡೆಗಳಿಂದಲೂ ಒತ್ತಾಯ ಬಂದರೂ ಕಾಂಗ್ರೆಸ್ ನಾಯಕತ್ವ ಒಪ್ಪಲಿಲ್ಲ. ಇಂತಹ ಸಂದರ್ಭದಲ್ಲಿ 1948 ರಲ್ಲಿ ಧರ್ ಸಮಿತಿಯ ನೇಮಕವಾಯಿತು.

ಮೈಸೂರು ಇತರ ಪ್ರದೇಶಗಳನ್ನು ಸೇರಿಸಿಕೊಳ್ಳಲು ತಯಾರಾಗಿದ್ದರೆ ಎಲ್ಲ ಪ್ರದೇಶಗಳನ್ನು ಒಟ್ಟು ಸೇರಿಸಿ ಪ್ರತ್ಯೇಕ ಪ್ರಾಂತ ರಚನೆ ಮಾಡಲು ಸಾಧ್ಯವಿತ್ತು. ಮೈಸೂರು ಸಂಸ್ಥಾನವು ಕರ್ನಾಟಕದಲ್ಲಿ ವಿಲೀನಗೊಳ್ಳಲು ತಯಾರಿಲ್ಲವೆಂದು ತೋರುವುದರಿಂದ ಕೇಂದ್ರದ ಭಾಗಗಳನ್ನು ಭಾರತೀಯ ಸಂಸ್ಥಾನದಲ್ಲಿ ಸೇರಿಸಲು ಕೇಂದ್ರ ಸರಕಾರ ತಯಾರಾಗಿದೆಯೇ ಎಂಬುದನ್ನು ನಾವು ಹೇಳಲು ಸಾಧ್ಯವಿಲ್ಲ

ಎಂದು 10–12–48 ರಲ್ಲಿ ಅದು ವರದಿ ಮಾಡಿತು. ಇದನ್ನು ಕನ್ನಡ ಜನತೆ ತೀವ್ರವಾಗಿ ಪ್ರತಿಭಟಿಸಿತು. ನಂತರ ಕಾಂಗ್ರೆಸ್ ಜವಹರಲಾಲ್ ನೆಹರೂ, ವಲ್ಲಭಾಯ್ ಪಟೇಲ್ ಮತ್ತು ಪಟ್ಟಾಭಿ ಸೀತಾರಾಮಯ್ಯ (ಜೆ.ವಿ.ಪಿ.) ಸಮಿತಿಯನ್ನು ನೇಮಿಸಿತು. ಈ ಸಮಿತಿಯೂ ಕರ್ನಾಟಕದ ಬೇಡಿಕೆಯನ್ನು ನಿರಾಕರಿಸಿತು. ಭಾಷಾವಾರು ಪ್ರಾಂತವು ರಚನೆಯಾಗಬೇಕೆಂದು ಒತ್ತಾಯಪಡಿಸುವುದಾದರೆ ಸಂಬಂಧಪಟ್ಟ ಪಕ್ಷಗಳು ಒಮ್ಮತಾಭಿಪ್ರಾಯಕ್ಕೆ ಬಂದರೆ ಮಾನ್ಯ ಮಾಡಬಹುದೆಂದು ಅದು ಅಭಿಪ್ರಾಯಪಟ್ಟಿತು. ಇದರ ಉದ್ದೇಶ ಮೈಸೂರು ಕಾಂಗ್ರೆಸ್ ನಾಯಕರನ್ನು ವಿರೋಧವಾಗಿ ಎತ್ತಿ ಕಟ್ಟುವುದಾಗಿತ್ತು. ಕರ್ನಾಟಕ ಕಾಂಗ್ರೆಸ್ ಸಮಿತಿಯು ಈ ವರದಿಯನ್ನು ಖಂಡಿಸಿದರೂ ನೇರವಾದ ಕ್ರಮವನ್ನು ತೆಗೆದುಕೊಳ್ಳಲು ನಿರಾಕರಿಸಿತು. ಜನತೆಯ ಒತ್ತಾಯದಿಂದ 3–12–1949 ರಂದು ಸಭೆ ಸೇರಿ ಕರ್ನಾಟಕದ ಪ್ರಾಂತ ಅಸೆಂಬ್ಲಿ ಮತ್ತು ಕೇಂದ್ರದ ಸದಸ್ಯರೆಲ್ಲರೂ ಕಾಂಗ್ರೆಸ್ ನಾಯಕರ ಅನುಮತಿ ಪಡೆದು ರಾಜೀನಾಮೆ ಕೊಡಬೇಕೆಂದು ಕರ್ನಾಟಕ ಕಾಂಗ್ರೆಸ್ ಸಮಿತಿ ತೀರ್ಮಾನ ಮಾಡಿತು. ಆದರೆ ಮೇಲಿನ ನಾಯಕರಿಗೆ ಹೆದರಿ

ನಿರ್ಣಯವನ್ನು ಜಾರಿಗೆ ತರಲೇ ಇಲ್ಲ. ಕಾಂಗ್ರೆಸ್ ರಾಜೀನಾಮೆಯ ನಾಟಕಆಡಿತು. ಕೇಂದ್ರ ಸರಕಾರದ ಧೋರಣೆಯಿಂದಲೂ, ಕರ್ನಾಟಕ ಕಾಂಗ್ರೆಸ್‌ನವರ ವರ್ತನೆಯಿಂದಲೂ ಕರ್ನಾಟಕದ ಹಲವಾರು ಕಾರ್ಯಕರ್ತರು ಬೇಸತ್ತು ಕಾಂಗ್ರೆಸ್ಸಿಗೇ ರಾಜೀನಾಮೆ ಕೊಟ್ಟು ಹೊರಗೆ ಬಂದರು ಮತ್ತು ಏಕೀಕರಣ ಪಕ್ಷವೆಂಬ ಹೊಸ ಪಕ್ಷವನ್ನು ಸ್ಥಾಪಿಸಿದರು.

ಇಂತಹ ಸಂದರ್ಭದಲ್ಲಿ, ಸ್ವಾತಂತ್ರ್ಯ ಪೂರ್ವದಿಂದಲೂ ಭಾರತ ಕಮ್ಯುನಿಸ್ಟ್ ಪಕ್ಷ ಭಾಷಾವಾರು ಪ್ರಾಂತ್ಯ ರಚನೆಯ ಪರವಾಗಿ ವಾದಿಸುತ್ತಿತ್ತು. ಹೀಗಾಗಿಯೇ 1951 ರಲ್ಲಿ ಉಳ್ಳಾಲದಲ್ಲಿ ಸೇರಿದ್ದ ಕಮ್ಯುನಿಸ್ಟ್ ಪಕ್ಷದ ರಾಜ್ಯ ಸಮ್ಮೇಳನದಲ್ಲಿ ಕರ್ನಾಟಕ ಏಕೀಕರಣಕ್ಕಾಗಿ ಚಳುವಳಿಯನ್ನು ನಡೆಸುವ ನಿರ್ಣಯವನ್ನು ಕೈಗೊಂಡಿತು. ಎಸ್.ಆರ್.ಭಟ್ ಬರೆದ **ಒಂದೇ ಕರ್ನಾಟಕ ಇಂದೇ ರಚನೆಯಾಗಲಿ** ಎಂಬ ಕಿರುಹೊತ್ತಿಗೆಯನ್ನು ಕಮ್ಯುನಿಸ್ಟ್ ಪಕ್ಷವು ಪ್ರಕಟಿಸಿತು (ಕಕ್ಕಿಲ್ಲಾಯ 2003: 218). ಕರ್ನಾಟಕಕ್ಕೆ ಸೇರಬೇಕಾದ ಕೆಲವು ಪ್ರದೇಶಗಳಿಗೆ ಸಂಬಂಧಿಸಿ ಆಗ ಕಮ್ಯುನಿಸ್ಟ್ ಪಕ್ಷದ ರಾಜ್ಯಸಭಾ ಸದಸ್ಯ ಬಿ.ವಿ.ಕಕ್ಕಿಲ್ಲಾಯ ಅವರು ಪಿ.ಸುಂದರಯ್ಯನವರ ಮೂಲಕ ಬಳ್ಳಾರಿ ಜಿಲ್ಲೆಯ ಕನ್ನಡ ಭಾಗಗಳಾದ ಕೊಳ್ಳೇಗಾಲ, ಕೋಲಾರ, ಚಿತ್ರದುರ್ಗ ಮತ್ತು ತುಮಕೂರು ಜಿಲ್ಲೆಗಳು ಪೂರ್ಣವಾಗಿ ಕರ್ನಾಟಕಕ್ಕೆ ಸೇರುವಂತೆ ಆಂಧ್ರದ ಸಂಸದರನ್ನು ಮನವೊಲಿಸಲು ಪ್ರಭಾವ ಬೀರಿದ್ದರು (ಕಕ್ಕಿಲ್ಲಾಯ 2003: 218). ರಾಜ್ಯದ ಎಲ್ಲಾ ಭಾಗಗಳಲ್ಲೂ ಕಮ್ಯುನಿಸ್ಟರು ಏಕೀಕರಣದ ಹೋರಾಟಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡರು. ಅಖಿಲ ಭಾರತ ಕಿಸಾನ್ ಸಭಾ ಭಾಷೆ ಆಧಾರದಲ್ಲಿ ಪ್ರಾಂತೀಯ ಕಿಸಾನ್ ಸಭಾ ಸಮಿತಿಗಳನ್ನು ರಚಿಸುವ ಬಗ್ಗೆ 1942 ರಲ್ಲೇ ಸ್ಪಷ್ಟವಾಗಿ ಹೇಳಿತ್ತು.

ರೈತ ಸಂಘದ ಪ್ರತ್ಯೇಕ ಪ್ರಾಂತೀಯ ಸಭಾಗಳನ್ನು ಆರಂಭಿಸಲು ಮೈಸೂರು ಒಂದು ದೊಡ್ಡ ರಾಜ್ಯವಾಗಿ ಅನುಕೂಲವಾಗಿದೆ. ನೆರೆಹೊರೆಯ ಪ್ರಾಂತಗಳಲ್ಲಿ ಮಾತನಾಡುವ ಒಂದೇ ಭಾಷೆಯ ಜನರನ್ನು ಭಾಷಿಕವಾಗಿ ವಿಭಾಗಿಸಿ ಇದರಲ್ಲಿ ಸೇರಿಸಿ ಸಭಾಗಳನ್ನು ರಚಿಸಬಹುದು ಎಂದಿತ್ತು[2].

1952 ರ ಚುನಾವಣೆಯಲ್ಲಿ ಪೂರ್ಣವಾಗಿ ಗೆದ್ದರೆ ತಾವು ಏಕೀಕರಣ ಮಾಡುತ್ತೇವೆಂದು ಹೇಳಿಕೊಂಡು ಕಾಂಗ್ರೆಸ್ ಮೈಸೂರಿನಲ್ಲಿ ಅಧಿಕಾರಕ್ಕೆ ಬಂದಿತು. ಆದರೆ ಜನವರಿ 1953 ರಲ್ಲಿ ನಡೆದ ಅಖಿಲ ಭಾರತ ಕಾಂಗ್ರೆಸ್ ಅಧಿವೇಶನವು ಭಾಷಾವಾರು ಪ್ರಾಂತಗಳ ರಚನೆಯ ವಿರುದ್ಧ ತೀರ್ಮಾನ ಮಾಡಿತು. ಗಾಯದ ಮೇಲೆ ಬರೆ ಎಳೆದಂತಹ ಪರಿಸ್ಥಿತಿ ನಿರ್ಮಾಣವಾಯಿತು. ಇದರ ವಿರುದ್ಧವಾಗಿ 1953 ರ ಮಾರ್ಚ್‌ನಲ್ಲಿ ಅದರಗುಂಚಿ ಶಂಕರಗೌಡರು ಆಮರಣಾಂತ ಉಪವಾಸ ಆರಂಭಿಸಿದರು. 1953 ರ ಏಪ್ರಿಲ್ 1[illegible] ರಂದು ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ (ಕೆ.ಪಿ.ಸಿ.ಸಿ.) ಸಭೆ ಹುಬ್ಬಳ್ಳಿಯಲ್ಲಿ ಸೇರಿತು. ಕಾಂಗ್ರೆಸ್ ನಾಯಕರು ರಾಜೀನಾಮೆ ಕೊಡಬೇಕೆಂದು 25 ಸಾವಿರಕ್ಕೂ ಹೆಚ್ಚು ಜನ ಆ ಸಭೆ ನಡೆಯುವಲ್ಲಿ ಪ್ರತಿಭಟನೆ ಮಾಡಿದರು. ಜನರನ್ನು ಎದುರಿಸಲಾಗದ ಕಾಂಗ್ರೆಸ್ ನಾಯಕರು ಪೊಲೀಸರನ್ನು ಬಳಸಿ ಗೋಲೀಬಾರು ನಡೆಸಿದರು. ಜನತೆಯ ಒತ್ತಡಕ್ಕೆ ಮಣಿದು 1954 ರೊಳಗೆ ರಾಜ್ಯ ರಚನೆ ಆಗದಿದ್ದರೆ ಕಾಂಗ್ರೆಸ್ ಶಾಸಕರು ರಾಜೀನಾಮೆ ಕೊಡುವುದೆಂದು ಕೆ.ಪಿ.ಸಿ.ಸಿ. ತೀರ್ಮಾನಿಸಿತು. 'ಹುಬ್ಬಳ್ಳಿ ಗಲಭೆ' ಎಂದು ಪ್ರಸಿದ್ಧವಾದ

ಪ್ರಕರಣದಲ್ಲಿ ಸ್ಥಾನಬದ್ಧತೆಯಡಿಯಲ್ಲಿ ಬಂಧಿತರಾದವರ ಪೈಕಿ ಎನ್.ಕೆ.ಉಪಾಧ್ಯಾಯ, ಎ.ಜೆ.ಮುಧೋಳ, ಬಿ.ಎನ್.ಧಾರವಾಡಕರ್, ಸಿದ್ದಪ್ಪ ಕಮ್ಮಾರ್, ಸಿ.ಜಿ.ಪಾಟೀಲ್, ಮುಲ್ಲಾ(ಕಕ್ಕಿಲ್ಲಾಯ 2003: 221) ಮತ್ತು ಬಿ.ಎನ್. ಮುನವಳ್ಳಿ(ಪ್ರಕಾಶ್ 2001: 9) ಮುಂತಾದ 13 ಜನ ಕಮ್ಯುನಿಸ್ಟ್ ನಾಯಕರಿದ್ದರು.

ಹೋರಾಟಕ್ಕೆ ಒಂದು ಸಂಘಟಿತ ರೂಪ ಕೊಡಲು ಹುಬ್ಬಳ್ಳಿಯ ಶ್ರೀ ಮಹದೇವಪ್ಪ ಮುರಗೋಡರ ಸಿದ್ಧಾಶ್ರಮದಲ್ಲಿ ಅಳವಂಡಿ ಶಿವಮೂರ್ತಿ ಸ್ವಾಮಿಗಳ ಅಧ್ಯಕ್ಷತೆಯಲ್ಲಿ ಸಭೆ ಸೇರಿ ತೀರ್ಮಾನಿಸಿದಂತೆ ದಾವಣಗೆರೆಯಲ್ಲಿ 1953 ಮೇ 28 ರಂದು ಸರ್ವಪಕ್ಷ ಸಮ್ಮೇಳನ ನಡೆಯಿತು. ಅದರಲ್ಲಿ ಕಾಂಗ್ರೆಸ್ ಭಾಗವಹಿಸಲಿಲ್ಲ. ಕಮ್ಯುನಿಸ್ಟ್ ಪಾರ್ಟಿ, ಪಿ.ಎಸ್.ಪಿ. ಮತ್ತು ಅನೇಕ ಸ್ವತಂತ್ರರು ಇದರಲ್ಲಿ ಭಾಗವಹಿಸಿ ಅಖಿಲಕರ್ನಾಟಕ ರಾಜ್ಯ ನಿರ್ಮಾಣ (ಅಕರಾನಿ) ಪರಿಷತ್ತನ್ನು ಸ್ಥಾಪಿಸಿದರು (ರಾಮರಾವ್ 1956: 3) ಈ ಸಮ್ಮೇಳನದಲ್ಲಿ ಎನ್.ಎಲ್.ಉಪಾಧ್ಯಾಯರ ನೇತೃತ್ವದಲ್ಲಿ ಕಮ್ಯುನಿಸ್ಟ್ ಪಕ್ಷದ ಒಂದು ದೊಡ್ಡ ತಂಡ ಬಿ.ವಿ.ಕಕ್ಕಿಲ್ಲಾಯ, ಎಂ.ಎಸ್.ರಾಮರಾವ್, ಸಿ.ಬಿ.ಮೊಣ್ಣಯ್ಯ, ಎನ್.ಕೆ.ಉಪಾಧ್ಯಾಯ, ಎಂ.ಎಸ್.ಕೃಷ್ಣನ್, ಎಂ.ಸಿ.ನರಸಿಂಹನ್, ಐ.ಮರಿದಾಸ್ ಮುಂತಾದವರು ಭಾಗವಹಿಸಿದ್ದರು. ಅಕರಾನಿ ಪರಿಷತ್ತಿಗೆ ಕಮ್ಯುನಿಸ್ಟ್ ಪಕ್ಷದ ಬಿ.ವಿ.ಕಕ್ಕಿಲ್ಲಾಯ ಅವರು ಕಾರ್ಯದರ್ಶಿಯಾದರು.

1953 ಸೆಪ್ಟೆಂಬರ್ ಮೊದಲ ವಾರದಲ್ಲಿ 'ಕರ್ನಾಟಕ ವಾರ' ಆಚರಿಸಲು ಅಕರಾನಿ ಪರಿಷತ್ತು ಕರೆ ನೀಡಿತು. ಬಿ.ವಿ.ಕಕ್ಕಿಲ್ಲಾಯರು ಮತ್ತು ಶಿವಮೂರ್ತಿ ಸ್ವಾಮಿಗಳೂ ಕೂಡಿ ಉತ್ತರ ಕರ್ನಾಟಕದ ಜಿಲ್ಲೆಗಳಲ್ಲಿ ನಡೆದ ಸಭೆಗಳಲ್ಲಿ ಭಾಗವಹಿಸಿ ಜಾಗೃತಿ ಮೂಡಿಸಿದರು. ಹೊಸಮನಿ ಸಿದ್ಧಪ್ಪ, ಚೆನ್ನಪ್ಪ ವಾಲಿ, ಬೆಂಕಿ ಸ್ವಾಮಿ, ಶಾಂತಿನಾಥ ಇಂಗಳೆ, ಡಿ.ಜಿ.ಮುಲ್ಲಾ, ಮಹದೇವಪ್ಪ ಮುರಗೋಡು, ಮುಂತಾದವರು (ಕಕ್ಕಿಲ್ಲಾಯ 2003: 224) ಬಿಜಾಪುರದಲ್ಲಿ ಎನ್.ಕೆ.ಉಪಾಧ್ಯಾಯ(ಉಪಾಧ್ಯಾಯ 1996: 58) ಮುಂತಾದ ಕಮ್ಯುನಿಸ್ಟರು ಸಕ್ರಿಯವಾಗಿ ಭಾಗವಹಿಸಿದರು. ಬಾಂಬೆ ಸರ್ಕಾರ ಮುಂಜಾಗ್ರತಾ ಕ್ರಮವಾಗಿ ಐದು ಸಾವಿರಕ್ಕೂ ಹೆಚ್ಚು ಹೋರಾಟಗಾರರನ್ನು ಬಂಧಿಸಿ ಹಿಂಡಲಗಾ, ಅಹಮದಾಬಾದ್, ನಾಸಿಕ್, ಯರವಾಡ ಮುಂತಾದ ಜೈಲುಗಳಲ್ಲಿಟ್ಟಿತು. ಬಂಧನಕ್ಕೆ ಒಳಗಾದವರಲ್ಲಿ ಹೆಚ್ಚಿನವರು ಕಮ್ಯುನಿಸ್ಟರಾಗಿದ್ದರು(ಗೋವಿಂದರಾಜು 2009: 61). ಮುರಾರ್ಜಿ ದೇಸಾಯಿ ಸರ್ಕಾರದ ಕಮ್ಯುನಿಸ್ಟ್ ವಿರೋಧಿ ನಿಲುವೂ ಇದಕ್ಕೆ ಕಾರಣವಾಗಿತ್ತು.

ಅಕರಾನಿ ಪರಿಷತ್ತಿನ ಎರಡನೆ ಸಮ್ಮೇಳನವು 1953 ಡಿಸೆಂಬರ್ 3 ರಂದು ಕೆ.ಆರ್.ಕಾರಂತರ ಅಧ್ಯಕ್ಷತೆಯಲ್ಲಿ ಹಂಪಿಯಲ್ಲಿ ಜರುಗಿತು. ಇದರಲ್ಲಿ ಶಿವಮೂರ್ತಿ ಸ್ವಾಮಿಗಳು ಕರ್ನಾಟಕ ಏಕೀಕರಣವಾಗುವಾಗ ಸೇರಿಸಬೇಕಾದ ಪ್ರದೇಶಗಳ ಬಗ್ಗೆ ತಮ್ಮ ಅಭಿಪ್ರಾಯ ಮಂಡಿಸಿದರು. ಬಿ.ವಿ.ಕಕ್ಕಿಲ್ಲಾಯರು ಕಮ್ಯುನಿಸ್ಟ್ ಪಕ್ಷದ ನಿಲುವುಗಳನ್ನು ಮಂಡಿಸಿದರು. ಅದರಲ್ಲಿ ಕಾಸರಗೋಡು ತಾಲೂಕಿನ ಕನ್ನಡ ಬಹುಸಂಖ್ಯಾತ ಗ್ರಾಮಗಳು ಸಹಿತ ಚಂದ್ರಗಿರಿ ನದಿಯ ಉತ್ತರ ಭಾಗಗಳು ಕರ್ನಾಟಕದಲ್ಲಿ ವಿಲೀನವಾಗಬೇಕು, ಕೇಂದ್ರಾಡಳಿತ ಪ್ರದೇಶ ಕೊಡಗು ಪೂರ್ತಿಯಾಗಿ ಕರ್ನಾಟಕಕ್ಕೆ ಸೇರಬೇಕು, ಬಳ್ಳಾರಿ ಜಿಲ್ಲೆಯ ಕನ್ನಡ ಮತ್ತು ತೆಲುಗು ಗಡಿಗಳ ನಿರ್ಧಾರವನ್ನು ಆಯೋಗಕ್ಕೆ ಬಿಡಬೇಕೆಂದು.

ಗ್ರಾಮಗಳನ್ನು ಘಟಕಗಳನ್ನಾಗಿ ಪರಿಗಣಿಸಿ ಭಾಷಾ ಬಾಂಧವ್ಯ ಮತ್ತು ಪ್ರಾದೇಶಿಕ ಹೊಂದಾಣಿಕೆಗಳ ದೃಷ್ಟಿಯಿಂದ ಗಡಿ ನಿರ್ಣಯವಾಗಬೇಕೆಂದು ಕಕ್ಕಿಲ್ಲಾಯರು ಹೇಳಿದರು. ಅದೇ ರೀತಿ ಮಹಾರಾಷ್ಟ್ರ-ಕರ್ನಾಟಕ ಮತ್ತು ಆಂಧ್ರ-ಕರ್ನಾಟಕ ಗಡಿಗಳನ್ನು ನಿರ್ಧರಿಸಬೇಕೆಂದು ತಿಳಿಸಿದರು. ಅಕರಾನಿ ಪರಿಷತ್ತಿನೊಳಗೆ ಇದಲ್ಲದೆ ಬೇರೆ ಕೆಲವು ಅಭಿಪ್ರಾಯಗಳೂ ಇದ್ದವು (ಕಕ್ಕಿಲ್ಲಾಯ 2003: 225) ಆದರೂ ಮುಂದೆ ರಚನೆಯಾಗಲಿದ್ದ ಆಯೋಗದ ಮುಂದೆ ಅಕರಾನಿ ನಿಲುವನ್ನು ಮಂಡಿಸಲು ಮನವಿಯನ್ನು ತಯಾರಿಸಲು ಶಿವಮೂರ್ತಿ ಸ್ವಾಮಿಗಳು, ಬಿ.ವಿ.ಕಕ್ಕಿಲ್ಲಾಯ ಮತ್ತು ಬಳ್ಳಾರಿ ವಕೀಲರಾದ ಸತ್ಯವಂತರಾವ್ ಇವರಿರುವ ಸಮಿತಿಯನ್ನು ರಚಿಸಲಾಯಿತು. ದೆಹಲಿಯ ಶಿವಮೂರ್ತಿ ಸ್ವಾಮಿಗಳ ನಿವಾಸದಲ್ಲಿ ಹಲವು ವಾರಗಳ ಕಾಲ ಅಧ್ಯಯನ ನಡೆಸಿ ಮನವಿಯನ್ನು ಸಿದ್ಧಪಡಿಸಿದರು. ಇದರ ಬೆರಳಚ್ಚನ್ನು ಕಮ್ಯುನಿಸ್ಟ್ ಪಕ್ಷದ ಸಂಸದೀಯ ಕಛೇರಿಯಲ್ಲಿ ಸಿದ್ಧಪಡಿಸಲಾಯಿತು.

ಹುಬ್ಬಳ್ಳಿ ಘಟನೆ, ಉಪ-ಚುನಾವಣೆಗಳ ಫಲಿತಾಂಶ ಮತ್ತು ಕಮ್ಯುನಿಸ್ಟರ ಹೆಚ್ಚಿದ ಚಟುವಟಿಕೆಗಳು ಸೇರಿದಂತೆ ಭಾಷಾವಾರು ರಾಜ್ಯಗಳ ರಚನೆಗೆ ಜನತೆಯ ಚಳುವಳಿಗಳು ತೀವ್ರವಾಗುತ್ತಿರುವುದನ್ನು ಕಂಡು ಕೇಂದ್ರದ ನೆಹರೂ ಸರ್ಕಾರ 1953 ಡಿಸೆಂಬರ್ 29 ರಂದು ಫಜಲ್ ಅಲಿ ಆಯೋಗವನ್ನು ನೇಮಿಸಿತು (ಗೋವಿಂದರಾಜು 2009: 61). ಅಕರಾನಿ ಪರಿಷತ್ತು ಮತ್ತು ಕಮ್ಯುನಿಸ್ಟ್ ಪಕ್ಷ ಪ್ರತ್ಯೇಕವಾಗಿ ಮನವಿಗಳನ್ನು ಅರ್ಪಿಸಿದವು. ಇಡೀ ಕಾರವಾರ ಜಿಲ್ಲೆ ಪೂರ್ಣವಾಗಿ, ಬೆಳಗಾಂ ನಗರ ಮತ್ತು ಅದಕ್ಕೆ ನೀರು ಪೂರೈಸುವ ಸ್ಥಳ ಕರ್ನಾಟಕದಲ್ಲಿ ಉಳಿಯಬೇಕು, ಕನ್ನಡ ಹೆಚ್ಚು ಮಾತನಾಡುವ ಗ್ರಾಮಗಳು ಕರ್ನಾಟಕಕ್ಕೆ ಸೇರಬೇಕು, ಮರಾಠಿ ಬಾಹುಳ್ಯವುಳ್ಳ ಮತ್ತು ಮಹಾರಾಷ್ಟ್ರಕ್ಕೆ ಅಂಟಿಕೊಂಡಿರುವ ಗ್ರಾಮೀಣ ಪ್ರದೇಶಗಳು ಮಹಾರಾಷ್ಟ್ರಕ್ಕೆ ಸೇರಿಸಬಹುದೆಂದು ಕಮ್ಯುನಿಸ್ಟ್ ಪಕ್ಷವು ಅಭಿಪ್ರಾಯಪಟ್ಟಿತು. ಈ ನಡುವೆ ರಾಜ್ಯದೊಳಗೆ ಏಕೀಕರಣದ ವಿಚಾರದಲ್ಲಿ ಎದ್ದು ಬಂದ ವಿಭಿನ್ನ ನಿಲುವುಗಳು ವಿಭಿನ್ನ ಪ್ರದೇಶಗಳ ಬಂಡವಾಳದಾರರು ಮತ್ತು ಜಮೀನ್ದಾರಿ ವರ್ಗಗಳ ಸ್ವ-ಹಿತಾಸಕ್ತಿಯ ಸಂಘರ್ಷಗಳ ಪ್ರತಿಬಿಂಬವಾಗಿತ್ತು. ಈ ಹಿನ್ನೆಲೆಯಲ್ಲಿ 1955 ಮೇ 9-12 ರಂದು ಮಡಿಕೇರಿಯಲ್ಲಿ ನಡೆದ ಕಮ್ಯುನಿಸ್ಟ್ ಪಾರ್ಟಿಯ ಕರ್ನಾಟಕ ಪ್ರಾಂತ ಸಮಿತಿ ಸಭೆಯು (ಅರುಣ 1955 ಮೇ 22: 5) ಕೆಳಕಂಡ ನಿರ್ಣಯವನ್ನು ಕೈಗೊಂಡಿತು.

ಇತ್ತೀಚೆಗೆ ನಡೆದ ಘಟನೆಗಳಿಂದ ಕರ್ನಾಟಕ ಏಕೀಕರಣದ ಬಗ್ಗೆ ಚಳುವಳಿಯು ಬಲಹೊಂದುತ್ತಿರುವುದು ಕಂಡು ಬರುತ್ತಿದೆ. ಆರು ಆಡಳಿತೆಗಳಲ್ಲಿ ಹರಿದು ಹಂಚಲ್ಪಟ್ಟಿರುವ ಕರ್ನಾಟಕವನ್ನು ಒಂದುಗೂಡಿಸಿ ಒಂದೇ ಪ್ರಾಂತೀಯ ಆಡಳಿತೆಯೊಳಗೆ ತರಬೇಕೆಂಬ ಕನ್ನಡಿಗರ ಬಯಕೆಗೆ ಹೆಚ್ಚು ಹೆಚ್ಚಿನ ಬೆಂಬಲವು ದೊರಕುತ್ತಿದೆ. ಅಖಂಡ ಕರ್ನಾಟಕ ಪ್ರಾಂತ ರಚನೆಯು ಈಗ ಅನಿವಾರ್ಯವಾಗಿದೆ.

ಆದರೆ ಕೆಲವು ಪ್ರತಿಗಾಮಿ ಸ್ವಾರ್ಥ ಸಾಧಕ ಗುಂಪುಗಳು ಕನ್ನಡಿಗರ ಈ ಮೂಲಭೂತವಾದ ಮತ್ತು ನ್ಯಾಯವಾದ ಬೇಡಿಕೆಯನ್ನು ವಿರೋಧಿಸುತ್ತವೆ. ಅನಾವಶ್ಯಕ ತಡಮಾಡುವ ಮತ್ತು ತೊಡಕು ಉಂಟುಮಾಡುವ ಕೇಂದ್ರ ಸರ್ಕಾರದ ಧೋರಣೆಯಿಂದ ಈ ಪ್ರತಿಗಾಮಿಗಳು ಧೈರ್ಯ ಹೊಂದಿ ಏಕೀಕರಣ ವಿರೋಧವಾಗಿ ಕೂಗೆಬ್ಬಿಸುತ್ತಾರೆ. ಮೈಸೂರು ಅಸೆಂಬ್ಲಿಯಲ್ಲಿ ಶೇಷಾದ್ರಿ ಸಮಿತಿಯ ವರದಿಯನ್ನು ಚರ್ಚಿಸುವಾಗ

ಬಹುಸಂಖ್ಯಾತ ಸದಸ್ಯರು ಕರ್ನಾಟಕ ಏಕೀಕರಣಕ್ಕೆ ಬೆಂಬಲ ನೀಡುತ್ತಾರಾದರೂ ಕೆಲವು ಸದಸ್ಯರು ಅದನ್ನು ತೀವ್ರವಾಗಿ ವಿರೋಧಿಸುತ್ತಾರೆ. ಕಾಂಗ್ರೆಸ್ ಪಕ್ಷದೊಳಗಿನ ಭಿನ್ನಾಭಿಪ್ರಾಯದ ಕಾರಣದಿಂದ ಅಸೆಂಬ್ಲಿಯಲ್ಲಿ ಯಾವುದೇ ಠರಾವು ಅಂಗೀಕರಿಸಲು ಸಾಧ್ಯವಾಗಲಿಲ್ಲ. ಇದು ಕನ್ನಡಿಗರನ್ನೆಲ್ಲಾ ದಂಗುಪಡಿಸಿದೆಯಲ್ಲದೆ, ಎರಡು ಕೋಟಿ ಕನ್ನಡಿಗರ ಹಿತಕ್ಕೆ ಸಂಬಂಧಿಸಿದ ವಿಷಯದಲ್ಲಿ ಕಾಂಗ್ರೆಸಿನ ಅಸಮರ್ಥತೆಯನ್ನು ಬಯಲು ಮಾಡಿದೆ.

ಕೊಡಗು ಕಾಂಗ್ರೆಸ್ ಸರ್ಕಾರವು ತನ್ನ ಹಳೆಯ ವಾಗ್ದಾನಗಳನ್ನು ಮುರಿದು ಕರ್ನಾಟಕ ಏಕೀಕರಣವನ್ನು ವಿರೋಧಿಸುತ್ತದೆ. ಕೊಡಗಿನಲ್ಲಿ ಪ್ರಬಲವಾಗಿರುವ ಬ್ರಿಟಿಷ್ ಪ್ಲಾಂಟರ್‌ಗಳನ್ನು ಪ್ರತಿಗಾಮಿಗಳಾದ ಪ್ರತ್ಯೇಕತಾವಾದಿಗಳನ್ನೂ ಕೆಲವು ರಾಜಕೀಯ ಸ್ವಾರ್ಥಪರರನ್ನೂ ತೃಪ್ತಿಪಡಿಸುವುದಕ್ಕೆ ಕೊಡಗಿನ ಸರಕಾರವು ಈ ಧೋರಣೆಯನ್ನು ವಹಿಸಿರುತ್ತದೆ. ಕೊಡಗಿನ ಜನತೆ ಕರ್ನಾಟಕದಲ್ಲಿ ಕೊಡಗು ಸೇರಬೇಕೆಂದು ಬಯಸುತ್ತದೆ ಎನ್ನುವುದು ನಿರ್ವಿವಾದವಾಗಿದೆ.

ಇದೇ ರೀತಿ ಬೇರೆ ಕೆಲವು ಕಡೆಗಳಲ್ಲಿ ಕರ್ನಾಟಕ ಏಕೀಕರಣವನ್ನು ಕೆಲವರು ವಿರೋಧಿಸುತ್ತಾರೆ. ಭಾರತ ಕಮ್ಯುನಿಸ್ಟ್ ಪಾರ್ಟಿಯ ಕರ್ನಾಟಕ ಸಮಿತಿಯು ಕನ್ನಡಿಗರ ಭಾಗಗಳನ್ನೆಲ್ಲಾ ಒಳಗೊಂಡಿರುವ ಅಖಂಡ ಕರ್ನಾಟಕ ಪ್ರಾಂತವನ್ನು ಕೂಡಲೇ ರಚಿಸಬೇಕೆಂಬ ಕೇಳಿಕೆಯನ್ನು ಮತ್ತೊಮ್ಮೆ ಘೋಷಿಸುತ್ತದೆ. ಪ್ರಾಂತಗಳ ಪುನರ್ವಿಂಗಡಣಾ ಸಮಿತಿಯ ವರದಿಯನ್ನು ಇದಿರು ನೋಡುತ್ತಾ, ಕೈಕಟ್ಟಿಕುಳಿತುಕೊಳ್ಳದೆ, ಕರ್ನಾಟಕ ಪ್ರಾಂತ ರಚನೆಯ ಕೇಳಿಕೆಯನ್ನು ಸಾಧಿಸಲು ಚಳವಳಿಯನ್ನು ಬಲಪಡಿಸಬೇಕೆಂದು ಕಮ್ಯುನಿಸ್ಟ್ ಪಾರ್ಟಿಯ ಕರ್ನಾಟಕ ಸಮಿತಿಯು ಕರ್ನಾಟಕದ ಜನರನ್ನೂ ಅವರ ಸಂಘಟನೆಗಳನ್ನೂ ಕೇಳಿಕೊಳ್ಳುತ್ತದೆ. ಇದು ಕನ್ನಡಿಗರ ರಾಜಕೀಯ, ಸಾಮಾಜಿಕ, ಆರ್ಥಿಕ ಮತ್ತು ಸಂಸ್ಕೃತಿಯ ಪ್ರಗತಿಗೆ ಅತ್ಯಾವಶ್ಯಕವಿದೆ. ಮುಂದಿನ ಚುನಾವಣೆಯು ಕರ್ನಾಟಕ ಅಸೆಂಬ್ಲಿಗೆ ಎಂಬ ಘೋಷಣೆಯ ತಳಹದಿಯಲ್ಲಿ ಬಲವಾದ ಮತ್ತು ವಿಶಾಲವಾದ ಚಳವಳಿಯನ್ನು ಬೆಳೆಸಲು ಕಮ್ಯುನಿಸ್ಟ್ ಪಾರ್ಟಿಯ ಕರೆ ಕೊಡುತ್ತದೆ.

ಕೊಡಗು ಪ್ರತ್ಯೇಕ ರಾಜ್ಯವಾಗಿಯೇ ಉಳಿಯಬೇಕೆಂಬ ವಾದಗಳಿಗೆ ವಿರುದ್ಧವಾಗಿ ಕಮ್ಯುನಿಸ್ಟ್ ಪಕ್ಷ ಸ್ಪಷ್ಟವಾದ ನಿಲುವನ್ನು ತೆಗೆದುಕೊಳ್ಳುತ್ತದೆ. ಕೊಡಗಿನ ಆರ್ಥಿಕ ಜೀವನವು ಉಳಿದ ಪ್ರದೇಶಗಳ ಆರ್ಥಿಕ ಜೀವನಕ್ಕಿಂತ ಮೇಲ್ಮಟ್ಟದ್ದೆಂದೂ, ಇದಕ್ಕೆ ಕೊಡಗು ಪ್ರತ್ಯೇಕವಾಗಿ ಉಳಿದದ್ದೇ ಕಾರಣವೆಂದೂ, ಅದರ ಸಾಂಸ್ಕೃತಿಕ ಭಿನ್ನತೆಯ ರಕ್ಷಣೆಗಾಗಿ ಮತ್ತು ಇತರ ಕೆಲವು ಕಾರಣಗಳಿಗಾಗಿ ಕೊಡಗು ಪ್ರತ್ಯೇಕವಾಗಿ ಉಳಿಯಬೇಕೆಂಬ ವಾದವು ಕೊಡಗಿನಲ್ಲಿತ್ತು. ಫಜಲ್ ಅಲಿ ಸಮಿತಿಗೆ ಕೊಡಗು ಕಮ್ಯುನಿಸ್ಟ್ ಪಾರ್ಟಿಯು ಅರ್ಪಿಸಿದ ಮನವಿಯಲ್ಲಿ ಕೊಡಗು ಸಮೇತವಾದ ಕರ್ನಾಟಕ ಕೂಡಲೇ ರಚಿಸಬೇಕೆಂದು ಒತ್ತಾಯಿಸಿತು. ಕೊಡಗು ಪ್ರತ್ಯೇಕವಾಗಿಯೇ ಉಳಿಯಬೇಕೆಂದು ಹೇಳುವ ಕೇಳಿಕೆಗಳನ್ನು ಈ ಮನವಿಯ ಖಂಡಿಸಿ ಈ ಕೇಳಿಕೆಯು ಸ್ಥಾಪಿತ ಹಕ್ಕುಳ್ಳವರ ಎಂದರೆ ಯೂರೋಪಿಯನ್ ಮತ್ತು ಹಿಂದೀ ಪ್ಲಾಂಟರುಗಳ ಜಮೀನ್ದಾರರುಗಳ ಕೇಳಿಕೆಯಾಗಿದೆ. 1951 ರ ಖಾನೆಶುಮಾರಿ ವರದಿಯು ಇಂತಹ ಕೇಳಿಕೆಯ ವಿರುದ್ಧವಾಗಿದೆ ಎಂದು ಅಂದಿನಿಂದಲೂ ಪ್ರತ್ಯೇಕತೆಯ ವಿರುದ್ಧ ಕಮ್ಯುನಿಸ್ಟ್ ಪಕ್ಷ ಧ್ವನಿಯೆತ್ತುತ್ತಲೇ ಬಂದಿರುವುದನ್ನು ಕಾಣಬಹುದು.

ಕನ್ನಡ ನಾಡು ಒಂದೇ ಆಗಬೇಕು. ಕನ್ನಡಿಗರು ಒಂದಾಗಬೇಕು ಎಂಬ ಈ ಕೇಳಿಕೆ ಎರಡು ಕೋಟಿ ಕನ್ನಡಿಗರ ಬಹು ಹಿಂದಿನ ಕೇಳಿಕೆಯಾಗಿದೆ. ......ಕನ್ನಡವು ಕೊಡಗಿನ ಬಹುಜನರ ಮಾತೃಭಾಷೆಯಾಗಿದೆ. ಸರಕಾರಿ ಭಾಷೆಯೂ ಕನ್ನಡವೇ ಆಗಿದೆ. ಕೊಡಗಿನಲ್ಲಿ ಶೇ.34 ಮಂದಿ ಕನ್ನಡವನ್ನು, ಶೇ.29 ಮಂದಿ ಕೊಡಗು ಭಾಷೆಯನ್ನೂ, ಶೇ.14 ಮಂದಿ ಮಲೆಯಾಳಿ ಭಾಷೆಯನ್ನೂ, ಶೇ.9.2 ಮಂದಿ ತುಳು ಭಾಷೆಯನ್ನೂ, ಶೇ.6 ತಮಿಳು ಭಾಷೆಯನ್ನೂ, ಶೇ.1.7 ತೆಲುಗು ಭಾಷೆಯನ್ನೂ, ಶೆ.0.1 ಇಂಗ್ಲಿಷ್ ಭಾಷೆಯನ್ನೂ, ಶೇ.4.7 ಮಂದಿ ಇತರ ಭಾಷೆಗಳನ್ನು ಆಡುವವರಿದ್ದಾರೆ.

ಇಲ್ಲಿನ ಜನಸಂಖ್ಯೆಯ ಸುಮಾರು ಶೇ.34 ರಷ್ಟು ಮಂದಿ ಸ್ವಂತ ಭೂಮಿಯುಳ್ಳ ರೈತರು, ಶೇ. 10 ಮಂದಿ ಬೇರೆಯವರ ಗದ್ದೆ ಬೇಸಾಯ ಮಾಡುವ ರೈತರು, ಶೇ.11 ಮಂದಿ ಬೇಸಾಯ ಕೂಲಿಗಾರರು, ಹೆಚ್ಚುಕಡಿಮೆ ಶೇ.3 ರಷ್ಟು ಮಂದಿ ಬೇಸಾಯ ಮಾಡದ ಜಮೀನ್ದಾರರು, ಶೇ.24 ಮಂದಿ ತೋಟ ಕೆಲಸಗಾರರು, ಶೇ.3 ಮಂದಿ ವ್ಯಾಪಾರವನ್ನು ಅವಲಂಬಿಸಿರುವವರು, ಶೆ.1 ರಷ್ಟು ಮಂದಿ ಟ್ರಾನ್ಸ್‌ಪೋರ್ಟ್ ಸರ್ವಿಸಿನಲ್ಲಿರುವವರು, ಮತ್ತುಳಿದ ಶೆ.14 ರಷ್ಟು ಮಂದಿ ಬೇರೆ ಬೇರೆ ವಹಿವಾಟಿನಲ್ಲಿರುವವರು ಆಗಿದ್ದಾರೆ.

ಮುಖ್ಯ ವ್ಯವಸಾಯ ಭತ್ತ. ಎರಡನೆಯದು ಕಾಫಿ. ಒಟ್ಟು 44,408 ಎಕ್ರೆಗಳಲ್ಲಿ ಕಾಫಿ ತೋಟಗಳಿವೆ. ಇದರಲ್ಲಿ ಶೇ.50 ರಷ್ಟು ತೋಟಗಳು 40 ಮಂದಿ ಯೂರೋಪಿಯನ್ನರ ಕೈಯೊಳಗಿದೆ. ಒಟ್ಟು 4371 ಕಾಫಿ ತೋಟಗಳು ಇಲ್ಲಿವೆ. ಈ ತೋಟಗಳಲ್ಲಿ ಶೇ.75 ರಷ್ಟು 5 ಎಕ್ರೆಗಳಿಗಿಂತ ಸಣ್ಣದಿರುವ ಒಟ್ಟು ಕಾಫಿ ಉತ್ಪಾದನೆಯ ಶೇ.10 ರಷ್ಟನ್ನು ಉತ್ಪಾದಿಸುವ ತೋಟಗಳಾಗಿವೆ. ಇವು 1951ರ ಖಾನೆಶುಮಾರಿ ವರದಿ. ಇದರಿಂದ ಕೊಡಗಿನ ಬಹುಸಂಖ್ಯಾಕ ಜನರು ವಿಪರೀತ ಬಡತನದಿಂದ ಬಳಲುತ್ತಿದ್ದಾರೆ ಎಂಬುದನ್ನು ಕಾಣಬಹುದು.

1941–42 ರ ತನಕ ಇಲ್ಲಿನ ಉತ್ಪತ್ತಿ ಸುಮಾರು 12 ಲಕ್ಷ ರೂ. ಆ ಬಳಿಕ ಯುದ್ಧದ ದೆಸೆಯಿಂದಾಗಿ 1948–49ಕ್ಕೆ ಈ ಉತ್ಪನ್ನ 39–40 ಲಕ್ಷಕ್ಕೇರಿತು. 1951 ರಲ್ಲಿ ಕೊಡಗನ್ನು 'ಸಿ' ಪ್ರಾಂತವಾಗಿ ಮಾಡಿದ ಕೂಡಲೇ ಪ್ರಾಂತದ ಕಾಡುಗಳ ಮೇಲೆ ಕಂಡಾಬಟ್ಟೆ ತೆರಿಗೆ ಹಾಕಿ ಈ ಆಯವನ್ನು 1 ಕೋಟಿಗೆ ಏರಿಸಲಾಯಿತು. ಇದರಲ್ಲಿ ಕೇಂದ್ರ ಸರಕಾರ ಕೊಡುವ ಸಹಾಯ–ಸಾಲಗಳಾದ 32 ಲಕ್ಷ ರೂ ಕೂಡಾ ಸೇರಿದೆ.

ಇದೀಗ ಕೊಡಗನ್ನು ಪ್ರತ್ಯೇಕ ಪ್ರಾಂತವೆಂದು ಹೇಳುವುದಾದರೂ ನಿಜಾರ್ಥದಲ್ಲಿ ಅದು ಬೇರೆ ಪ್ರಾಂತಗಳನ್ನು ಹೊಂದಿಕೊಳ್ಳಲೇಬೇಕಾಗಿದೆ. ಹೈಕೋರ್ಟು, ವಿಶ್ವವಿದ್ಯಾಲಯ, ಯಾಂತ್ರಿಕ ತಜ್ಞರ ಸಹಾಯಗಳಿಗಾಗಿ ಇತರ ಪ್ರಾಂತಗಳನ್ನು ಹೊಂದಿಕೊಂಡಿರಬೇಕಾಗಿದೆ. ಆ ನಂತರ ಬಂದ ಬ್ರಿಟಿಷರು, ಕೊಡಗಿನ ಯೂರೋಪಿಯನ್ ಪ್ಲಾಂಟರುಗಳ ಹಿತ ರಕ್ಷಣೆಗಾಗಿ ಕೊಡಗನ್ನು ಪ್ರತ್ಯೇಕ ಪ್ರಾಂತವಾಗಿ ಇರಿಸಿದರು. ಇವರ ಮನೋಭಾವ ಸ್ಥಳೀಯ ಕೆಲವರಲ್ಲೂ ಪ್ರತಿಧ್ವನಿಸಿ ಈ ಸ್ಥಾಪಿತ ಹಕ್ಕಿನ ಮನೋಭಾವ ಪ್ಲಾಂಟರುಗಳಲ್ಲೂ ಜಮೀನ್ದಾರರುಗಳಲ್ಲೂ ಬೆಳೆಯಿತು. ಈ ವರ್ಗ, ತಮ್ಮ 'ಗತ್ತನ್ನು' ಉಳಿಸಲಿಕ್ಕಾಗಿ, ತಮ್ಮ ಹಕ್ಕನ್ನು ಕಾಯಲಿಕ್ಕಾಗಿ ಪ್ರಾಂತದ ಬಹು ಸಂಖ್ಯಾತ ಬಡವರಿಗೆ ಬೆಲೆಯನ್ನೀಯಲು

ನಿರಾಕರಿಸುತ್ತಿವೆ. ಈಗಿದ್ದಂತೆಯೇ ಮುಂದೆಯೂ ಕೊಡಗು ಇರಬೇಕು ಎಂಬುದು ಇಲ್ಲಿನ ಯೂರೋಪಿಯನ್ ಪ್ಲಾಂಟರುಗಳ, ಹಿರಿ ದೇಶೀ ಪ್ಲಾಂಟರುಗಳ ಹಿತಾಸಕ್ತಿಯಾಗಿದೆ (ಅರುಣ 1955 ಜೂನ್ 19: 5)

ಪುನರ್ವಿಂಗಡಣಾ ಆಯೋಗಕ್ಕೆ ಏನೆಲ್ಲಾ ಮನವಿಗಳನ್ನು ಕೊಟ್ಟ ಮೇಲೂ ವರದಿ ಪ್ರಕಟಣೆ ನಿಧಾನವಾಗುತ್ತಿರುವುದರ ವಿರುದ್ಧ ಸಿಪಿಐನ ಕೇಂದ್ರ ಸಮಿತಿ ಆಕ್ಷೇಪವನ್ನು ಪ್ರಕಟಿಸಿತು[3]. ರಾಜ್ಯ ಪುನರ್ವಿಂಗಡಣಾ ಆಯೋಗವು, ಭಾಷಿಕವಾಗಿ ಮತ್ತು ಸಾಂಸ್ಕೃತಿಕವಾಗಿ ಅನುರೂಪವಾಗಿದ್ದು ನಿರಂತರವಾಗಿರುವ ಭೌಗೋಳಿಕ ಪ್ರದೇಶಗಳನ್ನು ಒಟ್ಟುಗೂಡಿಸುವ ಸರ್ವಸಮ್ಮತವಾದ ತತ್ವದ ಬದಲಿಗೆ, ಹಣಕಾಸಿನ ಮತ್ತು ಆಡಳಿತಾತ್ಮಕ ಅನಾನುಕೂಲತೆಗಳನ್ನು ಮುಂದು ಮಾಡಿ ರಾಷ್ಟ್ರೀಯ ಐಕ್ಯತೆ ಮತ್ತು ರಕ್ಷಣೆಯ ನೆಪದಲ್ಲಿ ಮುಂದೂಡುತ್ತಿದೆ. ಇದು ಕೆಲವು ಪ್ರದೇಶಗಳಲ್ಲಾದರೂ ರಾಜ್ಯ ರಚನೆಯನ್ನು ಮುಂದೂಡಲು ನೆಪವಾಗಿದೆ. ಸೆಪ್ಟೆಂಬರ್ 1954 ಕ್ಕಿಂತ ನಿಧಾನವಾಗದ ಹಾಗೆ ಮಧ್ಯಂತರ ವರದಿಯನ್ನು ಒಪ್ಪಿಸಬೇಕೆಂದು ಮತ್ತು ಈ ತತ್ವದ ಆಧಾರದಲ್ಲಿ ಒಟ್ಟು 20 ರಾಜ್ಯಗಳನ್ನು ರಚಿಸಬಹುದೆಂದು ಬಗ್ಗೆ ಕಮ್ಯುನಿಸ್ಟ್ ಪಾರ್ಟಿಯು ಒತ್ತಾಯಿಸಿತು. 'ತೆಲುಗು ಮಾತನಾಡುವ ಪ್ರದೇಶಗಳನ್ನು ಹೊರತುಪಡಿಸಿ ಪ್ರಸಕ್ತ ಮೈಸೂರು ರಾಜ್ಯ, ಜೊತೆಗೆ ಕನ್ನಡ ಮಾತನಾಡುವ ಮದ್ರಾಸ್, ಹೈದರಾಬಾದ್, ಬಾಂಬೆ ಮತ್ತು ಆಂಧ್ರ ರಾಜ್ಯಗಳ ಪ್ರದೇಶಗಳು ಮತ್ತು ಕೊಡಗು'ನ್ನು ಒಳಗೊಂಡು ಕರ್ನಾಟಕದ ರಾಜ್ಯ ರಚನೆಗೆ ಸಿಪಿಐ ಒತ್ತಾಯ ಮಾಡಿತು[4]. ಕಾಂಗ್ರೆಸ್‌ನ ಏರುಪೇರಿನ ನಿಲುವುಗಳ ಹಿನ್ನೆಲೆಯಲ್ಲಿ ಮುಂದೆ ಸಂಭವಿಸಬಹುದಾದ ಅನಾಹುತಗಳನ್ನು ಮನಗಂಡು, ಮುಖ್ಯವಾಗಿ ಗಡಿ ರೇಖೆಗಳನ್ನು ತೀರ್ಮಾನಿಸುವಾಗ ಅನುಸರಿಸಬೇಕಾದ ತತ್ವಗಳನ್ನೂ ಅದು ಪ್ರತಿಪಾದಿಸಿತು. ಸಿಪಿಐ ಪ್ರತಿಪಾದಿಸಿದ ಬಹುಶಃ ಇಂದಿಗೂ ಸೂಕ್ತವಾದ ತತ್ವಗಳು ಈ ರೀತಿಯಿದ್ದವು.

1. ಗ್ರಾಮವನ್ನು ಘಟಕವನ್ನಾಗಿ ಪರಿಗಣಿಸಬೇಕು. ಇದನ್ನು ಆ ಗ್ರಾಮದಲ್ಲಿ ಬಹುಸಂಖ್ಯಾತ ಜನರು ಮಾತನಾಡುವ ನಿರ್ದಿಷ್ಟ ಭಾಷೆಯ ಮತ್ತು ಆ ಗ್ರಾಮವು ನಿರ್ದಿಷ್ಟ ಭಾಷಾ ರಾಜ್ಯಕ್ಕೆ ನಿರಂತರವಾಗಿರುವ ಆಧಾರದಲ್ಲಿ ಇದನ್ನು ತೀರ್ಮಾನಿಸಬೇಕು.

2. ಗಡಿ ರೇಖೆಯನ್ನು ಎಷ್ಟೇ ಎಚ್ಚರಿಕೆಯಿಂದ ಗುರುತಿಸಿದರೂ, ಈ ಗಡಿಯ ಎರಡೂ ಬದಿಗಿನ ಪ್ರದೇಶಗಳು ಮತ್ತು ಪ್ರತಿಯೊಂದು ರಾಜ್ಯದ ಒಳಗೆ ಭಾಷಾ ಅಲ್ಪಸಂಖ್ಯಾತರು ಉಳಿಯುತ್ತಾರೆ ಎಂಬುದನ್ನು ಅರ್ಥಮಾಡಿಕೊಳ್ಳಬೇಕು. ಇವರಿಗೆ ಪ್ರಾಥಮಿಕ ಮತ್ತು ಪ್ರೌಢ ಹಂತಗಳ ಶಿಕ್ಷಣವನ್ನು ಅವರ ಮಾತೃಭಾಷೆಯಲ್ಲಿ ನೀಡುವುದನ್ನು ಖಾತ್ರಿಗೊಳಿಸಬೇಕು. ಕಾಲೇಜು ಶಿಕ್ಷಣವನ್ನೂ ಅವರ ಮಾತೃಭಾಷೆಯಲ್ಲೇ ನೀಡಬೇಕೆನ್ನುವ ಪ್ರಶ್ನೆಗೆ ಸಂಬಂಧಿಸಿದಂತೆ, ಎಲ್ಲಿಯವರೆಗೆ ಮತ್ತು ಯಾವ ಪ್ರಾಯೋಗಿಕ ಪರಿಸ್ಥಿತಿಗಳಲ್ಲಿ ಎಂಬುದನ್ನು ತೀರ್ಮಾನಿಸಲು ಸಂಬಂಧಿಸಿದ ರಾಜ್ಯಗಳಿಗೆ ಬಿಡಬೇಕು. ಆಗ ಮಾತ್ರ ಈ ಗಡಿ ಪ್ರದೇಶಗಳು, ಅನೈಕ್ಯತೆ ಮತ್ತು ವೈಷಮ್ಯದ ಕೇಂದ್ರಗಳಾಗದೆ, ಭಾಷಾವಾರು ರಾಜ್ಯಗಳ ನಡುವೆ ಪರಸ್ಪರ ಬಾಂಧವ್ಯದ ಕೇಂದ್ರಗಳಾಗುತ್ತವೆ.

3. ಗಡಿಗಳನ್ನು ಗುರುತಿಸುವಾಗ ಅದರೊಳಗೆ ಆದಿವಾಸಿ (ಬುಡಕಟ್ಟು) ಪ್ರದೇಶಗಳಿರಬಹುದು. ಒಂದು ನಿರ್ದಿಷ್ಟ ವಿಶಿಷ್ಟ ಬುಡಕಟ್ಟು ವಾಸಿಸುವ ಬುಡಕಟ್ಟು

ಪ್ರದೇಶವನ್ನು, ಯಾವುದಾದರೂ ಒಂದು ಭಾಷಾ ರಾಜ್ಯಕ್ಕೆ, ಅದು ಯಾವ ನೆರೆ ರಾಜ್ಯದೊಡನೆ ತನ್ನ ಸಾಂಸ್ಕೃತಿಕ ಮತ್ತು ಭಾಷಿಕ ಸಾಮ್ಯತೆಯನ್ನು ಹೊಂದಿದೆಯೋ ಅದರೊಂದಿಗೆ, ಹಾಗೆಯೇ ಯಾವ ರಾಜ್ಯದೊಂದಿಗೆ ಅದರ ಆರ್ಥಿಕ ಬೆಳವಣಿಗೆ ಹೆಚ್ಚು ಸಾಮೀಪ್ಯವಾಗಿದೆಯೋ ಮತ್ತು ಹೆಚ್ಚು ಸಹಜವಾಗಿ ಬೆಳೆಯಬಹುದೋ ಅದರೊಂದಿಗೆ ಜೋಡಿಸಬೇಕು.

ವಿಪರೀತ ಸಣ್ಣ ವಿವರಗಳ ಬಗ್ಗೆ ತಮ್ಮ ಶಕ್ತಿಯನ್ನು ವ್ಯಯ ಮಾಡದೆ, ಈ ತತ್ವಗಳ ಆಧಾರದಲ್ಲಿ ರಾಜ್ಯಗಳ ರಚನೆಗೆ ಚಳುವಳಿಗಳನ್ನು ತೀವ್ರಗೊಳಿಸಲು ಸಿಪಿಐ ಕರೆ ನೀಡಿತು. ಒಮ್ಮೆ ರಾಜ್ಯ ರಚನೆಯಾದರೆ ಲಭ್ಯವಿರುವ ಜನಗಣತಿಗಳ ಆಧಾರದಲ್ಲಿ ಸಮಸ್ಯೆಗಳನ್ನು ಇತ್ಯರ್ಥ ಮಾಡಿಕೊಳ್ಳಬಹುದು ಎನ್ನುತ್ತಾ, ಮೇಲಿನ ತತ್ವಗಳ ಆಧಾರದಲ್ಲಿ ವಿವಾದಿತ ಪ್ರದೇಶಗಳ ಕುರಿತು ಪರಸ್ಪರ ಚರ್ಚಿಸಿ ಒಪ್ಪಂದಕ್ಕೆ ಬರಲು ತನ್ನ ಪ್ರಾಂತೀಯ ಸಮಿತಿಗಳಿಗೆ ಕರೆ ನೀಡಿತು[5]. ಸಿಪಿಐ ಕೇಂದ್ರ ಸಮಿತಿಯು ತಾನು ಅಂಗೀಕರಿಸಿದ ಈ ನಿಲುವುಗಳ ಆಧಾರದಲ್ಲಿ ವಿವರವಾದ ಮನವಿಯನ್ನು ರಾಜ್ಯಗಳ ಪುನರ್ವಿಂಗಡಣಾ ಆಯೋಗಕ್ಕೆ ಸಲ್ಲಿಸಿತು[6]. 1948 ರಲ್ಲಿ ರಚನೆಯಾಗಿದ್ದ ಜೆವಿಪಿ ಸಮಿತಿ ಭಾಷಾವಾರು ರಾಜ್ಯ ರಚನೆಗೆ ವಿರೋಧ ವ್ಯಕ್ತಪಡಿಸಿತ್ತು. ಆದರೆ ಅದು ತನ್ನ ವರದಿಯಲ್ಲಿ ವ್ಯಾಪಕವಾದ ಜನಾಭಿಪ್ರಾಯವಿದ್ದರೆ ಒಂದು ಪ್ರಜಾಪ್ರಭುತ್ವ ಸರ್ಕಾರ ಅದಕ್ಕೆ ತಲೆಬಾಗಬೇಕು ಎಂದಿತ್ತು. ಜೊತೆಗೆ 'ಈ ಕೆಲವು ಭಾಷಿಕ ಪ್ರದೇಶಗಳು, ಮುಖ್ಯವಾಗಿ ಕೇರಳ ಮತ್ತು ಕರ್ನಾಟಕಗಳು, ನಿಜವಾಗಿ ಹೇಳಬೇಕೆಂದರೆ ದೊಡ್ಡ ಬಹು-ಭಾಷಿಕ ಸಂಸ್ಥಾನಗಳ ಜೊತೆಗಿನ ತಮ್ಮ ಸಂಯೋಗದಿಂದಾಗ ಹಿಂದೆ ನಷ್ಟ ಅನುಭವಿಸಿವೆ' ಎಂದೂ ಆ ವರದಿಯಲ್ಲಿ ಹೇಳಿದ್ದನ್ನು ಸಿಪಿಐ ತನ್ನ ಮನವಿಯಲ್ಲಿ ಪ್ರಸ್ತಾಪಿಸಿತು[7].

ಅಂತಿಮವಾಗಿ ಜನತೆಯ ಹೋರಾಟದ ಪರಿಣಾಮವಾಗಿ ರಾಜ್ಯ ಪುನರ್ವಿಂಗಡಣಾ ಆಯೋಗ ನವೆಂಬರ್ 1955 ರಲ್ಲಿ ವರದಿ ಪ್ರಕಟಿಸಿತು. ಅದರಲ್ಲಿ ಕರ್ನಾಟಕ ಪ್ರಾಂತ ರಚನೆಗೆ ಪುರಸ್ಕಾರ ಸಿಕ್ಕಿತ್ತು. ಆದರೆ ಅದರಲ್ಲಿ ಬಳ್ಳಾರಿ ಜಿಲ್ಲೆಯ ಕೆಲವು ಪ್ರದೇಶಗಳನ್ನು ಆಂಧ್ರಕ್ಕೆ ಸೇರಿಸಬೇಕೆಂದೂ ಕಾಸರಗೋಡು ತಾಲೂಕನ್ನು ಕೇರಳಕ್ಕೆ ಸೇರಿಸಬೇಕೆಂದೂ ಶಿಫಾರಸ್ಸು ಮಾಡಲಾಗಿತ್ತು. ಅದನ್ನು ಪ್ರತಿಭಟಿಸಿ ಜನತೆ ಹೋರಾಡಬೇಕಾಯಿತು. ಸಾವಿರಾರು ಜನ ಬಳ್ಳಾರಿ ಮತ್ತು ಕಾಸರಗೋಡಿನಲ್ಲಿ ಜೈಲಿಗೆ ಹೋದರು. ಹರತಾಳಗಳಾದವು. ಬಳ್ಳಾರಿಯಲ್ಲಿ ಜಯ ದೊರೆಯಿತು. ಕಾಸರಗೋಡು ಕೇರಳಕ್ಕೆ ಸೇರಿಸಲ್ಪಟ್ಟಿತು. ಕಾಸರಗೋಡಿನ ವಿಚಾರದಲ್ಲಿ 1957 ರಲ್ಲಿ ಕೇರಳದಲ್ಲಿ ಕಮ್ಯುನಿಸ್ಟ್ ಸರ್ಕಾರವಿದ್ದಾಗ, ಸಿಪಿಐನ ರಾಷ್ಟ್ರೀಯ ನಿಲುವಿನ ಆಧಾರದಲ್ಲಿ ಚರ್ಚಿಸಲು ಅವಕಾಶಗಳಿದ್ದವು. ಅಂದರೆ, ಗ್ರಾಮಗಳನ್ನು ಆಧಾರವಾಗಿಟ್ಟುಕೊಂಡ ಗಡಿ ರೇಖೆ ನಿರ್ಣಯ ವಿಧಾನ ಚಾಲ್ತಿಗೆ ಬಂದಿದ್ದರೆ ಕನ್ನಡಿಗರ ಕಾಸರಗೋಡಿನ ಕನಸು ಸಾಕಾರಗೊಳ್ಳಲು ಹೆಚ್ಚು ಸಾಧ್ಯತೆಗಳಿದ್ದವು.

ಏಕೀಕರಣ ಚಳುವಳಿಯು ಕಾಂಗ್ರೆಸ್ ಸರಕಾರದ ವಿರುದ್ಧ ಹೋರಾಡಿದ್ದಲ್ಲದೆ ಕೊಡಗು ಮತ್ತು ಮೈಸೂರು ಪ್ರದೇಶಗಳಲ್ಲಿ ತಲೆಯೆತ್ತಿದ 'ಎರಡು ಕರ್ನಾಟಕದ ಅಪಸ್ವರ'ವನ್ನೂ ಎದುರಿಸಬೇಕಾಯಿತು. ಹಿಂದೆ ಕರ್ನಾಟಕಕ್ಕೆ ಬೆಂಬಲ ಕೊಟ್ಟಿದ್ದ ಈ ನಾಯಕರುಗಳು ಅಧಿಕಾರಕ್ಕೆ ಬಂದ ಮೇಲೆ ತಮ್ಮ ಸ್ವಾರ್ಥ ದೃಷ್ಟಿಯಿಂದ ಏಕೀಕರಣವನ್ನು ವಿರೋಧಿಸಿದರು.

ಒಂದೇ ಕರ್ನಾಟಕವಾದರೆ ಮೈಸೂರು 'ವೈಶಿಷ್ಟ್ಯ' ಹೋಗುವುದೆಂಬ ಹುಯಿಲೆಬ್ಬಿಸಿದರು. ಈ ನಡುವೆ ಪಾರ್ಲಿಮೆಂಟಿನಲ್ಲಿ ಪ್ರಾಂತ ಪುನರ್ವಿಂಗಡಣೆಯ ಚರ್ಚೆ ಮುಗಿಯುವ ಮುಂಚೆಯೇ ಬಹು ಭಾಷಾ ಪ್ರಾಂತ ರಚನೆಯನ್ನು ಜನತೆಯ ಮೇಲೆ ಹೊರಿಸುವ ಪ್ರಯತ್ನವನ್ನು ಕಾಂಗ್ರೆಸ್ ವರ್ಕಿಂಗ್ ಕಮಿಟಿ ಮತ್ತು ಕಾಂಗ್ರೆಸ್ ಸರ್ಕಾರ ಮಾಡುತ್ತಿತ್ತು. ಕೇರಳ-ಕರ್ನಾಟಕಗಳ ಅಥವಾ ಕರ್ನಾಟಕ-ಆಂಧ್ರಗಳನ್ನೊಳಗೊಂಡ 'ದಕ್ಷಿಣ ಪ್ರದೇಶ'ಮತ್ತು 'ಪಶ್ಚಿಮ ಪ್ರದೇಶ'ಗಳ ರಚನೆಗೆ ಪ್ರಯತ್ನ ನಡೆಯಿತು[8]. ಮೈಸೂರು ವಿಧಾನಸಭೆಯಲ್ಲಿ ಹನುಮಂತಯ್ಯನವರು ಇದರ ಪರವಾಗಿ ಠರಾವನ್ನು ಅಂಗೀಕರಿಸಿ ಬಹುಭಾಷಾ ಪ್ರಾಂತ್ಯಕ್ಕೆ ಬೆಂಬಲಕೊಟ್ಟರು. ಒಂದೇ ಕರ್ನಾಟಕವಾದರೆ ಮೈಸೂರಿನ ವೈಶಿಷ್ಟ್ಯ ಹೋಗುವುದೆಂದವರು ದಕ್ಷಿಣ ಪ್ರಾಂತವಾದರೆ ಮೈಸೂರಿನ ವೈಶಿಷ್ಟ್ಯ ಹೇಗೆ ಉಳಿಸಿಕೊಳ್ಳುತ್ತಾರೆಂಬುದನ್ನು ವಿವರಿಸಲು ವಿಫಲವಾದರು. ಶಾಸನಸಭೆಯಲ್ಲಿ ಕಮ್ಯುನಿಸ್ಟ್ ಶಾಸಕರಾಗಿದ್ದ ಕೆ.ಎಸ್.ವಾಸನ್ ಇದನ್ನು ವಿರೋಧಿಸಿದರು. ಈ ಗಂಡಾಂತರವನ್ನು ವಿರೋಧಿಸಿ ಕಮ್ಯುನಿಸ್ಟ್ ಪಾರ್ಟಿ 1956 ರ ಮಾರ್ಚ್ 18 ರಂದು ಪ್ರಾಂತ್ಯದಾದ್ಯಂತ 'ದಕ್ಷಿಣ ಪ್ರಾಂತ ಪ್ರತಿಭಟನಾ ದಿನಾಚರಣೆ'ಯನ್ನು ಆಚರಿಸಿತು(ಅರುಣ 1956 ಎಪ್ರಿಲ್ 8). ಹೀಗೆ ಪ್ರತಿ ಹೆಜ್ಜೆಗೂ ಜನತೆ ಕರ್ನಾಟಕ ಏಕೀಕರಣಕ್ಕಾಗಿ ಕಾಂಗ್ರೆಸ್ ವಿರುದ್ಧ ಹೋರಾಡಬೇಕಾಯಿತು. ಇದರಲ್ಲಿ ಕಮ್ಯುನಿಸ್ಟ್ ಪಾರ್ಟಿ ತತ್ವಬದ್ಧವಾದ ಹೋರಾಟವನ್ನು ನಡೆಸಿತು.

ಅಂತೂ ಕೊನೆಗೆ ಜನತೆಯ ಆಶೋತ್ತರಗಳು ಕೈಗೂಡಿ 1956 ನವೆಂಬರ್ 1 ರಂದು ಕರ್ನಾಟಕದ ಏಕೀಕರಣವಾಯಿತು. ನಿಜಲಿಂಗಪ್ಪನವರು ಪ್ರಥಮ ಮುಖ್ಯಮಂತ್ರಿಯಾದರು. ಈ ಬಗ್ಗೆ ಸಿಪಿಐ ಈ ರೀತಿಯಾಗಿ ತನ್ನ ಅಭಿಪ್ರಾಯವನ್ನು ವ್ಯಕ್ತಪಡಿಸಿತು(ರಾಮರಾವ್ 1956: 4).

ಕನ್ನಡಿಗರ ಬಹು ದಿನದ ಬಯಕೆಯಾದ ಕನ್ನಡ ನಾಡಿನ ಆಡಳಿತೆಯನ್ನು ಸುಸೂತ್ರವಾಗಿ ನಡೆಸಿಕೊಂಡು ಹೋಗುವ ಜವಾಬ್ದಾರಿ ನಿಜಲಿಂಗಪ್ಪನವರ ಮೇಲಿದೆ. ಪ್ರಾಂತದ ಪುನರ್ಘಟನೆಯಿಂದ ಉದ್ಭವಿಸುವ ಸಮಸ್ಯೆಗಳನ್ನು ವಿಶಾಲ ದೃಷ್ಟಿಯಿಂದ ಬಗೆಹರಿಸಬೇಕಿದೆ. ಪಕ್ಷದ ಸಂಕುಚಿತ ಮನೋಭಾವವನ್ನು ಬಿಟ್ಟು ನಾಡಿನ ಎಲ್ಲಾ ಪ್ರಜಾಪ್ರಭುತ್ವ ಪಕ್ಷಗಳ, ಶಕ್ತಿಗಳ ಹಾಗೂ ಜನತೆಯ ಬೆಂಬಲವನ್ನು ಪಡೆದುಕೊಂಡಲ್ಲಿ, ನಾಡಿನ ಮುಂದಿರುವ ಗುರುತರ ಜವಾಬ್ದಾರಿಯನ್ನು ನಿರ್ವಹಿಸಲು ಸಾಧ್ಯವಿದೆ. ಈಗ ವಿಶಾಲ ಮೈಸೂರಿಗೆ ಸೇರುವ 5 ಭಾಗಗಳಲ್ಲೂ ಗೇಣಿ ಶಾಸನ, ಕಾರ್ಮಿಕ ಶಾಸನ ಮೊದಲಾದ ಜನತಾ ಹಿತ ಶಾಸನಗಳು ಭಿನ್ನಭಿನ್ನವಾಗಿವೆ. ಮುಂದುವರಿದ ಬೊಂಬಾಯಿ ಗೇಣಿ ಶಾಸನವನ್ನು ವಿಶಾಲ ಮೈಸೂರಿನ ಎಲ್ಲಾ ಭಾಗಗಳಿಗೆ ಅನ್ವಯಿಸುವಂತೆ ಮಾಡಬೇಕು. ಸರ್ಕಾರಿ ನೌಕರರಿಗೆ ಈ ಕೂಡಲೇ ಬೊಂಬಾಯಿನ ಸಂಬಳ ಸಾರಿಗೆ ಅನ್ವಯಿಸುವಂತೆ ಆಗಬೇಕು. ಕರ್ನಾಟಕ ಪ್ರಾಂತದಲ್ಲಿರುವ ಅಪಾರ ಸಂಪತ್ತನ್ನು ಸರಿಯಾಗಿ ಬಳಸಿಕೊಂಡು, ನಾಡನ್ನು ಸಮೃದ್ಧವಾಗಿ ಮುನ್ನಡೆಸಿಕೊಂಡು ಹೋಗಬೇಕು.

ನೂತನ ಪ್ರಾಂತದ ಮುಖ್ಯಮಂತ್ರಿಗಳ ಸ್ಥಾನಕ್ಕೆ ಕರ್ನಾಟಕ ಪ್ರಾಂತ ಸ್ಥಾಪನೆಗೆ ವಿರೋಧಿಗಳ ಆಯ್ಕೆಯಾಗದಿದ್ದುದು ಸ್ವಾಗತಾರ್ಹವಾದ ಅಂಶ. ಆದರೆ ಕಾಂಗ್ರೆಸಿನೊಳಗೂ

ಮತ್ತು ಹೊರಗೂ ಇರುವ ಏಕೀಕರಣ ವಿರೋಧಿಗಳು, ಪ್ರಾಂತದ ಮುನ್ನಡೆಗೆ ಅಡ್ಡಿ ಆತಂಕಗಳನ್ನು ತರುವ ಯತ್ನ ಕಡಿಮೆ ಮಾಡಿಲ್ಲ. ಕರ್ನಾಟಕ ಪ್ರಾಂತದ ಸ್ಥಾಪನೆಯನ್ನು ತೀವ್ರವಾಗಿ ವಿರೋಧಿಸಿದವರೂ, ಎರಡು ಕರ್ನಾಟಕಗಳ ಕೂಗನ್ನೆಬ್ಬಿಸಿ ಚಳುವಳಿ ನಡೆಸಲು ಸಾಹಸ ಪಟ್ಟವರೂ ಮೈಸೂರು ಕಾಂಗ್ರೆಸ್ ಶಾಸನ ಸಭಾ ಸದಸ್ಯರಲ್ಲಿರುವರೆಂಬುದನ್ನು ಮರೆಯುವಂತಿಲ್ಲ. ಪ್ರತಿಗಾಮಿಗಳ ಈ ಯತ್ನವನ್ನು ಮುರಿಯಲು ಪ್ರಬಲವಾದ ಪ್ರಜಾಪ್ರಭುತ್ವ ಚಳುವಳಿಯನ್ನು ನಿರ್ಮಿಸಬೇಕಿದೆ.

ಭಾಷಾವಾರು ರಾಜ್ಯ ರಚನೆಗೆ ಮೊದಲಿನಿಂದಲೂ ಸ್ಪಷ್ಟವಾದ ತಾತ್ವಿಕ ನಿಲುವನ್ನು ಹೊಂದಿದ್ದ ಕಮ್ಯುನಿಸ್ಟ್ ಪಕ್ಷವು ಭಾರತದ ಎಲ್ಲ ಭಾಗಗಳಲ್ಲೂ ಇದಕ್ಕಾಗಿ ತನ್ನನ್ನು ತೊಡಗಿಸಿಕೊಂಡಿದೆ. ಮೊದಲ ಭಾಷಾವಾರು ರಾಜ್ಯ ಆಂಧ್ರಪ್ರದೇಶದ ರೂಪುಗೊಂಡ ಪ್ರಕ್ರಿಯೆಯಲ್ಲಿದ್ದ ಆಂಧ್ರ ಮಹಾಸಭಾದ ನಾಯಕತ್ವದಲ್ಲಿ ಕಮ್ಯುನಿಸ್ಟರೇ ಇದ್ದರೆಂಬುದನ್ನು ಗಮನಿಸಬಹುದು. ಮಹಾರಾಷ್ಟ್ರ, ಗುಜರಾತ್, ಕೇರಳ ಹೀಗೆ ಎಲ್ಲ ಕಡೆಗಳಲ್ಲಿ ಕಮ್ಯುನಿಸ್ಟ್ ಪಕ್ಷ ಅಲ್ಲಿನ ಏಕೀಕರಣ ಹೋರಾಟ ಸಮಿತಿಗಳಲ್ಲಿ ಮುಂಚೂಣಿ ಪಾತ್ರ ವಹಿಸಿದೆ. ಹಾಗೆಯೇ ಕರ್ನಾಟಕದಲ್ಲೂ ಈ ಪಾತ್ರ ವಹಿಸಿದೆ. ಇಲ್ಲಿ ಗಮನಿಸಬೇಕಾದ ಅಂಶವೇನೆಂದರೆ, ಭಾಷಾ ರಾಜ್ಯಗಳು ನಿರ್ಮಾಣವಾಗಿ ಆರು ದಶಕಗಳು ತುಂಬಿರುವಾಗ ಏಕೀಕರಣದ ಆಶಯಗಳು ಈಡೇರಿವೆಯಾ ಎಂಬ ಪ್ರಶ್ನೆ. ಎಲ್ಲಾ ಕಡೆಗಳಲ್ಲಿ ಗಡಿ ವಿವಾದಗಳು ಸೌಹಾರ್ದ ಸಂಬಂಧಗಳನ್ನು ಹಾಳುಗೆಡುವುತ್ತಿರುವ ವಿಷಮಯ ಸನ್ನಿವೇಶಗಳು ಸೃಷ್ಟಿಯಾಗಿವೆ. ಕರ್ನಾಟಕಕ್ಕೆ ಹಲವು ಕಡೆಗಳಲ್ಲಿ ಗಡಿ ವ್ಯತ್ಯಾಸಗಳು ಇದ್ದಾಗಲೂ ಎಂದಿಗೂ ಪರಸ್ಪರ ದ್ವೇಷವನ್ನು ಬೆಳೆಸುತ್ತಿರುವ ಪ್ರಶ್ನೆಯೆಂದರೆ ಮಹಾರಾಷ್ಟ್ರ ಗಡಿಯ ಪ್ರಶ್ನೆ. ಕಮ್ಯುನಿಸ್ಟ್ ಪಕ್ಷ ಪ್ರತಿಪಾದಿಸಿದ ಗ್ರಾಮವನ್ನು ಘಟಕವಾಗಿ ಪರಿಗಣಿಸಿ ಗಡಿ ರೇಖೆಗಳನ್ನು ಗುರುತಿಸಬೇಕೆಂಬ ಅಂಶವನ್ನು ಕಡೆಗಣಿಸಿದ್ದು ಇದರ ಮೂಲದಲ್ಲಿದೆ. ಬೆಳಗಾವಿಯ ಕಮ್ಯುನಿಸ್ಟ್ ಪಕ್ಷವು ಏಕೀಕರಣ ಚಳುವಳಿಯಲ್ಲಿ ಸಕ್ರಿಯವಾಗಿತ್ತು. ಅಲ್ಲಿನ ಕಮ್ಯುನಿಸ್ಟರು ಕರ್ನಾಟಕ ಏಕೀಕರಣಕ್ಕಾಗಿಯೂ ಮತ್ತು ಮಹಾರಾಷ್ಟ್ರ ಏಕೀಕರಣ ಹೋರಾಟ ಸಮಿತಿಯ ಜೊತೆಯಲ್ಲಿದ್ದೂ ಕೆಲಸ ಮಾಡಿದ್ದರು. ಗ್ರಾಮವನ್ನು ಘಟಕವಾಗಿ ಪರಿಗಣಿಸದೇ ತಾಲೂಕನ್ನೇ ಘಟಕವಾಗಿ ಪರಿಗಣಿಸಿದ್ದರ ಪರಿಣಾಮವಾಗಿ ಕಮ್ಯುನಿಸ್ಟ್ ಪಾರ್ಟಿಯ ತಿಳುವಳಿಕೆ ಭಿನ್ನವಾದ ಪರಿಸ್ಥಿತಿಯನ್ನು ಎದುರಿಸುವಂತಾಗಿದೆ. ಭಾಷಾ ಸಮಸ್ಯೆ ಎಂದಿನಿಂದ ಪ್ರಾರಂಭವಾಯಿತೋ ಅಂದಿನಿಂದ ಬೆಳಗಾವಿಯಲ್ಲಿ ಕಮ್ಯುನಿಸ್ಟ್ ಪಕ್ಷದ ಬೆಳವಣಿಗೆ ಕುಂಠಿತವಾಗಿದೆ9. ಇದಲ್ಲದೆ ರಾಜ್ಯಗಳೊಳಗೇ ಪ್ರತ್ಯೇಕ ರಾಜ್ಯಗಳ ಬೇಡಿಕೆಗಳು ಬೆಳೆಯುತ್ತಿವೆ. ಸ್ವಾತಂತ್ರ್ಯಾ ನಂತರ ಭಾರತ ಕಂಡುಕೊಂಡ ಅಭಿವೃದ್ಧಿ ಪಥಗಳು ಭಾಷಾವಾರು ರಾಜ್ಯಗಳ ಕಲ್ಪನೆಯನ್ನೇ ಪ್ರಶ್ನಿಸುತ್ತಿವೆ. ಜೊತೆಗೆ ಜಾಗತೀಕರಣ ದಾಳಿಗಳು ಭಾಷಾವಾರು ರಾಜ್ಯಗಳ ಪ್ರಜಾಸತ್ತಾತ್ಮಕ ಕಲ್ಪನೆಯನ್ನು ದುರ್ಬಲಗೊಳಿಸುತ್ತಿದೆ. ಭಾಷಾ ರಾಷ್ಟ್ರೀಯತೆಗಳ ಪ್ರಜಾಪ್ರಭುತ್ವ ಅಂಶವನ್ನು ದುರ್ಬಲಗೊಳಿಸುತ್ತಾ, ಮಾರುಕಟ್ಟೆ ಅಂಶಗಳನ್ನು ಗಟ್ಟಿಗೊಳಿಸುತ್ತಾ ನಡೆದಿರುವ ಪ್ರಸಕ್ತ ಸನ್ನಿವೇಶದಲ್ಲಿ ಕಮ್ಯುನಿಸ್ಟ್ ಪಕ್ಷಗಳ ಪಾತ್ರ ಭವಿಷ್ಯದಲ್ಲಿ ಏನಿರುತ್ತದೆ ಎಂಬ ಅಂಶ ಮುಖ್ಯವಾಗಿದೆ.

ಆಕರ ಸೂಚಿ

1. ಲೆನಿನ್ ವಿ.ಐ., **ಥೀಸೆಸ್ ಆನ್ ದಿ ನ್ಯಾಷನಲ್ ಕ್ವೆಶ್ಚನ್, ಲೆನಿನ್ ಕಲೆಕ್ಟೆಡ್ ವರ್ಕ್ಸ್**, ಪ್ರೋಗ್ರೆಸ್ ಪಬ್ಲಿಷರ್ಸ್, 1977, ಮಾಸ್ಕೋ, ಸಂಪುಟ 19.
2. ರಾಮರಾವ್ ಎಂ.ಎಸ್., **ಏಕೈಕ ಕನ್ನಡ ನಾಡು ನುಡಿ ಗುಡಿಗಾಗಿ, ಕನ್ನಡ ಜನತೆ ಕಾದಿದ ಸಮರ,** ಜನಶಕ್ತಿ, ನವೆಂಬರ್ 1, 1956, ಭಾರತ ಕಮ್ಯುನಿಸ್ಟ್ ಪಕ್ಷ ಪ್ರಕಟಿತ, ಹುಬ್ಬಳ್ಳಿ
3. ಕಕ್ಕಿಲ್ಲಾಯ ಬಿ.ವಿ., 2003, **ಬರೆಯದ ದಿನಚರಿಯ ಮರೆಯದ ಪುಟಗಳು,** ನವಕರ್ನಾಟಕ ಪ್ರಕಾಶನ, ಬೆಂಗಳೂರು,
4. ರಸೂಲ್ ಎಂ.ಎ., 1989, **ಎ ಹಿಸ್ಟರಿ ಆಫ್ ದಿ ಆಲ್ ಇಂಡಿಯಾ ಕಿಸಾನ್ ಸಭಾ,** ನ್ಯಾಷನಲ್ ಬುಕ್ ಏಜೆನ್ಸಿ, ಕಲ್ಕತ್ತಾ.
5. ಗೋವಿಂದರಾಜು ಸಿ.ಆರ್., 2009, **ಮೂವ್‌ಮೆಂಟ್ ಫಾರ್ ಯುನೈಟೆಡ್ ಕರ್ನಾಟಕ, ಕಲ್ಚರಲ್ ಡೈಮೆನ್ಶನ್ಸ್,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
6. ಎನ್.ಕೆ.ಉಪಾಧ್ಯಾಯ, 1996, **ನಾನು ನಡೆದು ಬಂದ ದಾರಿ,** ಕ್ರಿಯಾ ಪ್ರಕಾಶನ, ಬೆಂಗಳೂರು
7. **ಅರುಣ ವಾರಪತ್ರಿಕೆ,** 1955, 1956, ಭಾರತ ಕಮ್ಯುನಿಸ್ಟ್ ಪಕ್ಷ ಪ್ರಕಟಣೆ, ಮಂಗಳೂರು


**ಕೊನೆ ಟಿಪ್ಪಣಿಗಳು**

1. ಪ್ರಕಾಶ್ ಕೆ., ಭಾಷಾವಾರು ಪ್ರಾಂತ್ಯಗಳ ರಚನೆ ಮತ್ತು ವಿಭಜನಾ ವಾದಗಳು, **ಐಕ್ಯರಂಗ ವಿಶೇಷ ಸಂಚಿಕೆ,** ನವೆಂಬರ್, 2001, ಪು. 6 ರಲ್ಲಿ ಜಿ.ಎನ್.ನಾಗರಾಜ್ ಅವರ ಅಭಿಪ್ರಾಯಗಳನ್ನು ಉಲ್ಲೇಖಿಸಲಾಗಿದ್ದು, ಅದನ್ನು ಇಲ್ಲಿ ಬಳಸಲಾಗಿದೆ.
   ಯೂರೋಪಿಯನ್ ಮಾದರಿ ಊಳಿಗಮಾನ್ಯ ವ್ಯವಸ್ಥೆ ಭಾರತದಲ್ಲಿ ಇತ್ತೇ ಎಂಬ ಬಗ್ಗೆ ಸಾಕಷ್ಟು ಚರ್ಚೆಗಳು ಬಂದಿವೆ. ಭಾರತದ ಇತಿಹಾಸಕಾರರಾದ ಡಿ.ಡಿ.ಕೋಸಾಂಬಿ, ಆರ್.ಎಸ್.ಶರ್ಮ, ರೋಮಿಲಾ ಥಾಪರ್ ಮುಂತಾದವರು ಭಾರತದಲ್ಲಿ ಅಸ್ತಿತ್ವದಲ್ಲಿದ್ದ ಊಳಿಗಮಾನ್ಯ ವ್ಯವಸ್ಥೆಯ ಕುರಿತು ಬರೆದಿದ್ದಾರೆ. ಯೂರೋಪಿಯನ್ ಮಾದರಿಯ ಊಳಿಗಮಾನ್ಯ ಪದ್ಧತಿಗಿಂತ ಭಿನ್ನವಾದ ವ್ಯವಸ್ಥೆಯು ಭಾರತ ಉಪಖಂಡದಲ್ಲಿ ಅಸ್ತಿತ್ವದಲ್ಲಿದ್ದ ಬಗ್ಗೆ ಅಭಿಪ್ರಾಯಗಳನ್ನು ಚರಿತ್ರಕಾರರು ವ್ಯಕ್ತಪಡಿಸಿದ್ದಾರೆ.
2. ರಸೂಲ್ 1989: 93 ರಲ್ಲಿ ಉದ್ಧೃತ, 1942 ಮೇ 29–31 ರವರೆಗೆ ನಡೆದ ಬಿಹಾ ಎಐಕೆಎಸ್ ಅಧಿವೇಶನದ ನಿರ್ಣಯ 3.
3. ರೆಸಲ್ಯೂಶನ್ ಆಫ್ ದಿ ಸೆಂಟ್ರಲ್ ಕಮಿಟಿ ಆಫ್ ದಿ ಕಮ್ಯುನಿಸ್ಟ್ ಪಾರ್ಟಿ ಆಫ್ ಇಂಡಿಯಾ ಆನ್ ಸ್ಟೇಟ್ಸ್ ರಿಆರ್ಗನೈಸೇಷನ್, 10–18 ಏಪ್ರಿಲ್ 1954, **ಪಬ್ಲಿಷ್ಡ್** ಇನ್ **ಡಾಕ್ಯುಮೆಂಟ್ಸ್ ಆಫ್ ದಿ ಕಮ್ಯುನಿಸ್ಟ್ ಮೂವ್‌ಮೆಂಟ್** ಇನ್ **ಇಂಡಿಯಾ,** ಪು. *398.*
4. ಅದೇ.,ಪು. 399
5. ಅದೇ., ಪು. 401–402
6. **ಮೆಮೊರಂಡಮ್ ಆಫ್ ದಿ ಸೆಂಟ್ರಲ್ ಕಮಿಟಿ ಆಫ್ ದಿ ಕಮ್ಯುನಿಸ್ಟ್ ಪಾರ್ಟಿ ಆಫ್ ಇಂಡಿಯಾ ಟು ದಿ ಸ್ಟೇಟ್ಸ್ ರಿಆರ್ಗನೈಸೇಷನ್ ಕಮಿಷನ್** ಎಂಬ ಮನವಿಯನ್ನು 1954 ಜೂನ್‌ನಲ್ಲಿ ರಾಜ್ಯಗಳ ಪುನರ್ವಿಂಗಡಣಾ ಆಯೋಗಕ್ಕೆ ಸಲ್ಲಿಸಿತು ಮತ್ತು ಇದನ್ನು ಕಿರುಹೊತ್ತಿಗೆಯಾಗಿ ಪ್ರಕಟಿಸಿತು.
7. ಅದೇ., ಪು. 413
8. ರೆಸಲ್ಯೂಷನ್ ಆಫ್ ದಿಸೆಂಟ್ರಲ್ ಕಮಿಟಿ ಆಫ್ ದಿ ಕಮ್ಯುನಿಸ್ಟ್ ಪಾರ್ಟಿ ಆಫ್ ಇಂಡಿಯಾ ಆಪೋಸಿಂಗ್ ದಿ ಪ್ರೊಪೋಸಲ್ ಫಾರ್ ಮರ್ಜರ್ ಆಫ್ ಸ್ಟೇಟ್ಸ್, 1956 ಜನವರಿ 28 ರಿಂದ ಫೆಬ್ರವರಿ 4 ರವರಗೆ ನಡೆದ ಸಭೆಯಲ್ಲಿ ಅಂಗೀಕರಿಸಿದ್ದು, ಪು. 474.

9. ಕೃಷ್ಣ ಮೇಣಸೆ ಅವರೊಂದಿಗೆ ಲೇಖಕರು 22-10-2016 ರಂದು ಬೆಳಗಾವಿಯ ಅವರ ಮನೆಯಲ್ಲಿ ನಡೆಸಿದ ಸಂದರ್ಶನ. ಇವರು ಬೆಳಗಾವಿಯ ಸಿಪಿಐನ ಹಿರಿಯ ಮುಖಂಡರು, ಭಾಷಾವಾರು ರಾಜ್ಯ ರಚನೆಯ ಹೋರಾಟದಲ್ಲಿ ಸಕ್ರಿಯವಾಗಿದ್ದವರು ಮತ್ತು ಗೋವಾ ವಿಮೋಚನಾ ಚಳುವಳಿಯಲ್ಲಿ ಪ್ರಮುಖ ಪಾತ್ರ ವಹಿಸಿದವರು.

ಇವರು ತಿಳಿಸಿದ ರೀತಿಯಲ್ಲಿ, ಮಹಾರಾಷ್ಟ್ರ ಕರ್ನಾಟಕ ಮತ್ತು ಗುಜರಾತ್ ಈ ಮೂರೂ ರಾಜ್ಯಗಳಲ್ಲಿಯೂ ಕಮ್ಯೂನಿಸ್ಟರು ಭಾಷಾವಾರು ಹೋರಾಟಕ್ಕೆ ಪೂರ್ಣ ಬೆಂಬಲ ನೀಡಿದ್ದರು ಮತ್ತು ನಾಯಕತ್ವವನ್ನು ವಹಿಸಿದ್ದರು. ಬೆಳಗಾಂನಲ್ಲಿ ಭಾಷಾವಾರು ರಾಜ್ಯಗಳ ಹೋರಾಟದ ಮುಂಚೂಣಿಯಲ್ಲಿ ಇದ್ದ ಕಮ್ಯುನಿಸ್ಟರು ಮರಾಠಿ ಮಾತನಾಡುತ್ತಿದ್ದರು. ಕೃಷ್ಣ ಮೇಣಸೆ ಮತ್ತಿತರರು ಕರ್ನಾಟಕ ಕಮ್ಯುನಿಸ್ಟ್ ಪಕ್ಷದ ನಾಯಕರಾಗಿದ್ದರು ಮತ್ತು ಅದೇ ಸಂದರ್ಭದಲ್ಲಿ ಮರಾಠಿ ಜನರ ಹೋರಾಟಗಳಿಗೆ ನಾಯಕತ್ವ ನೀಡಬೇಕಾದ ಅನಿವಾರ್ಯತೆಗೆ ಒಳಗಾದರು. ಕಮ್ಯುನಿಸ್ಟ್ ಪಕ್ಷವು ಪ್ರತಿಪಾದಿಸಿದ ರೀತಿಯಲ್ಲಿ ಗ್ರಾಮವನ್ನು ಘಟಕವಾಗಿ ಪರಿಗಣಿಸಿ, ಅದರ ಆಧಾರದಲ್ಲಿ ಮಹಾರಾಷ್ಟ್ರದಲ್ಲಿರುವ ಶೇ. 55ಕ್ಕಿಂತ ಹೆಚ್ಚು ಕನ್ನಡಿಗರಿರುವ ಗ್ರಾಮಗಳು ಕರ್ನಾಟಕಕ್ಕೆ ಸೇರಬೇಕು, ಅದೇ ರೀತಿ ಕರ್ನಾಟಕದಲ್ಲಿರುವ ಶೇ. 55ಕ್ಕಿಂತ ಹೆಚ್ಚು ಮರಾಠಿ ಮಾತನಾಡುವ ಗ್ರಾಮಗಳು ಮಹಾರಾಷ್ಟ್ರಕ್ಕೆ ಸೇರಬೇಕು ಎಂಬ ನಿಲುವಿನ ಆಧಾರದಲ್ಲಿ ಕೆಲಸ ಮಾಡಬೇಕಾಯಿತು. ಕಾಸರಗೋಡು ಕರ್ನಾಟಕ ಮತ್ತು ಕೇರಳ ರಾಜ್ಯಗಳ ನಡುವಿನ ಗಡಿ ಸಮಸ್ಯೆಯಾಗಿದೆ. ಅದರೂ ಬೆಳಗಾಂನಷ್ಟು ಅದು ಗಂಭೀರ ಸಮಸ್ಯೆಯನ್ನು ಎದುರಿಸುತ್ತಿಲ್ಲ. ಈ ಹಿನ್ನೆಲೆಯಲ್ಲಿ ಬೆಳಗಾಂನ ಕಮ್ಯುನಿಸ್ಟ್ ಮುಖಂಡರು ಮತ್ತು ಮಹಾರಾಷ್ಟ್ರದ ಕೆಲವು ಮುಖಂಡರು ಕೇರಳದ ಇ.ಎಂ.ಎಸ್. ನಂಬೂದಿರಿಪಾದ್‌ರವರನ್ನು ಭೇಟಿಯಾಗಿ ಗಡಿ ಸಮಸ್ಯೆಗೆ ಪರಿಹಾರ ಕಂಡುಕೊಳ್ಳುವ ಪ್ರಯತ್ನ ಮಾಡಿದರು. ಅದಕ್ಕೆ ಇ.ಎಂ.ಎಸ್.ರವರು, ಯಾವ ಭಾಷೆಯಲ್ಲಿ ಹೆಚ್ಚು ಮಾತನಾಡುವ ಜನರಿರುತ್ತಾರೋ ಅಂತಹ ಗ್ರಾಮಗಳಲ್ಲಿ ಆಯಾ ಭಾಷೆಯಲ್ಲಿ ಶಿಕ್ಷಣ ನೀಡುವ ಶಿಕ್ಷಕರನ್ನು ನೇಮಿಸಿ, ಮತ್ತು ಅವರವರ ಸಂಸ್ಕೃತಿ ಆಚರಣೆಗೆ ಮುಕ್ತ ಅವಕಾಶ ಕೊಡಿ, ಇತರರ ಭಾಷೆ ಮತ್ತು ಹೊರಗಿನ ಸಂಸ್ಕೃತಿಯನ್ನು ಮತ್ತೊಬ್ಬರ ಮೇಲೆ ಏರದಂತೆ ನೋಡಿಕೊಳ್ಳಿ, ಅಲ್ಲಿಗೆ ಸಮಸ್ಯೆ ಬಗೆಹರಿಯುತ್ತದೆ ಎಂದು ಸಲಹೆ ನೀಡಿದರಂತೆ. ಆದರೆ ಅದನ್ನು ಮಾಡಲು ಇಂದಿಗೂ ಸಾಧ್ಯವಾಗಿಲ್ಲ. ಕಮ್ಯುನಿಸ್ಟ್ ಪಕ್ಷ ಪ್ರತಿಪಾದಿಸಿದ ರೀತಿಯಲ್ಲಿ ಗಡಿ ರೇಖೆಗಳನ್ನು ಗುರುತಿಸಲಾಗದಿದ್ದರಿಂದ ಉಂಟಾದ ಸಂಕೀರ್ಣ ಪರಿಸ್ಥಿತಿಯಿಂದ ಹೊರಬರಲಾಗದಿದ್ದರಿಂದ ಬೆಳಗಾಂನಲ್ಲಿ ಕಮ್ಯುನಿಸ್ಟ್ ಪಕ್ಷ ಬೆಳವಣಿಗೆಯನ್ನು ಕಾಣಲಿಲ್ಲ ಎಂದು ಕೃಷ್ಣ ಮೇಣಸೆ ಅಭಿಪ್ರಾಯಪಟ್ಟಿದ್ದಾರೆ.

■

# ಗತ ಮತ್ತು ವರ್ತಮಾನವನ್ನು ಜೋಡಿಸುತ್ತಾ

(ಪುಸ್ತಕ-30 ರಿಂದ) ಭಾಗ-4:

## ಅಸೋಕ/ಅಶೋಕ-ಭಿನ್ನ ಓದುಗಳು

**ರಣ್‌ಬೀರ್ ಚಕ್ರವರ್ತಿ:** ಚರಿತ್ರಕಾರರೂ ಕೂಡಾ ಒಂದು ಗತವನ್ನು ಹೊಂದಿರುತ್ತಾರೆ ಮತ್ತದು ಬದಲಾಗುತ್ತಿರುತ್ತದೆ. ನಾನು ಯಾವಾಗಲೂ ವಿದ್ಯಾರ್ಥಿಗಳಿಗೆ ಹೇಳುತ್ತಿರುತ್ತೇನೆಂದರೆ, ಮೌರ್ಯರ ಕುರಿತು ಪ್ರೊಫೆಸರ್ ಥಾಪರ್ ಅವರು 1961ರಲ್ಲಿ ಮತ್ತು 1996ರಲ್ಲಿ ಬರೆದಿದ್ದನ್ನು ಓದಿದರೆ, ನೀವು ಎರಡು ಬಗೆಯ ಥಾಪರ್ ಅವರನ್ನು ನೋಡುತ್ತೀರೆಂದು, ಇದು ಚರಿತ್ರೆಯ ಶಕ್ತಿ ಮತ್ತು ಹೆಗ್ಗಳಿಕೆ. ಇದು ಚರಿತ್ರೆ ವಿಷಯದ ದೌರ್ಬಲ್ಯವಲ್ಲ. ಹೇಗೆ ಮೌರ್ಯರ ಕಾಲದ ವಿಚಾರ ಮತ್ತು ಗ್ರಹಿಕೆಗಳು ಬದಲಾಗಿವೆ?

**ರೊಮಿಲಾ ಥಾಪರ್** : ನಾನು ಮೊದಲು ಬರೆದ ಪಿಹೆಚ್.ಡಿ ಪ್ರಬಂಧ ಕ್ರಮೇಣ ಅದು 1961ರಲ್ಲಿ ಪುಸ್ತಕವಾದ 'ಅಶೋಕ ಆಂಡ್ ದಿ ಡಿಕ್ಲೈನ್ ಆಫ್ ದಿ ಮೌರ್ಯಾಸ್', ನಿಶ್ಚಿತವಾಗಿ ಇಂಡಾಲಜಿಯ ಪ್ರಭಾವ ಮತ್ತು ಪ್ರೇರಣೆಯಿಂದುಂಟಾಗಿದೆ. ನಾನು ಕೇವಲ ರಚನೆಗಳ ಬಗ್ಗೆ ಗಮನ ಹರಿಸುತ್ತಾ, ಈ ಕೃತಿಯನ್ನು ಆ ಕಾಲದ ಸಾಂಪ್ರದಾಯಿಕ ಚರಿತ್ರೆ ಬರವಣಿಗೆ ಕ್ರಮದ ರೀತಿಯಲ್ಲಿ ವಿಂಗಡಿಸಿದ್ದೆ. ಇಲ್ಲಿ ಉಳಿದ ಚರಿತ್ರಕಾರರಿಗಿಂತ ನನ್ನ ಕಿಂಚಿತ್ ಭಿನ್ನವಾದ ನಿಲುವು ಏನೆಂದರೆ, ನಾನು ಅಶೋಕನನ್ನು ಒಬ್ಬ ರಾಜಕಾರಣಿಯ ನೆಲೆಯಲ್ಲಿ ವಿಶ್ಲೇಷಿಸಿದ್ದು.

ಇಂಗ್ಲಿಷ್ ಮೂಲ
**ರಣ್‌ಬೀರ್ ಚಕ್ರವರ್ತಿ,**
ಪ್ರೊಫೆಸರ್, ಜವಾಹರ್ ಲಾಲ್ ನೆಹರು ಯುನಿವರ್ಸಿಟಿ, ನವದೆಹಲಿ.
ranbirchakravarthy@mail.jnu.ac.in

ಕನ್ನಡಕ್ಕೆ
**ಪ್ರದೀಪ ಕುಮಾರ್ ಶೆಟ್ಟಿ ಕ್ಯಂಚ್ಹೂರ್**
ಸರಕಾರಿ ಪದವಿಪೂರ್ವ ಕಾಲೇಜು, ಬೈಂದೂರು, ಕುಂದಾಪುರ ತಾಲ್ಲೂಕು, ಉಡುಪಿ ಜಿಲ್ಲೆ.
pradeephistory@gmail.com

ಅವನೊಬ್ಬ ರಾಜನಾಗಿದ್ದರೆ, ಆತ ಆ ರೀತಿಯಲ್ಲಿರುವಂತೆ ಆತನಿಗೆ ಒಂದು ನೆಲೆಯ ಅಧಿಕಾರ ಲಭಿಸಿರಬೇಕಿತ್ತು ಎನ್ನುವುದು ನನ್ನ ಆಲೋಚನೆ. ಆತ ಬದುಕಿದ್ದ ಜಗತ್ತು ಮತ್ತು ಆತನ ಸ್ವಂತ ಆಲೋಚನೆಗಳು ಯಾವ ರೀತಿ ಆತನ ಚಟುವಟಿಕೆಗಳ ಪ್ರತಿಕ್ರಿಯೆಗಳಾಗಿದ್ದುವು? ಅದೃಷ್ಟವಶಾತ್, ನಮಗೆ ಆತನ ಶಾಸನಗಳು ಲಭಿಸಿ ಆತ ಏನನ್ನು ಮಾಡಲುದ್ಯುಕ್ತನಾಗಿದ್ದ ಎಂಬುದನ್ನು ತಿಳಿಯಬಹುದಾಗಿದೆ. ಮತ್ತೆ ಅವುಗಳು ತುಂಬಾ ಮುಖ್ಯ, ಯಾಕೆಂದರೆ ಅವುಗಳು ಆತನ ಸಮಕಾಲೀನವಾದ ಹಾಗೂ ಉಳಿದ ಆಧಾರಗಳು ನಂತರದ ಕಾಲದವಾದ ಕಾರಣ. ನನ್ನ ಎರಡನೆಯ ಪ್ರಶ್ನೆ, ಆತನನ್ನು ಒಬ್ಬ ರಾಜ ಮತ್ತು ಬೌದ್ಧೀಯ ಎಂದು ಚಿತ್ರಿಸುವ ವಾಯುವ್ಯ ಭಾರತ ಮತ್ತು ಶ್ರೀಲಂಕಾದ ಆಧಾರಗಳಾದ ದಿವ್ಯಾವಧಾನ ಹಾಗೂ ಮಹಾವಂಶವನ್ನು ಹೇಗೆ ದುಡಿಸಿಕೊಳ್ಳಬೇಕು? ಅಥವಾ ನೋಡಬೇಕೆಂಬುದಾಗಿ?

**ರಣ್‌ಬೀರ್ ಚಕ್ರವರ್ತಿ: ಇಲ್ಲಿ ಹುಟ್ಟುವ ಬಹಳ ಪ್ರಮುಖವಾದ ಪ್ರಶ್ನೆಯೆಂದರೆ, ಯಾಕೆ ಈ ನಂತರದ ಆಧಾರಗಳು ಅಶೋಕನನ್ನು ಈ ತೆರನಾಗಿ ನೆನಪಿಸಿಕೊಳ್ಳುತ್ತವೆ?**

**ರೊಮಿಲಾ ಥಾಪರ್** : ಬಹುಶ: ಒಬ್ಬ ಸಂಶೋಧಕ ಈ ಆಯಾಮದ ಕುರಿತು ಕೂಡಾ ಯೋಚಿಸಬೇಕಾಗುತ್ತದೆ. ನಾನು ಸಂಶೋಧಿಸಿದ ನಂತರ ಪುಸ್ತಕವಾಗಿ ಪ್ರಕಟವಾದ ಅಶೋಕನ ಕುರಿತ ಬರವಣಿಗೆಯಲ್ಲಿ ಇಂತಹ ಸಂಗತಿಯನ್ನು ಹೊಸ ನೆಲೆಯಲ್ಲಿ ನೋಡುವ ಪ್ರಯತ್ನ ಮಾಡಿದ್ದೇನೆ. ಇಂತಹ ಹೊಸ ಪ್ರಯತ್ನವು, ನಾನು ನಡೆಸಿದ ಕೆಲವು ಸಮಾಜ ವಿಜ್ಞಾನಗಳ ಪ್ರಾಥಮಿಕ ಓದಿನಿಂದ ಹಾಗೂ ವಿಶೇಷವಾಗಿ ಆಧುನಿಕ ಪೂರ್ವ ಸಮಾಜಗಳ ರಾಜಕೀಯ ಕ್ರಿಯಾತ್ಮಕತೆ ಹಾಗೂ ಅವುಗಳ ಧರ್ಮದ ಸೋಶಿಯಾಲಜಿಯ ಆಧಾರದ ಮೇಲೆ ಮೂಡಿರುವಂತದ್ದಾಗಿದೆ. ಈ ನೆಲೆಯಲ್ಲಿ ಎಸ್.ಜೆ. ತಂಬಿಯ್ಯಾ ಮತ್ತು ಲೆಸ್ಲಿ ಗುಣವರ್ಧನೆಯಂತಹ ವಿದ್ವಾಂಸರ ಬೌದ್ಧ ರಾಜಕಾರಣದ ಅಧ್ಯಯನವು ಈ ನೆಲೆಯಲ್ಲಿ ತುಸು ಸಹಾಯಕವಾದರೂ ಕೂಡಾ, ಅವುಗಳು ಒಂದು ಮಾದರಿ ಮತ್ತು ನಮೂನೆಯನ್ನು ಒದಗಿಸಿ ಕೊಡುವುದಕ್ಕಿಂತಲೂ ಹೆಚ್ಚು, ಸರಣಿ ಪ್ರಶ್ನೆಗಳನ್ನೇ ಉತ್ಪಾದಿಸುತ್ತವೆ. ಇಲ್ಲಿ ನನಗೆ ಬಹುಮುಖ್ಯವಾದುದು, ವಿದ್ವಾಂಸರು ಮೂಲಗಳ ಅಥವಾ ಆಧಾರಗಳ ಮೇಲೆ ಕೇಳುತ್ತಿರುವ ಈ ರೀತಿಯ ಪ್ರಶ್ನೆಗಳು ಮತ್ತು ಅವರು ಅದರ ಮೂಲಕ ಒಂದು ಕೊಂಡಿ, ಸಂಪರ್ಕವನ್ನು ಸಾಧಿಸಲು ಮಾಡುತ್ತಿರುವ ಪ್ರಯತ್ನಗಳು. ಇವುಗಳು ಬಹುಮುಖ್ಯ ಯಾಕೆಂದರೆ, ಒಬ್ಬ ವಿದ್ವಾಂಸ ಹೊಸ ಪ್ರಶ್ನೆಗಳನ್ನು ಕೇಳಬಹುದಾದ ಒಂದು ಪ್ರಮುಖ ಕ್ರಮ ಹಾಗೂ ನೆಲೆಯಾದುದರಿಂದ.

**ರಣ್‌ಬೀರ್ ಚಕ್ರವರ್ತಿ : ಅದೊಂದು ನೇರಾನೇರವಾದ ಸ್ವೀಕಾರ ಅಲ್ಲ.**

**ರೊಮಿಲಾ ಥಾಪರ್**: ಅಲ್ಲ, ಅಲ್ಲವೇ ಅಲ್ಲ ಬದಲಿಗೆ ಅದು ಡೇಟಾ, ಮಾಹಿತಿ ಮತ್ತು ದತ್ತಾಂಶಗಳನ್ನು ಹೊಸ ರೀತಿಯಲ್ಲಿ ತನಿಖೆಗೊಳಪಡಿಸುವ ಮತ್ತು ಪ್ರಮುಖ ವಿಶ್ಲೇಷಣಾತ್ಮಕ ಪ್ರಶ್ನೆಗಳನ್ನು ಕೇಳುವ ಕ್ರಮವೂ ಆಗಿದೆ.

**ರಣ್‌ಬೀರ್ ಚಕ್ರವರ್ತಿ** : ನಾವು ಗತವನ್ನು ಅರ್ಥೈಸಿಕೊಳ್ಳಲು, ಅತ್ಯಂತ ಆಳವಾಗಿ ಆಧಾರಗಳನ್ನು ಶೋಧಿಸಿದಾಗ, ಅಲ್ಲಿ ಅವುಗಳನ್ನು ಪ್ರಶ್ನಿಸುವ ಸಂಗತಿಯ ಜತೆಗೆ, ಕೆಲವು ಆಧಾರಗಳನ್ನು ಕಡೆಗಣಿಸಬೇಕಾದ ಅಗತ್ಯತೆ ಕೂಡಾ ಇದೆಯೇ? ಒಬ್ಬ ವಿದ್ವಾಂಸ ಇದನ್ನು ರೂಢಿಸಿಕೊಳ್ಳಬೇಕೇ?

**ರೊಮಿಲಾ ಥಾಪರ್ :** ನಿಶ್ಚಿತವಾಗಿಯೂ ಹೌದು. ನಾನು ಚರಿತ್ರಕಾರ್ತಿಯಾಗಿ ಆರಂಭದ ದಿನಗಳಲ್ಲಿ ಕೆಲಸ ಮಾಡುತ್ತಿದ್ದ ಸಂದರ್ಭದಲ್ಲಿ, ಒಬ್ಬ ಪ್ರಸಿದ್ಧ ಬೌದ್ಧ ಗ್ರಂಥಗಳ ವಿದ್ವಾಂಸರು ನಾನೊಮ್ಮೆ ಮಂಡಿಸಿದ ವಿಚಾರವನ್ನು ಬಹಳ ಗಂಭೀರವಾಗಿ ಇದೇ ನೆಲೆಯಲ್ಲಿ ಟೀಕಿಸಿದ್ದರು. ನಾನು ಆಧಾರಗಳ ಸಂದರ್ಭದಲ್ಲಿ ಇನ್ನೂ ಹೆಚ್ಚು ಸಂದೇಹಿಸಬೇಕಿತ್ತೆನ್ನುವುದು ಅವರ ಅಭಿಪ್ರಾಯವಾಗಿತ್ತು. ವಿಶೇಷವಾಗಿ ಅವುಗಳ ವಿಶ್ವಾಸಾರ್ಹತೆಯನ್ನು ಪರೀಕ್ಷಿಸುವ ಸಂದರ್ಭದ ನನ್ನ ಆರಂಭದ ಓದಿನ ಹಂತದಲ್ಲಿ.

**ರಣ್‌ಬೀರ್ ಚಕ್ರವರ್ತಿ : ಭಾರತದಲ್ಲಿ ಯಾರಾದರು ಒಬ್ಬರು ಗತಕಾಲದ ವರ್ಚಸ್ಸಿನ ವ್ಯಕ್ತಿಗಳನ್ನು ಅಥವಾ ಗತ ಸಂಪ್ರದಾಯಗಳನ್ನು ಟೀಕಿಸಿ ವಿಮರ್ಶಿಸಿದರೆ, ಅವರನ್ನು ಖಳನಾಯಕನಂತೆ ಬಿಂಬಿಸಲಾಗುತ್ತದೆ.**

**ರೊಮಿಲಾ ಥಾಪರ್ :** ಹೌದು, ಆದರೆ ಆ ರೀತಿಯಲ್ಲಿ ನೋಡಬಾರದು. ಈಗ ನಾನು ನಿಮ್ಮನ್ನು ಅರ್ಥಮಾಡಿಕೊಳ್ಳಬೇಕೆಂದರೆ ಮತ್ತು ನಿಮ್ಮನ್ನು ಮೊದಲ ಬಾರಿಗೆ ಭೇಟಿಯಾದ ಸಂದರ್ಭದಲ್ಲಿ, ನಾನು ಏನು ಮಾಡಬೇಕು? ನಾನು ನಿಮ್ಮ ಜೀವನದ ಬಗೆಗೆ ಮತ್ತು ಹಿನ್ನೆಲೆಯ ಮೇಲೆ ಪ್ರಶ್ನೆಗಳನ್ನು ಕೇಳುವ ಮೂಲಕ ನೀವು ಯಾವ ರೀತಿಯ ಮನುಷ್ಯ ಎಂಬ ಅರಿವು ನನಗೆ ಉಂಟಾಗುತ್ತದೆ. ನಾನು ಆ ರೀತಿಯಲ್ಲಿ ಸೂಕ್ಷ್ಮವಾಗಿ ಪರೀಕ್ಷಿಸಿ ಒಂದು ನಿರ್ಧಾರಕ್ಕೆ ಬರುತ್ತೇನೆ. ಈ ಆರಂಭದ ಅಸ್ಪಷ್ಟತೆಯು ಒಂದು ರೀತಿಯ ವಿಶ್ವಾಸಕ್ಕೂ ಅಥವಾ ನಿರಾಕರಣೆಗೂ ಕಾರಣವಾಗುತ್ತದೆ.

ಪಠ್ಯೀಯ ಆಧಾರಗಳು, ಒಂದು ರೀತಿಯಲ್ಲಿ ಒಬ್ಬರ ಮಿತ್ರರ ಹಾಗಿನವು. ಅವುಗಳು ಅವರಿಗೆ ಒಂದು ವ್ಯಕ್ತಿಯ ಅಥವಾ ಅವರು ಶೋಧಿಸುತ್ತಿರುವ ಘಟನೆಯ ಬಗೆಗೆ ಅರಿವು ಮೂಡಿಸುತ್ತವೆ. ಅವುಗಳು ತಿಳಿಸುವ ಸತ್ಯಾಸತ್ಯತೆಯನ್ನು ಪರೀಕ್ಷಿಸಿ ಪ್ರತಿಷ್ಠಾಪಿಸಬೇಕಷ್ಟೇ. ಈ ಪರೀಕ್ಷೆ ಮತ್ತು ಪ್ರತಿಷ್ಠಾಪನೆಗಿಂತ ಮುಂಚೆ ಏನನ್ನೂ ಕೂಡಾ ನಿರ್ಧರಿಸಬಾರದಷ್ಟೇ.

ನಾನು ಈ ರೀತಿಯ ಓದನ್ನು ನಡೆಸಿದ ಸಂದರ್ಭ ಉಂಟಾದ ಒಂದು ಪರಿಣಾಮ ಅಥವಾ ಸಂಗತಿಯೆಂದರೆ, ನಾನು ಅನೇಕ ಹೊಸ ಪ್ರಶ್ನೆಗಳನ್ನು ಈ ಸಂದರ್ಭ ಕೇಳಿದ್ದು. ಮುಖ್ಯವಾಗಿ ನಾನು ಎರಡು ಮೂಲಭೂತ ದೃಷ್ಟಿಗಳ ಬಗೆಗೆ ಆಸಕ್ತಿಯನ್ನು ಹೊಂದಿದ್ದೆ. ಒಂದು ನಾನು ಪಠ್ಯಗಳನ್ನು ಗಮನಿಸುತ್ತಾ, ಉದಾಹರಣೆಗೆ ಅರ್ಥಶಾಸ್ತ್ರವನ್ನು ನೋಡುತ್ತಾ, 'ಮೌರ್ಯರ ದೊರೆ ಈ ರೀತಿ ಇದ್ದಿದ್ದನೇ? ಎಲ್ಲವೂ ಕೇಂದ್ರೀಕೃತವಾಗಿತ್ತೇ ಮತ್ತು ಸಂಪೂರ್ಣ ನಿಯಂತ್ರಣಕ್ಕೊಳಪಟ್ಟಿತ್ತೇ? ಇವುಗಳನ್ನು ಅರ್ಥಶಾಸ್ತ್ರ ಹೇಗೆ ಗ್ರಹಿಸುತ್ತದೆ? ಹಾಗೂ ಅದನ್ನು ವಾಸ್ತವವಾಗಿ ಆ ರೀತಿ ಗಮನಿಸಲಾಗದ ಬಗೆ ಹೇಗೆ? ಎರಡನೆಯದಾಗಿ, ಮೌರ್ಯರ ಸಾಮ್ರಾಜ್ಯವು ಒಂದು ವ್ಯವಸ್ಥೆಯಾಗಿದ್ದುದನ್ನು ತಿಳಿಯುವ ಮತ್ತು ನೋಡುವ ಸಂಗತಿ ಅಥವಾ ದೃಷ್ಟಿಗಳು. ಮೌರ್ಯರ ಕಾಲದ ತೆರಿಗೆ ಸಂಗ್ರಹ ಮತ್ತು ಎಲ್ಲಾ ರಾಜ್ಯಗಳು ಅದನ್ನು ಅವಲಂಬಿಸಿದ್ದ ಸ್ಥಿತಿಯನ್ನು ಆಧರಿಸಿ, ಇವುಗಳನ್ನು ಸ್ಪಷ್ಟವಾಗಿ ಹೇಗೆ ಸಾಧಿಸಲಾಯ್ತು? ಎನ್ನುವ ಪ್ರಶ್ನೆಯೂ ಕೂಡಾ ಮುಖ್ಯವಾಗುತ್ತದೆ. ಯಾರು ತೆರಿಗೆಯನ್ನು ಸಂಗ್ರಹಿಸಲು ಹೋಗುತ್ತಿದ್ದರು? ಅದನ್ನು ವಸ್ತು ಅಥವಾ ಹಣ, ಅಂದರೆ ಯಾವ ಸ್ವರೂಪದಲ್ಲಿ ಸಂಗ್ರಹಿಸುತ್ತಿದ್ದರು? ಇದರ ನಂತರ ಅದನ್ನು ಹೇಗೆ ಸಂಗ್ರಹಿಸಲಾಗುತ್ತಿತ್ತು? ಹಾಗೂ ಅದನ್ನು ಎಲ್ಲಿಗೆ ಒಯ್ಯಬೇಕೋ ಅಲ್ಲಿಗೆ ಹೇಗೆ ಸಾಗಿಸಲಾಗುತ್ತಿತ್ತು? ಇತ್ಯಾದಿ...

## ಒಂದು ಬಲಾಢ್ಯ ಸರ್ಕಾರ–ಹಾಗಿತ್ತೇ?

**ರಣ್‌ಬೀರ್ ಚಕ್ರವರ್ತಿ:** ಸುಮಾರು 1950ರ ಹೊತ್ತಿಗೆ ಭಾರತ ಒಂದು ಬಲಿಷ್ಠವಾದ ಸರ್ಕಾರವನ್ನು ಹೊಂದಬೇಕಾಗಿತ್ತು ಎನ್ನುವ ಸಂಗತಿಯು, ನಮ್ಮ ಹಿಂದೆ ಒಂದು ಬಲಿಷ್ಠವಾದ ಸರ್ಕಾರದ ಸಂಪ್ರದಾಯವಿತ್ತು ಎನ್ನುವುದನ್ನು ತೋರಿಸಬೇಕಾಗಿತ್ತು. ನಿಜವಾಗಿಯೂ, ವರ್ತಮಾನದಿಂದ ಗತ ಮತ್ತು ಚರಿತ್ರೆಯು ಅಗತ್ಯವನ್ನು ಹಾಗೂ ಅನಿವಾರ್ಯತೆಯನ್ನು ಕಂಡಿದೆ.

**ರೊಮಿಲಾ ಥಾಪರ್:** ವರ್ತಮಾನವನ್ನು ಮಾನ್ಯತೆಗೊಳಿಸುವ ಸಲುವಾಗಿ ಗತ ಮತ್ತು ಚರಿತ್ರೆಯು ಯಾವಾಗಲೂ ಅಗತ್ಯವಾಗುತ್ತದೆ. ಅದರರ್ಥ, ನಾನು ಗತದ ಬಗೆಗೆ ಅರ್ಥೈಸಿಕೊಳ್ಳುವುದು ಮತ್ತು ಅದನ್ನು ವಿವರಿಸುವುದು ಒಂದು ರೀತಿಯ ಅಕಡಮಿಕ್ ಆದ ಕುತೂಹಲದಿಂದ. ಆದರೆ ಗತವನ್ನು ರಾಜಕೀಯಾತ್ಮಕವಾಗಿ ಬಳಸಲಾಗಿದೆ ಎನ್ನುವುದು ಪ್ರಮುಖವಾದ ಮತ್ತು ಅವಜ್ಞೆ ಮಾಡಲಾಗದ ಕಾಳಜಿಯಾಗಬೇಕು. ನಂತರ ನೀವು ಯಾವಾಗ ಅದನ್ನು ಪ್ರಶ್ನಿಸತೊಡಗುತ್ತೀರೋ ಆಗ ನೀವು, 'ಪುನ: ಕೌಟಿಲ್ಯನನ್ನು ನೋಡೋಣ, ಗಮನಿಸೋಣ' ಎಂದೆನ್ನಬೇಕು. ಕೌಟಿಲ್ಯನು, ರಾಜನ ಆದೇಶವನ್ನು ಪಾಲಿಸಬೇಕು, ಗೌರವಿಸಬೇಕೆಂದರೆ, ಆ ರೀತಿ ಸೀಲ್ ಮಾಡಿದ ಆದೇಶವನ್ನು ಪಾಟಲೀಪುತ್ರದಿಂದ ತಕ್ಷಶಿಲೆಯವರೆಗೆ ತೆಗೆದುಕೊಂಡು ಹೋಗಬೇಕು. ಸುಮಾರು ಎಷ್ಟು ಕಾಲದವರೆಗೆ ಅದನ್ನು ಸಾಗಿಸಲಾಗುತ್ತಿತ್ತು? ಬಹುಶ: ಎರಡು ತಿಂಗಳಿದ್ದಿರಬೇಕು, ಆ ಹೊತ್ತಿಗೆ ತಕ್ಷ ಶಿಲೆಯ ಗವರ್ನರ್ ಆತನು ತನ್ನ ನಿರ್ಧಾರವನ್ನು ತೆಗೆದುಕೊಳ್ಳುತ್ತಿದ್ದಿರಬಹುದು.

**ರಣ್‌ಬೀರ್ ಚಕ್ರವರ್ತಿ: ಉದಾಹರಣೆಗೆ, ನಾನೀಗ ಸುಸ್ಪಷ್ಟ ದಾಖಲೆಗಳನ್ನು ಹೊಂದಿರುವುದರ ಆಧಾರದ ಮೇಲೆ ಆಗ್ರಾ ಅಥವಾ ದೆಹಲಿಯಿಂದ ಕಂದಹಾರ್‌ಗೆ ಮಾಹಿತಿಯು ತಲುಪುತ್ತಿದ್ದ ರೀತಿಗೆ ಅದನ್ನು ಹೋಲಿಸಬಹುದೇ? ಅದು ನಮಗೆ ಒಂದು ರೀತಿಯ ತೌಲನಿಕವಾದ ಅಳತೆ ಮತ್ತು ಮೌಲ್ಯಮಾಪನವನ್ನು ನೀಡುತ್ತದೆ.**

**ರೊಮಿಲಾ ಥಾಪರ್** : ಆದರೆ ಆಗ ನಾವು, ಸರಿಸುಮಾರು ಎರಡು ಶತಮಾನಗಳಲ್ಲಿ ಸಂವಹನ ತಂತ್ರಜ್ಞಾನದಲ್ಲಿ ನಡೆದ, ಉಂಟಾದ ಬದಲಾವಣೆ ಮತ್ತು ಸ್ಥಿತ್ಯಂತರವನ್ನು ಕೂಡಾ ಗಣನೆಗೆ ತೆಗೆದುಕೊಳ್ಳಬೇಕಾಗುತ್ತದೆ. ಅಲ್ಲಿ ಅತ್ಯಂತ ವೇಗವಾಗಿ ಸಂಚರಿಸುವ ಓಟಗಾರರಿದ್ದರೇ? ಅಥವಾ ಕುದುರೆಗಳಲ್ಲಿ ಏನಾದರೂ ಬದಲಾವಣೆಯಿತ್ತೇ? ಅರಣ್ಯಗಳ ಮಧ್ಯೆ ಸಾಗುತ್ತಿದ್ದ ರಸ್ತೆಗಳನ್ನು ಚೆನ್ನಾಗಿ ನಿರ್ಮಿಸಿ ಅವುಗಳನ್ನು ಕಾಯಲಾಗುತ್ತಿತ್ತೇ? ರಸ್ತೆಯ ಜತೆಜತೆಯಲ್ಲೇ ಹೆಚ್ಚು ವಿಶ್ರಾಂತಿ ಗೃಹಗಳಿದ್ದುವೇ? ಹೀಗೆ ನೀವು, ಸಾಮಾನ್ಯವಾಗಿ ಚರಿತ್ರೆಯಲ್ಲಿ ಅತಿ ಪ್ರಮುಖವಲ್ಲವೆಂದು ಹೇಳಲಾಗುವ, ಆದರೆ ನನಗನಿಸಿದ ಹಾಗೆ ಚರಿತ್ರೆಯ ಅತ್ಯಂತ ಪ್ರಮುಖ ಮತ್ತು ಕೇಂದ್ರ ವಿಚಾರಗಳ ಕುರಿತು ಗಮನ ಹರಿಸಬೇಕಾಗುತ್ತದೆ. ರಾಜನ ಆದೇಶವೊಂದು ಸಂವಹನ ಹೊಂದಲು ಎಷ್ಟು ಸಮಯ ಬೇಕಾಗುತ್ತವೆ? ಇದು ತೀರಾ ಪ್ರಮುಖ, ಯಾಕೆಂದರೆ ಅದು ಇಡಿಯ ಒಂದು ವ್ಯವಸ್ಥೆಯ ಎಲ್ಲಾ ಆಯಾಮಗಳನ್ನು ಗಮನಿಸುವಂತೆ ಮಾಡಿ ಅದು ಎಷ್ಟು ಸಂಕೀರ್ಣ ಎನ್ನುವ ವಾಸ್ತವವನ್ನು ತಿಳಿಸುತ್ತದೆ. ಇದರ ಅರಿವಿನ ನಂತರ ಅದನ್ನು ಒಂದು ತೀವ್ರ ತೆರನಾದ ಕೇಂದ್ರೀಕೃತ ಆಡಳಿತವೆಂದು ಕರೆಯುವುದು ಸಾಧ್ಯವೇ?

**ರಣ್‌ಬೀರ್ ಚಕ್ರವರ್ತಿ : ಯಾರೂ ಕೂಡಾ ಸುಮ್ಮನೆ ಆಜ್ಞೆ ಅಥವಾ ಆದೇಶವನ್ನು ಹೊರಡಿಸಲು ಮತ್ತು ಜಾರಿಗೊಳಿಸಲಾಗದು. ಅದು ವಿಸ್ತೃತವಾದ ಮೌರ್ಯನ್ ಸಾಮ್ರಾಜ್ಯದ ಉದ್ದ-ಅಗಲಗಳ ಮೇಲೆ ಪದಶ: ಜಾರಿಗೆ ಬರಲಿಲ್ಲ.**

**ರೊಮಿಲಾ ಥಾಪರ್:** ಹಾಗಿದ್ದರೆ ನೀವದನ್ನು ಪುನರ್‌ಪರಿಶೀಲಿಸಬೇಕಾಗುತ್ತದೆ. ನಾನೂ ಕೂಡಾ ಅದನ್ನೇ ಪರಿಶೀಲಿಸಿ ಅಂದಿದ್ದು, 'ಬಹುಶ: ಇಂತಹ ಆದೇಶ/ಆಜ್ಞೆಗಳು ತಲುಪಲು ಬೇರೆ ಬೇರೆ ಸಮಯ/ಕಾಲಾವಧಿಯನ್ನು ತೆಗೆದುಕೊಂಡಿದ್ದಿರಬಹುದೆಂದು. ಬಹುಶ: ಒಂದೇ ರೀತಿಯ ಆದೇಶವನ್ನು ತಕ್ಷಶಿಲೆಯ ಅಧಿಕಾರಿಗೂ ಹಾಗೂ ಕಳಿಂಗದ ಅಧಿಕಾರಿಗೂ ಕಳುಹಿಸಿದ್ದಿರಲಿಲ್ಲವಾಗಿತ್ತು. ಹೀಗೆ, ಸ್ಥಳೀಯ ಪರಿಸ್ಥಿತಿಗಳಿಗನುಗುಣವಾಗಿ ಹಾಗೂ ಅಧಿಕಾರೀಯ ಅಗತ್ಯತೆ ಮತ್ತು ಅನಿವಾರ್ಯತೆಯ ಆಧಾರದ ಮೇಲೆ ಒಂದು ಪರ್ಯಾಯವಾದ ಸ್ಥಳೀಯ ಆಡಳಿತವನ್ನು ಸೃಜಿಸಿ ವಿಭಾಗಿಸಿಕೊಂಡಿದ್ದ ಕ್ರಮವನ್ನು ಒಬ್ಬರು ಆಲೋಚಿಸಬಹುದೇ? ಅಲ್ಲಿ ಒಂದು ಕೇಂದ್ರೀಕೃತ ವ್ಯವಸ್ಥೆಯಿತ್ತು ಎನ್ನುವುದನ್ನು ಕೌಟಿಲ್ಯ ಪ್ರತಿಪಾದಿಸುತ್ತಿದ್ದಾನೆ. ಆದರೆ ಬಹುಶ, ಅದು ಅಂತಹ ವೈವಿಧ್ಯದ ಸಾಮ್ರಾಜ್ಯದಲ್ಲಿನ ಯಾವುದೋ ಒಂದು ಸೀಮಿತವಾದ ಪ್ರದೇಶಕ್ಕೆ ಅನ್ವಯವಾಗಿದ್ದಿರಬೇಕದು. ನಾನದನ್ನು ಮೆಟ್ರೋಪಾಲಿಟನ್ ರಾಜ್ಯವೆಂದು ಕರೆಯುತ್ತಾನೆ. ಇದೇ ಹೊತ್ತಿಗೆ ಅಲ್ಲಿ, ಪರಸ್ಪರ ಸಂಬಂಧಿತ ಮತ್ತು ಸಂಪರ್ಕಿತವಾದ ಕಡಿಮೆ ಕೇಂದ್ರಾಡಳಿತದ ನಿಯಂತ್ರಣವನ್ನು ಹೊಂದಿದ್ದ ಕೇಂದ್ರ ಅಥವಾ ತಿರುಳು ಪ್ರದೇಶಗಳೂ ಕೂಡಾ ಇದ್ದುವು. ಪ್ರಾಂತೀಯ ಆಡಳಿತವು ಬಹುಶ: ಸ್ಥಳೀಯ ನೆಲೆಯಲ್ಲಿ ಹಲವು ನಿರ್ಣಯಗಳನ್ನು ತೆಗೆದುಕೊಳ್ಳುತ್ತಿದ್ದಿರಬಹುದು. ಆದರೂ ಕೆಲವು ರೀತಿಯ ಮತ್ತು ವರ್ಗೀಕೃತ ಆದೇಶ ಹಾಗೂ ನಿರ್ಣಯಗಳನ್ನು ರಾಜನ ಪ್ರತಿಕ್ರಿಯೆಗೆ ಕಾಯಲಾಗುತ್ತಿತ್ತು. ಅಂತಿಮವಾಗಿ ಅಲ್ಲಿ ಚದುರಿದ ಪರಿಧೀಯ ಪ್ರದೇಶಗಳಿರುತ್ತಿದ್ದು, ಅಲ್ಲಿ ನಿರಂತರವಾದ ಸಂಪರ್ಕ-ಸಂಬಂಧಗಳಿರದೇ ರಾಜ್ಯದ ಸ್ಥಳೀಯ ಉತ್ಪಾದನೆಯನ್ನು ಅಲ್ಲಿನ ಸ್ಥಳೀಯ ಅಧಿಕಾರಿಗಳೇ ಸಂಗ್ರಹಿಸುತ್ತಿದ್ದರು. ಈ ಪ್ರದೇಶಗಳು ಮುಖ್ಯವಾಗಿ ಅರಣ್ಯದ ಜನರು ವಾಸಿಸುತ್ತಿದ್ದ ಕಾಡು ಪ್ರದೇಶವಾಗಿತ್ತು. ಒಂದು ನೆಲೆಯಲ್ಲಿ ನನಗೆ, ಅತ್ಯಂತ ಭಿನ್ನ ಮತ್ತು ವ್ಯತ್ಯಾಸಗಳಿರುವ ಆಡಳಿತದ ಅಸ್ತಿತ್ವ ಕಾಣಿಸುತ್ತದೆ. ನಾನು, ನಂತರದ ಅವಧಿಯನ್ನು ಅವಲೋಕಿಸಿದಾಗಲೂ ಕೂಡಾ ಇಂತಹ ಭಿನ್ನತೆ ಮತ್ತು ವೈವಿಧ್ಯತೆ ಕಾಣಿಸಿ, ನಾನು ಕಳೆದ 50 ವರ್ಷಗಳಿಂದ ಆಗ್ರಹಿಸುತ್ತಿರುವ ಏಕರೂಪೀ ಕೇಂದ್ರೀಕೃತ ಆಡಳಿತ ಮತ್ತು ನಿಯಂತ್ರಣಕ್ಕಿಂತ ಹೆಚ್ಚು ಹೊಂದಾಣಿಕೆ ಕಾಣಿಸುತ್ತದೆ.

ಆದರೆ ನಾನಿಲ್ಲಿ ಒಂದು ಸಂಗತಿಯನ್ನು ಪ್ರಸ್ತಾಪಿಸಬೇಕು, ಅದೆಂದರೆ ನಾನು ಮಾತನಾಡುತ್ತಿರುವುದು ಆಡಳಿತಾತ್ಮಕ ಮಾದರಿಗಳಲ್ಲಿನ ಭಿನ್ನತೆ ಮತ್ತು ವ್ಯತ್ಯಾಸದ ಬಗೆಗೆಯೇ ಹೊರತು ರಾಜನ ಅಥವಾ ಆಡಳಿತಗಾರನ ಅಧಿಕಾರದ ದೃಷ್ಟಿಯ ಬಗೆಗಲ್ಲ. ತಿರುಳು ಅಥವಾ ಕೇಂದ್ರದ ಮತ್ತು ಪರಿಧೀಯ ಪ್ರದೇಶಗಳಲ್ಲಿ ರಾಜನ ಅಧಿಕಾರ ಕೇವಲ ಸಾಂಕೇತಿಕವಾಗಿತ್ತು. ಮತ್ತದು ಕ್ರಿಯಾವಿಧಿಗಳ ಮೂಲಕ ಅಭಿವ್ಯಕ್ತಗೊಳ್ಳುತ್ತಿತ್ತು ಎಂದು ನಾನು ವಾದ ಮಾಡುತ್ತಿಲ್ಲ. ನನ್ನ ಪ್ರಬಲವಾದ ವಾದವೇನೆಂದರೆ, ವೈವಿಧ್ಯದ ಆರ್ಥಿಕತೆ ಮತ್ತು ಸಮುದಾಯಗಳನ್ನು ಆಳುತ್ತಿದ್ದ ರಾಜನ ಅಥವಾ ಆಡಳಿತಗಾರನ ವ್ಯವಸ್ಥೆಯಲ್ಲಿ ಕೆಲವು ವ್ಯತ್ಯಾಸಗಳನ್ನು ಗಮನಿಸುವುದಾಗಿದೆ. ಬಹುಶ: ಇಂತಹ ವ್ಯವಸ್ಥೆಗಳು ಹೆಚ್ಚು ಏಕರೂಪವಾಗಲು ಹಲವು ಶತಮಾನಗಳೇ ಬೇಕಾಗಿ, ಅಂಚಿಗೆ ಸರಿದ ಅಥವಾ ತಳಮಟ್ಟದ ಸಮುದಾಯಗಳು ಒಂದು ಕಡೆ ನೆಲೆ ನಿಂತು ಸಂಪರ್ಕ-ಸಂವಹನಗಳ ವ್ಯವಸ್ಥೆ ಹಾಗೂ

ಮತ್ತಿತರ ಸಂಗತಿಗಳ ಬೆಳವಣಿಗೆ ಹೊಂದಿದ್ದರ ಕಾರಣವಾಗಿರಬಹುದು. ಈ ಕಾರಣದಿಂದ ಮೌರ್ಯ ಸಾಮ್ರಾಜ್ಯಕ್ಕಿಂತ ಭಿನ್ನವಾದ ಆಡಳಿತಾತ್ಮಕ ಮಾದರಿಯನ್ನು ಗುಪ್ತ ಸಾಮ್ರಾಜ್ಯ ಹೊಂದಬೇಕಾಯಿತು.

**ರಣ್‌ಬೀರ್ ಚಕ್ರವರ್ತಿ: ಈ ಸಂಧಾನ, ಹೊಂದಾಣಿಕೆಯು ಅತಿ ಕಡಿಮೆ ಮಹತ್ವದ್ದೇನಲ್ಲ, ಕೇಂದ್ರೀಕರಣಕ್ಕಿಂತ. ನಾವು ಅಶೋಕನ ವಿಭಿನ್ನ ಮನೋಭಾವಗಳನ್ನು, ವಿಭಿನ್ನ ಪ್ರದೇಶ ಮತ್ತು ಪ್ರಬಲತೆಯೊಂದಿಗೆ ಭಿನ್ನಭಿನ್ನವಾಗಿ ಕಾಣುತ್ತೇವೆ. ಪುನ: ಇದು ನೀವು ಈಗಾಗಲೇ ಹೇಳಿದ ವಿಚಾರದ ಜತೆಗೇನೇ ಬರುತ್ತದೆ. ಅದೇನೆಂದರೆ, ಏಕರೂಪತೆಯಿಲ್ಲದ, ಬದಲಿಗೆ ವೈವಿಧ್ಯತೆ ಮತ್ತು ಬಹುರೂಪತೆ ಹೊಂದಿರುವ ಪ್ರದೇಶಗಳು ಅಸ್ತಿತ್ವದಲ್ಲಿ ಇದ್ದಿದುದ್ದನ್ನು. ನೀವು ಬಹುಶ: ಯಾವಾಗಲೂ ರಾಜರ್ಷಿ ಎಂದು ಕಾಣಲ್ಪಡುವ ಅಶೋಕನ ಸಂದರ್ಭದಲ್ಲಿ ಇದನ್ನು ತುಂಬಾ ಚೆನ್ನಾಗಿ ಗುರುತಿಸಿದ್ದೀರಿ. ಆತ ಅರಣ್ಯವಾಸಿಗಳನ್ನು ಸಂಬೋಧಿಸಲು ಬಳಸುವ ಪದ ಮತ್ತು ಧ್ವನಿಯು, ಇತರರನ್ನು ಸಂಬೋಧಿಸಲು ಬಳಸುವ ಪದಕ್ಕಿಂತ ತುಂಬಾ ಭಿನ್ನವಾದುದಾಗಿದೆ. ಬಹುಶ: ಅರಣ್ಯವಾಸಿಗಳ ಸಂಬೋಧನೆಯ ಈ ಧ್ವನಿ ಒಂದು ರೀತಿ ಬೆದರಿಕೆಯ ನೆಲೆಯಲ್ಲಿದೆ. ಬಹುಶ: ಇಂದಿಗೂ ಕೂಡಾ ಅರಣ್ಯವಾಸಿಗಳನ್ನು ಕೆಳಸಮುದಾಯದ ಅಂಚಿಗೆ ಸರಿದ ಅರಣ್ಯ ವಾಸಿಗಳಾಗಿ ಇದೇ ರೀತಿಯಲ್ಲಿ ನಡೆಸಿಕೊಳ್ಳಲಾಗುತ್ತಿದೆ.**

**ರೊಮಿಲಾ ಥಾಪರ್**: ಬಹುಶ: ಇಂತಹ ಅರಣ್ಯವಾಸಿಗಳನ್ನು ನಡೆಸಿಕೊಳ್ಳುವ ರೀತಿಯನ್ನು ನೀವು, ಅಶೋಕನ ಅಧಿಕಾರಿಗಳ ರೀತಿಯಲ್ಲೇ ಚಿಂತಿಸಬಹುದಾಗಿದೆ.

**ರಣ್‌ಬೀರ್ ಚಕ್ರವರ್ತಿ : ಎಲ್ಲವನ್ನೂ ಕೂಡಾ ಬೆಳವಣಿಗೆ ಮತ್ತು ಅಭಿವೃದ್ಧಿಯ ಹೆಸರಿನಲ್ಲಿ ನ್ಯಾಯಬದ್ಧಗೊಳಿಸಿದರೆ, ಅರಣ್ಯವಾಸಿಗಳ ಅಂಚಿಗೆ ಸರಿಯುವಿಕೆ, ಅವರ ಅವಜ್ಞೆ ಮುಂದುವರಿಯುತ್ತದೆ. ಪ್ರಾಚೀನ ಸಮಾಜಗಳ ಅಸಮ ಸಂಘಟಿತ ಮತ್ತು ಅಸಮಾನವಾಗಿ ವ್ಯವಸ್ಥಿತಗೊಂಡ ನೆಲೆಯ ಬೆಳಕಿನಲ್ಲಿ ನೀವು ಪ್ರಾಚೀನ ಭಾರತದಲ್ಲಿದ್ದ 'ಸುವರ್ಣ ಯುಗ'ವನ್ನು ಟೀಕಿಸಿದಿರಿ. ನಾನಂತೂ ಸ್ಪಷ್ಟವಾಗಿ ಹೇಳುತ್ತಿದ್ದೇನೆ, ಏನೆಂದರೆ ನಿಮ್ಮನ್ನು ಈ ನಿಲುವುಗಳ ಕಾರಣದಿಂದ ಒಂದು ರೀತಿಯ ವಿಲನ್ ಆಗಿ ಕಾಣಲಾಗುತ್ತಿದೆ.**

**ರೊಮಿಲಾ ಥಾಪರ್** : ಹೌದು, ನಿಶ್ಚಿತವಾಗಿ ಒಂದು ಗುಂಪು ನನ್ನನ್ನು ಹಾಗೆ ನೋಡುತ್ತಿದೆ. ಆದರೆ ನಾನು ಈ ರೀತಿ ಹಣೆಪಟ್ಟಿ ಅಂಟಿಸಿದ ಹಲವಾರು ಚರಿತ್ರಕಾರರ ಸಾಂಗತ್ಯದಲ್ಲಿದ್ದೇನೆ. ಇದು ಅತ್ಯಂತ ಮುಖ್ಯವಾದುದು. ಸುವರ್ಣಯುಗವನ್ನು ಪ್ರಶ್ನಿಸುವ ಚರಿತ್ರಕಾರನ ಉದ್ದೇಶ ಅದರ ವೈಭವದ ಸಿಂಧುತ್ವವನ್ನು ನಾಶಮಾಡಲು ಪ್ರಯತ್ನಿಸುವುದಲ್ಲ. ಬದಲು, ಈ ರೀತಿಯ ಅದರ ಬಗೆಗಿನ ವಿವರಣೆಯ ಲಕ್ಷಣಗಳನ್ನು ಪರೀಕ್ಷಿಸಿ ಅಂತಹ ವಿಚಾರವನ್ನು ಇನ್ನೂ ಹೆಚ್ಚು ಮತ್ತು ಮುಂದಕ್ಕೆ ಪರಿಶೋಧಿಸುವುದಾಗಿದೆ. ಈ ರೀತಿ ಮಾಡಬೇಕಾದಾಗ ನೀವು ಪ್ರಶ್ನೆಗಳನ್ನು ಕೇಳಬೇಕಾಗುತ್ತದೆ. ನೀವು ಹೊಸದಾದ ಲ್ಯಾಂಡ್‌ಸ್ಕೇಪ್ ಅನ್ನು ಶೋಧಿಸುತ್ತಾ ಮತ್ತು ಅರಣ್ಯದಲ್ಲಿ ಸಾಗುತ್ತಿದ್ದರೂ ಕೂಡಾ ನಿಮ್ಮನ್ನು ನೀವು, 'ನಾನೆಲ್ಲಿಗೆ ಹೋಗುತ್ತಿದ್ದೇನೆ. ಯಾವ ದಿಕ್ಕಿನಲ್ಲಿ? ನಾನು ಈ ಸ್ವಾಭಾವಿಕ ಸಸ್ಯವರ್ಗ ಮತ್ತು ಮರಗಿಡಗಳಿಂದ ಏನನ್ನು ಕಲಿಯುತ್ತಿದ್ದೇನೆ? ಎಂಬ ಪ್ರಶ್ನೆಗಳನ್ನು ಕೇಳಿಕೊಳ್ಳಬೇಕಾಗುತ್ತದೆ.. ಚರಿತ್ರಕಾರನೂ ಕೂಡಾ ಇದೇ ಕೆಲಸವನ್ನು ಮಾಡಬೇಕು. ಅವರೂ ಕೂಡಾ ಒಂದು ತಿಳಿದ ಲ್ಯಾಂಡ್‌ಸ್ಕೇಪ್‌ನಿಂದ ಅಜ್ಞಾತ ಲ್ಯಾಂಡ್‌ಸ್ಕೇಪ್‌ಗೆ ಚಲಿಸುತ್ತಿರಬೇಕಾಗುತ್ತದೆ. ಈ

ಲ್ಯಾಂಡ್‌ಸ್ಕೇಪ್ ಅನ್ನು ನಿರ್ವಚಿಸುವ ಸಲುವಾಗಿ ನಾವು ಇತರೆ ಮತ್ತು ಬೇರೆ ಪ್ರಶ್ನೆಗಳನ್ನೂ ಕೂಡಾ ಕೇಳಬೇಕು. ಈ ಮೂಲಕ ಅರಣ್ಯದಿಂದ ಹೊರಬರುವ ದಾರಿಯನ್ನೂ ಹುಡುಕಬೇಕು. ಆದರೆ ಇದನ್ನು ಸರಿಯಾಗಿ ಅರ್ಥೈಸಿಕೊಳ್ಳಲಾಗುತ್ತಿಲ್ಲ.

## ಉದಾರವಾದೀ ಮೌಲ್ಯಗಳ ನಷ್ಟ

**ರಣ್‌ಬೀರ್ ಚಕ್ರವರ್ತಿ: ಕಳೆದ ಕಾಲು ಶತಮಾನದಲ್ಲಿ ಭಾರತೀಯರಲ್ಲಿ ದೃಷ್ಟಿಕೋನ ಮತ್ತು ಒಳನೋಟಗಳ ಬಗೆಗಿನ ವ್ಯತ್ಯಾಸಗಳ ಕಾರಣದಿಂದ ತೀರದ ಅಸಹಿಷ್ಣುತೆ ಕಾಣಿಸುತ್ತಿದೆ. ನಾನು ಆರೋಗ್ಯಕರ ಸಂವಾದಗಳನ್ನು ನಡೆಸುತ್ತಿರುವ ಮುಖ್ಯವಾಹಿನಿಯ ಚರಿತ್ರಕಾರರನ್ನು ಉದ್ದೇಶಿಸಿ ಮಾತನಾಡುತ್ತಿಲ್ಲ. ಆದರೆ ಸಂವಾದಗಳ ಸಂಪ್ರದಾಯವನ್ನು ಸಾಧಿಸುವ ಭಾರತೀಯರೆಲ್ಲಿ? ಚರಿತ್ರೆಯ ಮತ್ತು ಚಾರಿತ್ರಿಕ ಅರ್ಥಗ್ರಹಿಕೆಯ ಸಂದರ್ಭದಲ್ಲಿ ನಾವು ಸಂವಾದಗಳನ್ನು ಸಾಧಿಸುವ ಭಾರತೀಯರನ್ನು ಕಳೆದುಕೊಳ್ಳುತ್ತಿದ್ದೀವಾ?**

**ರೊಮಿಲಾ ಥಾಪರ್** : ಇಲ್ಲ, ನನಗೆ ತುಂಬಾ ದು:ಖವೆನಿಸುವುದು, ಸುಮಾರು ಸ್ವತಂತ್ರ ಬಂದ 60 ವರ್ಷಗಳಲ್ಲಿ ಅತ್ಯಂತ ವ್ಯಾಪ್ತವಾಗಬೇಕಿದ್ದ ಉದಾರವಾದೀ ಮೌಲ್ಯಗಳು ನಷ್ಟವಾಗುತ್ತಿರುವುದರ ಬಗ್ಗೆ. ಆದರೆ ಅದು ಸಂಭವಿಸಿಲ್ಲ. ಉದಾರವಾದೀ ಮೌಲ್ಯಗಳನ್ನಿಂದು ಆಚರಿಸಿ ಸ್ವೀಕರಿಸಿರುವವರು ಬರೀ ಒಂದು ಸಣ್ಣ ಪ್ರಮಾಣದ ಮಂದಿ. ನಿಜವಾಗಿಯೂ ಅವರು ಇಂದು ಒಂದು ರೀತಿಯಲ್ಲಿ ಅಲ್ಪಸಂಖ್ಯಾತರೇ ಆಗಿದ್ದಾರೆ. ಈಗಿನ ಅತ್ಯಂತ ಸಂಕಟದ ಸ್ಥಿತಿಯೆಂದರೆ ಯಾರೂ ಕೂಡಾ ನಾವೆದುರಿಸುತ್ತಿರುವ ವಿದ್ಯಮಾನಗಳ ಬಗ್ಗೆ ಕ್ರಿಟಿಕಲ್ ಆಗಿ ವಿಮರ್ಶೀಯ ನೆಲೆಯಲ್ಲಿ ಯೋಚಿಸಲು ನಾಚುತ್ತಾ ನಿರಾಕರಿಸುತ್ತಾ ಒಳಸರಿಯುತ್ತಿರುವುದು. ಅವರಿಗೆ ಏನು ಲಭ್ಯವಾಗಿದೆಯೋ (ಕೊಟ್ಟಿದ್ದನ್ನಷ್ಟೇ) ಅವರು ಅದನ್ನಷ್ಟೇ ಸ್ವೀಕರಿಸುತ್ತಾರಷ್ಟೇ. ಶಿಕ್ಷಣವೂ ಅಷ್ಟೇ, ಅದು ಯುವ ಪೀಳಿಗೆಯನ್ನು ಸ್ವತಂತ್ರವಾಗಿ ಚಿಂತನೆ ಮಾಡಲು ತನ್ಮೂಲಕ ಅವರ ಸುತ್ತಲಿನ ವಿದ್ಯಮಾನಗಳನ್ನು ಪ್ರಶ್ನಿಸುವ ಮನೋಭಾವವನ್ನೂ ಕೂಡಾ ಬೆಳೆಸುತ್ತಿಲ್ಲ. ಅವರು ಹೇಳಿದ್ದನ್ನು ಪ್ರಶ್ನಿಸದೇ ನಂಬುತ್ತಾರೆ. ವೈಚಾರಿಕವಾದ ಆಯಾಮ ಮತ್ತು ನೆಲೆಗಳಿಂದ ಅವರು ಆಲೋಚಿಸುವುದೇ ಇಲ್ಲ. ಇದು ಅತ್ಯಂತ ದು:ಖಕರವಾದುದು.

**ರಣ್‌ಬೀರ್ ಚಕ್ರವರ್ತಿ : ಇಂಟರ್‌ನೆಟ್‌ನಲ್ಲಿ ಎಲ್ಲವನ್ನೂ ಸರ್ಚ್ ಮಾಡುವ ಬುದ್ಧಿ ಮತ್ತು ಅಲ್ಲಿ ಏನಿದೆ ಅದೆಲ್ಲವೂ ನಂಬಲರ್ಹವಾದುದು ಎಂಬ ನಂಬಿಕೆ ಮತ್ತು ಹೊಸ ವಿಶ್ವಾಸವೂ ಇಂದಿದೆ.**

**ರೊಮಿಲಾ ಥಾಪರ್**: ಹೌದು, ಯಾಕೆಂದರೆ ಅಲ್ಲಿ ಎಲ್ಲಾ ರೀತಿಯ ಜನರೂ ಕೂಡಾ ಚಿಂತನಾತ್ಮಕ ಅಭಿಪ್ರಾಯಗಳಿಂದ ಹಿಡಿದು ಅತ್ಯಂತ ಹೆಚ್ಚಿನ ಅಜ್ಞಾನದ ಬರಹ ವಿಚಾರದವರೆಗೆ ತಮ್ಮ ವ್ಯಾಪ್ತಿಯನ್ನು ಹೊಂದಿರುವ ಕಾರಣದಿಂದ.

**ರಣ್‌ಬೀರ್ ಚಕ್ರವರ್ತಿ: ಹೌದು, ಜತೆಗೆ ಅಲ್ಲಿ ಒಂದು ಗುಣಮಟ್ಟ ಮತ್ತು ನಿಯಂತ್ರಣ ಕೂಡಾ ಇರುವುದಿಲ್ಲ.**

**ರೊಮಿಲಾ ಥಾಪರ್**: ಇಂಟರ್‌ನೆಟ್ ತೀರಾ ಮುಕ್ತವಾದುದು. ಆದರೆ ಆಗ ನೀವದನ್ನು ಪ್ರಶಂಸಿಸಬೇಕಷ್ಟೇ. ಅದು ಮುಕ್ತವಾದ ಮಾಹಿತಿಯಾದಾಗ ಅದು ನಂಬಲರ್ಹವೋ, ನಂಬಬಹುದೋ ಎಂಬುದರ ಬಗ್ಗೆ ಯಾರೂ ಕೂಡಾ ಟೀಕಿಸುವುದಿಲ್ಲವೋ, ಆಗ

ನಾವು ಕಷ್ಟದಲ್ಲಿ ಸಿಲುಕಬೇಕಾಗುತ್ತದೆ. ಇಲ್ಲಿ ಈ ರೀತಿ ರಿಸ್ಕ್ ತೆಗೆದುಕೊಳ್ಳುವ ಎಚ್ಚರ ಕಾಣಿಸುವುದಿಲ್ಲ. ಇಂತಹ ಎಚ್ಚರವು, ಶಾಲೆಗಳಲ್ಲಿ ಒಂದು ಸಮರ್ಪಕ ಬುದ್ಧಿವಂತ ಬೋಧನೆಯಿಂದ ಬರಬೇಕಷ್ಟೇ.

**ರಣ್‌ಬೀರ್ ಚಕ್ರವರ್ತಿ: ಇದೇ ಹೊತ್ತಿಗೆ ಇಂಟರ್‌ನೆಟ್ ಮೂಲಕ, ಯಾವುದನ್ನೂ ಕೂಡಾ ಅಪ್‌ಲೋಡ್ ಮಾಡಬಹುದು. ಯಾರಾದರೂ ಒಬ್ಬ ವ್ಯಕ್ತಿ ತುಂಬಾ ಪ್ರಭಾವಶಾಲಿಯಾಗಿದ್ದರೆ, ಯಾವುದೇ ಅನುಭವವಿಲ್ಲದ್ದಾಗ್ಯೂ ಕೂಡಾ ಅವರದೇ ಆದ ಅಭಿಪ್ರಾಯಗಳನ್ನು ಸೃಷ್ಟಿಸಿ ರೂಪಿಸಬಹುದು. ಬಹುಶ: ಭಾರತದ ಚರಿತ್ರೆಯ ಅಧ್ಯಯನದ ಸಂದರ್ಭದಲ್ಲಿ ವಿದೇಶಗಳಿಂದ ನಿರಂತರವಾಗಿ ಇಂತಹ ಸ್ಥಿತಿ ಉಂಟಾಗುತ್ತಿದೆ.**

**ರೊಮಿಲಾ ಥಾಪರ್** : ಸೋಶಿಯಲ್ ಮೀಡಿಯಾವನ್ನು ಈಗ ಎಲ್ಲಾ ಸಂದರ್ಭಗಳಲ್ಲೂ ಉದಾಹರಿಸಲಾಗುತ್ತಿದೆ. ಈ ಮೊದಲು ಅವುಗಳು ಕಡಿಮೆ ಆಕರ್ಷಣೆಯನ್ನು ಹೊಂದಿದ್ದುವು. ಈಗ ಅವುಗಳು ರಾಜಕೀಯ ಚರ್ಚೆಯಾಗಲೀ, ಇನ್ನೊಂದಿರಲಿ ಮುಂಚೂಣಿಯಲ್ಲಿರುತ್ತವೆ. ಸೋಶಿಯಲ್ ಮೀಡಿಯಾಗಳು, ಇಂಟರ್‌ನೆಟ್, ಪ್ರಿಂಟ್ ಮೀಡಿಯಾ ಮತ್ತು ದೃಶ್ಯ ಮಾಧ್ಯಮಗಳಿಂದು ಅಭಿಪ್ರಾಯ ರೂಪುಗೊಳಿಸುವ ಕಾರ್ಖಾನೆಗಳಾಗುತ್ತಿವೆ. ಇವುಗಳು ಯಾವುದೇ ಪುಸ್ತಕಗಳನ್ನು ಓದದಿರುವ ಯುವ ಸಮೂಹದ ನಡುವೆ ಬಹಳ ಪರಿಣಾಮಕಾರಿಯಾಗಿವೆ. ಆದ್ದರಿಂದ ಈ ರೀತಿಯ ಸಮೂಹ ಮಾಧ್ಯಮಗಳು, ಚರಿತ್ರೆ ಓದೆಂದರೇನು? ಚರಿತ್ರೆ ಬರೀ ಯಾರದ್ದೂ ಮತ್ತು ಎಲ್ಲರದ್ದೂ ಆಗಬಹುದಾದ ಕಥನಗಳು ಮಾತ್ರವೇ ಅಲ್ಲದೆ, ಚರಿತ್ರೆಯು ಈಗ ಒಂದು ಶಿಸ್ತು ಹಾಗೂ ಅದು ಒಂದು ವೈಧಾನಿಕತೆ ಹಾಗೂ ಒಂದು ವಿಶ್ಲೇಷಣೆಯ ವೈಧಾನಿಕತೆ ಮತ್ತು ವಿಮರ್ಶೀಯ ವಿಚಾರಣೆಯನ್ನೂ ಹೊಂದಿದೆ ಎನ್ನುವುದನ್ನೂ ತಿಳಿಸಬೇಕಾಗಿದೆ. ದಯವಿಟ್ಟು ಚರಿತ್ರೆಯ ಬಗೆಗೆ, ಮತ್ತದರ ಬರವಣಿಗೆಯ ಬಗೆಗೆ ತಿಳಿವಳಿಕೆ ಹೊಂದದೆ, ಅದರ ತನಿಖೆಯ ವೈಧಾನಿಕತೆಯನ್ನು ಅರಿಯದೆ ಹಾಗೂ ಚರಿತ್ರೆ ಎಂಬ ಶಿಸ್ತಿನ ತಾತ್ವಿಕ ಅರಿವಿಲ್ಲದೇ ದಯವಿಟ್ಟು ಹಿಂಜರಿಕೆಯನ್ನು ಹೊಂದಿರಿ, ಶಂಕಿಸಿ ಎಂದು ಯಾರಾದರೂ ತಿಳಿಸಬೇಕು. ದಯವಿಟ್ಟು ಫಿಸಿಕ್ಸ್‌ನ ಬಗೆಗೆ ತಿಳಿವಳಿಕೆಯನ್ನು ಹೊಂದಿ ಫಿಸಿಸಿಸ್ಟ್ ಶೋಧಿಸಿ ತೋರಿಸುವ ಹಾಗಿನ ಜ್ಞಾನ ನಿಮಗೆ ಇಲ್ಲದಿದ್ದರೆ ಫಿಸಿಕ್ಸ್ ಬಗೆಗೆ ಮಾತನಾಡಲು ಹಿಂಜರಿಯಿರಿ ಎನ್ನುವ ನೆಲೆಯಲ್ಲಿ. ಇಂದು ಯಾರೂ ಕೂಡಾ ಚರಿತ್ರೆಯ ಬಗೆಗೆ ತಿಳಿವಳಿಕೆಯನ್ನು ಹೊಂದದೆಯೇ, ಚರಿತ್ರಕಾರನ ದೃಷ್ಟಿ ಹೇಗಿರಬೇಕೆಂದು ತಿಳಿಸುವ ಅದನ್ನು ಹಕ್ಕೆಂದು ತಿಳಿದು ನಿಯಂತ್ರಿಸುವ ಸ್ಥಿತಿಯನ್ನು ನಾವು ಕಾಣುತ್ತೇವೆ. ಅಲ್ಲಿಂದ ಅದು ಮುಂದುವರಿದು ಅವರೊಪ್ಪದಿರುವ ಚರಿತ್ರಕಾರನ ನಿಲುವನ್ನು ನಿಂದಿಸುವವರೆಗೆ ಸಾಗುತ್ತದೆ. ನಾನು ಹೇಳುವುದೇನೆಂದರೆ ಅವರ ಹಕ್ಕನ್ನು ನಿರಾಕರಿಸಬೇಕೆಂದಲ್ಲ ಬದಲು, ಸ್ವ–ವಿಮರ್ಶೆಯಲ್ಲಿ ಒಂದು ಸಣ್ಣದಾದ ಸರಳ ನಮ್ರತೆ ನಮಗೆ ಬೇಕು.

**ರಣ್‌ಬೀರ್ ಚಕ್ರವರ್ತಿ: ಅಂದರೆ ನೀವು ಹೇಳುತ್ತಿರುವುದು ವೃತ್ತಿಪರ ಚರಿತ್ರೆಯನ್ನು ಸಾಮಾನ್ಯ ಸಾರ್ವಜನಿಕ ವಲಯಕ್ಕೆ ತಂದು ಅದನ್ನು ಸಾರ್ವಜನಿಕ ಸಂದರ್ಭ ಮತ್ತು ಅವಕಾಶಕ್ಕೆ ಹೆಚ್ಚು ಒಗ್ಗಿಸಬೇಕು ಎಂಬುದಾಗಿ.**

**ರೊಮಿಲಾ ಥಾಪರ್** : ಹೌದು. ಬಹುಶ: ನಮಗಿರುವ ದೊಡ್ಡ ಕೊರತೆಯೆಂದರೆ, ನಾನದನ್ನು 'ಇಂಟಲೆಕ್ಚುವಲ್ ಮಿಡಲ್‌ಮ್ಯಾನ್' (ಬೌದ್ಧಿಕ ಮಧ್ಯವರ್ತಿ) ಎಂದೇ ಕರೆಯುತ್ತೇನೆ.

ಇದು ಯುರೋಪ್ ಮತ್ತು ಅಮೆರಿಕಾದಲ್ಲಿ ಚಾಲ್ತಿಯಲ್ಲಿದೆ. ಅಲ್ಲಿ ಒಂದು ನೆಲೆಯಲ್ಲಿ ಕೇವಲ ಸಂಶೋಧನೆಯನ್ನು ಕೇಂದ್ರಿಕರಿಸಿ ಕೆಲಸಮಾಡುವ ಒಂದು ಗುಂಪಿದೆ ಮತ್ತು ಅದೇ ಹೊತ್ತಿಗೆ ಅಂತಹ ಸಂಶೋಧನೆಯನ್ನು ಅರ್ಥೈಸಿಕೊಂಡು, ಅತ್ಯಂತ ಪಾಪ್ಯುಲರ್ ನೆಲೆಗೆ ಇಳಿಸುವ ಮುಟ್ಟಿಸುವ ಇನ್ನೊಂದು ಗುಂಪು ಅಥವಾ ವ್ಯವಸ್ಥೆ ಇದೆ.

**ರಣ್‌ಬೀರ್ ಚಕ್ರವರ್ತಿ : ಆದರೆ ಅವರು ವಿಷಯವನ್ನು ಅದರ ಯಥಾರ್ಥತೆಯನ್ನು ಹಾಗೂ ಶಿಸ್ತನ್ನು ದುರ್ಬಲಗೊಳಿಸುವುದಿಲ್ಲ.**

**ರೊಮಿಲಾ ಥಾಪರ್**: ಆದರೆ ಅವರದನ್ನು ದುರ್ಬಲಗೊಳಿಸುವುದಿಲ್ಲ, ಬದಲು ಸಂಶೋಧಕರು ಹಾಗೂ ಸಾಮಾನ್ಯ ಸಾರ್ವಜನಿಕರ ನಡುವೆ ಸೇತುಬಂಧದ ಹಾಗೆ ಕಾರ್ಯವೆಸಗುತ್ತಾರೆ. ನಮಗಿಲ್ಲಿ ಆ ರೀತಿಯ ಸಂಧಾನ ಸಾಧಿಸುವ ಸೇತುಬಂಧದ ವ್ಯಕ್ತಿಗಳಿಲ್ಲ. ಕೆಲವು ಮಾಹಿತಿ ಕೊರತೆ ಹೊಂದಿದ ಜನರು ಸಾರ್ವಜನಿಕ ವಲಯದಿಂದ ಉದ್ಭವಿಸಿ ತಾವೇ ಸ್ವತಃ ಸಂಶೋಧನೆಯ ಫಲಿತದ ಹಾಗಿನ ದೃಷ್ಟಿ ಹೊಂದಿದವರೆಂದು ಸಾರುತ್ತಾದರೂ ಕೂಡಾ ವಾಸ್ತವದಲ್ಲಿ ಸಂಶೋಧನೆಯ ಫಲಿತಗಳ ತುಸು ಮಾತ್ರವೂ ಕೂಡಾ ಅವರ ಹೇಳಿಕೆಯನ್ನು ಹೋಲುವುದಿಲ್ಲ. ಬಹುಶಃ ಇದು ಶಿಕ್ಷಣ ಮತ್ತು ಜ್ಞಾನದ ಬಡತನದಿಂದಲೂ ಆಗಬಹುದು ಅಥವಾ ಸಮೂಹ ಮಾಧ್ಯಮ ಹಾಗೂ ಇಂಟರ್‌ನೆಟ್ ಮೇಲಿನ ಪ್ರಬಲ ಅವಲಂಬನೆಯಿಂದ ಕೂಡಾ ಆಗಿರಬಹುದು. ಒಂದು ಮಾಧ್ಯಮವು ವಿಷಯದ ಬಗೆಗೆ ಅಜ್ಞಾನವನ್ನು ಹೊಂದಿದ್ದರೂ ಕೂಡಾ, ಅದು ತನ್ನ ಅಸ್ತಿತ್ವ ಮತ್ತು ಕಾರ್ಯಕ್ರಮದ ಉನ್ನತಿಗಾಗಿ ನೋಡುಗರಿಗೆ ಕೆಲವು ತೀರ್ಪು ಹಾಗೂ ನಿಲುವುಗಳನ್ನು ನೀಡಲು ತವಕಿಸುತ್ತದೆ. ಇದೇ ಹೊತ್ತಿಗೆ ಸರಿಸುಮಾರಾಗಿ ಅದು ಒಂದು ಸೈದ್ಧಾಂತಿಕ ಅಭಿಪ್ರಾಯದಿಂದ ಪ್ರೇರಿತವಾಗಿ, ಒಂದು ನಿಶ್ಚಿತ ಪ್ರಮಾಣಕ್ಕೆ ಮಾತ್ರ ವಿರೋಧವನ್ನು ಬಯಸುತ್ತದೆ.

## ಹೆಚ್ಚುತ್ತಿರುವ ಅಸಹಿಷ್ಣುತೆ

**ರಣ್‌ಬೀರ್ ಚಕ್ರವರ್ತಿ: ಕೆಲವು ಚಾರಿತ್ರಿಕ ಸಂಶೋಧನೆ ಹಾಗೂ ಫಲಿತಗಳ ಆವಿರ್ಭಾವದಿಂದ ಕೆಲವು ಸಮುದಾಯಗಳ ಭಾವನೆ ಮತ್ತು ಆಶೋತ್ತರ ಘಾಸಿಗೊಳ್ಳುತ್ತಿದೆ ಎಂಬ ಕೆಲವು ಗೃಹೀತಗಳು ಸದ್ಯ ಕೇಳಿಬರುತ್ತಿವೆ. ಈ ಕಾರಣದಿಂದ ಅಂತಹ ಸಂಶೋಧನೆ ಹಾಗೂ ಕೃತಿಗಳನ್ನು ಹಣೆಪಟ್ಟಿ ಕಟ್ಟಿ ನಿಷೇಧಿಸಬೇಕೆಂಬ ಕೂಗೂ ಕೇಳಿಸುತ್ತದೆ. ಕೆಲವೊಮ್ಮೆ ಇದು ಬಹುಶಃ ಅತ್ಯಂತ ಅಪಾಯಕಾರಿಯಾದ ಬೆಳವಣಿಗೆ ಹಾಗೂ ಪ್ರವೃತ್ತಿಯಾಗಿದೆ.**

**ರೊಮಿಲಾ ಥಾಪರ್** : ಇದು ತೀರಾ ಅಪಾಯಕಾರಿಯಾದುದು. ಯಾಕೆಂದರೆ ಎಲ್ಲರ ಮತ್ತು ಯಾವುದೇ ಒಬ್ಬರ ಭಾವನೆಗಳೂ ಸಹ ಭಿನ್ನ-ಭಿನ್ನವಾದ ರೀತಿಯಲ್ಲಿ ಘಾಸಿಗೊಳ್ಳಬಹುದಾಗಿದೆ. ಆದರೆ ಬೆರಳೆಣಿಕೆಯಷ್ಟು ಜನ ಈ ರೀತಿಯಾಗಿ ಒಂದು ಸಮುದಾಯದ ಪರವಾಗಿ ಅವಮಾನವಾಗಿದೆ ಎಂದರೆ ಅದನ್ನು ಗಂಭೀರವಾಗಿ ಪರಿಗಣಿಸುವುದು ಕಷ್ಟವಾಗುತ್ತದೆ. ಅಂತಹ ಸಮುದಾಯದ ಬಹುತೇಕ ಮಂದಿ ತಮಗೇನೂ ತಿಳಿದಿಲ್ಲವೆಂಬಂತೆ ಅಥವಾ ಇದು ತಮಗೇನೂ ಸಂಬಂಧಿಸಿದ್ದಲ್ಲವೆಂಬಂತೆಯೋ ಅಥವಾ ಅವರ ಸಮುದಾಯದ ಅವಮಾನದ ಪರವಾಗಿ ಮಾತನಾಡುವ ವ್ಯಕ್ತಿಗಳ ಭಯಕ್ಕೆ ಒಳಗಾಗುವೆವೋ? ಎನ್ನುವ ಸ್ಥಿತಿಯಲ್ಲಿರುತ್ತಾರೆ.

**ರಣ್‌ಬೀರ್ ಚಕ್ರವರ್ತಿ** : ಪುಸ್ತಕ ನಿಷೇಧವೆನ್ನುವುದು ಭಾರತೀಯ ಮನಸ್ಸಿ
ಒಂದು ಕೇಡಾಗಿದೆ ಹಾಗೂ ಅಳಿವಾಗಿದೆ. ಒಂದು ವೃತ್ತಿಪರೀಯ ನೆಲೆಯಲ್ಲಿ ರೂಪುಗೊಂ
ಚರಿತ್ರೆಯ ಪುಸ್ತಕದಲ್ಲಿ ಯಾರಾದರೊಬ್ಬರು ಆಕ್ಷೇಪಣೀಯ ವಿಚಾರಗಳನ್ನು ಕಂಡರ
ಕೂಡಾ ಅಲ್ಲಿ ಅತ್ಯಂತ ತುರ್ತಿನ ಅಬ್ಬರ ಮತ್ತು ಕೂಗಾಟವು ಅಂತಹ ಪುಸ್ತಕವನ
ನಿಷೇಧಿಸುವ ಮತ್ತು ಸುಡಬೇಕೆಂಬ ಆಗ್ರಹವು ಕಾಣಿಸುತ್ತದೆ. ಕಳಪೆ ಸಾಹಿತ್ಯ ಹಾಗ
ಬೂಸಾ ಬರಹ ಭಾರತದಲ್ಲಿನ ವಾಸ್ತವವಾಗುತ್ತಿದೆ.

**ರೊಮಿಲಾ ಥಾಪರ್** : ಇಲ್ಲಿ ಬಹಳ ಪ್ರಮುಖವಾದುದೇನೆಂದರೆ, ನಾ
ನಿಜವಾಗಿಯೂ ಸಹಿಷ್ಣುಗಳಾಗಿದ್ದರೆ ಗತಕಾಲದಲ್ಲಿ ನಾವು ಹೇಗೆ ಅವುಗಳನ
ಸ್ವೀಕರಿಸುತ್ತಿದ್ದೆವೋ ಅದೇ ರೀತಿಯಲ್ಲಿ ಸ್ವೀಕರಿಸಬೇಕಾಗುತ್ತದೆ. ಅಂದರೆ, ನಾವು ಪ್ರಾಚೀ
ಕಾಲದ ಕೆಲವು ಬ್ರಾಹ್ಮಣೀಯ ಪಠ್ಯಗಳನ್ನು ಗಮನಿಸಿದರೆ, ಅವುಗಳನ್ನೊಪ್ಪದ ವ್ಯಕ್ತಿ ಮತ
ವಿಷಯಗಳ ಮೇಲೆ ಕೆಲವು ಜನ ಹಾಗೂ ಗುಂಪು ಅವಮಾನದ ಛಾಯೆಯಿಂ
ಮಾತನಾಡುವುದನ್ನೂ ಗಮನಿಸಬಹುದು. ಅಂತಹ ವ್ಯಕ್ತಿಗಳನ್ನು ಬರೀ ನಾಸ್ತಿಕ ಮತ
ಪಾಶಂಡಿಗಳೆಂದಷ್ಟೇ ಕರೆಯದೇ, ಅವರನ್ನು 'ಮಹಾಮೋಹಿ'ಗಳೆಂದು ಕರೆಯುತ್ತಾ ಸಂಚಿ
ಹಾಗೂ ವಂಚಕರೆನ್ನುತ್ತಾ ಜನರನ್ನು ತಪ್ಪುದಾರಿಯಲ್ಲಿ ಎಳೆಯುವವರೆಂದೂ ಕೂಡ
ಕರೆಯಲಾಗುತ್ತಿತ್ತು. (ಕುತೂಹಲಕಾರಿಯಾದ ಸಂಗತಿಯೆಂದರೆ, ಇದೇ ರೀತಿಯ
ಹಿಂದುತ್ವವಾದಿಗಳು ನಮ್ಮಂತಹ ಕೆಲವು ಜನ ಚರಿತ್ರಕಾರರನ್ನು ಅವರು ಗುರುತಿ
ಆಡುತ್ತಿರುವುದು, ಅದೂ ಕೂಡಾ ನಾವು ಆ ರೀತಿ ಹೌದೋ ಅಲ್ಲವೋ ಆದರೆ ನಮ್ಮನ
ಒಂದೇ ಶಬ್ದವಾದ 'ಮಾರ್ಕ್ಸಿಸ್ಟ್' ಎಂಬ ಸಂಬೋಧನೆಯೊಂದಿಗೆ ಕರೆಯುವ ಹಾಗ
ಆದಾಗ್ಯೂ ಕೂಡಾ ಇಂತಹ ಜನರ ಅಂದರೆ ಬೌದ್ಧ ಮತ್ತು ಜೈನರ ಭಾವನೆಗಳ
ಅಂತಹ ಹೇಳಿಕೆಗಳಿಂದ ಘಾಸಿಗೊಂಡಿತ್ತಾದರೂ ಕೂಡಾ, ಅವರು ಈ ರೀತಿ ಘಾಸಿಗೊಳಿಸಿ
ವಿಷ್ಣು ಪುರಾಣದಂತಹ ಪಠ್ಯಗಳನ್ನು ಸುಡಬೇಕೆಂದು ಆಗ್ರಹಿಸಿರಲಿಲ್ಲವಾಗಿತ್ತು.

**ರಣ್‌ಬೀರ್ ಚಕ್ರವರ್ತಿ: ಒಂದು ವಿಶಿಷ್ಟ ಭಾರತೀಯ ಕ್ರಮದ, ವಾದ ಮತ್ತು ಸಂವಾದ
ಸಾಧಿಸಿದ್ದ, ಪೂರ್ವಪಕ್ಷದ ವಾದವನ್ನು ಪುರಸ್ಕರಿಸಿ ನಂತರ ಉತ್ತರ ಪಕ್ಷದ ಕಡೆಯಿಂ
ನಿರಾಕರಿಸುವ ಕ್ರಮವನ್ನು ಈ ಭಾರತೀಯ ಸಂಪ್ರದಾಯವನ್ನು ಗೌರವಿಸುವ ಹೆಸರಿನ
ಪ್ರಸ್ತುತ ಕಿತ್ತೊಗೆಯಲಾಗುತ್ತಿದೆ. ಇದು ಭಾರತೀಯ ಸಂಪ್ರದಾಯವಲ್ಲ. ಇದು ತೀರಾ ನೋವ
ನೀಡುವಂತಹ ಮತ್ತು ವಿರೋಧಿಸುವ ಸಂಗತಿಯೂ ಆಗಿದೆ.**

**ರೊಮಿಲಾ ಥಾಪರ್**: ಇದು ಪಾರ್ಶ್ವಿಕವಾದುದು. ಹೌದು. ಯಾಕೆಂದರೆ ಈ ರೀತಿಯ
ಪಠ್ಯಗಳ ಬಗೆಗೆ ಸ್ವಲ್ಪವೂ ಜ್ಞಾನವಿಲ್ಲದೆ ಗಟ್ಟಿಯಾದ ಸ್ವರದಲ್ಲಿ ಭಾರತೀಯ ಸಂಪ್ರದಾಯ
ಮತ್ತು ಮೌಲ್ಯಗಳ ಬಗ್ಗೆ ಮಾತನಾಡುವ ಜನರ ರೀತಿಯ ಮಾದರಿಯನ್ನು ಹೊರತುಪಡಿಸಿ
ಅವರು ತಮ್ಮ ಸಂಪ್ರದಾಯವನ್ನು ಕುಗ್ಗಿಸಿ ಅವಮಾನಿಸಿದೆ ಎನ್ನುವ ಪಠ್ಯಗಳನ
ಮೂಲದಲ್ಲಿಯೂ ಮತ್ತು ಅವುಗಳ ಅನುವಾದವನ್ನು ಕೂಡಾ ಓದಿರುವುದಿಲ್ಲ. ಈ
ರೀತಿಯ ವಿಚಾರಗಳ ಈ ರೀತಿಯ ಸಂಪ್ರದಾಯ ಸಂಬಂಧಿತ ಪಠ್ಯಗಳ ಬಗೆ
ಚರ್ಚೆಗಳಿವೆ ಎಂಬುದನ್ನು ಕೂಡಾ ತಿಳಿದಿರುವುದಿಲ್ಲ. ಅವರು ಸುಮ್ಮನೆ ಯಾವುದ
ಸಂದರ್ಭರಹಿತ ಸಂಗತಿಯನ್ನು ಎತ್ತಿಕೊಂಡು ಬೈದಾಡುತ್ತಾರೆ. ಇದು ಒಂದು ರೀತಿಯ
ಸಾರ್ವಜನಿಕ ಓದು ಮತ್ತು ಅರ್ಥೈಸಿಕೊಳ್ಳುವಿಕೆಗೆ ಬೇಕಾದ, ಪ್ರಾಚೀನ ಪಠ್ಯವೊಂದ

ಶ್ಲೇಷಣೀಯ ಮತ್ತು ಅಸಾಂಪ್ರದಾಯಿಕ ಟೀಕೆಗಳನ್ನು ಸಾಧಿಸಬೇಕಾದ ಸಂದರ್ಭದಲ್ಲಿ ಜಕ್ಕೂ ಸಮಸ್ಯೆಯನ್ನು ತಂದೊಡ್ಡುತ್ತವೆ. ಇದು ಒಂದು ರೀತಿಯಲ್ಲಿ ಕಾರಣ ಮತ್ತು ನುರೂಪತೆಯಿಲ್ಲದ ನಿಂದನೆಯ ವಾಗ್ಬಾಳಿಯನ್ನು ಉಂಟುಮಾಡುತ್ತದೆ.

ಈ ಕಾರಣಕ್ಕಾಗಿ ಯಾರು ಸಂಶೋಧನೆಯಲ್ಲಿ ಸೃಜನಶೀಲತೆಯನ್ನು ಹೊಂದಿರುತ್ತಾರೋ ಅವರು ತಮ್ಮ ಚಿಂತನೆಯನ್ನು ಕೇವಲ ಸೀಮಿತ ನೆಲೆಯ ದುಗರಿಗೋಸ್ಕರ ಪ್ರಕಟಪಡಿಸಬೇಕಾಗುತ್ತದೆ. ಯಾರಾದರೂ ಇಂತಹ ವಿಷಯಗಳ ಗೆಗೆ ಆಸಕ್ತಿಹೊಂದಿದವರಾಗಿದ್ದು, ಇಂತಹ ವಿಷಯಗಳ ಬಗ್ಗೆ ತಜ್ಞತೆಯನ್ನು ಸಾಧಿಸಿಲ್ಲದಿದ್ದರೆ ಇಂತಹ ವಿಷಯಗಳನ್ನು ಅರಿಯುವಲ್ಲಿ ಮತ್ತು ಪಡೆಯುವಲ್ಲಿ ಅವರು ಕಷ್ಟಪಡಬೇಕಾಗುತ್ತದೆ. ಇದು ಅವರು ಕೊನೆಗೆ ಕಸದ ಬುಟ್ಟಿಯಲ್ಲಿ ನೆಲೆ ಕಂಡ ಈ ವಿಷಯದ ಜ್ಞಾನವನ್ನು ಆಶ್ರಯಿಸುವಂತೆ ಮಾಡುತ್ತದೆ.

**ರಣ್‌ಬೀರ್ ಚಕ್ರವರ್ತಿ:** ಜನರು ಸ್ವತಂತ್ರವಾಗಿ ಯೋಚಿಸುವುದನ್ನು ನಿರ್ಬಂಧಿಸುವ ಒಂದು ರೀತಿಯ ಸ್ವ-ಸೆನ್ಸಾರ್‌ಶಿಪ್ ಬಹಳ ದುರಂತಕಾರಿಯಾದುದು. ಅವುಗಳು ಸುರಕ್ಷಿತ ಎನ್ನುವ ಒಂದು ವಲಯದ ಮಿತಿಯಲ್ಲಷ್ಟೇ ಚಿಂತಿಸುತ್ತವೆ. ಅವುಗಳು ವಿವಾದಾತ್ಮಕ ಅಥವಾ ಅಜ್ಞಾತ ಮತ್ತು ಅಸುರಕ್ಷಿತ ಎನ್ನುವ ವಲಯ ಮತ್ತು ವಿಷಯ ವ್ಯಾಪ್ತಿಯನ್ನು ಪ್ರವೇಶಿಸುವುದಿಲ್ಲ ಹಾಗೂ ಮುಟ್ಟುವುದಿಲ್ಲ.

**ರೊಮಿಲಾ ಥಾಪರ್:** ಅವುಗಳಿಲ್ಲದೆ ಒಂದು ವಿಮರ್ಶೀಯ ವಿಚಾರಣೆ ಸಾಧ್ಯವಾಗುವುದಿಲ್ಲ. ವಾಸ್ತವವಾಗಿ ಭಾರತದಲ್ಲಿನ ಶಿಕ್ಷಣವನ್ನು ನಾನು ಎಲ್.ಸಿ.ಡಿ ಶಿಕ್ಷಣವೆಂದೇ ಕರೆಯಲು ಆರಂಭಿಸಬೇಕಾಗುತ್ತದೆ. ಅದೆಂದರೆ ನಾವು ಶಿಕ್ಷಣವನ್ನು ಎಷ್ಟು ಹೆಚ್ಚು ದುರ್ಬಲಗೊಳಿಸಿದ್ದೇವೆಂದರೆ, ಈಗ ಏನನ್ನು ಬೋಧಿಸಲಾಗುತ್ತಿದೆಯೋ ಅದನ್ನು ಕೇವಲ, 'ಲೋವೆಸ್ಟ್ ಕಾಮನ್ ಡಿನಾಮಿನೇಟರ್' (ಎಲ್.ಸಿ.ಡಿ) ಎಂದು ಕರೆಯಬಹುದಾಗಿದೆ. ಇದು ಒಂದು ರೀತಿ ಶಿಕ್ಷಣವನ್ನು ಸಂವೇದನಾ ರಹಿತ ಮತ್ತು ಮೂರ್ಖವನ್ನಾಗಿಸುತ್ತಾ, ಅದನ್ನು ಹೆಚ್ಚು ಹೆಚ್ಚು ಸವಾಲುರಾಹಿತ್ಯಗೊಳಿಸುತ್ತಾ, ಆ ಮೂಲಕ ಜನರು ನಮ್ರರಾಗುತ್ತಾ ಯಾವುದೇ ಒಂದು ವಿಚಾರ ಮತ್ತು ಪುಸ್ತಕದ ವಿಷಯವನ್ನು ಚರ್ಚಿಸಲು ಮತ್ತು ಅದರ ಕುರಿತು ಪ್ರಶ್ನೆ ಕೇಳಲು ಹೆದರುವಂತಹ, ಹಿಂದೆ ಸರಿಯುವಂತಹ ಸ್ಥಿತಿಯನ್ನು ಉಂಟುಮಾಡುತ್ತದೆ. ಅಂತಿಮವಾಗಿ ಈ ಮಾಧ್ಯಮಗಳು ತಿಳಿದಿರುವ ದೃಷ್ಟಿಕೋನ ಮತ್ತು ನಿಲುವುಗಳು ಜನರ ಮನಸ್ಸಿನಲ್ಲಿ ಗಾಢವಾಗಿ ಉಳಿಯುತ್ತದೆ. ಅದೇ ರೀತಿ ಹೆಚ್ಚಿನ ಜನರು ಮಾಧ್ಯಮಗಳಿಂದಲೇನೇ ಮಾಹಿತಿಯನ್ನು ಪಡೆಯುತ್ತಾರೆ. ಹಿಂದೊಮ್ಮೆ ಇದ್ದ ಹಾಗೆ ಈ ಸ್ವತಂತ್ರ ಓದಿನ ಅಭ್ಯಾಸ ಅಥವಾ ಗೀಳನ್ನು ಈಗ ಕಾಣಲಾಗದು.

**ರಣ್‌ಬೀರ್ ಚಕ್ರವರ್ತಿ:** ಪ್ರಾಚೀನ ಕಾಲದಲ್ಲಿ ಒಂದು ರೀತಿಯ ವಿಮರ್ಶೆ ಮತ್ತು ಆರೋಗ್ಯಪೂರ್ಣವಾದ ಸಂವಾದಗಳಿದ್ದವು. ಸಂಸ್ಕೃತ ನಾಟಕಕಾರ ಬಾಣನ ನಾಟಕಗಳ ರೀತಿಯ ಹಾಗೂ ಮತ್ತಿತರ ಸಾಹಿತ್ಯಿಕ ಪಠ್ಯಗಳು ಆ ಕಾಲದ ಅನೇಕ ಸಾಮಾಜಿಕ ಆಚರಣೆಗಳನ್ನು ವಿಡಂಬನೆ ಮಾಡುತ್ತಿದ್ದುವು. ಬಾಣನ ಅನೇಕ ವಿಡಂಬನೆಗಳು ಮೇಲ್ವರ್ಗದ ಸ್ತರವನ್ನೂ ವಿಡಂಬಿಸಿದ ರೀತಿಯವು. ನಿಜವಾಗಿಯೂ ಅದು ಒಂದು ರೀತಿ ಭಾರತೀಯ ರೂಢಿಯಾಗಿತ್ತು, ಆದರೆ ನಾವಿಂದು ಏನನ್ನು ಆಚರಿಸುತ್ತಿದ್ದೇವೆಯೋ ಅದು ಭಾರತೀಯ ರೂಢಿ ಅಲ್ಲ. ನಾವದನ್ನು ಕೊಲ್ಲುತ್ತಿದ್ದೇವೆ.

**ರೊಮಿಲಾ ಥಾಪರ್**: ಟೀಕೆ ಮತ್ತು ಆರೋಗ್ಯಕರವಾದ ಸಂವಾದ ಅಥವಾ ಅಣಕದ ರೀತಿಯ ನಡೆಗಳು ಭಾರತೀಯ ರೂಢಿಯ ಭಾಗವಾಗಿ ಉಳಿದಿಲ್ಲ. ಬದಲಿಗೆ ಅದು ಇಂದಿನ ತಲೆಮಾರಿನಲ್ಲಿ ಫ್ಯಾಶನ್ ಆಗಿ ಬದಲಾಗಿರುವ ಇಂಟರ್‌ನೆಟ್ ಹಾಗೂ ಸೋಶಿಯಲ್ ಮೀಡಿಯಾಗಳಲ್ಲಿ ಒಬ್ಬ ಭಾರತೀಯನು ಇನ್ನೊಬ್ಬ ಭಾರತೀಯನನ್ನು ನಿಂದಿಸುವ ಸಾರ್ವಜನಿಕ ಸಂದರ್ಭವಾಗಿ ಬದಲಾಗಿದೆ. ವಿಶೇಷವಾಗಿ ಇದು ಸಂಸ್ಕೃತಿ, ಚರಿತ್ರೆ ಹಾಗೂ ಧರ್ಮದ ವಿಷಯಗಳಲ್ಲಿ. ಸಾಮಾನ್ಯವಾಗಿ ಯಾವುದೇ ರೀತಿಯ ಉದ್ರೇಕವಿರಲಿ, ನಾಗರಿಕ ಸಮಾಜದ ಸದಸ್ಯರು ಸಾರ್ವಜನಿಕ ನಿಂದನೆಯನ್ನು ತಡೆಹಿಡಿಯುತ್ತಾರೆ. ಆದರೆ ಜಗತ್ತಿನ ಬೇರೆಡೆಗಳಲ್ಲಿ ಭಾರತೀಯರು ವಾಸ ಮಾಡುತ್ತಿದ್ದರೆ, ಅಲ್ಲಿ ಉಳಿದ ಭಾರತೀಯರನ್ನು ನಿಂದಿಸಲಾಗುತ್ತದೆ. ಅಮೆರಿಕಾದ ಕೆಲವು ಅನಿವಾಸೀ ಭಾರತೀಯರು ಇದಕ್ಕೊಂದು ಪ್ರಮುಖ ಉದಾಹರಣೆ.

ಗಂಭೀರ, ವಿಚಾರಪೂರ್ಣ ವಿಮರ್ಶೆ ಮತ್ತು ತನ್ನನ್ನೂ ಹಾಗೂ ತನ್ನ ಸಮಾಜವನ್ನು ಸೇರಿದಂತೆ ಮಾಡುವುದು ಬಹಳ ಪ್ರಮುಖ; ಮತ್ತಿದು ಬರೀ ನಿಂದೆಗಿಂತ ಭಿನ್ನವಾಗಿ ಒಂದು ನಾಗರಿಕ ಸಮಾಜದ ಮುದ್ರೆ ಕೂಡಾ ಆಗಿದೆ. ಬಹುಶಃ ಈ ರೀತಿ ನಾಗರಿಕರಾಗಿರುವ ಸಂಪ್ರದಾಯವೇ ನಮ್ಮಿಂದ ಇಂದು ಮರೆಯಾಗುತ್ತಿದೆ.

ನಾವು ನಮ್ಮ ಸಂಸ್ಕೃತಿಯನ್ನು ಏಕರೂಪೀಕರಣಕ್ಕೊಳಪಡಿಸುವ ಒತ್ತಾಯಕ್ಕಿಳಿದಿದ್ದೇವೆ. ಅದೂ ಕೂಡಾ ಸಾಮ್ರಾಜ್ಯಶಾಹೀ ಮಸೂರದ ಮೂಲಕ ಮಾತ್ರ ಅದನ್ನು ನೋಡುವ ಮೂಲಕ. ನಾವು, ಸಂಸ್ಕೃತಿಯಲ್ಲಿ ಭಾಗವನ್ನು ಕೇಳಲು ಹೋರಾಡುತ್ತಿರುವವರ ಬಗ್ಗೆ ಹಾಗೂ ವೈವಿಧ್ಯತೆಯನ್ನು ಮನ್ನಿಸಿರೆನ್ನುವವರ ಬಗ್ಗೆ ಮೌನ ತಾಳಿದ್ದೇವೆ. ಇದರರ್ಥ, ನಾನು ಇಲ್ಲಿ ವೈವಿಧ್ಯತೆಯ ಮಿತಿಯಿಲ್ಲದ ವಲಯಗಳು ಇರುವ ಕಾರಣ ಅದು ಭಾರತೀಯ ಸಂಸ್ಕೃತಿಯನ್ನು ವ್ಯಾಖ್ಯಾನಿಸಲು ತ್ರಾಸವೊದಗಿಸುತ್ತವೆ ಎಂಬ ವಿಚಾರವನ್ನು ಅರುಹುತ್ತಿಲ್ಲ. ಬದಲಿಗೆ ನಾನು, ನಮ್ಮ ಸಂಸ್ಕೃತಿಯ ಅಂಶ-ಆಯಾಮಗಳು ನಿರ್ವಚನಗೊಳ್ಳುವಾಗ. ಇಂತಹ ವಲಯಗಳು ತಮ್ಮ ಅಸ್ತಿತ್ವದಿಂದ ಅಂತಹ ವ್ಯಾಖ್ಯಾನಕ್ಕೆ ಇನ್ನೂ ತೀರದ ಮತ್ತು ವಿನೂತನ ಅರ್ಥ ಸಾಧ್ಯತೆಯನ್ನು ನೀಡುತ್ತವೆಂಬುದನ್ನು ಕಡೆಗಣಿಸಬಾರದು ಎಂಬುದನ್ನು ನೆನಪಿಸಲು ಪ್ರಯತ್ನಿಸುತ್ತಿದ್ದೇನೆ.

**ರಣ್‌ಬೀರ್ ಚಕ್ರವರ್ತಿ: ಗೊಂದಲದ ವಿದ್ಯಮಾನ ಮತ್ತು ಆತಂಕಕಾರಿ ಬೆಳವಣಿಗೆಯೆಂದರೆ ಒಂದು ಏಕೀಕೃತ ಹಿಂದೂ ಸಮುದಾಯ, ಒಂದು ಏಕರೂಪೀ ಮುಸ್ಲಿಂ ಸಮುದಾಯ ಹಾಗೂ ಒಂದು ಏಕಾಕೃತಿಯ ಸಿಖ್ ಮತ್ತು ಕ್ರಿಶ್ಚಿಯನ್ ಸಮುದಾಯಗಳನ್ನು ರಚಿಸಿ ಬಿಂಬಿಸುತ್ತಿರುವ ಚಿತ್ರಣ.**

**ರೊಮಿಲಾ ಥಾಪರ್**: ತುಂಬಾ ಕುತೂಹಲದ ಸಂಗತಿಯೇನೆಂದರೆ, ಯಾರಾದರೂ ಭಾರತದಲ್ಲಿ ಧರ್ಮದ ಚರಿತ್ರೆಯ ಕೋರ್ಸ್ ಅನ್ನು ಮಾಡಬೇಕೆಂದರೆ ಹಾಗೂ ಹೇಗೆ ಧರ್ಮಗಳು ಸಮಾಜವನ್ನು ಪ್ರಭಾವಿಸಿವೆ ಎಂದು ತಿಳಿಯಬೇಕೆಂದಾಗ ಆ ಕೋರ್ಸಿನ ಅತ್ಯಂತ ದೊಡ್ಡ ಸವಾಲಿನ ಸಂಗತಿಯೆಂದರೆ ಪ್ರತೀ ಧರ್ಮದ ವೈವಿಧ್ಯದ ಗುಂಪು-ಪಂಥಗಳ ಬಗ್ಗೆ ಗಮನಹರಿಸಿ, ಅಂತಹ ವಿಶಾಲ ವ್ಯಾಪ್ತಿ ಹೊಂದಿರುವ ನಂಬಿಕೆ ಮತ್ತು ಆಚರಣೆಗಳಿಂದ ಉಂಟಾಗಿರುವ ಎಲ್ಲಾ ಗುಂಪು-ಪಂಥಗಳು ಇನ್ನೊಂದು ಗುಂಪುಗಳ ಜತೆ ಹೊಂದಿರುವ ಸಂಕೀರ್ಣ ಸಂಬಂಧವನ್ನು ಅಧ್ಯಯನ ಮಾಡುವುದಾಗಿದೆ.

ಹೇಗೆ, ಉದಾಹರಣೆಗೆ ವೈಷ್ಣವ ಮತ್ತು ಸೂಫೀ ಪಂಥಗಳು ಪರಸ್ಪರ ಅಂತಹ ಸಂವಹನ ಸಾಧಿಸಿದವು? ಅಥವಾ ಯಾಕೆ ಶೈವ ಮತ್ತು ಶ್ರಮಣ ಪಂಥದ ಜತೆ ಬೌದ್ಧ-ಜೈನೀಯರಿಗೆ ಸಂಘರ್ಷವಾಯ್ತು? ಧರ್ಮದ ಚರಿತ್ರೆಯ ಬಹಳ ಆಸಕ್ತಿದಾಯಕ ಅಂಶವೆಂದರೆ ಇದುವೇ ಆಗಿದೆ. ಇಲ್ಲಿ ಎರಡೂ ಕಡೆಯ ವಿರೋಧ-ಸಂಘರ್ಷವನ್ನೂ ಗಮನಿಸಬೇಕು. ಇದೇ ಹೊತ್ತಿಗೆ ಎರಡೂ ಕೂಡಾ ಕೊಡು-ಕೊಳುಗೆ ಸಾಧಿಸಿದ್ದನ್ನೂ ಗಮನಿಸಬೇಕು. ಇದು ಬರೀ ತಾತ್ವಿಕವಾಗಿ ಗ್ರಹಿಸಿದ್ದಕ್ಕಿಂತ ಹೆಚ್ಚು ತಳಮಟ್ಟದ ಅನುಭವಜನ್ಯತೆಯಿಂದ ಸತ್ಯಾಸತ್ಯತೆಯನ್ನು ಗ್ರಹಿಸಬಹುದಾಗಿದೆ. ಅತ್ಯಂತ ಜನಪ್ರಿಯ ಧಾರ್ಮಿಕ ಪಂಥಗಳು, ಔಪಚಾರಿಕವಾದ ಧರ್ಮಗಳ ಜತೆ ಹೆಚ್ಚು ನಿಕಟ ಸಂಬಂಧವನ್ನು ಹೊಂದಿಲ್ಲ. ಜನಪ್ರಿಯ ಪಂಥ ನಂಬಿಕೆಗಳು ಎಲ್ಲ ಧರ್ಮಗಳ ರಚನೆಯ ಸಂದರ್ಭದಲ್ಲಿ ಬಹುಸಂಖ್ಯತೆಯನ್ನು ಸಾಧಿಸಿಕೊಂಡು, ಸ್ಥಳೀಯ ದೈವ ದೇವರುಗಳನ್ನು ಪೂಜಿಸಿಕೊಂಡು, ಅವುಗಳ ನಡುವೆಯೇ ಅವರ ನಂಬಿಕೆ ಮತ್ತು ಅರ್ಚನೆಯ ಪ್ರಕಾರಗಳನ್ನು ಚರ್ಚಿಸಿ ಸಾಗುತ್ತವೆ. ಇಲ್ಲಿ ಮುಖ್ಯ ಪ್ರಬಲ ಎಂದು ಕರೆಯಬಹುದಾದ ಧಾರ್ಮಿಕ ಸ್ವರೂಪದಲ್ಲಿ ಅವು ಜೋಡಿತವಾಗಿ ಸ್ಥಾಪಿಸಲ್ಪಟ್ಟಿರುತ್ತವೆ. ಜಾತಿ ಗುಂಪುಗಳು ಮತ್ತು ಪಂಥಗಳು ಒಂದರ ಮೇಲೊಂದು ಹರಡಿ ವ್ಯಾಪಿಸಿದ ಅಸ್ಮಿತೆಯ ಸಂದರ್ಭದಲ್ಲಂತೂ ವಿಶೇಷವಾದ ಜನಪ್ರಿಯ ಚರ್ಚೆಗಳನ್ನೂ ಕೂಡಾ ಸಂಘಟಿಸಬೇಕಾಗುತ್ತದೆ. ಕೆಲವು ಪಂಥ ಮತ್ತು ಧಾರ್ಮಿಕ ಗುಂಪುಗಳು ಕೆಲವು ಜಾತಿಗಳ ಜತೆ ತಮ್ಮನ್ನು ಗುರುತಿಸಿಕೊಂಡರೆ, ಕೆಲವು ಮತ್ತು ಹೆಚ್ಚಿನವು ಜಾತಿ ಸಖ್ಯವನ್ನು ನಿರಾಕರಿಸುವ ನೆಲೆಯನ್ನೂ ಕಾಣಬಹುದಾಗಿದೆ.

## ಬುದ್ಧ ಒಬ್ಬ ರಥಿಕನಾಗಿದಿದ್ದನೇ ?

**ರಣ್‌ಬೀರ್ ಚಕ್ರವರ್ತಿ** : ನಿಮ್ಮ ಅಧಿಕಾರಯುತವಾದ ಸರ್ವೇಕ್ಷಣೆಯ ಕೃತಿಯಾದ, 'ಪ್ರಾಚೀನ ಭಾರತ: ಉಗಮದಿಂದ ಕ್ರಿ.ಶ. 1300'ರವರೆಗೆ ಕೃತಿಯಲ್ಲಿ ನೀವು ಮಹಾಭಾರತ ಯುದ್ಧದ ಬಗೆಗೆ ಸೊಗಸಾದ ನಿರೂಪಣೆಯನ್ನು ನೀಡಿದ್ದೀರಿ. ನೀವು ಬರೆದಿದ್ದೀರಿ. ಕೃಷ್ಣನ ಬದಲಿಗೆ ಬುದ್ಧ ರಥಿಕನಾಗಿದ್ದಿದ್ದರೆ ಅರ್ಜುನನಿಗೆ ಬೋಧೆ ಮತ್ತು ಸುವಾರ್ತೆಯೇ ಬದಲಾಗಿರುತ್ತಿತ್ತು ಎಂದು. ಸ್ವಲ್ಪ ಇದನ್ನು ವಿವರಿಸುತ್ತೀರಾ ?

**ರೊಮಿಲಾ ಥಾಪರ್** : ಬಹುಶ: ಹೆಚ್ಚಿನ ಇತಿಹಾಸಕಾರರು ಸಹಮತಿಸುವ ಹಾಗೆ, ನನ್ನ ವಾದವೆಂದರೆ, ಭಗವದ್ಗೀತೆ ಒಂದು ಮೌರ್ಯೋತ್ತರ ಪಠ್ಯ. ಆ ಹೊತ್ತಿಗೆ ಬೌದ್ಧ ಮತ್ತು ಜೈನ ಶ್ರಮಣ ಪರಂಪರೆಗಳು ವ್ಯವಸ್ಥಿತವಾಗಿ ಸ್ಥಾಪಿತವಾಗಿದ್ದವು. ಆ ಹೊತ್ತಿಗೆ ಬೆಳೆಯುತ್ತಿದ್ದ ಆರಂಭದ ಬ್ರಾಹ್ಮಣೀಯ ಬೋಧನೆ ಹಾಗೂ ಶೈವ ಪಂಥಗಳ ಜತೆಯಲ್ಲಿ. ಧರ್ಮದ ಪರಿಕಲ್ಪನೆಯು ಎರಡು ರೀತಿಯ ಧಾರೆಗಳಿಂದ. ಅಂದರೆ ಬ್ರಾಹ್ಮಣೀಯ ಮತ್ತು ಶ್ರಮಣೀಯ ಕ್ರಮಗಳಿಂದ ವ್ಯಾಖ್ಯಾನಗೊಳ್ಳುತ್ತಾ ಅಂತಹ ದ್ವಂದ್ವತೆಯು ಮೊದಲ ಶತಮಾನದವರೆಗೂ ಕೂಡಾ ಮುಂದುವರಿದಿತ್ತು. ವೈಯ್ಯಾಕರಣಿ ಪತಂಜಲಿಯು ಇವೆರಡು ಕ್ರಮಗಳನ್ನು ಹಾವು ಮತ್ತು ಮುಂಗುಸಿಯ ಸಂಬಂಧಕ್ಕೆ ಹೋಲಿಸುತ್ತಾ, ಆಶ್ರಯ ಹಾಗೂ ಅನುಯಾಯಿಗಳ ಗಳಿಕೆಯ ಸಂದರ್ಭಕ್ಕಾಗಿ ಅವರು ಹೊಂದಿದ್ದ ವಿರೋಧವನ್ನು ಸೂಚಿಸುತ್ತಾನೆ. ಕೆಲವು ವಿದ್ವಾಂಸರು ಸೂಚಿಸುವ ಹಾಗೆ ಸ್ಪಷ್ಟವಾಗಿ ಭಗವದ್ಗೀತೆಯು ಬೋಧನೆಯು, ಅಶೋಕನ ನೀತಿ ಹಾಗೂ ಬುದ್ಧನ ಬೋಧನೆಗೆ ಪ್ರತಿಕ್ರಿಯೆಯ ರೂಪದಲ್ಲಿ ಒದಗಿ ಬಂದಿರುವುದಾಗಿದೆ. ಕೆಲವು ಬ್ರಾಹ್ಮಣೀಯ ಪಠ್ಯಗಳಲ್ಲಿ. ಒಂದು ರೀತಿಯ

ಪಾರ್ಶ್ವಿಕವಾದ ಸಾರ್ವಜನಿಕ ಚರ್ಚೆಯು ವಿವಿಧ ಗುಂಪುಗಳಾದ ಬ್ರಾಹ್ಮಣರು, ನಾಸ್ತಿಕರು ಮತ್ತು ಪಾಶಂಡಿಗಳು, ಬೌದ್ಧರು, (ಇವರೂ ಪ್ರತಿಯಾಗಿ ಬ್ರಾಹ್ಮಣರನ್ನು ಪಾಶಂಡರೆಂದೂ ಕರೆದರು.) ಜೈನರು ಮತ್ತು ಉಳಿದ ಇತರರ ನಡುವೆ ನಡೆದಿರುವುದು ಕಾಣಿಸುತ್ತದೆ.

ಹಾಗಿದ್ದರೆ ಬುದ್ಧನು ಅರ್ಜುನನ ಜತೆ ಸಂವಾದ ಸಾಧಿಸಿದ್ದಿದ್ದರೆ ಆತ ಏನನ್ನು ಹೇಳಿರುತ್ತಿದ್ದ? ಆತ ಹೀಗೆ ಕೇಳಿರುತ್ತಿದ್ದ, ಈ ಯುದ್ಧ ಅಗತ್ಯವೇ? ನೀನು ಏತಕ್ಕಾಗಿ ಹೊಡೆದಾಡುತ್ತಿದ್ದೀಯಾ? ನೀನು ರಾಜ್ಯಕ್ಕೋಸ್ಕರ ಹೋರಾಡುತ್ತಿದ್ದೀಯಾ? ಹಾಗೆ ಮಾಡುವುದರಿಂದ ನೀನು ನಿನ್ನ ಬಂಧುಗಳನ್ನೂ ಕೊಲ್ಲಬೇಕಾಗುತ್ತದೆಯಲ್ಲ. ಆತ ಇನ್ನೂ ಮುಂದುವರಿದು, ರಾಜತ್ವವೇ ಒಂದು ಆದರ್ಶಪ್ರಾಯವಾದ ರಾಜಕೀಯ ವ್ಯವಸ್ಥೆಯೇ? ಎಂದೂ ಕೂಡಾ ಕೇಳುತ್ತಿದ್ದನೇನೋ! ಇದೆಲ್ಲದರ ಹೊರತಾಗಿ ಆಗ ಅನೇಕ ಗಣಸಂಘಗಳು ಅಥವಾ ಕುಲ ಅಥವಾ ಬುಡಕಟ್ಟು ಆಧಾರಿತ ಸಮಾಜಗಳು ಕಾರ್ಯಗತವಾಗಿದ್ದುವು. ಬುದ್ಧ ಅವುಗಳ ಕಾರ್ಯವಿಧಾನವನ್ನು ಮೆಚ್ಚಿದ್ದ ಹಾಗೂ ಅವುಗಳನ್ನು ತನ್ನ ಸಂಘಗಳ ಸಂಘಟನೆಯ ಮಾದರಿಗಳನ್ನಾಗಿ ಪರಿಗಣಿಸಿದ್ದ ಕೂಡಾ.

**ರಣ್‌ಬೀರ್ ಚಕ್ರವರ್ತಿ: ಸುಮಾರು ಕ್ರಿಸ್ತಪೂರ್ವ ಐದನೇ ಶತಮಾನದಲ್ಲಿಯೇ ಬುದ್ಧನು ಮಗಧದ ರಾಜ ಅಜಾತಶತ್ರುವನ್ನು ಎದುರಿಸಿದ್ದ ಗಣ ಸಂಘಗಳ ಜತೆಗಿದ್ದ.**

**ರೊಮಿಲಾ ಥಾಪರ್**: ಬಹುಶಃ ಬುದ್ಧನು, ಹಿಂಸೆಯು ಗುಂಪಿನ ಜನರ ಅಥವಾ ಒಂದು ಘಟನೆಯ ಜತೆ ಅನಿಶ್ಚಿತವಾಗಿ ಸಂಭವಿಸಿದರೆ, ಅಹಿಂಸೆಯನ್ನು ಜಾಗತಿಕವಾಗಿ ಯಾಕೆ ಆಚರಿಸಲಾಗದು? ಎಂಬ ಆಲೋಚನೆಯನ್ನು ಮಾಡಿರಬೇಕು. ಕೃಷ್ಣನ ಸಂದೇಶವೆಂದರೆ, ಕ್ಷತ್ರಿಯ ಜಾತಿಯು ಕೇಡಿನ ವಿರುದ್ಧ ಹೋರಾಡುವುದೇ ಧರ್ಮ ಎಂಬುದಾಗಿ. ಅಲ್ಲಿ ಯುದ್ಧವೆಂಬುದು ನಡೆಯುವುದೇ ಕ್ಷತ್ರಿಯರ ಒಳ್ಳೆಯ ಮತ್ತು ಕೆಟ್ಟ ಗುಂಪಿನ ನಡುವೆ, ಅದೂ ಕೂಡಾ ಸ್ವಧರ್ಮವನ್ನು ರಕ್ಷಿಸುವ ಸಲುವಾಗಿ. ಅವರು ವರ್ಣಾಶ್ರಮಧರ್ಮ ನಿರೂಪಿಸುವ ಅವರ ಕರ್ತವ್ಯವನ್ನಷ್ಟೇ ಪಾಲಿಸಿದರು. ಬುದ್ಧ, ಹಿಂಸೆಯನ್ನು ತಪ್ಪಿಸುವ ಸಲುವಾಗಿ ಇನ್ನೂ ಹೆಚ್ಚಿನ ಸಂಧಾನವನ್ನು ನಡೆಸುತ್ತಿದ್ದಿರುತ್ತಿದ್ದ. ಇದು ಯುದ್ಧವನ್ನು ಅನಗತ್ಯವಾಗಿಸಿರುತ್ತಿತ್ತು ಮತ್ತು ಆ ರೀತಿಯಾಗಿದ್ದಿದ್ದರೆ ಬಹುಶ: ಅಲ್ಲಿ ಮಹಾಭಾರತವೇ ಘಟಿಸುತ್ತಿರಲಿಲ್ಲ. ಆಗ, ಅಲ್ಲಿ ಇನ್ನೂ ಒಂದು ಮುಖ್ಯವಾದ ಅಂಶವಿದೆ. ಅದೇನೆಂದರೆ ಯಾರ‍್ಯಾರು ನರಳುತ್ತಿದ್ದರೋ ಅವರೆಲ್ಲರನ್ನು ಅವನ ಬಳಿ ಬರುವಂತೆ ಕೇಳಿ, ಆತನಲ್ಲಿ ನಂಬಿಕೆ ಇದ್ದವರೆಲ್ಲರನ್ನೂ ಎಲ್ಲವನ್ನೂ ಕೂಡಾ ಆತ ಸರಿಪಡಿಸುತ್ತಿದ್ದ. ಇದನ್ನು ಭಕ್ತಿ ಸಂಪ್ರದಾಯ ಮತ್ತು ಭಾಗವತ ಸಂಪ್ರದಾಯದ ಜತೆ ಕೂಡಾ ಹೊಂದಿಸಿ ನೋಡಬಹುದಾಗಿದೆ. ಒಂದೇ ದೇವರಲ್ಲಿ ನಂಬಿಕೆಯನ್ನು ಹೊಂದುವ ಮತ್ತು ನಿಮ್ಮೆಲ್ಲಾ ಸಂಕಟಗಳನ್ನು ಅವನ ಹತ್ತಿರ ತೆಗೆದುಕೊಂಡು ಹೋಗುವ ನಿಮ್ಮ ಖಾಸಗೀ ದೇವರ ಹತ್ತಿರ ಸಾಗುವ ಸಂದೇಶವೇ ಇದಾಗಿದೆ. ಬುದ್ಧ ಮಾತ್ರ ದೇವರ ಅಸ್ತಿತ್ವದ ಬಗೆಗೆ ಇಬ್ಬಗೆಯ ನೀತಿಯನ್ನು ಪ್ರಕಟಪಡಿಸಿದ್ದಿರಬಹುದು. ನರಳುವಿಕೆ ಮತ್ತು ಅದರ ಕಾರಣವನ್ನು ತಿಳಿದುಕೊಳ್ಳುವ ಮತ್ತದರ ಮೂಲಕ ವ್ಯಕ್ತಿಯೊಬ್ಬ ಪರಿಹಾರವನ್ನು ಹುಡುಕುವ ದಾರಿಯೂ ಅದಾಗಿರಬಹುದು.

**ರಣ್‌ಬೀರ್ ಚಕ್ರವರ್ತಿ: ಬುದ್ಧನ ವೈಧಾನಿಕತೆ ಮತ್ತು ಪ್ರಸ್ತಾವನೆಯು ಒಬ್ಬ ವೈದ್ಯಕೀಯ ಶಾಸ್ತ್ರವನ್ನು ಆಚರಿಸುವ ಮತ್ತು ಅಭ್ಯಾಸ ಮಾಡುತ್ತಿರುವ ವ್ಯಕ್ತಿಯ ನೆಲೆಯ ಹಾಗಿದೆ.**

**ರೊಮಿಲಾ ಥಾಪರ್ :** ಬುದ್ಧ ನಿರೂಪಿಸಿದ ನೈತಿಕ ಸಂಹಿತೆಯಲ್ಲಿ ಅದರ ಸ್ವ ನಂಬಿಕೆ ಮತ್ತು ಆಚರಣೆಗೆ ಹೆಚ್ಚು ನೀಡಿದ್ದ. ಇದು ಒಂದು ರೀತಿಯಲ್ಲಿ ಉಳಿದವರು ಹೇಳುವ ರೀತಿಯ, “ನೀನು ನನ್ನ ಹತ್ತಿರ ಬಂದರೆ ನಿನ್ನ ಸಮಸ್ಯೆಯನ್ನು ನಾನು ಪರಿಹರಿಸುತ್ತೇನೆ” ಎನ್ನುವ ರೀತಿಗಿಂತ ಹೆಚ್ಚು ಸವಾಲಿನ ಪರಿಹಾರವಾಗಿದೆ. ಆದರೆ ಇದೊಂದು ರೀತಿಯ ಕಾರಣೀಯತೆಯ ಮೇಲಿನ ಅರ್ಥೈಸಿಕೊಳ್ಳುವಿಕೆ ಹಾಗೂ ಒಂದು ಪರಿಪೂರ್ಣ ಸತ್ಯವೊಂದು ನಂಬುವ ನಂಬಿಕೆಯ ನಡುವಿನ ವ್ಯತ್ಯಾಸವೂ ಆಗಿದೆ “ನನ್ನಲ್ಲಿ ಬಾ” ಅಥವಾ “ನನ್ನೆಡೆಗೆ ಬಾ” ಎನ್ನುವ ಸಂಗತಿ ಏನನ್ನು ಒಳಗೊಳ್ಳುತ್ತದೆ? ಮತ್ತು ಹೇಗೆ ಒಂದು ದೈವ ಒಬ್ಬನ ಸಮಸ್ಯೆಯನ್ನು ಪರಿಹರಿಸುತ್ತದೆ? ನಂಬಿಕೆ ಹೊಂದಿರುವವರಿಗೆ ನಿಶ್ಚಿತವಾಗಿ ಇದೊಂದು ಪರಿಹಾರ, ಆದರೆ ಬೇರೆಯವರಿಗೆ ಬೇರೆಯದೇ ಆದ ಪರಿಹಾರ ಬೇಕಿರುತ್ತದೆ.

**ರಣ್‌ಬೀರ್ ಚಕ್ರವರ್ತಿ: ಅರ್ಜುನನ ಆಂತರ್ಯದ ಬಿಕ್ಕಟ್ಟುಗಳು ಅಥವಾ ಪ್ರಶ್ನೆಗಳು ಭಗವದ್ಗೀತೆಯಲ್ಲಿ ಕೃಷ್ಣನು ನಿರೂಪಿಸಬೇಕಾದ ಸೂತ್ರಗಳು ಹಾಗೂ ಸಿದ್ಧಾಂತಗಳಿಗೆ ಕಾರಣವಾದುವು. ಈ ರೀತಿಯ ಸಂಗತಿಗಳು ಯುಧಿಷ್ಠಿರನ ಮನಸ್ಸಿನಲ್ಲಿ ಕೂಡಾ ಸಂಭವಿಸಿ ಆತ ಭೀಷ್ಮನಲ್ಲಿಗೆ ಹೋಗಿ ಯುದ್ಧವನ್ನು ನಿಲ್ಲಿಸುವಂತೆ ವಾದಿಸಿ ಒತ್ತಾಯಿಸಿದ್ದ.**

**ರೊಮಿಲಾ ಥಾಪರ್:** ಆದರೆ ಯುದ್ಧದ ಕೊನೆಯಲ್ಲಿ ಯುಧಿಷ್ಠಿರನೇ ನಾನು ರಾಜನಾಗುವುದಿಲ್ಲವೆಂದು ಬ್ರಾಹ್ಮಣರಿಗೆ ತಿಳಿಸುತ್ತಾನೆ. ಆತ ರಾಜತ್ವನ್ನು ತೊರೆದು ಅರಣ್ಯವಾಸಕ್ಕೆ ಹೋಗುತ್ತೇನೆನ್ನುತ್ತಾನೆ. ರಾಜತ್ವವು ಹೋರಾಟ ಮತ್ತು ಹಿಂಸೆಯನ್ನನುಸರಿಸಿದ ಕೊಲೆಯನ್ನು ಪ್ರತಿಪಾದಿಸುತ್ತದೆ. ಬ್ರಾಹ್ಮಣರು ಹೇಳುವ ಹಾಗೆ ರಾಜತ್ವವು ಅನಿವಾರ್ಯವಾದುದು. ಯುದ್ಧದ ಆರಂಭ ಮತ್ತು ಕೊನೆಯಲ್ಲಿ ಎರಡು ಪ್ರಕರಣಗಳಲ್ಲಿ ಯುದ್ಧದ ಸಿಂಧುತ್ವದ ಬಗೆಗೆ ಪ್ರಶ್ನೆಯನ್ನು ಕೇಳಿರುವುದು ನನಗೆ ಬಹಳ ಆಸಕ್ತಿಕರವೆನಿಸುತ್ತದೆ. ಬಹುಶ: ಅದು ಚಿಂತನೆಮಾಡಬೇಕಾದ ಸಂಗತಿಯೂ ಕೂಡಾ ಆಗಿದೆ. ಗೀತೆಯು ಪ್ರಾಥಮಿಕವಾಗಿ ಶಾಂತಿ ಮತ್ತು ಅಹಿಂಸೆಯ ಸಂದೇಶವೇ? ಅಥವಾ ಒಂದು ವಿಶೇಷ ಸಂದರ್ಭದಲ್ಲಿನ ಹಿಂಸೆಯನ್ನು ಪ್ರೇರಿಸುತ್ತದೆಯೋ?

## ಅಹಿಂಸೆ

**ರಣ್‌ಬೀರ್ ಚಕ್ರವರ್ತಿ: ವಾಸ್ತವವಾಗಿ ನನ್ನನ್ನು ಹೆಚ್ಚು ಕಾಡುತ್ತಿರುವುದೇನೆಂದರೆ, ಯಾಕೆ ಮಹಾತ್ಮಾ ಗಾಂಧಿ, ಶಾಂತಿಯ ದೂತನಾಗಿ ಅವರ ಎಲ್ಲಾ ಚಿಂತನೆಗಳ ಕೇಂದ್ರವಾಗಿ ಗೀತೆಯನ್ನು ತಂದರು? ಗೀತೆ ಒಂದು ಪಠ್ಯವಾಗಿ, ಯುದ್ಧ ಮತ್ತು ಬಂಧುತ್ವೀಯ ಹಿಂಸೆಯನ್ನು ಪ್ರಚೋದಿಸುತ್ತಾ ಎತ್ತಿ ಹಿಡಿಯುವಂತದ್ದು.**

**ರೊಮಿಲಾ ಥಾಪರ್:** ಗಾಂಧಿಯ ಯೋಚನೆಗಳ ಬಗೆಗೆ ನಾನು ಹೆಚ್ಚು ತಿಳಿದಿಲ್ಲ. ಅವರ ಬರಹಗಳನ್ನು ಆಮೂಲಾಗ್ರವಾಗಿ ಓದದ ಕಾರಣ ನಾನು ಇದನ್ನು ತೀರ್ಪಿನ ಹಾಗೆ ವಿವರಿಸಲಾಗುವುದಿಲ್ಲ. ನನ್ನ ಊಹೆಯೇನೆಂದರೆ ಹಿಂಸೆ ಅಥವಾ ಅಹಿಂಸೆಯು ಕಥೆಯ ಒಂದೇ ಮಗ್ಗುಲಷ್ಟೇ. ಆದರೆ ಆಶ್ಚರ್ಯವೇನೆಂದರೆ ಇದರ ಮೂಲಕ ಬರುವ ಅಂತಿಮ ಸಂದೇಶ, ಅದು ಅಶೋಕನ ಪ್ರಕರಣದಲ್ಲೂ ಕೂಡಾ ಅದು ಅಹಿಂಸೆಯ ರೀತಿಯದಲ್ಲ. ಅದು ಉಳಿದ ವಿಷಯಗಳನ್ನು ಹೊರತುಪಡಿಸಿ. ಅದನ್ನು ನೈತಿಕ ನೆಲೆಗಳ ಮೇಲೆ ರಕ್ಷಿಸಬಹುದಾದ ಅಹಿಂಸೆಯಷ್ಟೇ. ಅಶೋಕ ಹೇಳುವ ಹಾಗೆ. “ಆತನ ಮಕ್ಕಳು

ಮತ್ತು ಮೊಮ್ಮಕ್ಕಳು ಅಹಿಂಸೆಯನ್ನು ಪಾಲಿಸುವವರೆಂದು ಆಶಿಸುವ, ಆದರೆ ಅವರು ಹಿಂಸೆಯನ್ನು ಒಂದು ವೇಳೆ ಪಾಲಿಸಿದರೆ ಅವರು ಕೊಡುವ ಶಿಕ್ಷೆಯಲ್ಲಿ ಕರುಣೆಯನ್ನು ತೋರಿಸುತ್ತಾರೆ ಎನ್ನುತ್ತಾನೆ. ಆದ್ದರಿಂದ ಇದೊಂದು ನಿಯಂತ್ರಿತ ಅಹಿಂಸೆ ಇದು ಗೀತೆಯ ಬಗೆಗೂ ಕೂಡಾ ಸಮಾನವೇ? ಇದೊಂದು ಅಧಿಕಾರ ಮತ್ತು ನೀತಿಯ ಸಂಬಂಧಿತವೆನ್ನುವುದಾದರೆ, ಆಗ ಅಹಿಂಸೆಯನ್ನು ಅತ್ಯಂತ ಜಾಗರೂಕವಾಗಿ ಸಂಧಾನಿಸಬೇಕಾಗುತ್ತದೆ. ಇದು ಗಾಂಧಿಯ ಓದಿನ ಸಂದರ್ಭದಲ್ಲಿ ಕೂಡಾ ಹೊಂದುತ್ತದೆಯೇ? ಭಾರತೀಯ ರಾಷ್ಟ್ರೀಯತೆ ಆಗ ಬ್ರಿಟಿಷ್ ಸಾಮ್ರಾಜ್ಯಶಾಹಿಯ ವಿರುದ್ಧ ಸೆಣಸುತ್ತಿತ್ತು. ಗಾಂಧಿ ಹಿಂಸೆಯನ್ನು ಮನ್ನಿಸಿದ್ದಿದ್ದಿರಬಹುದು, ಆದರೆ ಆಗಿನ ಸಂದರ್ಭ ಬಯಸಿದ್ದ ಹಿಂಸೆಯನ್ನು ಮನ್ನಿಸದಿದ್ದ ಸಂಗತಿಯನ್ನು ಅದು ಸೂಚಿಸುತ್ತಿತ್ತೇ? ನನಗೆ ಆಶ್ಚರ್ಯವೆಂದರೆ, ಗಾಂಧಿಗೆ ಯಾಕೆ ಅಶೋಕ ಮತ್ತು ಆತನ ಶಾಸನಗಳಲ್ಲಿ ಆಸಕ್ತಿಯನ್ನು ಹೊಂದಿರಲಿಲ್ಲವೆಂಬುದು. ಇದಕ್ಕೆ ವಿರೋಧವೆಂಬಂತೆ ನೆಹರೂ, ಶಾಸನಗಳ ಸಂದೇಶಗಳ ಬಗೆಗೆ ಹೆಚ್ಚು ಆಸ್ಥೆಯನ್ನು ತೋರಿದ್ದರು.

ಗಾಂಧಿಗೆ ಗೀತೆ, ಇನ್ನೊಂದು ಆಯಾಮದಲ್ಲಿ ಮುಖ್ಯವೆನಿಸಿದ್ದು ವರ್ಣಾಶ್ರಮಧರ್ಮವನ್ನು ಅದು ಮನ್ನಿಸುವ ಕಾರಣದಿಂದಾಗಿ. ಅದು ನಮ್ಮ ಸುತ್ತಲಿನ ಜಗತ್ತು ತೀರಾ ಅನಿಶ್ಚಿತವೆಂದು ತೋರುವ ಸಂದರ್ಭದಲ್ಲಿನ ಸಮಾಜದ ರಚನೆಯನ್ನು ತಿಳಿಯಲು ಮತ್ತು ಒಬ್ಬ ವ್ಯಕ್ತಿಯೊಬ್ಬ ಅಂತಹ ರಚನೆಯಲ್ಲಿ ಪಡೆಯುವ ನಿಶ್ಚಿತ ಸ್ಥಾನಮಾನವನ್ನು ಹೊಂದಿ ಆತ ಅಲ್ಲಿ ಸಮಸ್ಯಾತ್ಮಕ ಸಂದರ್ಭಗಳನ್ನು ಹೊಂದುವಂತಹ ನೆಲೆಗಳನ್ನು ತಿಳಿಯಲು ಯಾವುದಾದರೂ ಸಾಮಗ್ರಿಯನ್ನೊದಗಿಸುತ್ತದೆಯೇ? ಜನರು ನಿಯಮಗಳನ್ನು ಮುರಿಯುತ್ತಿರುವಾಗ ಅಲ್ಲಿ, ವರ್ಣಾಶ್ರಮಧರ್ಮದಂತಹ ಮಾರ್ಗದರ್ಶಿಯನ್ನು ನೀಡುವುದು ಸೂಕ್ತವಾದುದೇ?

**ರಣ್‌ಬೀರ್ ಚಕ್ರವರ್ತಿ: ಅವರ ಜೀವನದ ಕೊನೆಯ ಹಂತದಲ್ಲಿ ವರ್ಣಾಶ್ರಮಧರ್ಮದ ಯೋಚನೆ ಮತ್ತು ಚಿಂತನೆಯನ್ನು ಸಂಪೂರ್ಣವಾಗಿ ಬಿಟ್ಟರು.**

**ರೊಮಿಲಾ ಥಾಪರ್**: ನನಗನಿಸುತ್ತೆ ಅವರ ಆಯ್ಕೆಯಾಗಿದ್ದ, ಉದಾಹರಣೆಗಾಗಿ ಹರಿಜನ ಎನ್ನುವ ಶಬ್ದ ಒಂದು ರೀತಿಯಾಗಿ ಯಥಾಸ್ಥಿತಿಯನ್ನು ಉಳಿಸಿಕೊಂಡು, ಅದರೊಳಗಡೆಯೇ ಒಂದು ಪರಿಹಾರವನ್ನು ಕಂಡುಕೊಳ್ಳುವ ಸಂಕೇತದ ಹಾಗೆ ಕಾಣಿಸುತ್ತದೆ. ಗತ ಶತಮಾನಗಳಲ್ಲಿದ್ದ ದಬ್ಬಾಳಿಕೆಯನ್ನು ಆತ ವಿರೋಧಿಸಿದ ಆದರೆ ಇಂದು ಇಂತಹ ದಬ್ಬಾಳಿಕೆಯನ್ನು ಹೇಗೆ ವಿರೋಧಿಸುವುದು? ಇಂದು ಜಾತಿಯ ವಿಧಿ ನಿಷೇಧಗಳನ್ನು ಉದ್ದೇಶಪೂರ್ವಕವಾಗಿ ಮುರಿಯುವ ಜನರ ಮೇಲೆ ನಾವು ಪ್ರೀತಿ ತೋರುತ್ತಿದ್ದೇವೆಯೇ?

**ರಣ್‌ಬೀರ್ ಚಕ್ರವರ್ತಿ: ಗಾಂಧಿ ಪದೇ ಪದೇ ಅಸ್ಪೃಶ್ಯರಿಗೆ ದೇಗುಲದ ಬಾಗಿಲನ್ನು ತೆರೆಯುವ ಸಲುವಾಗಿ ಹೋರಾಟ ಮತ್ತು ಆಗ್ರಹಗಳನ್ನು ಮಾಡುತ್ತಲೇ ಇದ್ದರು. ಬಹುಶಃ ಅದೊಂದು ಸಾಂಕೇತಿಕವಾದ ನಿಲುವಾಗಿತ್ತು. ಧಾರ್ಮಿಕವಾದ ವಿಮೋಚನೆಯು ಒಂದು ರೀತಿಯಲ್ಲಿ ಉಳಿದ ರೀತಿಯ ಬಂಧಗಳನ್ನು ತ್ವರಿತವಾಗಿ ಸಾಧಿಸುವ ರೀತಿಯದೆಂದು ಆತ ತಿಳಿದಿದ್ದಿರಬಹುದೇ? ಹರಿಜನ ಎನ್ನುವ ಶಬ್ದ ಒಂದು ರೀತಿಯಲ್ಲಿ ಪೋಷಿಸುವ ಅಥವಾ ಅನುಗ್ರಹಿಸುವ ಎನ್ನುವ ಅರ್ಥವನ್ನೇ ಹೊಂದಿದಂತಿದೆ.**

**ರೊಮಿಲಾ ಥಾಪರ್**: ಶೋಷಿಸುವ. ಎನ್ನುವ ಅರ್ಥವನ್ನು ಇಂದಿನ ಸಂದರ್ಭದಲ್ಲಿ ಗ್ರಹಿಸಬಹುದು. ಬಹುಶಃ ಆಗಿನ ಸಂದರ್ಭದಲ್ಲಿ ಅದು ಅಂತಹ ಉದ್ದೇಶವನ್ನು

ಹೊಂದಿತ್ತೆನ್ನಲಾಗದು. ಅದು ಸಂಬಂಧಗಳನ್ನು ವ್ಯತಿರಿಕ್ತಗೊಳಿಸಿತ್ತೇ? ಅದು ಕ್ರಾಂತಿಕಾರಕವಾದ ಸವಾಲಾಗಿತ್ತೇ? ಅಥವಾ ಇಂತಹ ಗ್ರಹಿಕೆ ದಾರಿ ತಪ್ಪಿತ್ತೇ?

## ರಾಮಾಯಣದ ಜನಪ್ರಿಯತೆ

**ರಣ್‌ಬೀರ್ ಚಕ್ರವರ್ತಿ: ಪರಿಕಲ್ಪನೆ ಮತ್ತು ಕಥನದಲ್ಲಿ ತುಂಬಾ ಸಂಕೀರ್ಣವಾಗಿರುವ ಮಹಾಭಾರತಕ್ಕಿಂತಲೂ, ರಾಮಾಯಣವು ಹೆಚ್ಚು ಜನಪ್ರಿಯವಾದುದು, ಇದಕ್ಕೆ ಕಾರಣವೇನು?**

**ರೊಮಿಲಾ ಥಾಪರ್**: ರಾಮಾಯಣದ ಅತ್ಯಂತ ವ್ಯಾಪ್ತ ಜನಪ್ರಿಯತೆ ಮತ್ತದರ ಸಾಕ್ಷಿ ತೀರಾ ಇತ್ತೀಚಿನದು. ಇತ್ತೀಚಿನ ಅನ್ನುವಾಗ ನಾನದನ್ನು ಪ್ರಾಚೀನ ಚರಿತ್ರೆಯ ಕ್ರೊನಾಲಜಿ (ಕಾಲಾನುಕ್ರಮಣಿಕೆ)ಯ ನೆಲೆಯಲ್ಲಿ ಹೇಳುತ್ತಿದ್ದೇನೆ. ರಾಮನಂದಿ ಪಂಥವು ಪ್ರಚುರಪಡಿಸಿದ ರಾಮಾಯಣ ಮತ್ತು ರಾಮಭಕ್ತಿ ಹಾಗೂ ತದನಂತರ ಅಸ್ತಿತ್ವದಲ್ಲಿದ್ದ ಕಥೆಯ ಆವೃತ್ತಿಯ ಜತೆ ಉಳಿದ ಕಥನಗಳು ಇಂತಹ ಚಳವಳಿಗೆ ಸೇರಿಕೊಂಡ ಸಂಗತಿಯನ್ನು ಉಲ್ಲೇಖಿಸಿ ನಾನು ಮಾತನಾಡುತ್ತಿದ್ದೇನೆ. ನಾನು ತಮಿಳಿನ ಕಂಬ ರಾಮಾಯಣ, ಕೃತ್ತಿಬನ ಬೆಂಗಾಳಿ ಮತ್ತು ಹಿಂದಿಯ ತುಳಸಿ ರಾಮಾಯಣವನ್ನು ಗಮನದಲ್ಲಿ ಕೂಡಾ ಇಟ್ಟುಕೊಂಡಿದ್ದೇನೆ. ಈ ಆವೃತ್ತಿಗಳೆಲ್ಲ ಸುಮಾರು ಕ್ರಿಸ್ತಶಕ ದ್ವಿತೀಯ ಶತಮಾನದಲ್ಲಿ ಅಂದರೆ ಮಧ್ಯಕಾಲೀನ ಅವಧಿಯಲ್ಲಿ ಮೂಡಿ ಬಂದಂತವುಗಳು.

ಆರಂಭದಲ್ಲಿ ಮಹಾಭಾರತಕ್ಕಿಂತಲೂ ರಾಮಾಯಣವನ್ನು ಹೆಚ್ಚು ಬಯಸುತ್ತಿರಲಿಲ್ಲ. ಆದರೆ ಒಂದನ್ನಂತೂ ಮರೆಯಬಾರದು, ಅದೆಂದರೆ ಕಥನ ಕ್ರಮದಲ್ಲಿ ರಾಮಾಯಣವು ಕಡಿಮೆ ಸಂಕೀರ್ಣತೆಯನ್ನು ಹೊಂದಿರುವಂತದ್ದು.

ಇದೆಲ್ಲದರ ಜತೆಗೆ, ಬಹಳ ಗಮನಾರ್ಹ ಸಂಗತಿಯೇನೆಂದರೆ, ಒಂದು ವಿಶಾಲ ವ್ಯಾಪ್ತಿಯ ಸಂಸ್ಕೃತ ಪಠ್ಯಗಳ ಬಗೆಗಿನ ಚರ್ಚೆ ಮತ್ತು ಟೀಕೆ ಆರಂಭವಾಗಿದ್ದು ಮಧ್ಯಯುಗೀನ ಸಮಯದಲ್ಲಿ. ಈಗಿನ ಕೆಲವು ರಾಜಕಾರಣಿಗಳು ಹೇಳುವ ಹಾಗೆ, ಈ ಅವಧಿಯಲ್ಲಿ ಮುಸ್ಲಿಮರ ಆಳ್ವಿಕೆಯಿಂದ ಹಿಂದುಗಳು ಗುಲಾಮರಾಗಿ ಮುಸ್ಲಿಮರು ಅವರನ್ನು ದಬ್ಬಾಳಿಕೆ ನಡೆಸಿದಂತಹ ಕಾಲವಾಗಿತ್ತು. ಮಧ್ಯಯುಗೀನ ಸಂದರ್ಭದಲ್ಲಿ ಹಿಂದೂ ಲೇಖಕರು, ಪಂಡಿತರು ಈ ರೀತಿ ಮುಸ್ಲಿಂ ದಬ್ಬಾಳಿಕೆಯಿಂದ ಸಂತಸ್ತರಾಗಿದ್ದಿದ್ದರೆ ಅಂತಹ ಸಮೃದ್ಧವಾದ ಸಾಹಿತ್ಯಿಕ ಮತ್ತು ತತ್ವಶಾಸ್ತ್ರೀಯ ಚರ್ಚೆಗಳು ಮತ್ತು ಸಂಸ್ಕೃತದ ಬಳಕೆಯು ಸಾಧ್ಯವಾಗುತ್ತಿತ್ತೇ? ಆದರೆ ಅದೊಂದು ಬರಿಯ ಆಯಾಮವಷ್ಟೇ.

**ರಣ್‌ಬೀರ್ ಚಕ್ರವರ್ತಿ: ರಾಮಾಯಣವು ಪುರುಷಪ್ರಧಾನ ಕುಟುಂಬ ವ್ಯವಸ್ಥೆಯನ್ನು ಕೂಡಾ ವಿಜೃಂಭಿಸಿ ಎತ್ತಿ ಹಿಡಿಯುತ್ತದೆ.**

**ರೊಮಿಲಾ ಥಾಪರ್**: ಹೌದು. ರಾಮಾಯಣವು ಸಮಾಜದ ಒಂದು ಹೊಸ ಗತಿಯನ್ನು ಅಂದರೆ ಅಲ್ಲಿ ಕುಟುಂಬ, ಆಸ್ತಿ, ಬಂಧುತ್ವ ಮತ್ತು ಆಡಳಿತವು ಕೇಂದ್ರದಲ್ಲಿರುವಂತಹ ವ್ಯವಸ್ಥೆಯನ್ನು ಸೂಚಿಸುತ್ತದೆ. ಈ ಸಮಯ, ಆರಂಭದ ರಾಜತ್ವ ರೂಪುಗೊಳ್ಳುತ್ತಿದ್ದ ಕಾಲ, ಈ ಕಾರಣದಿಂದ ರಾಮನು ವಿಷ್ಣುವಿನ ಅವತಾರವಾಗಿ ರೂಪಾಂತರವಾಗುವ ಮುಂಚೆ ಆತ ವಿಜಯಶಾಲಿಯಾಗಬೇಕಿತ್ತು.

**ರಣ್‌ಬೀರ್ ಚಕ್ರವರ್ತಿ: ರಾಮಾಯಣ ಕೂಡಾ ರಾಮನನ್ನು ನರಪುಂಗವ ಎನ್ನುತ್ತದೆ. ಅದು ಅತ್ಯಂತ ಸ್ಪಷ್ಟ.**

**ರೊಮಿಲಾ ಥಾಪರ್**: ಚರಿತ್ರೆಯ ಭಾಷೆಯಲ್ಲಿ ಹೇಳಬಹುದಾದರೆ, ರಾಮಾಯಣದ ಆಸುಪಾಸನ್ನು ಆರಂಭದ ತಳಿ ಅಥವಾ ಕುಲ ಆಧಾರಿತ ಸಮಾಜವನ್ನು ರಾಜತ್ವದ ವ್ಯವಸ್ಥೆಯು ಮೀರಿಸಿ, ಹಿಂದೆ ಹಾಕುವ ಕ್ರಮವೆಂದೇ ತಿಳಿಯಬಹುದಾಗಿದೆ. ಇದನ್ನು ನಾವು ನಂತರದಲ್ಲಿ ಕಾಣುವ 'ರಾಕ್ಷಸರು' ಎನ್ನುವ ಚಿತ್ರಣದಲ್ಲಿ ಕಾಣಬಹುದು. ರಾಮ ಒಬ್ಬ ಸದಾಚಾರದಿಂದಿದ್ದ ರಾಜನಾದ ಕಾರಣ ಅದು ಆತನನ್ನು ಬಹಳ ಸುಲಭವಾಗಿ ವಿಷ್ಣುವಿನ ಅವತಾರವನ್ನಾಗಿಸಿತು. ಕೃಷ್ಣ ಅವತಾರ ಮಾತ್ರ ಅತ್ಯಂತ ಸಂಕೀರ್ಣವಾದುದು.

**ರಣ್‌ಬೀರ್ ಚಕ್ರವರ್ತಿ: ಧರ್ಮರಾಜ ಯುಧಿಷ್ಠಿರನೂ ಕೂಡಾ ಅನೇಕ ಸಂದರ್ಭಗಳಲ್ಲಿ ಅನಿಶ್ಚಿತವಾಗಿದ್ದಂತೆ ಕಾಣುತ್ತದೆ.**

**ರೊಮಿಲಾ ಥಾಪರ್**: ರಾಮಾಯಣ ಲಭ್ಯವಾಗುವ ಹೊತ್ತಿಗೆ ಉತ್ತರಗಳು ನೇರವಾಗಿದ್ದುವು. ಅದೂ ಕೂಡಾ ಅಂತಹ ಕೃತಿಯನ್ನು ಧಾರ್ಮಿಕ ಕೃತಿಯೊಂದು ಪ್ರಚುರಪಡಿಸಲು ಬಹಳ ಸುಲಭವಾಗಿಸಿತು. ಧರ್ಮವನ್ನು ನಂಬಿಕೆಯ ಮೇಲೆ ಗ್ರಹಿಸಲಾಗುತ್ತದೆ ಮತ್ತು ನಂಬಿಕೆಯು ಕಥೆಗಿಂತ ಬಹು ಪ್ರಮುಖವಾದುದಾಗಿದೆ. ಒಂದು ಗ್ರಂಥವು ನಂಬಿಕೆಯನ್ನು ಮೂಡಿಸುತ್ತದೆ ಎನ್ನುವುದಾದರೆ ಅದು ಬೈಬಲ್ ಅಥವಾ ಖುರಾನ್ ಇರಬಹುದು ಅಥವಾ ಎಲ್ಲರೂ ರಾಮಭಕ್ತಿಯು ರಾಮಾಯಣವು ಆಧಾರದ ಮೇಲಿದೆ ಎಂದು ಹೇಳಿದರೆ ಅನಿವಾರ್ಯವಾಗಿ ರಾಮಾಯಣದಲ್ಲಿ ಬರೆದುದನ್ನು ನಂಬಬೇಕಾಗುತ್ತದೆ. ಈ ಕಾರಣದಿಂದ, ಕಥೆಯು ಅತ್ಯಂತ ಸರಳವಾಗಿದ್ದು ನೈತಿಕ ದ್ವಂದ್ವತೆ ಇಲ್ಲದಿದ್ದರೆ ಸುಲಭವಾಗುತ್ತದೆ. ರಾಮ ಕೂಡಾ ಹೆಚ್ಚು ಕಡಿಮೆ ಒಂದು ರೀತಿಯಲ್ಲಿ ಸಾಪೇಕ್ಷವಾಗಿ ಸಂಕೀರ್ಣತೆಯಿಲ್ಲದ ವ್ಯಕ್ತಿ. ಆತನಿಗೆ ಉದಾಹರಣೆಗೆ ರಾಜತ್ವದ ಬಗೆಗೆ ಸ್ವಲ್ಪವೇ ಸಂದೇಹ ಹಾಗೂ ಅನಿಶ್ಚಿತತೆಯಿತ್ತು, ರಾಮನನ್ನು ಯುಧಿಷ್ಠಿರ ಮತ್ತು ಅರ್ಜುನನಿಗೆ ಹೋಲಿಸಿದರೆ ಇವರು ತುಂಬಾ ಸಂಕೀರ್ಣ ವ್ಯಕ್ತಿಗಳಾಗಿದ್ದರು.

**ರಣ್‌ಬೀರ್ ಚಕ್ರವರ್ತಿ: ಗತದ ಚಾರಿತ್ರಿಕ ದಾಖಲೆಗಳು ತೋರಿಸುವ ಹಾಗೆ ಕೆಲವೊಮ್ಮೆ ರಾಜರುಗಳು ರಾಮಚಂದ್ರನನ್ನು ಅತಿಶಯಿಸುವ ಮಹಾತ್ವಾಕಾಂಕ್ಷೆಯನ್ನು ತೋರಿಸುತ್ತವೆ. ಅದು ವಿಷ್ಣುವಿನ ಅವತಾರವಾಗಿರುವ ದೈವಿಕ ರಾಮನಲ್ಲ, ಬದಲು ಒಬ್ಬ ಭೂಮಂಡಲದ ರಾಜನಾಗಿ. ದಕ್ಷಿಣ ಭಾರತದ ಅತ್ಯಂತ ಶಕ್ತಿಶಾಲೀ ಚೋಳರು ತಮ್ಮನ್ನು ಶಾಸನಗಳಲ್ಲಿ ರಾಮನ ವೈಭವಕ್ಕೆ ಹೋಲಿಸಿಕೊಂಡಿದ್ದಾರೆ; ವಿಶೇಷವಾಗಿ ರಾಮನು ವಾನರ ಸೈನ್ಯದ ಸಹಾಯದಿಂದ ಸೇತುಬಂಧದ ಮೂಲಕ ಲಂಕೆಯನ್ನು ಮುಟ್ಟಿದ ಹಾಗೆ ಚೋಳರು ನೌಕೆಯ ಮೂಲಕ ಸಿಲೋನ್ ಅನ್ನು ಮುಟ್ಟಿದ ಪ್ರಕರಣವನ್ನು.**

**ರೊಮಿಲಾ ಥಾಪರ್**: ಹೌದು, ಅದೇ ಹೊತ್ತಿಗೆ ಇಂತಹ ಹೇಳಿಕೆಗಳು ಯಾವ ರೀತಿಯಲ್ಲಿ ಇಂತಹ ಸಂಕೇತಗಳನ್ನು ಪರೀಕ್ಷಿಸಬೇಕೆಂಬುದಾಗಿ ಕೂಡಾ ತಿಳಿಸುತ್ತದೆ. ಅಂದರೆ, ಚಾರಿತ್ರಿಕ ವ್ಯಾಖ್ಯಾನದಲ್ಲಿನ ಕಾರಣೀಯತೆಯ ಪಾತ್ರವನ್ನು ಕುರಿತು ಒಬ್ಬರು ಮಾತನಾಡುವಾಗ, ಸಂವಹನದಂತಿರುವ ಸಾಂಕೇತಿಕತೆಯನ್ನು ತೊಡೆದುಹಾಕಬಾರದಾಗುತ್ತದೆ. ಆದರೆ ಅದೇ ಹೊತ್ತಿಗೆ ಆತ ಇಂತಹ ಸಾಂಕೇತಿಕತೆಯನ್ನು ತೀರಾ ವಿಮರ್ಶಿಯ ನೆಲೆಯಲ್ಲಿ ಕೂಡಾ ಪರೀಕ್ಷಿಸಿ ನೋಡಬೇಕಾಗುತ್ತದೆ. ಸಾಂಕೇತಿಕತೆಯನ್ನು ಬರೀ ಸಾಹಿತ್ಯಿಕ ವಿವರಣೆಯನ್ನಾಗಿಯಷ್ಟೇ ಓದಲಾಗದು. ಬದಲು ಅದು ತಿಳಿಸುವ ನಿಹಿತವಾದ ಅರ್ಥ ಸಾಧ್ಯತೆಯನ್ನು ತಿಳಿಯಬೇಕಾಗುತ್ತದೆ. ಈ ಅರ್ಥ ಸಾಧ್ಯತೆ ಕೆಲವರಿಗೆ ತೀರಾ

ನಿಗೂಢವಾಗಿರಲೂಬಹುದು; ಆದರೆ ಚರಿತ್ರಕಾರನಿಂದ ಅದು ತೀರಾ ಭಿನ್ನವಾದ ಒದಿಗೆ ಒಳಪಡುತ್ತದಷ್ಟೇ.

**ರಣ್‌ಬೀರ್ ಚಕ್ರವರ್ತಿ: ಕಾರಣೀಯತೆ ಮತ್ತು ನಂಬಿಕೆಯ ನಡುವೆ ಹರಿತವಾದ ಹಾಗೂ ಹೊಂದಿಕೆಯಾಗದ ವ್ಯತ್ಯಾಸವನ್ನು ನೀವು ಎತ್ತಿ ತೋರಿಸಿದ್ದೀರಿ. ಒಬ್ಬ ಇತಿಹಾಸಕಾರ ವೈಯಕ್ತಿಕವಾಗಿ ಯಾವುದೇ ರೀತಿಯ ಧಾರ್ಮಿಕ ನಿಲುವು ಮತ್ತು ನಂಬಿಕೆಯನ್ನು ಹೊಂದಬಹುದು; ಆದರೆ ಚರಿತ್ರೆಯ ಅಧ್ಯಯನದ ಸಂದರ್ಭದಲ್ಲಿ ಅದಕ್ಕೆ ಜಾಗವಿಲ್ಲ.**

**ರೊಮಿಲಾ ಥಾಪರ್:** ನಾನು ಆ ರೀತಿ ಹೇಳಿದ್ದುದರ ಅರ್ಥ, ಚರಿತ್ರಕಾರ ಆತನು ತನ್ನ ಧಾರ್ಮಿಕ ನಂಬಿಕೆಯನ್ನು ಕಿತ್ತೊಗೆಯಬೇಕೆಂದಲ್ಲ, ಆದರೆ ಅದು ಆತನು ಆಧಾರಗಳ ವ್ಯಾಖ್ಯಾನವನ್ನು ಪ್ರಭಾವಿಸಬಾರದೆಂದಷ್ಟೇ. ಚರಿತ್ರಕಾರನಲ್ಲಿ ಧಾರ್ಮಿಕ ಅಸ್ಮಿತೆ ಅಥವಾ ಅದರ ಕೊರತೆಯು ಚರಿತ್ರಕಾರನು ಮಾಡುವ ವ್ಯಾಖ್ಯಾನದಲ್ಲಿ ಅತ್ಯಂತ ಕಡಿಮೆ ಪರಿಣಾಮವನ್ನು ಬೀರಬಹುದಾದರೂ ಕೂಡಾ ಚರಿತ್ರಕಾರನಾಗಿ ಆತ ಇದರ ಬಗ್ಗೆ ಜಾಗರೂಕನಾಗಿರಬೇಕಾಗುತ್ತದೆ. ಪ್ರತಿಯೊಬ್ಬ ಚರಿತ್ರಕಾರನೂ ಕೂಡಾ ಒಂದು ಮಟ್ಟಿನ ಅತಿ ಒಲವು ಅಥವಾ ಪಕ್ಷಪಾತವನ್ನು ಹೊಂದಿಯೇ ಇರುತ್ತಾನೆ. ಸ್ವಲ್ಪ ಒಳ್ಳೆಯ ಚರಿತ್ರಕಾರರು ಇದರ ಬಗೆಗೆ ಅರಿವನ್ನು ಹೊಂದಿರುತ್ತಾ, ಸಾಧ್ಯವಿರುವಷ್ಟು ಮಟ್ಟಿಗೆ ನಿಷ್ಪಕ್ಷಪಾತದಿಂದಿರಲು ಪ್ರಯತ್ನಿಸುತ್ತಾರೆ. ಆದರೆ ಇಲ್ಲಿ ಕೂಡಾ ಒಬ್ಬ ಚರಿತ್ರಕಾರ, ಒಂದೇ ಒಂದು ವಿಧದ ಕಾರಣವಾದ ಅಥವಾ ತಾರ್ಕಿಕ ಪ್ರತಿಪಾದನೆಯಷ್ಟೇ ಇರುವುದಲ್ಲ ಭೂಲೋಕದಲ್ಲಿ ಎನ್ನುವುದರ ಬಗೆಗೆ ತಿಳಿವು ಮತ್ತು ಎಚ್ಚರದಿಂದಿರಬೇಕಾಗುತ್ತದೆ. ಒಂದು ಸಮಗ್ರವಾದ ಮೊತ್ತದ ಸಾಧ್ಯತೆಯನ್ನು ಈ ನೆಲೆಯಲ್ಲಿ ತಿಳಿದಿರಬೇಕಾಗುತ್ತದೆ. ಒಂದು ಪಠ್ಯವನ್ನು ಓದುವ ಮತ್ತು ಗಮನಿಸುವ ಮತ್ತು ತೀರ್ಮಾನ ಮಾಡುವ ವ್ಯಕ್ತಿಯು ಒಂದು ವಿಮರ್ಶೀಯ ನೆಲೆಯಲ್ಲಿ ಅದನ್ನು ಮಾಡಲಿಲ್ಲವೆಂದು ನಾವು ಆತನನ್ನು ಸಂಪೂರ್ಣ ನಿರಾಕರಿಸುವಂತೆಯೂ ಇಲ್ಲ, ಬದಲು ಆ ಪಠ್ಯವನ್ನು ಅಳೆಯುವ ಚರಿತ್ರಕಾರನು ಮಾತ್ರ ಅಂತಹ ಚರಿತ್ರಕಾರನ ವಿಮರ್ಶೀಯ ನೆಲೆಯಲ್ಲಿಯೇ ಮಾಡಬೇಕಾಗುತ್ತದೆ.

**ರಣ್‌ಬೀರ್ ಚಕ್ರವರ್ತಿ: ಇವತ್ತಿನ ಚರಿತ್ರಕಾರರು ವಿವರಿಸದ, ತಿಳಿಸದ ಸಂಗತಿಯು, ಮುಂದೆ ಅಥವಾ ನಂತರದಲ್ಲಿ ವಿವರಿಸಲ್ಪಡುತ್ತದೆ.**

**ರೊಮಿಲಾ ಥಾಪರ್** : ಹೌದು

**ರಣ್‌ಬೀರ್ ಚಕ್ರವರ್ತಿ: ಹಾಗೆ, ಯಾವಾಗಲೂ ಹೊಸ ವಿವರಣೆಗಳ ಸಾಧ್ಯತೆ ದಟ್ಟವಾಗಿರುತ್ತದೆ.**

**ರೊಮಿಲಾ ಥಾಪರ್:** ಹೌದು, ಖಂಡಿತವಾಗಿ ನಾನು ಯೋಚಿಸುವ ಹಾಗೆ ಚರಿತ್ರೆಯಂತಹ ವಿಷಯ ಅಥವಾ ಶಿಸ್ತಿನ ಸಂದರ್ಭದಲ್ಲಿ ಅತ್ಯಂತ ಅತ್ಯಾಕರ್ಷಕವಾದುದೇನೆಂದರೆ, ಚರಿತ್ರಕಾರನ ಹಾಗೆ ಒಬ್ಬ ವ್ಯಕ್ತಿ ಕಲಿಯುತ್ತಾ ಸಾಗುವುದಾಗಿದೆ. ಪ್ರತೀ ಬಾರಿಯೂ ಒಂದು ಹೊಸ ವಿಶ್ಲೇಷಣೆ ಇರುವ ಹೊಸ ಪುಸ್ತಕವನ್ನು, ಅದು ಏನೇ ಇದ್ದರೂ ಅದನ್ನೆತ್ತಿಕೊಂಡಾಗ, ಅದು ಎಸ್ಕಿಮೋ ಇರಬಹುದು ಅಥವಾ ಬುಶ್‌ಮೆನ್ ಎಂಬ ಆಫ್ರಿಕಾದ ಜನರ ಬಗೆಗಿರಬಹುದು, ಜ್ಞಾನದ ಸಂಪರ್ಕವು ಒಬ್ಬ ವ್ಯಕ್ತಿಯನ್ನು ನಿರಂತರವಾಗಿ ಕಾಲ ವಿವಕ್ಷೆಯನ್ನು ಮೀರಿ ಚಾಲಿಸುವಂತೆ ಮಾಡುತ್ತದೆ ಮತ್ತು ಎಲ್ಲಾ

ಕಾಲಕ್ಕೂ ಕೂಡಾ ನಿರಂತರವಾಗಿ ಅದರ ಬಗೆಗೆ ಪ್ರಶ್ನೆಗಳನ್ನು ಕೇಳುವಂತೆ ಮಾಡುತ್ತದೆ.

**ರಣ್‌ಬೀರ್ ಚಕ್ರವರ್ತಿ: ಬಹುಶಃ ನಿಮ್ಮ ರೀತಿಯ ನಿಲುವು ಮತ್ತು ಅನುಭವ ಹೊಂದಿರುವಂತವರು, ಯುವ ಸಮುದಾಯಕ್ಕೆ ಪ್ರೇರಣೆಯನ್ನು ನೀಡುತ್ತಾ ಅವರು, ಅತ್ಯಂತ ಕ್ಷಿಪ್ರವಾಗಿ ಬೆಳೆಯುತ್ತಿರುವ ಯಾಜಮಾನ್ಯೀಯ ಯೋಚನೆಗಳ ಸಂದರ್ಭದಲ್ಲಿ ಯೋಚನೆಗಳನ್ನು ಮತ್ತು ಮನಸ್ಸನ್ನು ನಿಲ್ಲಿಸದ ಹಾಗೆ ಪ್ರೇರಿಸುತ್ತಿದ್ದೀರಿ.**

**ರೊಮಿಲಾ ಥಾಪರ್**: ಅಂಧಶ್ರದ್ಧೆಯನ್ನು ಹೊಂದಿರುವವರು ಮಾತ್ರ ಯಜಮಾನಿಕೆಯನ್ನು ಸಾಧಿಸಲು ಹೆಣಗುತ್ತಾರೆ. ನನ್ನ ಹಾಗೆ ಯಾರಾದರೊಬ್ಬರು ಅವುಗಳನ್ನು ಮುಖಾಮುಖಿಯಾದಾಗ, ಅಂತಹ ಯೋಚನೆಯು ನನ್ನ ಮನಸ್ಸಿನಲ್ಲೇ ಪ್ರಮುಖ ಹಾಗೂ ತೀವ್ರವಾಗಿ ಮೂಡಿದ್ದಾಗಿ, ನಾನು ಚಾರಿತ್ರಿಕ ಸಮಸ್ಯೆಗಳನ್ನು ಸ್ಪಷ್ಟೀಕರಿಸುವ ಅಥವಾ ಅದನ್ನು ಪರಿಹರಿಸುತ್ತೇನೆಂದು ಹೇಳಿದಾಗ ಅದು ಕೇವಲ ಸಮಕಾಲೀನ ಸಮಯದ ಚರ್ಚೆಯಾಗಿರುವುದಿಲ್ಲ. ಬಹುಶಃ ಮುಂದಿನ ತಲೆಮಾರಿನ ಉಪಯೋಗದ ನೆಲೆಯಿಂದ ಕೂಡಾ ಆ ರೀತಿ ಮಾಡುತ್ತಿರುವುದಾಗಿದೆ. ತಲೆಮಾರು-ತಲೆಮಾರುಗಳಲ್ಲಿ ನಡೆಯಬೇಕಾದ ಈ ರೀತಿಯ ಪ್ರಶ್ನಿಸುವಿಕೆ ಮತ್ತು ಸಂವಾದವು ಅತ್ಯಂತ ಪ್ರಮುಖವಾದುದಾಗಿದೆ.

**ರಣ್‌ಬೀರ್ ಚಕ್ರವರ್ತಿ: ಸಮಕಾಲೀನ ಜಗತ್ತು ನಿಶ್ಚಿತವಾಗಿ ಯಜಮಾನಿಕೆಯ ನಿಲುವುಗಳನ್ನು ಪುನ: ಪುನ: ಪ್ರಶ್ನಿಸುವ ಹಾಗೂ ಹಲವು ಹೊಸ ವಿಚಾರಗಳನ್ನು ತರುವುದನ್ನು ಸ್ವಾಗತಿಸುತ್ತದೆ.**

**ರೊಮಿಲಾ ಥಾಪರ್**: ನಿಶ್ಚಿತವಾಗಿ ಜ್ಞಾನ ಅವಲಂಬಿತವಾಗಿರುವುದೇ ಪ್ರಶ್ನೆಗಳನ್ನು ಕೇಳುವ ಮೂಲಕ. ಇಲ್ಲದಿದ್ದರೆ, ನೀವು ಮನಸ್ಸು ಮತ್ತು ವಿವೇಕವನ್ನು ಮುಚ್ಚಬೇಕಾಗುತ್ತದೆ.

**ರಣ್‌ಬೀರ್ ಚಕ್ರವರ್ತಿ**: ಕೆಲವೊಮ್ಮೆ ಪ್ರಶ್ನೆಗಳನ್ನು ಕೇಳುವ ಮೂಲಕ ವ್ಯಕ್ತಿಗಳನ್ನು ಅಸಮಾಧಾನಪಡಿಸಬಹುದು. ಇಂತಹ ಅಸಮಾಧಾನ, ಭೇದ ಹಾಗೂ ಭಿನ್ನತೆಯನ್ನು ಹೇಗೋ ನಿಯಂತ್ರಿಸಬೇಕು ಮತ್ತು ಜಯಿಸಬೇಕಾಗಿದೆ. ಆರಂಭದಲ್ಲಿಯೇ ನಾನು ಹೇಳಿದ ಹಾಗೆ, ನಿಮ್ಮ 'ಪಾಸ್ಟ್ ಆ್ಯಂಡ್ ಪ್ರೆಸೆಂಟ್' ಕೃತಿಯನ್ನು ಓದುತ್ತಿದ್ದ ಹಾಗೆ, ನೀವು ಸ್ವಲ್ಪ ದು:ಖಿತರು ಎಂಬುದನ್ನು ಕಂಡುಕೊಂಡೆ. ಪ್ರಾಯಶ: ಅದು ಒಂದು ರೀತಿಯ ಮುಗಿದ, ಕೊನೆಯ ಸಂದೇಶವಲ್ಲವೆಂದೇ ತಿಳಿಯುತ್ತೇನೆ.

**ರೊಮಿಲಾ ಥಾಪರ್**: ಅದು ಅಂತಿಮ, ಮುಗಿದ ಸಂದೇಶವಲ್ಲ. ಅಲ್ಲವೇ ಅಲ್ಲ. ಯಾವಾಗಲೂ ಕೂಡಾ ಗತವನ್ನು ಓದಿ, ವರ್ತಮಾನವನ್ನು ತಿಳಿಯುವ ಸಡಗರಕ್ಕಾಗಿಯಾದರೂ ಕೂಡಾ ನಾವು ಭವಿಷ್ಯವನ್ನು, ಮುಂದಿನ ಯುಗವನ್ನು ಎದುರುಗೊಳ್ಳಬೇಕು.

***(ಮುಗಿಯಿತು)*** ■

# ದೊಡ್ಡಬಳ್ಳಾಪುರ ತಾಲ್ಲೂಕಿನ ಮಾಡೇಶ್ವರ ಗ್ರಾಮದಲ್ಲಿ ದೊರೆತ ಹುಲುಕುಡಿ ನಾಡಪ್ರಭು ಬಯಿರಪ್ಪನಾಯಕರ ಅಪ್ರಕಟಿತ ಶಿಲಾಶಾಸನ

**ಎಸ್. ವೆಂಕಟೇಶ್**
ದೃಶ್ಯ, ಸೋಮೇಶ್ವರ ಬಡಾವಣೆ,
ದೊಡ್ಡಬಳ್ಳಾಪುರ-561203,
ಬೆಂಗಳೂರು ಗ್ರಾಮಾಂತರ ಜಿಲ್ಲೆ.
ಮೊ: 9845018122
drushya655@gmail.com

ಹುಲುಕುಡಿ ನಾಡಪ್ರಭುಗಳ ಬಗ್ಗೆ ಇತಿಹಾಸ ದರ್ಪಣ ಪತ್ರಿಕೆಯ 16ನೇ ಸಂಚಿಕೆಯಲ್ಲಿ (ಜನವರಿ–ಮಾರ್ಚ್ 2013) ನಾನೇ ಸುದೀರ್ಘವಾಗಿ ಬರೆದಿದ್ದೆ. ಚರಿತ್ರೆಯಿಂದ ಮರೆಯಾಗಿ ಹೋಗಿದ್ದ ಈ ನಾಡಪ್ರಭುಗಳ ಕಾಲದ ಮತ್ತೊಂದು ಶಿಲಾಶಾಸನ ಈಗ ನನ್ನ ಕ್ಷೇತ್ರಕಾರ್ಯದ ವೇಳೆ ಪತ್ತೆಯಾಗಿದೆ. ದೊಡ್ಡಬಳ್ಳಾಪುರ ತಾಲ್ಲೂಕು, ದೊಡ್ಡಬೆಳವಂಗಲ ಹೋಬಳಿಗೆ ಸೇರಿದ ಇಂದಿನ ಹುಲುಕುಡಿ ಬೆಟ್ಟದ ಸುತ್ತಮುತ್ತಲಿನ ಬಹುತೇಕ ಪ್ರದೇಶವನ್ನು ವಿಜಯನಗರ ಅರಸರ ಕಾಲಾವಧಿಯಲ್ಲಿ 'ಹುಲುಕುಡಿ ನಾಡು' ಎಂದೂ, ಈ ಪ್ರಾಂತ್ಯದಿಂದ ಆಳ್ವಿಕೆ/ರಾಜ್ಯಭಾರ ಮಾಡುತ್ತಿದ್ದ ಸ್ಥಳೀಯ ಗೌಡ-ನಾಯಕ ದೊರೆಗಳನ್ನು 'ಹುಲುಕುಡಿ ನಾಡಪ್ರಭುಗಳು' ಎಂದೂ ಕರೆಯಲಾಗಿತ್ತು. ಇದಕ್ಕೂ ಮುನ್ನ ಅಂದರೆ ಹೊಯ್ಸಳರ ಕಾಲದಲ್ಲಿ ಈ ಪ್ರದೇಶವು ಚೋಳಮಂಡಲದ ಮಣ್ಣೆನಾಡಿಗೆ ಸೇರಿತ್ತೆಂದು ಶಾಸನಗಳಿಂದ ಸ್ಪಷ್ಟವಾಗುತ್ತದೆ. ಆನಂತರ ಇದೇ ಒಂದು ನಾಡಾಗಿ ಬೆಳವಣಿಗೆ ಹೊಂದಿರಬೇಕು.

ಹುಲುಕುಡಿ ನಾಡಪ್ರಭುಗಳ ಆಳ್ವಿಕೆಗೆ ಸಂಬಂಧಪಟ್ಟಂತೆ ದೊರೆತಿರುವ ಶಿಲಾಶಾಸನಗಳ ಸಂಖ್ಯೆ ತೀರಾ ಕಡಿಮೆ. ಅರಳುಮಲ್ಲಿಗೆ, ಗಂಡರಗೂಳೀಪುರ, ಪುಟ್ಟಯ್ಯನ ಅಗ್ರಹಾರ,



ಕಾಡನೂರು, ಭೈರಾಪುರ ಮತ್ತು ಲಿಂಗಾಪುರದ ಶಾಸನಗಳು- ಹೀಗೆ ಕೇವಲ ಬೆರಳೆಣಿಕೆಯಷ್ಟು ಶಾಸನಗಳು ಮಾತ್ರ ಈ ಸ್ಥಳೀಯ ನಾಡಪ್ರಭುಗಳ ಬಗ್ಗೆ ಪ್ರಸ್ತಾಪಿಸುತ್ತವೆ. ದೊರೆತಿರುವ ಎಲ್ಲ ಶಾಸನಗಳೂ ದಾನಶಾಸನಗಳಾಗಿದ್ದು, ಇವುಗಳಿಂದ ಹೆಚ್ಚಿನ ಐತಿಹಾಸಿಕ ಮಾಹಿತಿಯನ್ನು ನಿರೀಕ್ಷಿಸಲಾಗುವುದಿಲ್ಲ. ಆದಾಗ್ಯೂ ಇವುಗಳನ್ನು ನಿರ್ಲಕ್ಷಿಸುವಂತೆಯೂ ಇಲ್ಲ. ಈಗ ನನ್ನ ಕ್ಷೇತ್ರಕಾರ್ಯದ ವೇಳೆ ಹುಲುಕುಡಿ ಬೆಟ್ಟ(ದುರ್ಗ)ಕ್ಕೆ ಅಂಟಿಕೊಂಡಂತಿರುವ ಮಾಡೇಶ್ವರ ಗ್ರಾಮದಲ್ಲಿ ದೊರೆತಿರುವ ಶಿಲಾಶಾಸನವೂ ದಾನಶಾಸನವೇ ಆಗಿದೆ. ಈ ಮಾಡೇಶ್ವರ ಗ್ರಾಮವು ಹೊಯ್ಸಳರ ಕಾಲದಿಂದಲೂ ಪ್ರಸಿದ್ಧ ಅಗ್ರಹಾರವಾಗಿತ್ತು. ಇದೇ ಗ್ರಾಮದ ಮುಕ್ತಗ್ನೇಶ್ವರ ದೇವಾಲಯದ ಬಳಿ ಹುಟ್ಟುಬಂಡೆಯೊಂದರ ಮೇಲೆ ಕೆತ್ತಲಾಗಿರುವ

ಹೊಯ್ಸಳ ವಿಷ್ಣುವರ್ಧನನ ಕಾಲಕ್ಕೆ ಸೇರಿದ ತಮಿಳು ಶಾಸನವೊಂದು ಈಗಾಗಲೇ ಪ್ರಕಟಗೊಂಡಿದೆ.

ಪ್ರಸ್ತುತ ಈಗ ದೊರೆತಿರುವ ಶಾಸನವು ಮಾಡೇಶ್ವರ ಗ್ರಾಮದ ನೀಲಗಿರಿ ತೋಪಿನಲ್ಲಿ ಪತ್ತೆಯಾಗಿದ್ದು, ನಾಲ್ಕುಅಡಿ ಉದ್ದ, ಎರಡುಅಡಿ ಅಗಲ ಮತ್ತು ನಾಲ್ಕು ಇಂಚಿನಷ್ಟು ದಪ್ಪನಾಗಿದೆ. ಆದರೆ ದುರಾದೃಷ್ಟವಶಾತ್ ಈ ಶಾಸನ ನಿಧಿಶೋಧಕರ ದಾಳಿಗೆ ತುತ್ತಾಗಿದ್ದು, ಎರಡು ಹೋಳಾಗಿದೆ. ಶಾಸನದ ಕೆಳಭಾಗದ ಹೋಳು ಎಲ್ಲೂ ಕಂಡುಬರುತ್ತಿಲ್ಲ. ಉಳಿದುಕೊಂಡಿರುವ ಭಾಗದಲ್ಲಿ 15 ಸಾಲುಗಳಿವೆ. ಶಾಸನದ ಮೇಲ್ಭಾಗದಲ್ಲಿ ಎರಡೂ ಮೂಲೆಯಲ್ಲಿ ಸೂರ್ಯಚಂದ್ರರ ಉಬ್ಬುಶಿಲ್ಪಗಳಿವೆ. ಅದರ ಕೆಳಗೆ ಶಿವಲಿಂಗವಿದ್ದು, ಇದರ ಎದುರಿಗೆ ಕುಳಿತ ಬಸವನ ಉಬ್ಬು ಚಿತ್ರಣಗಳಿವೆ. ಶಾಸನದಲ್ಲಿ ಶಾಲಿವಾಹನ ಶಕವರುಶ 1452ನೆಯ ವಿಭವ ಸಂವತ್ಸರದ ಆಶ್ವೀಜ 15ಲು ಎಂಬ ತೇದಿಯ ವಿವರವಿದೆ.

ಇದು ಕ್ರಿ.ಶ. 1529ರ ಸೆಪ್ಟೆಂಬರ್ 18ಕ್ಕೆ ಸರಿಯಾಗುತ್ತದೆ. ಅಂದು ಶುಕ್ರವಾರವಾಗಿತ್ತು.

**ಪ್ರಸ್ತುತ ಶಾಸನದ ಪಾಠ ಈ ರೀತಿಯಾಗಿದೆ.**

1. ಶುಭಮಸ್ತು ಸ್ವಸ್ತಿಶ್ರೀವಿಜಯಾಭ್ಯುದಯ
2. ಂಶಾಲಿವಾಹನ ಶಕವರುಶಂಗಳೂ
3. 1452ನೆಯ ವಿರೋಧಿ ಸಂವತ್ಸರದ ಆಶ್ವೀ
4. ಜಶು15ಲು ತ್ರಿಪುರ ಮಹಾರಾಜಾಧಿರಾಜ ರಾಜ
5. ಪರಮೇಶ್ವರ ಶ್ರೀವೀರಪ್ರತಾಪ ಅಚುತರಾಯ
6. ಮಹಾರಾಯರು ಪ್ರುತ್ವಿರಾಜ್ಯಂಗಯುತ್ತಾಯಿರಲು ಶ್ರೀ
7. ಮದು ಗಂಡರಗೂಳಿ ದಳವಾಯಿ ಸೊಂನಪ್ಪನಾಯ
8. ಂಕರ ಮಕ್ಕಳು ಬಯಿರಪ್ಪನಾಯಕರು ನಂದ್ಯಪ್ಪ
9. ವಡೆಯರಿಗೆ ಕೊಟ್ಟ ಪುರಧರ್ಮಶಾಸನದ ಕ್ರಮವೆ
10. ಂತೆಂದರೆ ನಂಮಿನಾಯಕ ತನಕೆ ಸಲ್ಲುವ ಹುಲುಕು
11. ಡಿನಾಡ ತಿಪ್ಪೂರಶೀಮೆಗೆ ಸಲ್ಲುವ ಲಿಂಗಾಪುರದ
12. ಪಡವಲು ಗಂಡರಗೂಳಿಗೆ ಬಡಗಲು ಗಲಿಬಿಲಿಕ್ವಾಟೆ........
13. ......................................ಯಿಯನು ಗುರು ಕೊಂದಂತೆ
14. ....................................ಗೆಯಲಿ.........................
15. ...................................................................

**ಶಾಸನದ ಮಹತ್ವ**

1. ಈ ಶಿಲಾಶಾಸನವು ಹುಲುಕುಡಿ ನಾಡಪ್ರಭುಗಳ ಆಳ್ವಿಕೆ ಮತ್ತು ಅವರು ಕೈಗೊಂಡ ದಾನಧರ್ಮ ಕಾರ್ಯಗಳ ಬಗ್ಗೆ ತಿಳಿಯಲು ಮಹತ್ವದ ಆಕರವಾಗಿದೆ.



ಎಸ್. ವೆಂಕಟೇಶ್

2. ಈ ಶಿಲಾಶಾಸನದಲ್ಲಿ ಉಲ್ಲೇಖಗೊಂಡಿರುವ ತಿಪ್ಪೂರು, ಲಿಂಗಾಪುರ, ಗಂಡರಗೂಳಿಪುರ, ಗಲಿಬಿಲಿಕ್ವಾಟೆ ಗ್ರಾಮಗಳು ಇಂದಿಗೂ ಅಸ್ತಿತ್ವದಲ್ಲಿದ್ದು, ತಮ್ಮ ಮೂಲ ಹೆಸರುಗಳನ್ನು ಹಾಗೆಯೇ ಉಳಿಸಿಕೊಂಡಿರುವುದು ಗಮನಾರ್ಹ. ಇದರಲ್ಲಿ ಉಲ್ಲೇಖಗೊಂಡಿರುವ ಲಿಂಗಾಪುರ ಮತ್ತು ಗಲಿಬಿಲಿಕ್ವಾಟೆ ಗ್ರಾಮನಾಮಗಳು ಮತ್ತೆಲ್ಲಿಯೂ ಶಾಸನೋಕ್ತವಾಗಿಲ್ಲ. ಹೀಗಾಗಿ ಪ್ರಸ್ತುತ ಶಾಸನವು ಈ ಸ್ಥಳನಾಮಗಳ ಅಧ್ಯಯನಕ್ಕೂ ನೆರವಾಗುತ್ತದೆ.

3. ಇದು ಹುಲುಕುಡಿ ನಾಡಪ್ರಭು ಗಂಡರಗೂಳಿ ದಳವಾಯಿ ಬಯಿರಪ್ಪನಾಯಕರ ಅಪ್ರಕಟಿತ ಶಾಸನ.

4. ಹುಲುಕುಡಿ ನಾಡಪ್ರಭುಗಳ ಕಾಲದಲ್ಲಿ ತಿಪ್ಪೂರು ಒಂದು 'ಶೀಮೆ(ಆಡಳಿತ ವಿಭಾಗ)'ಯಾಗಿತ್ತೆಂದು ಸ್ಪಷ್ಟವಾಗುತ್ತದೆ.

ಹುಲುಕುಡಿ ನಾಡಿಗೆ ವಿಜಯನಗರದ ದೊರೆ ವೀರನರಸಿಂಗ ದೇವರಾಯನ ಕಾಲದಲ್ಲಿ ದಳವಾಯಿ ಸೊಂಣಪ್ಪನಾಯಕರ ಮಗ ನಾಗಪ್ಪನಾಯಕರು, ತದನಂತರ ಅವರ ಸಹೋದರ ಬಯಿರಪ್ಪನಾಯಕರು ಅಧಿಪತಿಯಾದಂತೆ ತಿಳಿದುಬರುತ್ತದೆ. ಇದನ್ನು ತಿಳಿಸುವ ಎರಡು ಶಾಸನಗಳು ಈಗಾಗಲೇ ಗಂಡರಗೂಳಿಪುರದಲ್ಲಿ ದೊರೆತಿದ್ದು, ಪ್ರಕಟಗೊಂಡಿವೆ. ಇವುಗಳಲ್ಲಿ ಒಂದು ಶಾಸನದ ಕಾಲ ಕ್ರಿ.ಶ.1541. ಇನ್ನೊಂದು ಶಾಸನದ ಕಾಲ ಕ್ರಿ.ಶ.1569. ಇದರಿಂದಾಗಿ ಬಯಿರಪ್ಪನಾಯಕರು ಹುಲುಕುಡಿ ನಾಡನ್ನು 30 ವರ್ಷಗಳಿಗೂ ಮೇಲ್ಪಟ್ಟು ಆಳಿದರೆಂದು ಸ್ಪಷ್ಟವಾಗುತ್ತದೆ.

ಇಂದು ಹುಲುಕುಡಿ ನಾಡು ಪ್ರದೇಶದಲ್ಲಿ ಹುಲುಕುಡಿ ಎಂಬ ಹೆಸರಿನ ಯಾವ ಗ್ರಾಮವಾಗಲೀ ಅಥವಾ ಗ್ರಾಮದ ಅವಶೇಷವಾಗಲೀ ಕಂಡುಬರುವುದಿಲ್ಲ. ದೊಡ್ಡಬಳ್ಳಾಪುರ ತಾಲ್ಲೂಕಿನ ಒಂದು ಹೋಬಳಿ ಕೇಂದ್ರವಾದ ದೊಡ್ಡಬೆಳವಂಗಲದಿಂದ ಉತ್ತರಕ್ಕೆ ಐದಾರು ಕಿಲೋ ಮೀಟರ್ ದೂರದಲ್ಲಿ ಹುಲುಕುಡಿ ಬೆಟ್ಟವಿದೆ. ಸ್ವಲ್ಪ ಸೂಕ್ಷ್ಮವಾಗಿ ಒಳಗಣ್ಣಿನಿಂದ ಈ ಬೆಟ್ಟದ ಮೇಲಿನ ಕೋಟೆ, ಮದ್ದಿನ ಮನೆ, ಕೋಟೆ ಬುರುಜು, ಕೋಟೆಯ ಮಹಾದ್ವಾರದ ಅವಶೇಷ, ನೈಸರ್ಗಿಕ ಮತ್ತು ನಿರ್ಮಿತ ನೀರಿನ ದೊಣೆಗಳು, ತುಪ್ಪದ ಕೊಳ, ವಸತೀ ಸಮುಚ್ಚಯ, ತೋರಣಗಲ್ಲು, ವೀರಭದ್ರ ದೇವಾಲಯ, ಸುರಂಗಮಾರ್ಗ ಇತ್ಯಾದಿಗಳನ್ನೆಲ್ಲಾ ನೋಡಿದರೆ ಹುಲುಕುಡಿ ನಾಡಪ್ರಭುಗಳು ಈ ಹುಲುಕುಡಿ ಬೆಟ್ಟವನ್ನೇ ತಮ್ಮ ರಾಜ್ಯದ ಕೇಂದ್ರವನ್ನಾಗಿಸಿಕೊಂಡು ರಾಜ್ಯಭಾರ ನಡೆಸಿದರೆಂದು ಹೇಳಬಹುದು.

**ನೆರವು: ಪ್ರಸ್ತುತ ಶಾಸನದ ಬಗ್ಗೆ ನನಗೆ ತಿಳಿಸಿದ ದೊಡ್ಡಬಳ್ಳಾಪುರ ತಾಲ್ಲೂಕಿನ ಸರ್ಕಾರಿ ಪರವಾನಗಿ ಭೂಮಾಪಕರಾಗಿ ಕಾರ್ಯನಿರ್ವಹಿಸುತ್ತಿರುವ ಗೆಳೆಯ ಎಸ್.ಆರ್. ಸಿದ್ಧಗಂಗಯ್ಯ ಅವರಿಗೆ ಕೃತಜ್ಞತೆಗಳು.**

# ಆತ್ಮೋಪದೇಶ ಶತಕ

ಮೂಲ:
**ನಾರಾಯಣ ಗುರು**
ಕನ್ನಡ ಅನುವಾದ:
**ವಿನಯ ಚೈತನ್ಯ**
vinaya@unitiveunderstanding.org

**ನಾ**ರಾಯಣ ಗುರು: ಕೇರಳದ ಪ್ರಮುಖ ಸಾಧಕ, ಕವಿ, ಮತ್ತು ಚಿಂತಕರಲ್ಲಿ ಒಬ್ಬರು. ಕ್ರಿ.ಶ. 1854ರಲ್ಲಿ ತಿರುವನಂತಪುರಂ ಸಮೀಪದ ಚೆಂಪಟಿಂತಿಯಲ್ಲಿ ಜನಿಸಿದರು. ತಂದೆ ಮಾಡನ್ ಆಶಾನ್, ತಾಯಿ ಕುಟ್ಟಿಯಮ್ಮ. ಪ್ರಾಥಮಿಕ ಶಿಕ್ಷಣ ಮತ್ತು ಕರುನಾಗಪ್ಪಳ್ಳಿ ಎಂಬಲ್ಲಿ ಕೆಲಕಾಲ ಸಂಸ್ಕೃತ ಅಧ್ಯಯನ ನಡೆಸಿದ ಬಳಿಕ 1884ರಲ್ಲಿ ಅರುವಿಪ್ಪುರಂ ಎಂಬಲ್ಲಿ ಶಿವಾಲಯವೊಂದನ್ನು ಸ್ಥಾಪಿಸಿದರು. ಬಳಿಕ 1904ರ ಆಸುಪಾಸಲ್ಲಿ ವರ್ಕಲ ಸಮೀಪದ ಶಿವಗಿರಿಯಲ್ಲಿ ನೆಲೆಸಿದ ಇವರು ಮುಂದಿನ ಎಂಟು ವರ್ಷಗಳಲ್ಲಿ ಅಂಜುತೆಂಗು, ಪೆರಿಂಗೋಟ್ಟುಕರ, ತ್ರಿಶೂರ್, ಕಣ್ಣೂರು, ತಲಶೇರಿ, ಕಲ್ಲೀಕೋಟೆ, ಮಂಗಳೂರು, ವರ್ಕಲ ಮುಂತಾದಲ್ಲಿ ದೇವಾಲಯಗಳನ್ನು ಸ್ಥಾಪಿಸಿದರು. 1913ರಲ್ಲಿ ಆಲುವಾದಲ್ಲಿ ಅದ್ವೈತಾಶ್ರಮ ಸ್ಥಾಪಿಸಿದರು. ಎರಡು ಬಾರಿ ಶ್ರೀಲಂಕಾಗೆ ಭೇಟಿ ನೀಡಿದ ಇವರು ಬೆಂಗಳೂರು, ಕೊಯಂಬತ್ತೂರು, ನೀಲಗಿರಿಗಳಲ್ಲದೆ ಕೇರಳ ಹಾಗೂ ತಮಿಳುನಾಡಿನ ವಿವಿಧೆಡೆಗಳಲ್ಲಿ ಸಂಚಾರ ನಡೆಸಿದರು. 1928ರಲ್ಲಿ ಶಿವಗಿರಿಯಲ್ಲಿ ಸಮಾಧಿಯಾದರು.

ನಾರಾಯಣ ಗುರು ಮಲಯಾಳಂ, ಸಂಸ್ಕೃತ ಹಾಗೂ ತಮಿಳು ಭಾಷೆಗಳಲ್ಲಿ ಅರವತ್ತಕ್ಕೂ ಹೆಚ್ಚು ಕಾವ್ಯಕೃತಿಗಳನ್ನು ರಚಿಸಿರುವುದಲ್ಲದೆ

ಮಲಯಾಳಂನಲ್ಲಿ ನಾಕಾರು ಸಣ್ಣ ಗದ್ಯಕೃತಿಗಳನ್ನೂ ಬರೆದಿದ್ದಾರೆ. ಜಾತಿಮೀಮಾಂಸ, ದರ್ಶನಮಾಲಾ, ಆತ್ಮೋಪದೇಶಶತಕಂ, ಬ್ರಹ್ಮವಿದ್ಯಾಪಂಚಕಂ, ಚಿಜ್ಜಡಚಿಂತನಂ, ಅದ್ವೈತದೀಪಿಕ, ಕಾಳಿನಾಟಕಂ ಮೊದಲಾದವು ಇವರ ಪ್ರಮುಖ ಕೃತಿಗಳು. ಈಶಾವಾಸ್ಯ ಉಪನಿಷದನ್ನೂ, ತಮಿಳಿನ ತಿರುಕ್ಕುರಲ್ ಗ್ರಂಥವನ್ನೂ ಇವರು ಮಲಯಾಳಂ ಭಾಷೆಗೆ ಅನುವಾದಿಸಿದ್ದಾರೆ.

ನಾರಾಯಣ ಗುರು ಸಮಾಜ ಸುಧಾಕರರೆಂದೇ ಖ್ಯಾತರಾದರೂ ಇವರು ಮೂಲತಃ ಸಾಧಕರು. ತಮ್ಮ ಕೃತಿಗಳಲ್ಲಿ ಇವರು ಭಾರತದ ವಿವಿಧ ಆಧ್ಯಾತ್ಮಿಕ ಪರಂಪರೆಗಳ ಸಮನ್ವಯ ನಡೆಸಲು ಪ್ರಯತ್ನಿಸಿದ್ದಾರೆ. ಶಂಕರನ ಅದ್ವೈತದಿಂದ ಮಾಣಿಕ್ಯವಾಚಕರ ತಿರುವಾಚಕಂವರೆಗೆ ಅನೇಕ ದರ್ಶನಗಳ ಪ್ರಭಾವ ಇವರ ಮೇಲೆ ಕಾಣುತ್ತದೆ. ಈ ಎಲ್ಲ ದರ್ಶನಗಳ ಪ್ರೇರಣೆಯಿಂದ ಇವರು ಮಾನವಕುಲದ ಮೂಲಭೂತ ಸಮಾನತೆಯನ್ನು ಎತ್ತಿಹಿಡಿಯಲು ಪ್ರಯತ್ನಿಸಿದ್ದಾರೆ. ಮಾನವರಿಗುಳ್ಳದ್ದು ಒಂದೇ ಜಾತಿ, ಒಂದೇ ಮತ, ಒಂದೇ ದೇವರು ಎಂಬ ಇವರ ಹೇಳಿಕೆ ಬಹು ಪ್ರಸಿದ್ಧವಾದ್ದು. ಇದನ್ನು ಸಾಮಾಜಿಕ ಅಸಮಾನತೆಯ ನೇರ ಟೀಕೆಯಾಗಿ ಹೇಳುವುದಲ್ಲದೆ ಅಧ್ಯಾತ್ಮದ ಮೂಲ ತತ್ವವಾಗಿ ಪ್ರತಿಬಿಂಬಿಸಿರುವುದು ವಿಶೇಷ.

ಒಮ್ಮೆ ಗಾಂಧೀಜಿಯವರು ನಾರಾಯಣ ಗುರುವನ್ನು ಭೇಟಿಯಾದರು. ಆವರೆಗೆ ಜಾತಿ ಪದ್ಧತಿಯಲ್ಲಿ ಅದಮ್ಯ ನಂಬಿಕೆಯಿದ್ದ ಗಾಂಧೀಜಿಯವರ ವಿಚಾರಗಳು ಈ ಭೇಟಿಯ ನಂತರ ಬದಲಾದವು. ಎಲ್ಲ ಜಾತಿಗಳೂ ಒಂದೇ ಎಂದು ನಾರಾಯಣ ಗುರು ಹೇಳಿದಾಗ ಗಾಂಧೀಜಿ ಮಾವಿನ ಮರವೊಂದರ ಎಲೆಗಳು ಒಂದೇ ಸಮನಾಗಿರುವುದಿಲ್ಲ, ಎಲೆಗಳ ಆಕಾರ, ಬಣ್ಣ, ಮುಂತಾದವುಗಳಲ್ಲಿ ಅನೇಕ ವೈವಿಧ್ಯತೆ ಕಂಡುಬರುತ್ತದೆ ಎಂದರು. ಇದಕ್ಕೆ ಉತ್ತರಿಸಿದ ನಾರಾಯಣ ಗುರು ಮೇಲುನೋಟಕ್ಕೆ ಎಲ್ಲ ಎಲೆಗಳೂ ಭಿನ್ನವೆಂದು ತೋರಿದರೂ ಅವುಗಳನ್ನು ಹಿಂಡಿ ತೆಗೆಯುವ ರಸವು ಸದಾ ಒಂದೇ ಆಗಿರುತ್ತದೆ ಎಂದು ಉತ್ತರಿಸಿದರು. ಗಾಂಧೀಜಿಯವರ ವಿಚಾರಗಳು ಬದಲಾಗಲು ಈ ಸಂವಾದ ಕಾರಣವಾಯಿತು.

ಕೇರಳದ ಪ್ರಮುಖ ಕವಿಯಾದ ಕುಮಾರನ್ ಆಶಾನ್, ವೈದ್ಯ ಹಾಗೂ ಸಮಾಜ ಸುಧಾರಕ ಡಾಕ್ಟರ್ ಪಲ್ಪು, ಸಹೋದರನ್ ಅಯ್ಯಪ್ಪನ್, ನಾರಾಯಣ ಗುರು ಪರಂಪರೆಯ ಪ್ರಮುಖ ಸಾಧಕ ಹಾಗೂ ಬೆಂಗಳೂರು ಬಳಿಯ ಸೋಮನಹಳ್ಳಿಯಲ್ಲಿರುವ ನಾರಾಯಣ ಗುರುಕುಲದ ಸ್ಥಾಪಕ ಡಾಕ್ಟರ್ ನಟರಾಜ ಗುರು ಇವರ ಪ್ರಮುಖ ಶಿಷ್ಯರು. ಪಲ್ಪು, ಆಶಾನ್, ಮುಂತಾದವರು ನಾರಾಯಣ ಗುರುವನ್ನು ಮುಂದಿಟ್ಟು 1903ರಲ್ಲಿ ಶ್ರೀ ನಾರಾಯಣ ಧಾರ್ಮ ಪರಿಪಾಲನ ಯೋಗಂ (ಎಸ್.ಎನ್.ಡಿ.ಪಿ.) ಎಂಬ ಸಂಸ್ಥೆಯನ್ನು ಸ್ಥಾಪಿಸಿದರು. ವಿಪರ್ಯಾಸವೆಂದರೆ, ಮಾನವರನ್ನೆಲ್ಲ ಒಗ್ಗೂಡಿಸುವ ಉದ್ದೇಶದಿಂದ ನಾರಾಯಣ ಗುರು ಒರೆದ ತತ್ವಗಳ ಬೆಳಕಲ್ಲಿ ಸ್ಥಾಪಿತವಾದ ಈ ಸಂಸ್ಥೆಯು ಇಂದು ಅವರು ಜನಿಸಿದ ಸಮುದಾಯವಾದ ಈಟಿವ (ಈಡಿಗ) ಜನಾಂಗದವರ ರಾಜಕೀಯ ಸಂಸ್ಥೆಯಾಗಿ ಮಾರ್ಪಟ್ಟಿದೆ.

ನಾರಾಯಣ ಗುರು ಅವರ ಪ್ರಮುಖ ಕೃತಿಗಳಲ್ಲಿ ಒಂದಾದ ಆತ್ಮೋಪದೇಶಶತಕವನ್ನು ಇಲ್ಲಿ ಕನ್ನಡಕ್ಕೆ ಅನುವಾದಿಸಲಾಗಿದೆ.

ಅರಿವನ್ನೂ ಮೀರಿ ಅರಿಯುವವ ತನ್ನ
ಒಡಲೊಳು ಹೊಂದಿ ಹೊರಗೂ ಪ್ರಜ್ವಲಿಸುವ
ತಿರುಳಿಗೆ ಕಣ್ಗಳೈದನು ಒಳಗಡಗಿಸಿ
ಬಿರುಬಿರನೆ ಬಿದ್ದು ಬಾಗಿಯೋದಬೇಕು. 1

ಕರಣವು ಇಂದ್ರಿಯವು ಕಳೇಬರಮೊದಲಾಗಿ
ಮುಟ್ಟಿಯರಿವ ಅನೇಕ ಜಗತ್ತೂ ನೆನೆದೊಡೆಲ್ಲವು
ಪರಬಯಲೊಳಿದ್ದ ಭಾನುಮಾನ್ ತನ್ನ
ತಿರುವೊಡಲಹುದು ಹುಡುಕಿ ಸೇರಬೇಕು. 2

ಬಯಲೊಳಿದ್ದು ವಿವರ್ತವಿಲ್ಲಿ ಕಾಣ್ಬ
ಬಯಲು ಮುಂತಾದ ವಿಭೂತಿ ಐದೂ ನೆನೆದೊಡೆ
ಜಲನಿಧಿ ತನ್ನೊಳೇಳ್ವ ತರಂಗಾ-
ವಲಿಯ ಹಾಗೆ ಅಭೇದವಾಗಿ ಬರಬೇಕು. 3

ಅರಿವೂ, ಅರಿಯುವ ಅರ್ಥವೂ, ಪುಮಾನ್ ತನ್ನ-
ರಿವೂ ಒಂದೇ ಆದಿಮಹಸ್ಸು ಮಾತ್ರವಹುದು;
ವಿರಳತೆ ಬಿಟ್ಟು ಬೆಳಗುವ ಆ ಮಹತ್ತಾದ
ಅರಿವಲ್ಲಮರ್ದು ಅದು ಮಾತ್ರವಾಗಬೇಕು. 4

ಲೋಕರು ನಿದ್ರಿಸಿ ಎದ್ದು ಚಿಂತೆ ಮಾಳ್ಪರು
ಹಲವು ಇದನೆಲ್ಲವು ದಿಟ್ಟಿಸಿ ನೋಡಿ ನಿಲ್ವ
ಬೆಲೆಕಟ್ಟಲಾಗದ ಬೆಳಕುದಿಸುವುದೂ ಮುಂದೆ
ಕೆಡುವುದೂ ಇಲ್ಲ ಇದ ಕಂಡು ಸಾಗಬೇಕು. 5

ಏಳಬೇಕಿನ್ನು ಮಲಗಬೇಕು ಭುಜಿಸಬೇಕ-
ಶನ ಅಪ್ಪಿಕೊಳ್ಳಬೇಕೆಂದು ಹೀಗೆ
ಬರುವುದನೇಕವಿಕಲ್ಪ ಆದುದರಿಂದ್ಯಾರುಂಟು
ಎಚ್ಚರಿಸುವವರೀ ನಿರ್ವಿಕಾರರೂಪನು! 6

ಎಚ್ಚರಿಸಬಾರದಿನ್ನು ನಿದ್ರಿಸದೆ ಇರಬೇಕು
ಅರಿವಾಗಿ ಇದಕ್ಕಿಂದು ಅಯೋಗ್ಯನೆಂದೊಡೆ
ಪ್ರಣವ ಎದ್ದು ಹುಟ್ಟಳಿದು ಬಾಳ್ವ
ಮುನಿಜನಸೇವೆಯೊಳ್ ಮೂರ್ತಿಯನ್ನಿಕ್ಕಬೇಕು. 7

ಬೆಳಕು ಮೊದಲಾದ ಹಣ್ಣೈದನುಂಡು ನಾರುವ
ನಳಿಕೆಯಲ್ಲೇರಿ ನಯದಲ್ಲಿ ತಿರುಗಿಯಾಡುವ
ಗಿಣಿಗಳೈದನ್ನು ಹರಿದು ಕೆಳಗೆಸೆಯುವ
ಬೆಳಗಿನೊಡಲೆತ್ತಿಯೊಳಗೆ ಬೆಳಗಬೇಕು. 8

ಇಬ್ಬದಿಯೂ ಬರುವ ಆರವಸ್ಥೆಗಳನ್ನು
ಹೂಬಿಟ್ಟೊಂದು ಬಳ್ಳಿ ಬಂದು ಹರಡಿಯೆದ್ದಿರ್ಪ
ತರುವಿನಡಿಗೆ ತಪಗೈದು ಬಾಳ್ವ
ನರಂಗೆ ಬಾರದು ನರಕ ನೆನೆದುಕೊಳ್ಳಬೇಕು. 9

'ಇರುಳಿನಲ್ಲಿರುವವ ಯಾರು ಹೇಳು ನೀ' ಎಂದು
ಓರ್ವನೊದರಲದು ಕೇಳಿ ತಾನೂ ಹೀಗೆ
ಅರಿಯಲು ಅವನನ್ನು ಯಾರು ನೀನೆಂದು
ಕೇಳುವುದಿದರ ಪ್ರತಿವಾಕ್ಯವೇಕವಹುದು. 10

'ಅಹಮಹಂ' ಎಂದು ಹೇಳ್ವುದೆಲ್ಲ ನೆನೆದೊಡೆ
ಒಳಗೆ ಹಲವಲ್ಲವಿದೇಕವಹುದು;
ಅಗಲುವ ಅಹಂತೆ ಅನೇಕವಾಗಲಾಗಿ
ಈ ಪರಿ ಅಹಂ ತಿರುಳೂ ಜರುಗುತಿಹುದು. 11

ತೊಗಲು, ಎಲುಬು, ಮಲ, ದುರಂತವಂತಃ–
ಕಲೆಗಳು ಹೊತ್ತ ಹಮ್ಮೊಂದ ಕಾಣೋ,
ಕೆಡುವುದಿದು ಅನ್ಯವುಕ್ಕಿ ತುಂಬಿಕೊಳ್ವ
ಹಿರಿದೊಂದು ಹಮ್ಮು ಬಾರದೆ ವರವ ನೀಡೋ. 12

ತ್ರಿಗುಣಮಯ ತಿರುಭಸುಮವಿಟ್ಟ ಈಶಂಗೆ
ಒಳಹೂವನ್ನಿಟ್ಟು ಕೈಮುಗಿದು ಅಕ್ಷವದಾರಿ
ಸಕಲವಳಿದು ತಣಿದು ಕೇವಲದ
ಮಹಿಮೆಯೂ ಬಿಟ್ಟು ಮಹದಲ್ಲಿ ಮುಳುಗಬೇಕು. 13

ತ್ರಿಭುವನಸೀಮೆ ದಾಟಿ ತುಂಬಿ ತುಳುಕುವ
ತ್ರಿಪುಟಿ ತೊಲಗಿ ಹೊಳೆಯುವ ದೀಪ
ಕಪಟಯತಿಗೆ ಕರಗತವಾಗುವುದಿಲ್ಲೆಂಬ
ಉಪನಿಷದೋಕ್ತಿರಹಸ್ಯವ ನೆನೆಯಬೇಕು. 14

ಪರವದರ ಹಾಲು ಸವಿದ ಭಾಗ್ಯವಂತರಿಗೆ
ಹತ್ತುಸಾವಿರವರ್ಷವೊಂದಲ್ಪಹೊತ್ತು;
ಅರಿವು ಅಪರಪ್ರಕೃತಿಗಧೀನವಾದೊಡೆ
ಅರೆಕ್ಷಣವೇ ಸಾವಿರವರುಷವಹುದು. 15

ಅಧಿಕವಿಶಾಲಮರುಪ್ರದೇಶವೊಂದಾಗಿ
ನದಿ ಉಕ್ಕುವಹಾಗೆ ಬಂದು ನಾದವು
ಶ್ರುತಿಗಳೊಳ್ ಬಿದ್ದು ತೆರೆಯುವುದು ಕಣ್ಣು
ಎಂದಿಗೂ ಯತಪೂರ್ಣ ಯತಿಯಾಗಬೇಕು. 16

ಅಳಲುಕ್ಕಿ ಐದೆಸಳಾಂತೆರಡು ಮಹಡಾಗಿ
ತಿರುಗುವ ಅನಾದಿ ಬೆಳಕು ತೂಗಿಯಾತ್ಮ-
ನೆಳಲೊಡಲಾಗಿ ಹುರಿವುದು ತುಪ್ಪವೋ ಮುನ್ನಿನ
ಹಳಸು ವಾಸನೆ ಬತ್ತಿಯು ವೃತ್ತಿಯಹುದು. 17

ಅಹವು ಇರುಳಲ್ಲ, ಇರುಳಿರೆ ನಾವು ಅಂಧರಾಗಿ
ಅಹಮಹಂ ಎಂದರಿಯದೆ ಇರುತಲಿದ್ದು,
ಅರಿವುದರಿಂದ ಅಹಮಂಧಕಾರವಲ್ಲೆಂದು
ಅರಿವುದಕ್ಕೀಗೆ ಯಾರಿಗೂ ಸಾರಬೇಕು. 18

ಅಡಿ, ಮುಡಿ, ಕೊನೆ, ಅದುಂಟಿದುಂಟೆಂದು
ಹೊಡೆದಾಡುವರು, ಆದಿಮಸತ್ವವುಳ್ಳದೆಲ್ಲವು,
ಜಡವಿದೆಲ್ಲವೂ ಅನಿತ್ಯ, ನೀರಿನ
ಆಕಾರಬಿಟ್ಟು ತರಂಗವನ್ಯವಹುದೇ? 19

ಲೋಕಕ್ಕೆ ಬೇರೊಂದು ಸತ್ವವಿಲ್ಲ ಇದೆಯೆಂದು
ಲೋಕರೊರೆವುದೆಲ್ಲವೂ ಊಹೆಯಹುದು;
ಜಳನಿಂಗೆ ಹಾವೆಂದು ತೋರಿದರೂ
ನಲುಮೆ ತುಂಬಿದ ಮಲರ್ಮಾಲೆ ನಾಗವಹುದೇ? 20

ಪ್ರಿಯವೊಂದು ಬಗೆ, ಇದೆನ್ನ ಪ್ರಿಯ, ನಿನ್ನ
ಪ್ರಿಯ, ಅಪರಪ್ರಿಯವೆಂದು ಬಹುವಿಧದಿ,
ಪ್ರಿಯವಿಷಯದೊಡನೆ ಬರುವುದು ಭ್ರಮೆ, ತನ್ನ-
ಪ್ರಿಯವೇ ಅಪರಪ್ರಿಯವೆಂದರಿಯಬೇಕು. 21

ಪ್ರಿಯವಪರನದು ಅದೆನ್ನ ಪ್ರಿಯ, ಸ್ವಕೀಯ-
ಪ್ರಿಯವಪರಪ್ರಿಯ ಹೀಗಿರುವುದು ಕಟ್ಟಳೆ
ಅದರಿಂದ ನರನಿಗೆ ನಲುಮೆ ನೀಡುವ
ಕ್ರಿಯೆ ಅಪರಪ್ರಿಯಹೇತುವಾಗಿ ಮೂಡಬೇಕು. 22

ಅಪರನಿಗಾಗಿ ಅಹರ್ನಿಶ ಪ್ರಯತ್ನವು
ಕೃಪಣತೆಬಿಟ್ಟು ಕೃಪಾಲು ಗೈವನು;
ಕೃಪಣನು ಅಧೋಮುಖನಾಗಿಬಿದ್ದು ಮಾಳ್ಪ-
ನಪಜಯಕರ್ಮ ತನಗೆ ಮಾತ್ರವಾಗಿ. 23

ಅವನಿವನೆಂದರಿಯುವುದೆಲ್ಲ ನೆನೆದೊಡೆ
ಅವನಿಯೊಳಾದಿಮವಾದ ಆತ್ಮರೂಪ,
ಅವನವನಾತ್ಮಸುಖಕ್ಕೆ ಆಚರಿಸುವುದೆಲ್ಲ
ಅಪರಂಗೆ ಸುಖವನೀಯಲು ಒದಗಬೇಕು. 24

ಒಬ್ಬಂಗೊಳಿತು ಅನ್ಯಂಗಳಲು ಮಾಳ್ಪ
ಕಾರ್ಯವಾತ್ಮವಿರೋಧಿಯೆಂದು ತಿಳಿಯಬೇಕು,
ಪರಂಗೆ ಪರಮ ಪರಿತಾಪನೀಡುವವ
ಉರಿನರಕಾಬ್ಧಿಯೊಳು ಬಿದ್ದುರಿವನಹುದು. 25

ಅವಯವವೆಲ್ಲ ಅಡಗಿಸಿ ಆಣಿಯಾಗಿ ನಿಂತು
ಆವರಿಸುವನು ಅವಯವಿ ಆವಿಯನ್ನು,
ಅವನಿವನೆಂದದರಿಂದ ನೆನೆಯುವನು
ಅವಶತೆಯಾದ ಅವಿವೇಕ ಮಾತ್ರದಿಂದ. 26

ಇರುಳಲ್ಲಿದ್ದರಿಯುತ್ತಿರುವವನೇ ಆತ್ಮನು
ಈ ಅರಿವೇ ನಾಮರೂಪವಾಗಿ
ಕರಣದೊಡಿಂದ್ರಿಯ ಕರ್ತೃಕರ್ಮವಾಗಿಯೂ
ಬರುವುದು ನೋಡು, ಮಹೇಂದ್ರಜಾಲವೆಲ್ಲವು. 27

ಅಡಿ ಮುಡಿಯಳಿದು ಅಡಿಯಿಂದ ಮೌಲಿತನಕ
ಸ್ಫುಟವರಿಯುವುದು ತುರ್ಯಬೋಧವಪ್ಪುದು.
ಜಡವರಿಯುವುದಿಲ್ಲದು ಚಿಂತೆಮಾಡಿ ಹೇಳ್ವು-
ದೆಡೆಯಲ್ಲಿದ್ದು ಅರಿವಲ್ಲೆಂದರಿಯಬೇಕು. 28

ಮನಮಲರು ಕೊಯ್ದು ಮಹೇಶಪೂಜೆ ಮಾಳ್ಪ
ಮನುಜತಾ ಮತ್ತೊಂದು ಕಾರ್ಯ ಮಾಡಬೇಕಿಲ್ಲ,
ವನಮಲರು ಕೊಯ್ದೊ ಅದಲ್ಲದೊಡೆ ಮಾಯದ
ಮನು ಒದರುತ್ತಿದ್ದೊಡೆ ಮಾಂಬುದು ಮಾಯೆ. 29

ಜಡವರಿವುದಿಲ್ಲ ಅರಿವಿಗೆ ಚಿಂತೆಯಿಲ್ಲ
ಓದುವುದು ಇಲ್ಲರಿವೆಂದು ಅರಿತೆಲ್ಲವ
ಬಿಟ್ಟೊಡವ ವಿಶದಾಂತರಂಗನಾಗಿ ಮುಂದೆ
ಒಡಲೊಳಮರ್ದು ತೊಳಲುವುದಿಲ್ಲ ದಿಟವು. 30

ಅನುಭವ ಆದಿಯಲ್ಲೊಂದಿದ್ದೊಡಲ್ಲದೆ
ಅನುಮಿತಿಯಿಲ್ಲ ಮುನ್ನವಿದು ಕಂಗಳಿಂದ
ಅನುಭವಿಸದಿರಲಾಗಿ ಧರ್ಮಿಯುಂಟೆಂದು
ಅನುಮಿತಿಯಿಂದ ಅರಿವುದಿಲ್ಲೆಂದರಿಯಬೇಕು. 31

ಅರಿವುದು ಧರ್ಮಿಯನ್ನಲ್ಲ, ಧರ್ಮವನ್ನು,
ಒರೆವ ಈ ಧರ್ಮಿ ಅದೃಶ್ಯನಾದರಿಂದ
ಧರೆ ಮೊದಲಾದವು ಒಂದೂ ಇಲ್ಲ
ಹೊತ್ತ ರೂಪದರಿವುಳ್ಳದ್ದ ನೆನೆಯಬೇಕು. 32

ಅರಿವು ನಿಜಸ್ಥಿತಿಯನರಿಯಲೋಸುಗ ಇಲ್ಲಿ
ಧರೆ ಮೊದಲಾದ ವಿಭೂತಿಯಾಗಿ ತಾನೇ
ಉರುಳುವವಸ್ಥೆಯೊಳೇರಿ ಬದಲಾಗಿ ಸುತ್ತಿ
ತಿರುಗುವ ಅಲಾತದಂತೆ ತಿರುಗುತಿಹುದು. 33

ಅರೆಕ್ಷಣಾದಿ ಆರೆಕಾಲುಗಳುಳ್ಳ
ಉರುಳುತೇರನ್ನೇರಿ ಉರುಳುವುದು ಜಗವು,
ಅರಿವಿನೊಳನಾದಿಯಾಗಿ ನಡೆವ ತನ್ನ-
ಸಿರಿಯಾಟವೆಂದಿದನ್ನರಿಯಬೇಕು. 34

ಹತ್ತುಸಾವಿರವಾದಿತ್ಯರೊಂದಾಗಿ
ಬರುವಂತೆ ಬರುವುದು ವಿವೇಕವೃತ್ತಿ,
ಅರಿವನ್ನು ಮಾಸುವ ಅನಿತ್ಯಮಾಯೆಯೆಂಬ ಈ
ಇರುಳ ಹರಿದೇಳ್ವ ಆದಿಸೂರ್ಯನಹುದು. 35

ಅರಿವಿಗೆ ಶಕ್ತಿ ಅನಂತವುಂಟಿದೆಲ್ಲ
ಕೊನೆಗೊಳ್ಳಬಹುದು ಸಮವನ್ಯವೆಂದು ಹೀಗೆ
ಇದ್ದಿರುವಾಗಿ ಇದರೊಳನ್ಯಸಾಮ್ಯವಾಂತ
ಒಡಲೊಳಡಗಿ ತಿಳಿದು ಎಚ್ಚರಿಸಬೇಕು. 36

ವಿಷಮತೆಯಾಂತೇಳುವ ಅನ್ಯೆಯನು ಗೆಲ್ಲಲು
ವಿಷಮವಖಂಡ ವಿವೇಕಶಕ್ತಿಯಿಲ್ಲದೆ;
ವಿಷಮೆಯನು ಗೆದ್ದದರಿಂದ ವಿವೇಕವೆಂಬ
ವಿಷಯವಿರೋಧಿನಿಯೊಳು ಕೂಡಬೇಕು. 37

ಹಲವು ವಿಧವಾಗಿ ಅರಿಯುವುದನ್ಯವೊಂದಾಗಿ-
ಮೆರೆಯುವುದೇ ಸಮವೆಂದು ಮೇಲೆ ಹೇಳ್ವ
ನೆಲೆಯನರಿತು ನೆಟ್ಟನೆ ಸಾಮ್ಯವೇಳುವ
ಕಲೆಯದರೊಳಮರುತ್ತ ಬೆರೆಯಬೇಕು. 38

ಒರೆದ ಶಕ್ತಿಗಳನನುಸರಿಸಿ ಎರಡನೆಯ
ತಿರುವು ಇವಯೊಳು ಸಮದ ವಿಶೇಷವೊಂದೇ.
ವಿರತಿ ಬಾರದ ವಿಷಮಾವಿಶೇಷವೊಂದೀ-
ಪರಿ ಇವಿಬ್ಬಗೆಯದಾಗಿರುವವು. 39

ಸಮದೊಳೂ ಅನ್ಯೆಯೊಳೂ ಸದಾ ಬಂದಿಲ್ಲಿ
ಅಡಗುವುದುಂಟು ಇದದರ ವಿಶೇಷಶಕ್ತಿ
ಅಮಿತವಿದಾದರೂ ಒಟ್ಟೈವುಗಳ
ಭ್ರಮಗಲೆಯಿಂದಖಿಲವೂ ವಿಷಯವಹುದು. 40

'ಇದು ಕೊಡ'ವೆಂಬುದರೊಳು ಮೊದಲ 'ಇದು'
ವಿಷಮವು 'ಕೊಡ'ವು ವಿಶೇಷವಹುದು;
ಮತಿ ಮುಂತಾದ ಮಹೇಂದ್ರಜಾಲವುಂಟಾಗಲು
'ಇದು' ತಾನೇ ತಿರುಳೆಂದು ಕಾಣಬೇಕು. 41

'ಇದರಿವು' ಎಂಬುದರೊಳು ಮೊದಲ 'ಇದು'
ಸಮ, ತನ್ನ ವಿಶೇಷವು ಬೋಧವಹುದು.
ಮತಿಮುಂತಾದ್ದೆಲ್ಲ ನೀಗಿ ಮುಂದೆ ಸದ್-
ಗತಿಬರಲಿಕ್ಕೆ 'ಇದ'ನ್ನು ಭಜಿಸಬೇಕು. 42

ಪ್ರಕೃತಿ ಹಿಡಿದು ಸುಳಿದಾಡಿಸುವಂತೆ
ಸುಕೃತಿಗಳು ಕೂಡ ಸುಳಿಯುತಿಹರು ಅಯ್ಯೋ,
ವಿಕೃತಿ ಬಿಡಲಿಕ್ಕಾಗಿ ದುಡಿಯುವುದಿಲ್ಲ
ಆಕೃತಿ ಫಲದ ಬಯಕೆಯನ್ನಳಿದರಿಯಬೇಕು. 43

ಹಲಮತಸಾರವೂ ಏಕವೆಂದು ಕಾಣದೆ
ಜಗದೊಳೊಂದಾನೆಯಲ್ಲಿ ಅಂಧರಂತೆ
ಹಲವಿಧ ತರ್ಕವನ್ನೊದರುತ್ತ ಪಾಮರರು
ಅಲೆಯುವುದ ಕಂಡಲೆಯದೆ ಅಡಗಬೇಕು. 44

ಒಂದುಮತವನ್ಯಂಗೆ ನಿಂದ್ಯ, ಒಂದಲ್ಲೊದರುವ
ತಿರುಳು ಮತ್ತೊಬ್ಬನ ಪಾಲಿಗೆ ಕೊರತೆಯಹುದು,
ಧರೆಯೊಳಿದರ ರಹಸ್ಯವೊಂದುತಾನೆಂ–
ದರಿವತನಕ ಭ್ರಮೆಯೆಂದರಿಯಬೇಕು. 45

ಕಾದು ಜಯಿಸಲಸಾಧ್ಯ ಒಂದರೊಂದಿಗೆ
ಯಾವಮತವೂ ಕಾದು ತೊಲಗುವುದಿಲ್ಲ,
ಪರಮತವಾದಿಯಿದನ್ನು ನೆನೆಯದೆ ಸುಮ್ಮನೆ
ಕಾದಿ ಕೆಡುವವನೆಂಬ ಬುದ್ಧಿಬೇಕು. 46

ಒಂದೇ ಮತವಾಗುವುದಕ್ಕೊರೆವರೆಲ್ಲರೂ
ಇದು ವಾದಿಗಳು ಯಾರೂ ನೆನೆವುದಿಲ್ಲ,
ಪರಮತವಾದವಳಿದ ಪಂಡಿತರು
ಅರಿವರಿದರ ರಹಸ್ಯವಿನಿತೂ ಇಲ್ಲದಂತೆ. 47

ತನುವಲ್ಲಡಗಿದ ಶರೀರಿ ತನ್ನ ಸತ್ತಾ–
ತನುವಲ್ಲಿ ಅದೆನ್ನದಿದೆನ್ನದೆಂದೆಲ್ಲವನ್ನೂ
ತನುತೆಯಬಿಟ್ಟು ನೆನೆಯುವರು. ಸಾಕ್ಷಾ–
ದನುಭವಶಾಲಿಗಳಹುದಿವರು ನೆನೆದೊಡೆಲ್ಲ. 48

ಅಖಿಲರೂ ಆತ್ಮಸುಖಕ್ಕಾಗಿ ಸಕಲ
ಪ್ರಯತ್ನವೂ ಇಲ್ಲಿ ಸದಾವಿ ಗೈಯುವವರು.
ಜಗದೊಳಿದೊಂದೇ ಮತವೆಂದು ನೆನೆಯುತ್ತ
ಒಳಹೂವನಡಗಿಸಬೇಕಫಬಾರದಂತೆ. 49

ನೆಲದೊಡನೆ ನೀರದರಂತೆ ಗಾಳಿ ಬೆಂಕಿ
ಬಯಲು ಅಹಂಕೃತಿ ವಿದ್ಯೆ ಮನತಾನು
ಅಲೆಗಳು ಕಡಲು ಎಂದಲ್ಲ ಎಲ್ಲ
ಲೋಕಗಳೂ ಎದ್ದರಿವಾಗಿ ಮಾರ್ಪಡುವುದು. 50

ಅರಿವಿನೊಳಿದ್ದೊಂದು ಹಮ್ಮು ಮೊದಲುಂಟಾಗಿ
ಬರುವುದು ಇದರೊಂದಿಗಿದಂತೆ ವಾಮೆಯಾಗಿಯೂ
ಬರುವುವಿವೆರಡು ಲತೆಗಳಂತೆ ಮಾಯಾ–
ಮರ ಹರಡುವುದು ಅಖಿಲ ಮೂಡುವಂತೆ. 51

ಧ್ವನಿಮಯವಾಗಿ ಗಗನ ಜ್ವಲಿಸುವುದಂ–
ದಿಗೆ ಕೆಡುವುದದರೊಳೆಲ್ಲ ದೃಶ್ಯಜಾಲವು,
ಮತ್ತಲ್ಲಿ ತ್ರಿಪುಟಿಗೆ ಪೂರ್ಣತೆ ನೀಡುವ
ಸ್ವರವು ಅಡಗುವೆಡೆ ಸ್ವಯಂಪ್ರಕಾಶವು. 52

ಇದರೊಳೇಳ್ವ ಆದಿಮಶಕ್ತಿಯಿಲ್ಲಿ ಕಾಂಬುದು
ಇದೆಲ್ಲವೂ ಈಯುವ ಆದಿಬೀಜವಹುದು
ಮತಿಯದರೊಳಿಟ್ಟು ಮರೆಯದೆ ಮಾಯಾ–
ಮತಿಯಳಿಯಲು ಮನನವ ಗೈಯಬೇಕು. 53

ಎಚ್ಚರದವಸ್ಥೆ ನಿದ್ದೆಯೊಳಿಲ್ಲ ನಿದ್ದೆ
ಮತ್ತೆದ್ದಾಗಲದೂ ಸ್ಫುರಿಸುವುದಿಲ್ಲ;
ಅನುದಿನ ಹೀಗೆ ಇವೆರಡೂ ಆದಿಮಾಯಾ–
ವನಿತೆಯಿಂದ ಹುಟ್ಟಿ ಬದಲಾಗುತಿಹುದು. 54

ನೆಟ್ಟಕನಸಿದು ನಿದ್ದೆಯಂತೆ ನಿತ್ಯವೂ
ಕೆಡುವುದಿದರಂತೆ ಕನಸೂ ಇದರಂತೆ
ಕೆಟ್ಟಮತಿ ಕಾಣುವುದಿಲ್ಲ ಕೇವಲದೊಳ್
ಪಡುವುದರಿಂದನಿಶ ಭ್ರಮಿಸುತಿಹುದು. 55

ಕಡಲೊಳೇಳ್ವ ತೆರೆಯಂತೆ ಕಾಯವೊಂದೊಂದು
ಒಡನೊಡನೇರಿ ಎದ್ದು ಅಮರುತಿಹುದು
ಅಳಿವಿದಕೆಲ್ಲಿದಯ್ಯೋ! ಮೂಲಸಂವಿತ್–
ಕಡಲೊಳು ಎಡೆಬಿಡದಂತ ಕರ್ಮವಹುದು. 56

ಅಲೆಯಡಗಿದ ಕಡಲೊಳುಂಟನಂತ ಮಾಯಾ-
ಕಲೆಯಿದು ಕಲ್ಪೆಯನಾದಿ ಕಾರ್ಯವಿದು,
ಸಲಿಲ ರಸಾದಿ ಶರೀರವೆತ್ತಿ ನಾನಾ-
ಲೋಕವೊಡಲಾಗಿ ಒಡಲಾಗಿ ನಿಲ್ಲುತಿಹುದು. 57

ನವನವ ನೆನ್ನೆ ಇಂದು ನಾಳೆ ಬೇರೆ
ದಿನವಿದು ಹೀಗೆ ಚಿಂತೆಮಾಡದಿರು
ಅವಿರತವೆಣಿಸಿ ಅಳೆಯುವುದೆಲ್ಲವೂ
ಭ್ರಮೆ, ಯಾವ ಭೇದವೂ ಇಲ್ಲೆಂದರಿಯಬೇಕು. 58

ಅರಿವನ್ನು ಹೀಗೆ ಬಿಟ್ಟು ನಾನೂ ಇಲ್ಲ ಎನ್ನನು
ಬಿಟ್ಟೊಡೆ ಅರಿವೂ ಇಲ್ಲ, ಪ್ರಕಾಶಮಾತ್ರವಹುದು;
ಅರಿವರಿಯುವವನೆಂದು ಎರಡು ನೆನೆದೊಳು
ತಿರುಳೊಂದೇ ಅದರಲ್ಲಿಲ್ಲ ವಾದವೇನೂ. 59

ಅರಿವನ್ನೂ ಮಮತೆಗಧೀನಗೊಳಿಸಿ
ಹೇಳ್ವರಿದರ ಪರಮಾರ್ಥವ ನೆನೆಯದಂತೆ,
ಹೇಳಿದರೂ ಆ ಪರತತ್ವವೆಂಬಹಾಗೀ-
ಅರಿವು ಅನ್ಯವಾಗದು ಅರಿವವಂಗೆ 60

ಹೊರವಿಷಯ ಮೆರೆಯುತಿದೆ ಬೇರುಬೇರಾಗಿ
ಅಳತೆಯಿಡುವ ಇಂದ್ರಿಯವಾಂತು ತನ್ನ ಧರ್ಮ
ಜಳತೆ, ಅದಿಲ್ಲಿ ದಿಗಂಬರಾದಿ ನಾಮಾ-
ವಲಿಯೊಂದಿಗೆದ್ದರಿವಾಗಿ ಮಾರುತಿಹುದು. 61

ಪರವಶನಾಗಿ ಪರತತ್ವವೆನ್ನದೆಂದು ನೆನೆಯ
ಬಾರದುಬಾರದೆಂದು ಕಥಿಸುವುದರಿಂದ
ಬರುವರಿವ್ಯಾವುದೂ ಬಾರದು ಕಥಿಸುವುದರಿಂದ
ಪರಮಪದವ ಪರಿಚಿಂತೆ ಮಾಡಬೇಕು. 62

ಅರಿಪಿನೊಳಿದ್ದಪರತ್ವವಾಂತುಕೊಳ್ಳದೆ
ಈ ಅರಿವನಿಲ್ಲಿ ಅರಿಯುವುದಲ್ಲದೆ ತಾನು
ಪರವಶನಾಗಿ ಅರಿಯೊಲ್ಲ ಪಂಡಿತನ
ಪರಮರಹಸ್ಯವಿದನ್ನು ನೋಡುವವರಾರು! 63

ಪ್ರತಿವಿಷಯ ಪ್ರತಿಬಂಧವೇರಿ ಬಾಳ್ವು-
ದಿದನ್ನು ನಿಜಸ್ಮೃತಿಯೇ ಅಲ್ಲಗಳೆಯುವುದು
ಅತಿವಿಶದಸ್ಮೃತಿಯಿಂದತೀತವಿದ್ಯಾ-
ನಿಧಿ ಹೊಳೆಯುವುದಿದರೊಳಿಲ್ಲ ನೀತಿಗೇಡು. 64

ಒಮ್ಮೆ ನಾವರಿಯದದೇನೂ ಇಲ್ಲವಿಲ್ಲಿ
ಒಡಲಮರೆಯಿಂದರಿವುದಿಲ್ಲೆಚ್ಚರಗೊಂಡೆಲ್ಲ
ಅರಿವವರಿಲ್ಲ ಎಲ್ಲೆಯಿಲ್ಲದಿರಲಾಗಿ ಈ-
ಒಲುಮೆ ಯಾರರಿವರು ವಿಚಿತ್ರವಯ್ಯೋ! 65

ಎರೆ ಮುಂತಾದವುಗಳೆಂದೂ ಈ ತೆರದಿ
ಬರುವುದಿನ್ನೂ; ಬರಲೊಲ್ಲದೆ ನಿಲ್ವುದೊಂದೇ;
ಅರಿವದು ನಾವದುತಾನೆ ಮತ್ತೆಲ್ಲರೂ,
ಅದರ ರೂಪವದಾಂತು ನಿಲ್ಲುತಿಹುದು. 66

ಗಣನೆಯಿಂದಧಿಕವಾದುದೊಂದು ಸಾಮಾನ್ಯ
ಇವೆರಡನ್ನೂ ಹೊರತು ಮತ್ತೊಂದು ರೂಪವಿಲ್ಲ
ಎಚ್ಚರದಲ್ಲೂ ಅದು ನಿದ್ರೆಯಲ್ಲೂ ಮೇಲಿನ
ನಗರದಲ್ಲೂ ಎಲ್ಲಿಯೂ ಇಲ್ಲ ದಿಟವು 67

ಉರಗ ಹಗ್ಗದವೋಲು ಹಮ್ಮು ಎರಡಾಗಿ
ಅರಿವಲ್ಲೂ ಅಂಗಿಯಲ್ಲೂ ಹೊಕ್ಕುತಿರಲು
ಒಮ್ಮೆ ಆರ್ಯೆಯಿದಿಲ್ಲಿ ಅನಾರ್ಯೆಯಾಗುವುದು
ಮತ್ತೊಮ್ಮೆಯೆಂದು ಬಲ್ಲಿದ ತಿಳಿಯಬೇಕು. 68

ಶೃತಿಮೊದಲಾದ ತುರಗಗಳ ಹೂಡಿ
ಆತ್ಮಪ್ರತಿಮೆಯೇಳ್ವ ಕರಣಪ್ರವೀಣನು
ರತಿರಥವನ್ನೇರಿ ಹಮ್ಮು ರಮ್ಯರೂಪಗಳೊಂ-
ದಿಗೆ ಒಡನಾಡುವನು ಎಡೆಬಿಡದೆ ಹೊರಗೆ. 69

ಒಂದೇ ರತಿಯು ಅಹಂತೆ ಇಂದ್ರಿಯಾಂತಃ-
ಕರಣಕಳೇಬರವೆಂಬುದೆಲ್ಲವಾಗಿ
ಅರಳುವುದಿದಕ್ಕೆ ವಿರಾಮವೆಲ್ಲಿ, ಅರಿವವ
ಬೇರೆಂದರಿವವರೆಗೂ ನೆನೆಯಬೇಕು. 70

ಸವನವಳಿದು ಸಮತ್ವವಾಂತು ನಿಲ್ವುದಿಲ್ಲ
ಅವನಿಯೊಳ್ಯಾರೂ, ಅನಾದಿಲೀಲೆಯಹುದು;
ಅವಿರಳವಾಗುವುದಿದೆಲ್ಲವನ್ನೂ ಅರಿದೊಡೆ
ಅವಂಗೆ ಭವಿಸುವುದೆಲ್ಲೆಯಿಲ್ಲದ ಸುಖವು. 71

ಕ್ರಿಯೆಯೊಂದುಕಡೆ ಇದವಿದ್ಯೆ, ಕೇವಲ
ಚಿನ್ಮಯಿ ಮತ್ತೊಂದೆಡೆಯಿದು ವಿದ್ಯೆ; ಮಾಯೆಯಿಂದ
ನಿಯತವಿದೀಗೆ ನಿಂತರೂ ಬೇರಾಗಿ
ಅದ್ವಯಪರಭಾವನೆ ತುರ್ಯನೀಡುತಿಹುದು. 72

ಒಂದು ತಿರುಳೊಳನೇಕವುಂಟನೇಕ-
ತಿರುಳೊಳೊಂದರ್ಥವೂ ಎಂಬ ತಿಳಿವಿನಿಂದ
ಅರಿವಿನೊಳಡಗುವುದಭೇದವಾಗಿದೆಲ್ಲರೂ
ಅರಿಯುವುದಿಲ್ಲತಿಗೋಪನೀಯವಹುದು. 73

ಧೂಳದು ಧರೆಯೊಳಸಂಖ್ಯ ಆ ಧೂಳ-
ಲ್ಲಡಗಿದ ಧರೆಗಿಲ್ಲ ಭಿನ್ನಭಾವ;
ಜಡವಡಗುವುದದರಂತೆ ಚಿತ್ತಿನಲಿ ಚಿತ್ತೊ-
ಡಲಿನಲಿ ಇದನಿಲ್ಲಿ ನೆನೆದೊಡೊಂದೇ. 74

ಪ್ರಕೃತಿಯೆ ನೀರು ತನುವೆ ನೊರೆ ಕಡಲದಾತ್ಮನು
ಅಹಮಹಂ ಎಂದಲೆವುದೂರ್ಮಿಜಾಲವು
ಒಳಹೂವೊಳೇಳ್ವ ಅರಿವೆಲ್ಲವು ಮುತ್ತು, ತಾನು
ಸವಿಯುವಂತ ಅಮೃತವಾಗಿರುವುದಿಲ್ಲಿ ದಿಟವು. 75

ಮರಳು ಅಳತೆಬಿಟ್ಟುಸುರಿದ ಬಾವಿಮೇಲೆ
ಸಾಲುಸಾಲಾಗಿ ಅಲೆಬೀಸುತ್ತಿರುವ ಹಾಗೇ
ಅನೃತಪರಂಪರೆ ಬೀಸಿ ಅಂತರಾತ್ಮನನ್ನು
ಒಳಗೇ ಬಹುರೂಪವಾಗಿಸುವುದು. 76

ಪರವೊಂದು ಬಯಲು ಹರಡಿದ ಶಕ್ತಿ ಗಾಳಿಯು
ಅರಿವನಲ, ಜಲವಕ್ಷ, ಇಂದ್ರಿಯಾರ್ಥವು
ಧರಣಿ, ಇದು ಹೀಗೆ ಐದು ತತ್ವವಾಗಿ ನಿಂತು
ಉರಿಯುವುದಿದರ ರಹಸ್ಯವೇಕವಹುದು. 77

ಮರಣವೂ ಇಲ್ಲ ಜನನವಿಲ್ಲ ಬಾಳೂ
ನರಸುರರಾದಿಗಳೂ ಇಲ್ಲ ನಾಮರೂಪ
ಮರುವೊಳಡಗಿದ ಮರೀಚಿನೀರಂತೆ
ನಿಲ್ವೊಂದು ತಿರುಳು ತಿರುಳಲ್ಲ ನೆನೆಯಬೇಕು. 78

ಜನನಸಮಯ ಸ್ಥಿತಿಯಿಲ್ಲ ಜನಿಸಿದವನ್ಯ-
ಕ್ಷಣದೊಳಿಲ್ಲ ಇದಿರುವುದಿದಾವ ರೀತಿ?
ಹನನವೂ ಹೀಗೆಯೇ ಆಗಿರುವುದರಿಂದ
ಜನನವೂ ಇಲ್ಲ ಇದು ಚಿತ್ರಭಾವವೆಲ್ಲ. 79

ಸ್ಥಿತಿಗತಿಯಂತೆ ವಿರೋಧಿಯಾದ ಸೃಷ್ಟಿ-
ಸ್ಥಿತಿಲಯಗಳೊಂದೆಡೆ ಒಗ್ಗೂಡಿಹುದು ಹೇಗೆ
ಗತಿಯಿವು ಮೂರಕ್ಕೂ ಎಲ್ಲೂ ಇಲ್ಲಿದನೆನೆದೊಡೆ
ಕ್ಷಿತಿಮೊದಲಾದವು ವಾಗ್ಮಾಮಾತ್ರವಹುದು. 80

ಪ್ರಕೃತಿ ಒಡೆದೊಂದುಭಾಗ ಭೋಕ್ತೃರೂಪ
ಸಕಲವಾಗಿ ಹೊರಗೆ ಮೆರೆಯುತಿಹುದು
ಇಹಪರವಾದೊಂದು ಭಾಗವಿದಂತೆಯಿಂದ
ಅರಳುವುದಿದು ಭೋಗ್ಯವಿಶ್ವವಹುದು. 81

ಅರಣಿ ಕಡೆದೇಳ್ವ ಬೆಂಕಿಯಂತೆ ಹುಡುಕುವವ-
ರೊಳಿದ್ದು ಎಲ್ಲೆಮೀರಿ ಹೊಮ್ಮುವ ವಿವೇಕವು
ಪರಮಚಿದಂಬರವಾಂತ ಭಾನುವಾಗಿ ನಿಂತು-
ರಿವುದಿದಕಾಗುವುದೆಲ್ಲವೂ ತುತ್ತು. 82

ಒಡೆವುದಿರುವುದೇಳುವುದೊಂದು ಮಾರ್ಪಟ್ಟು
ಮುಂದೊರೆವುದಿಲ್ಲಿ ಒಡಲ ಸ್ವಭಾವವಹುದು
ಮುಡಿಯೊಳಿದ್ದರಿಯುತಿದೆ ಮೂರನೂ ಆತ್ಮ
ಬೇನೆಯಳಿದೊಂದಿದು ನಿರ್ವಿಕಾರವಹುದು. 83

ಅರಿವುದರಿಂದ ಅವನಿವಿಕಾರವುಂಟೆಂ-
ದೊರೆವುದ ನೆನೆದೊಡೆ ಹುಸಿ, ಉಳ್ಳದುರ್ವಿ;
ಬಹುವಿಧವಾಗಿ ನೆಲೆಯಳಿದು ನಿಲ್ವುದೆಲ್ಲ
ಅರಿವಿನೊಳೇಳ್ವ ಪ್ರಕೃತಿಸ್ವರೂಪವಹುದು. 84

ನೆರಳೊಂದು ಬಿಂಬವಪೇಕ್ಷಿಸದೆ ನಿಲ್ವುದಿಲ್ಲ
ಏಳುವ ಜಗವು ಬಿಂಬರಹಿತವಾದ್ದರಿಂದ
ನೆರಳೂ ಅಲ್ಲವಿದು ನಿಜವೂ ಅಲ್ಲ ಪಂಡಿತ
ಬರೆದಿಡುವ ಫಣಿಯಂತೆ ಕಾಣ್ಬುದೆಲ್ಲ. 85

ತನು ಮೊದಲಾದವು ಸರ್ವ, ಒಂದೊಳೊಂದಿಲ್ಲ
ಅನೃತವೂ ಆಗಿಯದರಿಂದ ಅನ್ಯಭಾಗವು
ಅನುದಿನವೂ ಅಸ್ತಮಿಸದಿರಲಾಗಿ
ಮತ್ತೆ ಋತರೂಪವಾಗಿ ಹಿಗ್ಗುತಿಹುದು. 86

ತಾನಾಗಿಯೇ ಇದೆಲ್ಲವುಂಟು ತಮ್ಮೊಳೊಂದೊಂದು
ಬಗೆ ಬೇರೆಯವುಗಳೊಳಿಲ್ಲ ಈ ರೀತಿ
ತನು ಮೊದಲಾದವು ಸತ್ತೂ ಅಲ್ಲ ನೆನೆದೊಡೆ
ಅನೃತವೂ ಅಲ್ಲ ಅದವಾಚ್ಯವಹುದು. 87

ಸಕಲವೂ ಉಳ್ಳದ್ದೇ ತತ್ವಚಿಂತಾಗ್ರಹನಿದ-
ನೆಲ್ಲವನ್ನೂ ಒಂದಾಗಿ ಗ್ರಹಿಸುತಿಹನು,
ಒಳಮುಖವಾಗಿ ಅರಿಯದೊಡೆ ಮಾಯೆಯೆಂಬ ಬಲು-
ಹಗೆ ಹಲವೂ ಬಹುಭ್ರಮೆಯನಿಕ್ಕುತಿಹುದು. 88

ಅರಿವಿನೊಳಿದ್ದು ಸದಸ್ತಿಯೆಂದಸಂಖ್ಯ
ಕಿಡಿಚೆದರಿ ಭುವನ ಸ್ಫುರಿಸುವುದರಿಂದ
ಅರಿವಲ್ಲದೆ ಯಾವ ವಸ್ತುವೂ ಇಲ್ಲವೆಂದು
ಅರಿಯಬೇಕೀ ಅರಿವೀವುದೇಕರೂಪ. 89

ಅನೃತವಸ್ತಿತೆಯನ್ನು ಮರೆಸುವುದಿಲ್ಲೆಂ-
ಬುದು ದಿಟವು, ಸದಸ್ತಿಯೆಂದು ಹಾಗೇ
ಹೆಜ್ಜೆಹೆಜ್ಜೆಗು ಅಸ್ತಿತೆಯಿಂದ ಬಳಸಿರಲಾಗಿ
ಸದ್ಘನವದರಿಂದ ಕಳೇಬರಾದಿಯಹುದು. 90

ಪ್ರಿಯವಿಷಯಂ ಪ್ರತಿ ಮಾಡುತ್ತಿರ್ಪ ಯತ್ನವು
ನಿಯತವೂ ಹಾಗೆಯೇ ನಿಲ್ಲುತಿರಲು
ಪ್ರಿಯವಜವು ಅವ್ಯಯವು ಅಪ್ರಮೇಯವು
ಏಕಾದ್ವಯವಿದು ತಾನೆ ಸುಖವಾಂತು ನಿಂತಿಹುದು. 91

ವ್ಯಯಬಾರದೆ ಹೊರಗೆ ದುಡಿವ
ನಿಯಮವಿರುವುದರಿಂದ ನಿತ್ಯವಾದ
ಪ್ರಿಯವೊಳಗೇ ಅಗಲದೆಯುಂಟಿದಕ್ಕೀ-
ಕ್ರಿಯೆಯೊಂದು ಕೇವಲಬಾಹ್ಯಲಿಂಗವಹುದು. 92

ಚಂಚಲವೊಡಲಳಿದ ತನಗೆ ತನ್ನಾತ್ಮ-
ಕಿಂತಧಿಕ ಪ್ರಿಯವಸ್ತುವಿಲ್ಲ ಬೇರೆ;
ಮೆರೆವ ಆತ್ಮಗತಪ್ರಿಯವು ಬಿಡದೆ ಈ
ನೆಲೆಯೊಳಿರುವುದರಿಂದ ಆತ್ಮ ನಿತ್ಯ 93

ಜಗವೂ ಸತ್ಯವೂ ಬೆರೆತು ನಿಂತಿರುವ
ನೆಲೆ ಬಹುದೊಡ್ಡ ನೀತಿಗೇಡಿದಹುದು
ಕೊನೆಯಿಡಲಾಗದ ಅವಾಂಗ್ಮನೋಗೋ-
ಚರವಿದರೊಳು ಪ್ರಮಾಣವೆಲ್ಲಿ ಚರಿಸುತಿಹುದು? 94

ವಿಪುಲತೆಯಾಂತ ವಿನೋದವಿದ್ಯೆ ಮಾಯಾ-
ವ್ಯವಹಿತೆಯಾಗಿ ಮೆರೆವ ವಿಶ್ವವೀರ್ಯ
ಇವಳಿವಳವತೀರ್ಣೆಯಾಗುವಳಿಲ್ಲಿ ತನ್ನ
ಅವಯವವಂಡಕಟಾಹಕೋಟಿಯಹುದು. 95

ಅಣುವೂ ಅಖಂಡವೂ ಅಸ್ತಿ ನಾಸ್ತಿಯೆಂದು
ಹೀಗೆ ಮೆರೆಯುವುದಿಭ್ಭಾಗವಾಗಿ ಎರಡೂ
ಕೂಡುವುದನಂತರ ಅಸ್ತಿ ನಾಸ್ತಿಯೆಂದೀ-
ಅನುಭವವೂ ನೆಲೆಯಳಿದು ನಿಲ್ಲುತಿಹುದು. 96

ಅಣು ಅರಿವಿನ ಮಹಿಮೆಯೊಳಂಗವಿಲ್ಲದೆ
ಕೂಡುವುದಖಂಡವೂ ಅಂದು ಪೂರ್ಣವಹುದು;
ಅನುಭವಿಸದೆ ಅರಿವುದಿಲ್ಲಖಂಡವಾದ ಚಿದ್-
ಘನವಿದು ಮೌನಘನಾಮೃತಾಬ್ಧಿಯಹುದು. 97

ಈವರೆಗೆ ನಾವೊಂದುವಸ್ತುವನರಿಯಲಿಲ್ಲವಿಲ್ಲಿ
ಅತಿಸುಖವೆಂದನಿಶ ಕಥಿಸುವುದರಿಂದ
ಮತಿ ಮೊದಲಾದವು ನೀಗಿದೊಡೂ ಆತ್ಮನು
ತಾನೇ ಅಳಿಯದೆ ಅರಿವೆಂದು ಹೇಳಬೇಕು. 98

ಅರಿವುಹಮ್ಮುಗಳೆರಡೂ ಆವರಣವಳಿದವಂಗೆ
ಒಂದೇ, ಉಳಿದವರಿಗೆ ವಾದವುಂಟು,
ಅರಿವನು ಬಿಟ್ಟು ಹಮ್ಮು ಅನ್ಯವಾದೊಡೆ
ಅರಿವನರಿಯಲಿಕೂ ಯಾರು ಇಲ್ಲ ಇಲ್ಲಿ. 99

ಅದು ಅಲ್ಲ ಇದು ಅಲ್ಲ ಸದರ್ಥವೂ ಅಲ್ಲ
ಸಚ್ಚಿದಮೃತ ನಾನೆಂದು ತಿಳಿದು ಧೀರನಾಗಿ
ಸದಸದೆಂಬ ಪ್ರತಿಪತ್ತಿಯಳಿದು ಸತ್ತೋ-
ಮಿತಿ ಮೃದುವಾಗಿಮೃದುವಾಗಿ ಅಮರಬೇಕು. 100

---

**ಅನುವಾದಕರ ಪರಿಚಯ:** ವಿನಯ ಚೈತನ್ಯ 1952ರಲ್ಲಿ ಕೇರಳದ ಕ್ರೈಸ್ತ ಕುಟುಂಬವೊಂದರಲ್ಲಿ ಜನಿಸಿದರು. ತಮ್ಮ ಹತ್ತೊಂಬತ್ತನೆಯ ವಯಸ್ಸಿನಲ್ಲಿ ಡಾಕ್ಟರ್ ನಟರಾಜ ಗುರು ಅವರ ಪ್ರೇರಣೆಯಿಂದ ದೀಕ್ಷೆ ಪಡೆದ ಇವರು 1971ರಿಂದ 2009ರ ವರೆಗೆ ಬೆಂಗಳೂರು ಬಳಿ ಸೋಮನಹಳ್ಳಿಯಲ್ಲಿರುವ ನಾರಾಯಣ ಗುರುಕುಲದ ಉಸ್ತುವಾರಿ ಹೊತ್ತು ಸಾಧಕರಾಗಿ ನೆಲೆಸಿದ್ದರು. 2009ರಲ್ಲಿ ಗುರುಕುಲವನ್ನೂ ಕಾವಿವಸ್ತ್ರವನ್ನೂ ತೊರೆದು ಸ್ವತಂತ್ರ ಸಾಧಕರಾಗಿ ಸಂಚಾರ ಪ್ರಾರಂಭಿಸಿದರು. ಟಿಬೆಟ್ಟಿನ ಮಂತ್ರಯಾನ ಯೋಗಿ ಮಿಲರೇಪನ ಕುರಿತು ಇವರು ಮಲಯಾಳಂನಲ್ಲಿ ರಚಿಸಿದ ಕೃತಿ ವಿಖ್ಯಾತವಾದದ್ದು. ಶ್ರೀಯುತರು ಕನ್ನಡದ ವಚನ ಹಾಗೂ ತತ್ವಪದ ಪರಂಪರೆಯಲ್ಲಿ ಅಪಾರ ಆಸಕ್ತಿ ಹೊಂದಿದ್ದು ಅಕ್ಕಮಹಾದೇವಿಯ ವಚನಗಳನ್ನು ಮಲಯಾಳಕ್ಕೂ ಇಂಗ್ಲಿಷಿಗೂ ಅನುವಾದಿಸಿದ್ದಾರೆ.

# ಇತಿಹಾಸ ದರ್ಪಣದ ಹಿಂದಿನ ಸಂಚಿಕೆಗಳ ದರ ಪಟ್ಟಿ

| ಸಂಚಿಕೆಗಳು | ರೂ. | ✓ | ಪುಸ್ತಕಗಳು | ರೂ. | ✓ |
|---|---|---|---|---|---|
| ಇತಿಹಾಸ ದರ್ಪಣ ಪುಸ್ತಕ –1* | 10 | | ಇತಿಹಾಸ ದರ್ಪಣ ಪುಸ್ತಕ –16 | 40 | |
| ಇತಿಹಾಸ ದರ್ಪಣ ಪುಸ್ತಕ –2* | 10 | | ಇತಿಹಾಸ ದರ್ಪಣ ಪುಸ್ತಕ –17 | 60 | |
| ಇತಿಹಾಸ ದರ್ಪಣ ಪುಸ್ತಕ –3* | 10 | | ಇತಿಹಾಸ ದರ್ಪಣ ಪುಸ್ತಕ –18 | 70 | |
| ಇತಿಹಾಸ ದರ್ಪಣ ಪುಸ್ತಕ –4*[1] | 90 | | ಇತಿಹಾಸ ದರ್ಪಣ ಪುಸ್ತಕ –19 | 75 | |
| ಇತಿಹಾಸ ದರ್ಪಣ ಪುಸ್ತಕ –5 | 10 | | ಇತಿಹಾಸ ದರ್ಪಣ ಪುಸ್ತಕ –20 | 75 | |
| ಇತಿಹಾಸ ದರ್ಪಣ ಪುಸ್ತಕ –6,7* | 20 | | ಇತಿಹಾಸ ದರ್ಪಣ ಪುಸ್ತಕ –21,22 | 150 | |
| ಇತಿಹಾಸ ದರ್ಪಣ ಪುಸ್ತಕ –8 [2] | 100 | | ಇತಿಹಾಸ ದರ್ಪಣ ಪುಸ್ತಕ –23 | 80 | |
| ಇತಿಹಾಸ ದರ್ಪಣ ಪುಸ್ತಕ –9 | 20 | | ಇತಿಹಾಸ ದರ್ಪಣ ಪುಸ್ತಕ –24 | 90 | |
| ಇತಿಹಾಸ ದರ್ಪಣ ಪುಸ್ತಕ –10 | 30 | | ಇತಿಹಾಸ ದರ್ಪಣ ಪುಸ್ತಕ –25 [4] | 180 | |
| ಇತಿಹಾಸ ದರ್ಪಣ ಪುಸ್ತಕ –11 | 30 | | ಇತಿಹಾಸ ದರ್ಪಣ ಪುಸ್ತಕ –26 | 75 | |
| ಇತಿಹಾಸ ದರ್ಪಣ ಪುಸ್ತಕ–12, 13[3] | 110 | | ಇತಿಹಾಸ ದರ್ಪಣ ಪುಸ್ತಕ –27 | 100 | |
| ಇತಿಹಾಸ ದರ್ಪಣ ಪುಸ್ತಕ –14 | 30 | | ಇತಿಹಾಸ ದರ್ಪಣ ಪುಸ್ತಕ –28 | 100 | |
| ಇತಿಹಾಸ ದರ್ಪಣ ಪುಸ್ತಕ –15 | 40 | | ಇತಿಹಾಸ ದರ್ಪಣ ಪುಸ್ತಕ – 29 | 100 | |

ಒಟ್ಟು ಮೊತ್ತ

ಹಿಂದಿನ ಸಂಚಿಕೆಗಳು ಬೇಕಾಗಿರುವವರು ಅವಶ್ಯವಿರುವ ಸಂಚಿಕೆಗಳನ್ನು ಗುರುತು ಮಾಡಿ, ಅವುಗಳ ಒಟ್ಟು ಮೊಬಲಗುವನ್ನು **"Editor, Itihasa Darpana"** ಹೆಸರಿಗೆ ಬೆಂಗಳೂರಿನಲ್ಲಿ ಸಂದಾಯವಾಗುವಂತೆ ತೆಗೆಸಿದ **ಚೆಕ್** / ಡಿ.ಡಿ ಮೂಲಕ ಪಟ್ಟಿಯನ್ನು ನಮ್ಮ ವಿಳಾಸಕ್ಕೆ ಕಳುಹಿಸಿ ಕಳುಹಿಸಕೊಟ್ಟಲ್ಲಿ ತಮಗೆ ಅಂಚೆಯ ಮೂಲಕ ಕಳುಹಿಸಿಕೊಡಲಾಗುವುದು.

<u>ವಿಶೇಷ ಕೊಡುಗೆ:</u> ಇತಿಹಾಸ ದರ್ಪಣ ನಿಯತಕಾಲಿಕೆಯ ಎಂಟನೇ ವಾರ್ಷಿಕೋತ್ಸವದ ಪ್ರಯುಕ್ತ ರೂ. 500/– ಮೇಲ್ಪಟ್ಟ ಮೊತ್ತದ ಸಂಚಿಕೆಗಳ ಖರೀದಿಯ ಮೇಲೆ ಶೇ 15% ರಷ್ಟು ಹಾಗೂ ರೂ. 1000/– ಮೇಲ್ಪಟ್ಟ ಮೊತ್ತದ ಪುಸ್ತಕ ಖರೀದಿಯ ಮೇಲೆ ಶೇ 25% ರಷ್ಟು ವಿಶೇಷ ರಿಯಾಯಿತಿಯನ್ನು ನೀಡಲಾಗುವುದು. –ಸಂಪಾದಕರು.

ನಮ್ಮ ವಿಳಾಸ: ಸಂಪಾದಕರು, ಇತಿಹಾಸ ದರ್ಪಣ, #33/ಎ, ಐ.ಟಿ.ಐ ಕಾಲೇಜು ಹತ್ತಿರ, ಕೆಂಪೇಗೌಡನಗರ, ವಿಶ್ವನೀಡಂ – ಅಂಚೆ, ಬೆಂಗಳೂರು – 560091. ಮೊ. 7829404063.

1. ಕೃಷ್ಣ(ದೇವ)ರಾಯ ಮತ್ತು ವಿಜಯನಗರ ಸಾಮ್ರಾಜ್ಯ – ವಿಶೇಷ ಸಂಚಿಕೆ.
2. ನಮ್ಮ ಬೆಂಗಳೂರು – ವಿಶೇಷ ಸಂಚಿಕೆ.
3. ಕರ್ನಾಟಕದಲ್ಲಿ ಪುರಾತತ್ವ ಅಧ್ಯಯನಗಳು – ವಿಶೇಷ ಸಂಚಿಕೆ.
4. ಹೈದರಾಲಿ ಮತ್ತು ಟೀಪೂ ಸುಲ್ತಾನರ ಮೂಲ ದಾಖಲೆ– ವಿಶೇಷ ಸಂಚಿಕೆ.

* ಸಂಚಿಕೆಗಳು ಲಭ್ಯವಿರುವುದಿಲ್ಲ.

# ಸೋಮನಾಥ : ರೊಮಿಲಾ ಥಾಪರ್ ಅವರ ವಿಶ್ಲೇಷಣಾ ಕ್ರಮ

ಎಂ. ಕೆ. ಮಾಧವಿ
ಸಹಪ್ರಾಧ್ಯಾಪಕರು
ಇತಿಹಾಸ ವಿಭಾಗ
ಮಹಿಳಾ ಸರ್ಕಾರಿ ಕಾಲೇಜು
ಮಂಡ್ಯ

ಪ್ರಾಚೀನ ಭಾರತದ ಆಧುನಿಕ ಚರಿತ್ರೆಕಾರರಲ್ಲಿ ರೊಮಿಲಾ ಥಾಪರ್ ಪ್ರಮುಖರು. 1960ರ ದಶಕದಿಂದ ಆರಂಭಗೊಂಡ ಅವರ ಚಾರಿತ್ರಿಕ ಅಧ್ಯಯನಗಳಲ್ಲಿ, ಆವರೆಗಿನ ಭಾರತದ ಚರಿತ್ರೆಯ ಬರಹಗಳಲ್ಲಿ ಕಂಡುಬರುವ ವಸಾಹತುಶಾಹಿ ಮತ್ತು ರಾಷ್ಟ್ರೀಯವಾದಿ ದೃಷ್ಟಿಕೋನಗಳ ಸೂಕ್ಷ್ಮ ವಿಶ್ಲೇಷಣೆ, ವಿಮರ್ಶೆ, ಪ್ರಾಚೀನ ಭಾರತದ ಸಾಮಾಜಿಕ ಮತ್ತು ಸಾಂಸ್ಕೃತಿಕ ಚರಿತ್ರೆಯ ಬಗೆಗಿನ ಶೋಧಗಳು ಪ್ರಮುಖ ಆಸಕ್ತಿಗಳಾಗಿ ಕಂಡುಬರುತ್ತವೆ. ಆಕರಗಳ ತಲಸ್ಪರ್ಶಿ ವಿಮರ್ಶೆ, ವಿವಿಧ ಜ್ಞಾನಶಿಸ್ತುಗಳು ಮುಂದಿಟ್ಟ ಅಧ್ಯಯನ ಮಾದರಿಗಳು, ಪರಿಕಲ್ಪನೆಗಳ ಅನ್ವಯ ಅವರ ಅಧ್ಯಯನ ವಿಧಾನದಲ್ಲಿ ಎದ್ದುಕಾಣುವ ಅಂಶಗಳು. ವಿವಿಧ ಕಾಲಘಟ್ಟಗಳಲ್ಲಿ ಮುನ್ನೆಲೆಗೆ ಬಂದ ನೋಟಕ್ರಮಗಳ ಪ್ರಭಾವವನ್ನು ಅವರ ಅಧ್ಯಯನಗಳಲ್ಲಿ ಕಾಣಬಹುದು.

ಭಾರತೀಯ ಚರಿತ್ರೆ ಲೇಖನದಲ್ಲಿ 1980ರ ದಶಕವು ಮೈಲಿಗಲ್ಲೆನಿಸಿದೆ. ಸಬಾಲ್ಟರ್ನ್ ಅಧ್ಯಯನಗಳು ಕಲ್ಕತ್ತಾದಲ್ಲಿ ಆರಂಭವಾಗಿ ಅತ್ಯಂತ ಪ್ರಭಾವಶಾಲಿ ಚಳವಳಿಯಾಗಿ ರೂಪುಗೊಂಡಿದ್ದು ಈ ಕಾಲಾವಧಿಯಲ್ಲಿಯೇ. ಭಾರತದ ಚರಿತ್ರೆ ರಚನೆಯಲ್ಲಿ ಆಧುನಿಕೋತ್ತರವಾದದ ಪ್ರಭಾವಗಳು

ಸಬಾಲ್ಟರ್ನ್ ಅಧ್ಯಯನಗಳ ಬೆಳವಣಿಗೆಯ ಭಾಗವಾಗಿ ಗೋಚರಿಸುತ್ತವೆ. ಸಾರ್ವತ್ರಿಕತೆಗೆ ಬದಲಾಗಿ ಸ್ಥಳೀಯತೆ, ಬೃಹತ್ ಕಥನಗಳ ವಿಮರ್ಶೆ, ಪಠ್ಯದ ಓದು, ಪಠ್ಯದಲ್ಲಿ ಅಂತರ್ಗತವಾಗಿರುವ ಸಂಕೀರ್ಣ ಅಧಿಕಾರದ ಸಂಬಂಧಗಳ ಬಗೆಗೆ ಜಾಗೃತಿ, ವಾಸ್ತವದ ಗ್ರಹಿಕೆ ಮತ್ತು ಪ್ರತಿನಿಧೀಕರಣಗಳ ನಡುವಣ ಭಿನ್ನತೆಯ ವಿವರಣೆ ಇವೇ ಮುಂತಾದ ಹೊಸ ನೋಟಗಳನ್ನು ಆಧುನೀಕೋತ್ತರವಾದವು ಮುಂದಿಟ್ಟಿತು.

ಆಧುನಿಕೋತ್ತರ ವಾದದ ಸಿದ್ಧಾಂತಗಳು ಚರಿತ್ರೆಯ ಶಿಸ್ತಿಗೆ ಹೆಚ್ಚುವರಿ ಸಂದೇಹಗಳನ್ನು ನೀಡುವ ಮೂಲಕ ಚಾರಿತ್ರಿಕ ವಿಶ್ಲೇಷಣೆಯ ಮರುಪರಿಶೀಲನೆಯಲ್ಲಿ ಅತ್ಯಂತ ಮಹತ್ವದ ಪಾತ್ರವಹಿಸಿವೆ. ವಸ್ತುನಿಷ್ಠತೆಯನ್ನು ಸಾಧಿಸಲು ಇತಿಹಾಸದ ಸಾಂಪ್ರದಾಯಿಕ ಮತ್ತು ಆಧುನಿಕ ಸಿದ್ಧಾಂತಗಳ ಬಗೆಗೆ ಹೆಚ್ಚಿನ ಸಂದೇಹಗಳನ್ನು ಹೊಂದುವುದು ಅತ್ಯಗತ್ಯ. ಈ ಹಿನ್ನೆಲೆಯಲ್ಲಿಯೇ ಇತಿಹಾಸಕಾರ ಶಾಹಿದ್ ಅಮೀನ್ ಅವರ ಕೃತಿ *"Event,Metaphor,Memory:Chauri Chaura 1922-1992"*[2] ಕೃತಿಯು 1995ರಲ್ಲಿ ಪ್ರಕಟವಾಯಿತು. ಈ ಬಹುಚರ್ಚಿತ ಕೃತಿಯು ಚೌರಿಚೌರಾ ಘಟನೆಯ ಬಗೆಗೆ ಭಾರತ ರಾಷ್ಟ್ರೀಯ ಕಾಂಗ್ರೆಸ್ ಹಾಗೂ ಬ್ರಿಟಿಷ್ ಸರ್ಕಾರಗಳು ತಳೆದ ನಿಲುವುಗಳಾಚೆಗೆ ವಿವಿಧ ಜನವರ್ಗಗಳು ಈ ಘಟನೆಯ ಬಗೆಗೆ ಹೊಂದಿದ್ದ ವಿಭಿನ್ನ ಗ್ರಹಿಕೆಗಳನ್ನು ಮುನ್ನೆಲೆಗೆ ತಂದಿತು. ಸ್ಥಳೀಯ ಸಂದರ್ಭದ ಸಾಮಾಜಿಕ ಮತ್ತು ಆರ್ಥಿಕ ಪರಿಸ್ಥಿತಿಗಳನ್ನು ಸೂಕ್ಷ್ಮ ಅಧ್ಯಯನಕ್ಕೆ ಒಳಪಡಿಸುವ ಮೂಲಕ ಬಹುಸ್ತರಗಳ, ಸಂಕೀರ್ಣ ವಾಸ್ತವವನ್ನು ಅನಾವರಣಗೊಳಿಸಿತು.

ಸರಿಸುಮಾರು ಇದೇ ಅವಧಿಯಲ್ಲಿಯೇ ರೊಮಿಲಾ ಥಾಪರ್ ಅವರು ಸೋಮನಾಥದ ಮೇಲೆ ಮಹಮ್ಮದ್ ಘಜ್ನಿಯ ದಾಳಿಯನ್ನು ಕುರಿತು ಪ್ರಚಲಿತವಾಗಿದ್ದ ಗ್ರಹಿಕೆಗಳು ಹಾಗೂ ಅವು ರೂಪುಗೊಳ್ಳಲು ಕಾರಣವಾದ ಆಕರಗಳ ಮರುಪರಿಶೀಲನೆಯನ್ನು ವಿಚಾರ ಸಂಕಿರಣವೊಂದರಲ್ಲಿ ಪ್ರಬಂಧ ಮಂಡನೆಯ ಮೂಲಕ ಆರಂಭಿಸಿದರು. ಈ ಘಟನೆಗೆ ಸಂಬಂಧಿಸಿದ, 15ನೇ ಶತಮಾನದವರೆಗೆ ದೊರೆಯುವ ಪರ್ಷಿಯನ್ ಮತ್ತು ಜೈನ ಆಕರಗಳನ್ನು ಸಂಸ್ಕೃತ ಶಾಸನಗಳೊಂದಿಗೆ ಮುಖಾಮುಖಿಯಾಗಿಸಿ ಪರಿಶೀಲಿಸಿದ್ದ ಥಾಪರ್ ಅವರು ಇದಕ್ಕೆ ದೊರೆತ ಪ್ರತಿಕ್ರಿಯೆಯಿಂದಾಗಿ ತಮ್ಮ ಶೋಧವನ್ನು ಮುಂದುವರಿಸಿದರು. ಸೋಮನಾಥದ ಸುತ್ತ ಕಟ್ಟಿಕೊಳ್ಳಲಾದ ಗ್ರಹಿಕೆಗಳು ಹಾಗೂ ವಾಸ್ತವದ ಪ್ರತಿನಿಧೀಕರಣವನ್ನು, ಪ್ರಸಕ್ತ ಕಾಲಘಟ್ಟದವರೆಗೆ ವಿಸ್ತರಿಸುವುದು ಅಗತ್ಯವೆಂದು ಅವರು ಭಾವಿಸಿ ವಿಸ್ತೃತ ಅಧ್ಯಯನವನ್ನು ಕೈಗೊಂಡರು. ಹೀಗೆ ರೂಪುಗೊಂಡಿದ್ದೇ 'ಸೋಮನಾಥ – ಚರಿತ್ರೆಯೊಂದರ ಬಹುಧ್ವನಿ' ಕೃತಿ.

ಘಜ್ನಿಯ ಮಹಮ್ಮದನು ಕ್ರಿ. ಶ. 1026ರಲ್ಲಿ ಗುಜರಾತಿನ ಸಂಪದ್ಭರಿತ ಸೋಮನಾಥ ದೇವಾಲಯದ ಮೇಲೆ ದಾಳಿ ಮಾಡಿ ಅಲ್ಲಿನ ಸಂಪತ್ತನ್ನು ದೋಚಿದ್ದು ಚರಿತ್ರೆಯಲ್ಲಿ ದಾಖಲಾಗಿದೆ. ಇದನ್ನು ಮಧ್ಯಯುಗೀನ ಭಾರತದ ಇತಿಹಾಸದಲ್ಲಿಯೇ ಅತ್ಯಂತ ಮಹತ್ವದ ಘಟನೆಗಳಲ್ಲೊಂದು ಎಂದು ಬಿಂಬಿಸಿದ್ದು, ಈ ಘಟನೆಯಿಂದ ಹಿಂದೂ ಮತ್ತು ಮುಸ್ಲಿಂ ಸಮುದಾಯಗಳ ನಡುವೆ ಶತ್ರುತ್ವಕ್ಕೆ ಬೀಜಾಂಕುರವಾಯಿತೆಂಬ ಪ್ರತಿಪಾದನೆ. ಮಹಮ್ಮದನನ್ನು ಅನುಸರಿಸಿ ಇತರ ಮುಸ್ಲಿಂ ಆಕ್ರಮಣಕಾರರು ಸತತವಾಗಿ ದೇವಾಲಯ ನಾಶಕ್ಕೆತ್ನಿಸಿದರೆ

ಧರ್ಮನಿಷ್ಠ ಹಿಂದೂಗಳು ಪ್ರತಿಬಾರಿಯೂ ದೇವಾಲಯವನ್ನು ಪುನರ್ನಿರ್ಮಾಣ ಮಾಡಿದರೆಂಬ ವಿವರಣೆ, ಈ ಘಟನೆಯಿಂದ ಹಿಂದೂ ಮನಸ್ಸಿಗಾದ ಆಘಾತ ಮತ್ತು ನೋವಿನ ನೆನಪನ್ನು ಶತಮಾನಗಳುದ್ದಕ್ಕೂ ಕಾಯ್ದುಕೊಂಡು ಬರಲಾಯಿತೆಂಬ ನಂಬಿಕೆಗಳು ಆಧುನಿಕ ಕಾಲದಲ್ಲಿ ಕಟ್ಟಿಕೊಳ್ಳಲಾದ ಗ್ರಹಿಕೆಗಳು. ಥಾಪರ್ ಅವರು ಈ ಗ್ರಹಿಕೆಗಳ ಚಾರಿತ್ರಿಕ ನೆಲೆಗಟ್ಟನ್ನು ತಮ್ಮ ಅಧ್ಯಯನದ ಮೂಲಕ ಶೋಧಿಸಲೆತ್ನಿಸಿದ್ದಾರೆ.

ಸೋಮನಾಥದ ಘಟನೆಯ ಬಗೆಗೆ ಇಂತಹ ಗ್ರಹಿಕೆಗಳು ರೂಪುಗೊಂಡಿದ್ದು ವಸಾಹತುಶಾಹಿ ಆಳ್ವಿಕೆಯ ಕಾಲದಲ್ಲಿ. ಇದಕ್ಕೆ ಹಿನ್ನೆಲೆಯಾಗಿ ಮುಸ್ಲಿಂ ದೊರೆಗಳು ದರ್ಪಿಷ್ಠರು, ಅವರ ಆಳ್ವಿಕೆ ದಮನ, ದೌರ್ಜನ್ಯಗಳಿಂದ ಕೂಡಿತ್ತು ಹಾಗೂ ಮತಾಂಧತೆಯು ಭಾರತೀಯ ಗತದ ಪ್ರಧಾನ ಲಕ್ಷಣಗಳಲ್ಲೊಂದು ಎಂಬ ಚಿತ್ರಣಗಳನ್ನು ವಸಾಹತುಶಾಹಿ ಬರಹಗಾರರು ಮುಂದಿಟ್ಟದ್ದನ್ನು ಗಮನಿಸಬೇಕು. ಇಂತಹ ನೋಟಕ್ಕೆ ಮೇಲ್ಪಂಕ್ತಿ ಹಾಕಿಕೊಟ್ಟವರು ಇಲಿಯಟ್ ಮತ್ತು ಜಾನ್ ಡಾಸನ್. ಅವರು ಸಂಪಾದಿಸಿದ *'The History of India as told by its own Historians (1866-77)'* ಕೃತಿಯು ಇಂತಹ ಚಿತ್ರಣವನ್ನು ಮುಂದಿಡುತ್ತದೆ. ಇಂತಹ ವಿವರಣೆಯ ಮೂಲಕ ಬ್ರಿಟೀಷರ ಆಳ್ವಿಕೆಯ ಹಿರಿಮೆ ಮತ್ತು ಅದು ಭಾರತೀಯರಿಗೆ ಅನುಕೂಲಕರವಾಗಿರುವುದನ್ನು ತೋರುವುದು ತಮ್ಮ ಉದ್ದೇಶವೆಂದು ಇಲಿಯಟ್ ಅವರು ತಮ್ಮ ಮೂಲ ಮುನ್ನುಡಿಯಲ್ಲಿ ಹೇಳಿದ್ದಾರೆ.

ಸೋಮನಾಥ ದೇವಾಲಯದ ಮೇಲೆ ಮಹಮ್ಮದನು ದಾಳಿ ಮಾಡಿದ್ದು ಹಿಂದೂ–ಮುಸ್ಲಿಂ ಸಂಬಂಧಗಳನ್ನು ನಿರ್ಧರಿಸುವಲ್ಲಿ ನಿರ್ಣಾಯಕ ಪಾತ್ರವಹಿಸಿತು ಎಂಬ ಗ್ರಹಿಕೆಯು ಬ್ರಿಟನ್ನಿನ ಸಂಸತ್ತಿನಲ್ಲಿ ಈ ಬಗೆಗೆ ನಡೆದ ಚರ್ಚೆಗಳಿಂದಾಗಿ ವ್ಯಾಪಕ ಪ್ರಚಾರವನ್ನು ಪಡೆಯಿತು ಎಂದು ರಿಚರ್ಡ್ ಎಚ್. ಡೇವಿಸ್ ಅವರು ತಮ್ಮ *"Somnath Reconstructed: Tracing a Communalised History" (Association for Asian Stuidies*ನ 46ನೇ ವಾರ್ಷಿಕ ಸಭೆಯಲ್ಲಿ ಮಂಡಿಸಿದ ಪ್ರಬಂಧ)ಯಲ್ಲಿ ಗುರುತಿಸುತ್ತಾರೆ. 1943ರಲ್ಲಿ ಮಹಮ್ಮದನು ಹೊತ್ತೊಯ್ದ ಸೋಮನಾಥ ದೇವಾಲಯದ ಬಾಗಿಲುಗಳನ್ನು ಮರಳಿ ಭಾರತಕ್ಕೆ ತರುವುದಕ್ಕೆ ಸಂಬಂಧಿಸಿದ ನಡೆದ ಚರ್ಚೆಯಿದು.4

'ಜಯ ಸೋಮನಾಥ' ದಂತಹ ಚಾರಿತ್ರಿಕ ಕಾದಂಬರಿಗಳ ಮೂಲಕ ಈ ಬಗೆಗೆ ಜನಪ್ರಿಯ ಗ್ರಹಿಕೆಯು ರೂಪುಗೊಳ್ಳಲು ಕಾರಣರಾದವರು ಕೆ. ಎಂ. ಮುನ್ಷಿಯವರು. 1947ರಲ್ಲಿ ಅಧಿಕಾರಕ್ಕೆ ಬಂದ ಸ್ವತಂತ್ರ ಭಾರತ ಸರ್ಕಾರದ ಸಚಿವರಲ್ಲೊಬ್ಬರಾಗಿದ್ದ ಮುನ್ಷಿಯವರು 1951ರಲ್ಲಿ ಸೋಮನಾಥದಲ್ಲಿ ಹೊಸ ದೇವಾಲಯದ ನಿರ್ಮಾಣಕ್ಕೆ ಕಾರಣರಾದರು. ಅವರು ತಮ್ಮ *"Somnath : The Eternal Shrine"* (1951) ಕೃತಿಯಲ್ಲಿ ಮಹಮ್ಮದನಿಂದಾದ ದೇವಾಲಯ ನಾಶವು ಮರೆಯಲಾಗದ ರಾಷ್ಟ್ರೀಯ ದುರಂತವಾಗಿ ಒಂದು ಸಾವಿರ ವರ್ಷಕಾಲ ಹಿಂದೂ ಜನಾಂಗದ ಸಮೂಹ ಪ್ರಜ್ಞೆಯ ಮೇಲೆ ಅಚ್ಚಳಿಯದ ಮುದ್ರೆಯನ್ನೊತ್ತಿತ್ತು ಎಂದು ಬಣ್ಣಿಸುವ ಮೂಲಕ ಪರ್ಷಿಯನ್ ಆಕರಗಳನ್ನಾಧರಿಸಿದ ಏಕರೀತಿಯ ಕಥನವು ಬಲಗೊಳ್ಳಲು ಕಾರಣರಾದರು.

ಇದಕ್ಕಿಂತ ಭಿನ್ನ ನೆಲೆಯ ಅಧ್ಯಯನಗಳು ಗಮನಾರ್ಹವಾಗಿವೆ. ಮಹಮ್ಮದ್ ಹಬೀಬ್ ಅವರ, *"Sultan Mahmud of Gazni, A study (1927)* ಕೃತಿಯು ಮಹಮ್ಮದನ ಚಟುವಟಿಕೆಗಳನ್ನು ಮಧ್ಯ ಮತ್ತು ಪಶ್ಚಿಮ ಏಷ್ಯಾಗಳ ಚಾರಿತ್ರಿಕ ಸಂದರ್ಭಗಳಲ್ಲಿಟ್ಟು ಪರಿಶೀಲಿಸುತ್ತದೆ. ಅಜೀಜ್ ಅಹಮದ್ ಅವರು *"Epic and Counter Epic in Medieval India' (1963, Journal of American Oriental Society, 83, 470-76)* ಎಂಬ ಲೇಖನದಲ್ಲಿ, ಸೋಮನಾಥ ದೇವಾಲಯದ ಮೇಲೆ ಮಹಮ್ಮದನ ದಾಳಿಯು ಸೃಷ್ಟಿಸಿದ ಪರಿಸ್ಥಿತಿಯು ಪರ್ಷಿಯನ್ ಮತ್ತು ಭಾರತೀಯ ಆಕರಗಳಲ್ಲಿ ಆಕ್ರಮಣ ಮತ್ತು ಪ್ರತಿರೋಧದ ನೆಲೆಗಳಲ್ಲಿ ಅಭಿವ್ಯಕ್ತಿಯನ್ನು ಪಡೆಯಿತೆಂದು ವಿವರಿಸಿದ್ದಾರೆ.

ಮಹಮ್ಮದನ ಉತ್ತರ ಭಾರತದ ದಾಳಿಗಳನ್ನು ಪಶ್ಚಿಮ ಮತ್ತು ಮಧ್ಯ ಏಷ್ಯಾಗಳ ವಿಶಾಲ ಚಾರಿತ್ರಿಕ ಸಂದರ್ಭದಲ್ಲಿಟ್ಟು ನೋಡುವ ಹಾಗೂ ಅವನ ದಾಳಿಗಳಿಗೆ ಮತೀಯ ಪಾರಮ್ಯದ ಸ್ಥಾಪನೆಗಿಂತಲೂ ರಾಜಕೀಯ, ಆರ್ಥಿಕ ಮತ್ತು ಮಿಲಿಟರಿ ಅಗತ್ಯಗಳು ಕಾರಣಗಳಾಗಿದ್ದವೆಂದು ವಿಶ್ಲೇಷಿಸುವ ಕೃತಿ ಸಿ. ಇ. ಬಾಸ್‌ವರ್ತ್ ಅವರ *'The later Gaznavids, Splendour and Decay : The Dynasty in Afghanistan and Northern India, 1040-1186 (1977; reprint 1992)* ರೊಮಿಲಾ ಥಾಪರ್ ಅವರು ಸೋಮನಾಥದ ಘಟನೆಯ ಬಗೆಗೆ ದೊರೆಯುವ ವಿವಿಧ ಆಕರಗಳನ್ನು ಮುಖಾಮುಖಿಯಾಗಿಸಿ ವಿಶ್ಲೇಷಿಸುವ ಹಾಗೂ ಚರಿತ್ರೆಯ ಘಟನೆಯನ್ನು ಸಮಾಜದ ನೆನಪನ್ನಾಗಿ ಕಟ್ಟುವ ಕ್ರಿಯೆಯ ಹಿಂದಿನ ಮನೋಗತವನ್ನು ಅನಾವರಣಗೊಳಿಸುವ ಪ್ರಯತ್ನವನ್ನು ಮಾಡುತ್ತಾರೆ.

ಸೋಮನಾಥದ ಘಟನೆಯ ಬಗೆಗೆ ಆಕರಗಳು ನೇರವಾಗಿ ಅಥವಾ ಸೂಚ್ಯವಾಗಿ ಪ್ರತಿನಿಧಿಸುವ ವಿವಿಧ ದೃಷ್ಟಿಕೋನಗಳನ್ನು ಗಮನಿಸುವುದು ಮತ್ತು ಈ ಘಟನೆಯನ್ನು ಹೇಗೆ ಗ್ರಹಿಸಲಾಗಿದೆ ಎಂಬುದಕ್ಕೆ ಸುಳಿವುಗಳನ್ನು ಹುಡುಕುವುದು ತಮ್ಮ ಉದ್ದೇಶ. ಇದರಿಂದ ಘಟನೆಯನ್ನು ಪ್ರಚಲಿತ ಗ್ರಹಿಕೆಗಿಂತ ಭಿನ್ನವಾಗಿ ನೋಡಲು ಸಾಧ್ಯವಾಗುತ್ತದೆ ಎಂಬುದು ಅವರ ನಿಲುವು. ಪ್ರಚಲಿತ ಗ್ರಹಿಕೆಯಂತೆ ದೇವಾಲಯವು ನಿರಂತರವಾಗಿ ನಾಶ ಮತ್ತು ಪುನರ್ನಿರ್ಮಾಣಗೊಳ್ಳುತ್ತಿದ್ದಲ್ಲಿ ವಾಸ್ತವವಾಗಿ ಇದರಲ್ಲಿ ಭಾಗಿಗಳಾದ ಮತ್ತು ಇದರಿಂದ ತೊಂದರೆಗೊಳಗಾದ ಗುಂಪುಗಳು ಯಾವುವು. ಇವುಗಳ ನಡುವಣ ಸಂಬಂಧಗಳೇನು, ಇಂತಹ ಕ್ರಿಯೆ ನಡೆದ ಮೇಲೆ ಅವು ಬದಲಾದವೇ. ಇದು ಮತೀಯ ಕಾರಣಕ್ಕಾಗಿ ನಡೆದಿದ್ದೇ ಅಥವಾ ಇದರ ಹಿಂದೆ ಇತರ ಉದ್ದೇಶಗಳಿದ್ದವೇ ಎಂಬಿತ್ಯಾದಿ ಪ್ರಶ್ನೆಗಳಿಗೆ ಅವರು ಉತ್ತರ ಕಂಡುಕೊಳ್ಳಲೆತ್ನಿಸುತ್ತಾರೆ.

ಥಾಪರ್ ಅವರ ಅಧ್ಯಯನದಲ್ಲಿ ಎದ್ದು ಕಾಣುವ ಅಂಶಗಳೆಂದರೆ ಆಕರಗಳ ಚಾರಿತ್ರಿಕ ಸಂದರ್ಭದ ಶೋಧ. ಸೋಮನಾಥದ ಮೇಲಿನ ಮಹಮ್ಮದನ ದಾಳಿಯ ನಂತರ ರೂಪುಗೊಂಡ ವಿವಿಧ ದೃಷ್ಟಿಕೋನಗಳ ವಿಶ್ಲೇಷಣೆಯ ಮೂಲಕ ಘಟನೆಯೊಂದನ್ನು ಮತ್ತು ಅದು ನಡೆದ ಸನ್ನಿವೇಶವನ್ನು ವಿವಿಧ ಜನವರ್ಗಗಳು ಹೇಗೆ ಸ್ಮರಿಸುತ್ತವೆ ಅಥವಾ ಮರೆಯುತ್ತವೆ ಎಂಬುದರ ಶೋಧ. ಈ ಬಗೆಗೆ ರಚಿತವಾಗಿರುವ ಚರಿತ್ರೆ ಹಾಗೂ ಈ

ಘಟನೆಯ ಸುತ್ತ ಬೆಳೆದ ಕಥನಗಳನ್ನು ಅರಿಯುವ ಮೂಲಕ ಈ ಸನ್ನಿವೇಶದ ಚಾರಿತ್ರಿಕ ಸಂಕೀರ್ಣತೆಯನ್ನು ಅರಿಯುವ ಯತ್ನ. ಇದರೊಂದಿಗೆ ದೇವಾಲಯ ನಾಶ ಮತ್ತು ಇದರ ಬಗೆಗೆ ಸಹಜವಾಗಿ ಅಥವಾ ಉದ್ದೇಶಪೂರ್ವಕವಾಗಿ ಕಟ್ಟಿಕೊಳ್ಳಲಾದ ನೆನಪುಗಳ ಬಗೆಗಿನ ನಿಲುವುಗಳ ಪರಿಶೀಲನೆ.

ಥಾಪರ್ ಅವರು ಈ ಘಟನೆ ನಡೆದಿದ್ದನ್ನು ಪ್ರಶ್ನಿಸುವುದಿಲ್ಲ ಆದರೆ ಈ ಘಟನೆ ಎತ್ತುವ ಅನೇಕ ಪ್ರಶ್ನೆಗಳನ್ನು ಪರಿಶೀಲಿಸುತ್ತಾರೆ. ಅವರ ಪ್ರಕಾರ ಚರಿತ್ರೆಕಾರನು ಘಟನೆಯ ಪ್ರಭಾವವನ್ನು ನಿರ್ಧರಿಸುವುದು ಹೇಗೆ ಮತ್ತು ಸಮಕಾಲೀನ ಹಾಗೂ ನಂತರದ ಕಾಲದ ವಿವಿಧ ಆಕರಗಳಲ್ಲಿ ಈ ಘಟನೆಯು ಹೇಗೆ ಪ್ರತಿನಿಧಿಸಲ್ಪಟ್ಟಿದೆ ಎಂಬುವು ಇವುಗಳಲ್ಲಿ ಅತ್ಯಂತ ಮುಖ್ಯ ಪ್ರಶ್ನೆಗಳು. ಸಮಕಾಲೀನವಲ್ಲದ ಆಕರಗಳು ಘಟನೆಯ ನಂತರದ ಒಂದು ಸಾವಿರ ವರ್ಷಗಳವರೆಗೆ ಹರಡಿದ್ದು ಇವು ಘಟನೆಯ ನಿರೂಪಣೆಗಳು ಬದಲಾಗುವ ಬಗೆಯನ್ನು ಕುರಿತು ಮತ್ತಷ್ಟು ಪ್ರಶ್ನೆಗಳನ್ನೆತ್ತುತ್ತವೆ. ಈ ಘಟನೆಯಿಂದ ಹಿಂದೂ ಮತ್ತು ಮುಸ್ಲಿಂ ಸಮುದಾಯಗಳ ನಡುವೆ ಶತ್ರುತ್ವಕ್ಕೆ ಬೀಜಾಂಕುರವಾಯಿತು ಎಂಬ ಆಧುನಿಕ ಕಾಲದ ಪ್ರತಿಪಾದನೆಯನ್ನು ಮತ್ತು ಈ ಘಟನೆಯ ಬಗೆಗಿನ ಸಾಂಪ್ರದಾಯಿಕ ವಿವರಣೆಯನ್ನು ಸಹ ಥಾಪರ್ ಅವರು ಚರ್ಚಿಸಿದ್ದಾರೆ.

ಸೋಮನಾಥದ ಮೇಲೆ ಮಹಮ್ಮದನ ದಾಳಿಯು ಹಿಂದೂ ಸಮುದಾಯದ ಪಾಲಿಗೆ ಅತ್ಯಂತ ಆಘಾತಕಾರಿಯಾಗಿತ್ತು ಎಂಬ ಪ್ರಚಲಿತ ನೋಟವು ಬ್ರಿಟೀಷರ ಆಳ್ವಿಕೆಯ ಕಾಲದಲ್ಲಿ ಪ್ರಾಮುಖ್ಯತೆಯನ್ನು ಪಡೆದ ವಸಾಹತುಶಾಹಿ ನಿರ್ಮಿತಿ ಎಂದು ಥಾಪರ್ ಅವರು ಪ್ರತಿಪಾದಿಸುತ್ತಾರೆ, ವಸಾಹತುಶಾಹಿ ಚರಿತ್ರೆಕಾರರಿಗೆ ಆಧಾರವಾಗಿದ್ದ ಟರ್ಕೊ-ಪರ್ಷಿಯನ್ ಚರಿತ್ರೆಗಳನ್ನಷ್ಟೇ ಅಲ್ಲದೆ ಸಮಕಾಲೀನ ಸಂಸ್ಕೃತ ಶಾಸನಗಳು, ಜೈನ ಜೀವನ ಚರಿತ್ರೆಗಳು ಮತ್ತು ವೃತ್ತಾಂತಗಳು, ರಜಪೂತ ಆಸ್ಥಾನಗಳ ಪೌರಾಣಿಕ ಕಾವ್ಯಗಳು ಹಾಗೂ ಮೌಖಿಕ ಪರಂಪರೆಯಲ್ಲಿ ಮಹಮ್ಮದನ ಬಗೆಗೆ ಕಂಡುಬರುವ ಜನಪ್ರಿಯ ಗ್ರಹಿಕೆಗಳನ್ನು ಅವರು ಪರಿಶೀಲಿಸಿದ್ದಾರೆ. ಈ ಎಲ್ಲಾ ಆಕರಗಳ ಅಧ್ಯಯನವು ಈ ಘಟನೆಯ ಬಗೆಗಿನ ಒಂದು ವಿವರಣೆಯು ಮಾತ್ರ ಹೇಗೆ ಮೇಲುಗೈ ಪಡೆಯಿತು ಎಂಬುದನ್ನು ಪ್ರಶ್ನಿಸುವುದೇ ಅಲ್ಲದೆ ಸಾಂಪ್ರದಾಯಿಕ ವಿವರಣೆಗೆ ಸವಾಲೆಸೆಯುತ್ತದೆ.

ವಸಾಹತುಶಾಹಿ ಚರಿತ್ರೆಕಾರರು ಭಾರತದ ಇತಿಹಾಸವನ್ನು ಹಿಂದೂ, ಮುಸ್ಲಿಂ, ಬ್ರಿಟಿಷ್ ಯುಗಗಳೆಂದು ವಿಭಜಿಸುವ ಮೂಲಕ ಕೋಮು ದೃಷ್ಟಿಗೆ ಅಸ್ತಿಭಾರವನ್ನು ಹಾಕಿದರು. ಈ ದೃಷ್ಟಿಯು ವಿವಿಧ ಆಕರಗಳ ತುಲನಾತ್ಮಕ ವಿಶ್ಲೇಷಣೆ ಮತ್ತು ಅವುಗಳ ನಡುವಣ ಅಂತರ್ ವೈರುಧ್ಯಗಳು ಹಾಗೂ ಅಂತಃಸಂಬಂಧಗಳ ಪರಿಶೀಲನೆಯು ಸಾಧ್ಯವಾಗದಂತೆ ಮಾಡಿತು. ಸೋಮನಾಥ ಘಟನೆಗೆ ಸಂಬಂಧಿಸಿ ಚರಿತ್ರೆಕಾರರು ಸಮಕಾಲೀನ ಸಂಸ್ಕೃತ ದೇವಾಲಯ ಶಾಸನಗಳಲ್ಲಿ ಹೆಚ್ಚಿನ ಉಲ್ಲೇಖವಿಲ್ಲದಿರುವುದನ್ನು ಶೋಧಿಸದೆ ಕೇವಲ ಪರ್ಷಿಯನ್ ಆಕರಗಳಿಗೆ ಮಾತ್ರ ಪ್ರಾಧಾನ್ಯತೆ ನೀಡಿದರು. ಜೊತೆಗೆ ಪರ್ಷಿಯನ್ ಪಠ್ಯಗಳನ್ನು ಅವುಗಳಲ್ಲಿ ಅಂತರ್ಗತವಾಗಿರುವ ವೈರುಧ್ಯಗಳನ್ನು ಕಡೆಗಣಿಸಿ, ವಿಮರ್ಶೆಯಿಲ್ಲದೇ ಸ್ವೀಕರಿಸಿದರು. ಸೋಮನಾಥದ ದಾಳಿಯನ್ನು ಕುರಿತು ವಿವಿದ ಪಠ್ಯಗಳು ವಿಭಿನ್ನ ಕಾರಣಗಳನ್ನು ಮುಂದಿಡುತ್ತವೆ. ಮತೋತ್ಸಾಹದ ಭಾಗವಾಗಿ ವಿಗ್ರಹಭಂಜನೆಯೇ

ಮುಖ್ಯವಾಗಿತ್ತೆಂದು ಕೆಲವು ಪಠ್ಯಗಳು ಹೇಳಿದರೆ, ಸಂಪತ್ತಿನ ಲೂಟಿಯೇ ಪ್ರಧಾನವಾಗಿತ್ತೆಂದು ಮತ್ತಿತರ ಪಠ್ಯಗಳು ಎತ್ತಿಹಿಡಿಯುತ್ತವೆ.

ಥಾಪರ್ ಅವರು ಆರು ವಿಧದ ಆಕರಗಳನ್ನು ಮುಖಾಮುಖಿಯಾಗಿಸಿ, ಅವುಗಳ ಚಾರಿತ್ರಿಕ ಸಂದರ್ಭದಲ್ಲಿಟ್ಟು ಪರಿಶೀಲಿಸುತ್ತಾರೆ. ಇವು ಸಮಕಾಲೀನ ಸಂದರ್ಭದಿಂದ ಮೊದಲುಗೊಂಡು ಮೊಘಲರು ಹಾಗೂ ವಸಾಹತುಶಾಹಿ ಕಾಲಘಟ್ಟದವರೆಗೆ ಹಬ್ಬಿವೆ. ಈ ಆಕರಗಳು ಮುಂದಿಡುವ ದೃಷ್ಟಿಕೋನಗಳಲ್ಲಿ ಕಂಡುಬರುವ ವಿಭಿನ್ನತೆ, ವೈವಿಧ್ಯ ಹಾಗೂ ಅಂತರ್‌ವೈರುಧ್ಯಗಳು ಹೇಗೆ ಮತ್ತು ಏಕೆ ರೂಪುಗೊಂಡವು ಎಂಬುದನ್ನು ತುಲನಾತ್ಮಕ ವಿಶ್ಲೇಷಣೆಯ ಮೂಲಕ ಅನಾವರಣಗೊಳಿಸುತ್ತಾರೆ.

ಸೋಮನಾಥದ ಬಗೆಗಿನ ಆಕರಗಳಲ್ಲಿ ಟರ್ಕೊ-ಪರ್ಷಿಯನ್ ವೃತ್ತಾಂತಗಳು ಯಜಮಾನಿಕೆಯ ಸ್ಥಾನದಲ್ಲಿವೆ. ಮಹಮ್ಮದ್ ಘಜ್ನಿಯು ಸೋಮನಾಥ ದೇವಾಲಯವನ್ನು ಲೂಟಿ ಮಾಡಿದ ಘಟನೆಯ ಬಗೆಗೆ ಇವುಗಳಲ್ಲಿ ಬಹುವಿಧದ ವಿವರಣೆಗಳಿವೆ. ಇವುಗಳಲ್ಲಿ ಕೆಲವು ಸಮಕಾಲೀನವಾಗಿದ್ದು ಇನ್ನುಳಿದವು ನಂತರದ ಕಾಲಕ್ಕೆ ಸೇರಿವೆ. ಸಮಕಾಲೀನ ಬರಹಗಳಲ್ಲಿ ಅತ್ಯಂತ ಸಂಯಮದ ವಿವರಣೆಯನ್ನು ನೀಡುವ ಆಲ್‌ಬೆರೂನಿ ಸೋಮನಾಥ ದೇವಾಲಯವು ಆ ಭಾಗದಲ್ಲಿ ಅತ್ಯಂತ ಪವಿತ್ರವೆನಿಸಿದ್ದು ಮಹಮ್ಮದನ ದಾಳಿಗಳಿಂದ ಆರ್ಥಿಕ ವಿನಾಶವುಂಟಾಯಿತೆಂದೂ ಮತ್ತು ಈ ದಾಳಿಗಳಿಂದ ತೊಂದರೆಗೊಳಗಾದ ಜನರು ಟರ್ಕರನ್ನು ದ್ವೇಷಿಸುತ್ತಿದ್ದರೆಂದೂ ಬರೆಯುತ್ತಾನೆ. ಆದರೆ, ದಾಳಿ ನಡೆದ ಅಲ್ಪಾವಧಿಯಲ್ಲಿಯೇ ಸೋಮನಾಥದಂತಹ ಸ್ಥಳಗಳು ಆರ್ಥಿಕವಾಗಿ ಚೇತರಿಸಿಕೊಂಡು ಸಹಜ ಸ್ಥಿತಿಗೆ ಮರಳುವ ಸದೃಢತೆಯನ್ನು ತೋರಿದ್ದನ್ನು ಥಾಪರ್ ತೋರುತ್ತಾರೆ. ಜೊತೆಗೆ ವೈಷಮ್ಯದ ಹೊರತಾಗಿಯೂ ಈ ಭಾಗಗಳಲ್ಲಿದ್ದ ಪ್ರತಿಷ್ಠಿತ ಭಾರತೀಯರು ಮಹಮ್ಮದನ ಕಾರ್ಯಗಳಿಗೆ ಬೆಂಬಲ ನೀಡುವ ಇಚ್ಛೆಯನ್ನು ಮತ್ತು ಮಹಮ್ಮದನ ಸೈನ್ಯದಲ್ಲಿ ಕೇವಲ ಬಾಡಿಗೆ ಸೈನಿಕರಾಗಿಯೇ ಅಲ್ಲದೆ ದಂಡನಾಯಕರಾಗಿಯೂ ಹೋರಾಡಲು ಸಿದ್ಧರಿದ್ದರು ಎಂಬುದರ ಮೇಲೆ ಬೆಳಕು ಚೆಲ್ಲುತ್ತಾರೆ. ಈ ಸಂಬಂಧಗಳು ನಾವೆಣಿಸಿದ್ದಕ್ಕಿಂತ ಸಂಕೀರ್ಣವಾಗಿದ್ದುದನ್ನು ಮತ್ತು ಮತಗಳು ಹಾಗೂ ಮತಾಂತರಗಳ ಕಾಳಜಿಗಳಾಚೆಗೆ ವಿಸ್ತರಿಸಿದ್ದನ್ನೂ ಥಾಪರ್ ಗುರುತಿಸುತ್ತಾರೆ.

ಭಾರತದ ಮೇಲಿನ ಮಹಮ್ಮದನ ದಾಳಿಗಳನ್ನು ಅವರ ಮಹತ್ವಾಕಾಂಕ್ಷೆಗಳ ವಿಶಾಲ ತಳಹದಿಯ ಭಾಗವಾಗಿಯೇ ಪರಿಗಣಿಸಬೇಕೆಂಬುದು, ಥಾಪರ್ ಅವರ ಅಭಿಮತ. ಒಂದೆಡೆ ಭಾರತದ ಉಪಖಂಡ ಮತ್ತೊಂದೆಡೆ ಆಫ್ಘಾನಿಸ್ತಾನ ಹಾಗೂ ಮಧ್ಯ ಏಷ್ಯಾಗಳಲ್ಲಿನ ಮಹಮ್ಮದನ ಚಟುವಟಿಕೆಗಳು ಮೇಲ್ನೋಟಕ್ಕೆ ವಿಭಿನ್ನವಾಗಿ ಕಂಡರೂ ಅವು ಬಹುಪಾಲು ಪರಸ್ಪರ ಸಂಬಂಧ ಹೊಂದಿದ್ದವು. ಈ ದಾಳಿಗಳಿಗೆ ಹಲವು ಉದ್ದೇಶಗಳಿದ್ದು, ವಿಗ್ರಹಭಂಜನೆ ನಿಸ್ಸಂಶಯವಾಗಿ ಅವುಗಳಲ್ಲೊಂದು ಪ್ರೇರಣೆಯಾಗಿತ್ತು ಎಂದು ಗುರುತಿಸುವ ಥಾಪರ್ ಅವರು, ಧಾರ್ಮಿಕವಲ್ಲದ ಇತರೆ ಉದ್ದೇಶಗಳೂ ಅಷ್ಟೇ ಮುಖ್ಯವಾದವೆಂದು ಭಾವಿಸುತ್ತಾರೆ. ಮಹಮ್ಮದನ ಸೈನ್ಯಕ್ಕೆ ಬೇಕಾದ ಸೈನಿಕರನ್ನು ಪಡೆಯುವುದು ಹಾಗೂ ರಾಜ್ಯ ಮತ್ತು ಸೈನ್ಯ ನಿರ್ವಹಣೆಗೆ ಅಗತ್ಯವಾದ ಸಂಪತ್ತನ್ನು ಲೂಟಿ ಮಾಡುವುದು ಇವುಗಳಲ್ಲಿ ಮುಖ್ಯವಾದವು. ಮಹಮ್ಮದನು ಅಪಾರ ಸಂಪತ್ತನ್ನು ಹೊಂದಿದ್ದ ಹಿಂದೂ ದೇವಾಲಯಗಳನ್ನು ಮಾತ್ರವೇ

ಅಲ್ಲದೆ ಸುನ್ನಿ ಮುಸ್ಲಿಮರಿಗೆ ಸೇರಿರದ ಮುಸ್ಲಿಂ ಕೇಂದ್ರಗಳ ಮೇಲೂ ದಾಳಿ ಮಾಡಿದ ದಾಖಲೆಗಳನ್ನು ಪರಿಶೀಲಿಸುತ್ತಾರೆ.

ಸೋಮನಾಥದ ಮೇಲೆ ಮಹಮ್ಮದನು ದಾಳಿ ನಡೆಸಿದ್ದು ವಾಸ್ತವ. ಈ ಘಟನೆಯ ಬಗೆಗಿನ ವೈವಿಧ್ಯಮಯ ನಿರೂಪಣೆಗಳು ಸಮುದಾಯಗಳ ಚರಿತ್ರೆ ಮತ್ತು ಅವುಗಳ ಅಸ್ಮಿತೆಗಳೊಂದಿಗೆ ತಳುಕುಹಾಕಿಕೊಂಡಿವೆ ಎಂಬುದು ಥಾಪರ್ ಅವರ ಅಭಿಮತ. ಈ ಘಟನೆಯ ಬಗೆಗಿನ ವೈವಿಧ್ಯಮಯ ನಿರೂಪಣೆಗಳು ಮತ್ತು ಪ್ರತಿನಿಧೀಕರಣಗಳು ಘಟನೆ ನಡೆದಿದ್ದರೆ ನಿರಾಕರಣೆಯಲ್ಲ ಬದಲಿಗೆ ಅವು ಪ್ರತಿನಿಧೀಕರಣದ ವಿಭಿನ್ನ ತಂತ್ರಗಳನ್ನೂ ಮತ್ತು ಅಸ್ಮಿತೆಗಳನ್ನು ರೂಪಿಸುವ ಕಥನ ರಾಜಕಾರಣದ ವಿವಿಧ ರೀತಿಗಳನ್ನು ಪ್ರತಿಫಲಿಸುತ್ತವೆಂದು ಅವರು ಅರ್ಥೈಸುತ್ತಾರೆ. ಈ ಕಥನಗಳನ್ನು ಓದಲು, ಅವುಗಳ ರಾಜಕಾರಣ ಹಾಗೂ ಅಧಿಕಾರ ಮತ್ತು ಧಾರ್ಮಿಕ ಪ್ರಭುತ್ವವನ್ನು ಪ್ರಮಾಣೀಕರಿಸುವಲ್ಲಿ ಈ ರಾಜಕಾರಣದ ಪಾತ್ರವನ್ನು ಅರಿಯುವುದು ಅಗತ್ಯವೆಂಬುದು ಅವರು ತಳೆಯುವ ನಿಲುವು.

ಸಮಕಾಲೀನ ಟರ್ಕೊ-ಪರ್ಷಿಯನ್ ಕಥನಗಳು ಕಾಲ್ಪನಿಕವಾಗಿದ್ದು ದೇವಾಲಯದಲ್ಲಿ ಒಡೆಯಲಾದ ವಿಗ್ರಹ ಯಾವುದು ಎಂಬುದರ ಬಗೆಗೆ ಇಲ್ಲಿ ಅನಿಶ್ಚಿತತೆಯಿದೆ. ಇದು ಇಸ್ಲಾಂ ಪೂರ್ವದ ಅರೇಬಿಯಾದಲ್ಲಿ ಆರಾಧಿಸಲ್ಪಡುತ್ತಿದ್ದ 'ಮನತ್' ಎಂಬ ದೇವತೆಯ ವಿಗ್ರಹವಿರಬಹುದು ಎಂಬ ಕಥೆಗಳನ್ನು ಇವು ಮುಂದಿಡುವುದೇ ಅಲ್ಲದೇ ದೇವಾಲಯದ ಸಂಪತ್ತಿನ ಬಗ್ಗೆ ಉತ್ಪ್ರೇಕ್ಷೆಯ ವರದಿಗಳನ್ನು ನೀಡುತ್ತವೆ.

ಮಹಮ್ಮದನು ಭಾರತದಲ್ಲಿ ಇಸ್ಲಾಮಿನ ಆಳ್ವಿಕೆಯನ್ನು ನೆಲೆಗೊಳಿಸಿದವನೆಂದು ಸ್ಥಾಪಿಸುವ ಕಾಳಜಿಯನ್ನು ಹೊಂದಿರುವ ನಂತರದ ವೃತ್ತಾಂತಗಳನ್ನು ಥಾಪರ್ ಅವರು ಆ ಕಾಲಘಟ್ಟದ ಇಸ್ಲಾಮಿನ ಚರಿತ್ರೆಯ ಸಂದರ್ಭದಲ್ಲಿಟ್ಟು ಪರಿಶೀಲಿಸುತ್ತಾರೆ. ಪರಿಣಾಮವಾಗಿ ಈ ಕಥನಗಳು ಕೇವಲ ಭಾರತದ ಮೇಲೆ ಇಸ್ಲಾಮಿನ ಆರಂಭದ ಆಕ್ರಮಣಗಳನ್ನು ಪ್ರತಿನಿಧಿಸುವುದಕ್ಕೂ ಮಿಗಿಲಾದ ಚಾರಿತ್ರಿಕ ಪ್ರಸ್ತುತತೆಯನ್ನು ಹೊಂದಿವೆಯೆಂದು ಅವರು ವಿವರಿಸುತ್ತಾರೆ. ಸಾಮ್ರಾಜ್ಯ ನಿರ್ಮಾಣದ ಮಹಾತ್ವಾಕಾಂಕ್ಷೆಯಿಂದ ಮಹಮ್ಮದನು ಪಶ್ಚಿಮ ಮತ್ತು ಮಧ್ಯ ಏಷ್ಯಾಗಳ ರಾಜಕಾರಣದಲ್ಲಿ ಭಾಗಿಯಾಗಿದ್ದನು. ಈ ಕಾಲಘಟ್ಟದಲ್ಲಿ ಬಾಗ್ದಾದಿನ ಖಲೀಫ ಹಾಗೂ ಸಾಂಪ್ರದಾಯಿಕ ಇಸ್ಲಾಮಿಗೆ ಅಧಿಕಾರಕ್ಕೆ ಸವಾಲೆಸೆಯುವ ಪ್ರಯತ್ನಗಳಾಗಿದ್ದರಿಂದ ಅರೇಬಿಯಾ ಮತ್ತು ಪರ್ಷಿಯಾಗಳಲ್ಲಿ ಅಸ್ಥಿರತೆಯಿತ್ತು. ಸೋಮನಾಥದ ಮೇಲಿನ ದಾಳಿ ಹಾಗೂ ಸುನ್ನಿಯೇತರ ಮುಸ್ಲಿಂರಾದ ಶಿಯಾ, ಇಸ್ಮಾಯಿಲೀ, ಬೊಹ್ರಾ ಮೊದಲಾದವರ ಮಸೀದಿಗಳ ದಾಳಿ, ಲೂಟಿಗಳಿಂದ ತಾನು ಸಾಂಪ್ರದಾಯಿಕ ಇಸ್ಲಾಮನ್ನು ರಕ್ಷಿಸಿ ಎತ್ತಿಹಿಡಿದಿರುವುದಾಗಿ ಹೇಳಿಕೊಳ್ಳುವ ಮಹಮ್ಮದ್, ಖಲೀಫನನ್ನು ಬೆಂಬಲಿಸುವ ಮೂಲಕ ತನ್ನ ಸ್ಥಾನವನ್ನು ಭದ್ರಪಡಿಸಿಕೊಳ್ಳಲೆತ್ತಿಸುವುದೇ ಅಲ್ಲದೆ ಘಜ್ನಿಯನ್ನು ಪೂರ್ವ ಇಸ್ಲಾಮಿಕ್ ಜಗತ್ತಿನ ಮುಖ್ಯ ಕೇಂದ್ರವನ್ನಾಗಿ ಬೆಳೆಸುವ ಪ್ರಯತ್ನವನ್ನು ಮಾಡುತ್ತಾನೆ. ಟರ್ಕೊ - ಪರ್ಷಿಯನ್ ಕಥನಗಳು ಸೋಮನಾಥನ ಘಟನೆಗೆ ಅತಿಯಾದ ಸಾಂಕೇತಿಕ ಮಹತ್ವನ್ನು ಆರೋಪಿಸಿ ಮಹಮ್ಮದನ ವಿಗ್ರಹಭಂಜನೆಯನ್ನು ವೈಭವೀಕರಿಸಿರುವುದನ್ನು ಗ್ರಹಿಸಬೇಕಿರುವುದು ಈ ಹಿನ್ನೆಲೆಯಲ್ಲಿಯೇ ಎನ್ನುತ್ತಾರೆ ಥಾಪರ್.

ತನ್ನ ಸಾಧನೆಗಳಿಂದಾಗಿ ಮಹಮ್ಮದನು ಖಲೀಫನಿಂದ ವೈಭವದ ಬಿರುದುಗಳನ್ನು ಪಡೆದುಕೊಂಡಿದ್ದು ಇಸ್ಲಾಮಿಕ್ ಜಗತ್ತಿನಲ್ಲಿ ಅವನಿಗೆ ಅಧಿಕೃತ ಸ್ಥಾನವನ್ನು ಕಲ್ಪಿಸಿತು. ಮಹಮ್ಮದನನ್ನು ಮುಸ್ಲಿಮೇತರರ ಮೇಲೆ ದಾಳಿ ನಡೆಸಿ ಸುನ್ನಿಯೆಂದು ಸತತವಾಗಿ ಬಣ್ಣಿಸುವ ಮೂಲಕ ಸ್ಥಾಪಿತ ಇಸ್ಲಾಮಿನ ದೃಷ್ಟಿಯಲ್ಲಿ ಮಾನ್ಯತೆಯನ್ನು ಪಡೆಯಲಾಯಿತೆಂದು ಥಾಪರ್ ವಿಶ್ಲೇಷಿಸುತ್ತಾರೆ.

ಹದಿನಾಲ್ಕನೇ ಶತಮಾನದಲ್ಲಿ ಮಹಮ್ಮದನ ಪ್ರತಿನಿಧೀಕರಣದಲ್ಲಾದ ಪಲ್ಲಟವನ್ನು ಗುರುತಿಸುವ ಥಾಪರ್, ಭಾರತದ ಆಸ್ಥಾನಗಳಲ್ಲಿದ್ದ ಬರಹಗಾರರಾದ ಇಸಾಮಿ ಮತ್ತು ಬರನಿ ಮಹಮ್ಮದನನನ್ನು ಆದರ್ಶ ಮುಸ್ಲಿಂ ನಾಯಕನೆಂದು ಚಿತ್ರಿಸಿರುವುದು ಭಾರತದ ಒಳಗಿನಿಂದ ಬಂದ ದೃಷ್ಟಿಕೋನವೆಂದು ವಿವರಿಸುತ್ತಾರೆ. ಇದನ್ನು ಭಾರತದ ಇಸ್ಲಾಮಿಕ್ ಪ್ರಭುತ್ವ ಮತ್ತು ಸಮಾಜ ಹಾಗೂ ಇದನ್ನು ಸಾಧ್ಯವಾಗಿಸಿದ ಚಾರಿತ್ರಿಕ ಪ್ರಯತ್ನದ ಸಂದರ್ಭದಲ್ಲಿಟ್ಟು ಪರಿಶೀಲಿಸುತ್ತಾರೆ. ಇಸ್ಲಾಮಿಗೆ ಸಂಬಂಧಿಸಿದ ಮುಸ್ಲಿಂ ಆಡಳಿತಗಾರರ ಕರ್ತವ್ಯಗಳನ್ನು ಕುರಿತು ತಿಳಿಹೇಳಲು ತಾನು ಬರೆಯುತ್ತಿರುವುದಾಗಿ ಹೇಳಿಕೊಳ್ಳುವ ಬರನಿ, ತನ್ನ ಕಲ್ಪನೆಯ ಉತ್ತಮ ಮುಸ್ಲಿಂ ಆಡಳಿತಗಾರನ ಗುಣಗಳನ್ನು ಮಹಮ್ಮದನಿಗೆ ಆರೋಪಿಸಿ ಅವನನ್ನು ಮಾದರಿ ಆಡಳಿತಗಾರನೆಂದು ಚಿತ್ರಿಸಿರುವುದನ್ನು ಎತ್ತಿತೋರುತ್ತಾರೆ.

ಹದಿನಾಲ್ಕು ಮತ್ತು ಹದಿನೈದನೇ ಶತಮಾನಗಳಲ್ಲಿ ರಚಿತವಾದ ಕೃತಿಗಳು ದೇವಾಲಯ ನಾಶದ ಹಳೆಯ ಕಥನವನ್ನು ಪುನರುಚ್ಚರಿಸಿದರೂ ಅದರ ಕ್ರಿಯೆ ಮತ್ತು ಉದ್ದೇಶ ಬದಲಾಯಿತು. ವಿಭಿನ್ನ ಕಾಲಘಟ್ಟಗಳಲ್ಲಿ ರಚಿಸಲ್ಪಟ್ಟ ಈ ಕೃತಿಗಳು ವಿವಿಧ ಸುಲ್ತಾನರ ಕಾಲದಲ್ಲಿ ಸೋಮನಾಥದ ಮೇಲೆ ದಾಳಿ ಮಾಡಿ ವಿಗ್ರಹವನ್ನು ಒಡೆದು ದೇವಾಲಯವನ್ನು ಮಸೀದಿಯನ್ನಾಗಿ ಪರಿವರ್ತಿಸಲಾಯಿತೆಂದು ಹೇಳುತ್ತವೆ. ಈ ಮೂಲಕ ತಮ್ಮ ಆಶ್ರಯದಾತರ ಶ್ರೇಷ್ಠತೆ ಮತ್ತು ಮಹತ್ತನ್ನು ಎತ್ತಿತೋರುವುದು ಈ ಕಥನಗಳ ಉದ್ದೇಶವಾಗಿತ್ತೆಂದು ಥಾಪರ್ ಗುರುತಿಸುತ್ತಾರೆ. ಇಂತಹ ಪ್ರತಿಪಾದನೆಗಳೆಡೆಯಲ್ಲಿಯೇ ದೇವಾಲಯದಲ್ಲಿ ಪೂಜೆ, ಆರಾಧನೆ ಮುಂದುವರೆದಿದ್ದು, ಸೋಮನಾಥವು ಪವಿತ್ರ ತೀರ್ಥಸ್ಥಳವಾಗಿದ್ದುದನ್ನು ಹದಿನಾರನೇ ಶತಮಾನದ ಕೊನೆಯಲ್ಲಿ ರಚಿತವಾದ ಸಂಸ್ಕೃತ ಪತ್ರಗಳು ದಾಖಲಿಸುತ್ತವೆ. ದೇವಾಲಯವು ಹಲವು ಬಾರಿ ನಾಶ – ಪುನರ್ ನಿರ್ಮಾಣಕ್ಕೊಳಗಾಯಿತೆಂಬ ಜನಪ್ರಿಯ ನಂಬುಗೆಗಳನ್ನು ಈ ಸ್ಥಳದಲ್ಲಿ ನಡೆಸಲಾದ ಉತ್ಖನನಗಳಾಗಲೀ ಅಥವಾ ಇನ್ನಿತರ ಆಕರಗಳಾಗಲೀ ಬೆಂಬಲಿಸದಿರುವುದನ್ನು ಥಾಪರ್ ತೋರುತ್ತಾರೆ.

ಹದಿನಾರನೇ ಶತಮಾನದ ವೇಳೆಗೆ ದೇವಾಲಯದ ಪೋಷಣೆಯು ಕ್ಷೀಣಿಸಲಾರಂಭಿಸಿತು. ಔರಂಗಜೇಬನ ಆಳ್ವಿಕೆಯ ಕಾಲದಲ್ಲಿ ದೇವಾಲಯದ ನಾಶಕ್ಕೆ ಅವನು ನೀಡಿದ ಆದೇಶವು ಪಾಲನೆಯಾಗದೆ ತಾನು ಮರಣಿಸುವ ಮುನ್ನ ಮತ್ತೊಮ್ಮೆ ಅವನು ಈ ಆದೇಶವನ್ನು ನೀಡಬೇಕಾಯಿತು. ದೇವಾಲಯವನ್ನು ಮಸೀದಿಯನ್ನಾಗಿ ಪರಿವರ್ತಿಸಲು ಗಂಭೀರ ಪ್ರಯತ್ನಗಳು ನಡೆಯದಿರುವುದು ಈ ವೇಳೆಗಾಗಲೇ ಇಲ್ಲಿ ಪೂಜಾ–ಕೈಂಕರ್ಯಗಳು ನಿಂತು ಹೋಗಿರಬಹುದೆಂಬುದರ ಸೂಚನೆಯೆಂದು ಥಾಪರ್ ಭಾವಿಸುತ್ತಾರೆ.

ಆಧುನಿಕ ಚರಿತ್ರಕಾರರು ಗಣನೆಗೆ ತೆಗೆದುಕೊಳ್ಳದ ಸಂಸ್ಕೃತ ಶಾಸನಗಳನ್ನು ಪರಿಶೀಲಿಸುವ ಥಾಪರ್ ಈ ಸಂದರ್ಭದ ಸಂಕೀರ್ಣ ವಾಸ್ತವದ ಮತ್ತೊಂದು ಮಗ್ಗುಲನ್ನು ಅನಾವರಣಗೊಳಿಸುತ್ತಾರೆ. ಸಂಸ್ಕೃತ ಶಾಸನಗಳು ಸ್ಥಳೀಯ ಆಡಳಿತಗಾರರ ಬಗ್ಗೆ ಮಾಹಿತಿ ನೀಡುವುದರೊಂದಿಗೆ ಮಹಮ್ಮದನ ದಾಳಿಯ ನಂತರದ ಅವಧಿಯಲ್ಲಿ ಸೋಮನಾಥ ಮತ್ತು ಸುತ್ತಲ ಪ್ರದೇಶಗಳಲ್ಲಿ ನಡೆಯುತ್ತಿದ್ದ ಚಟುವಟಿಕೆಗಳನ್ನು ಹಾಗೂ ಅಲ್ಲಿನ ಸನ್ನಿವೇಶವನ್ನು ಅರಿಯಲು ನೆರವಾಗುತ್ತವೆ. ಮಹಮ್ಮದನ ದಾಳಿಯ ನಂತರವೂ ಈ ಪ್ರಾಂತ್ಯಗಳಲ್ಲಿ ಗುಜರಾತಿನ ಚಾಳುಕ್ಯ ದೊರೆಗಳ ಅಧಿಕಾರವು ಹೆಚ್ಚು ಧಕ್ಕೆಗೊಳಗಾಗದೆ ಮುಂದುವರಿದಿತ್ತು. ಈ ದಾಳಿಗೆ ಮುಂಚಿನ ಕಾಲದಿಂದಲೂ ಸಂಪದ್ಭರಿತ ಸೋಮನಾಥ ದೇವಾಲಯಕ್ಕೆ ಕೊಡುಗೆ ನೀಡಲು ಬರುವ ಯಾತ್ರಾರ್ಥಿಗಳನ್ನು ದೋಚುತ್ತಿದ್ದ ಸ್ಥಳೀಯ ರಾಜರನ್ನು ಹತ್ತಿಕ್ಕಲು ಚಾಳುಕ್ಯರು ಯತ್ನಿಸಿದ್ದನ್ನು ಶಾಸನಗಳು ದಾಖಲಿಸಿವೆ. ಚಾಳುಕ್ಯರ ಬಗೆಗಿನ ಇತರ ಸ್ಥಳೀಯ ರಾಜರ ವೈಷಮ್ಯಕ್ಕೆ ರಾಜಕೀಯ ಪೈಪೋಟಿಯೊಂದೇ ಅಲ್ಲದೆ ಚಾಳುಕ್ಯರೊಡ್ಡಿದ ಆರ್ಥಿಕ ಶತ್ರುತ್ವದ ನಿವಾರಣೆಯ ಆಕಾಂಕ್ಷೆಯೂ ಕಾರಣವಾಗಿದ್ದನ್ನು ಶಾಸನಗಳು ಉಲ್ಲೇಖಿಸುತ್ತವೆ.

ಮಹಮ್ಮದನ ದಾಳಿಯ ಒಂದು ಶತಮಾನದ ನಂತರ ಸೋಮನಾಥ ದೇವಾಲಯವು ಸುಸ್ಥಿತಿಯಲ್ಲಿತ್ತು, ಸಂಪದ್ಭರಿತವಾಗಿತ್ತು ಮತ್ತು ಅದರ ಅರ್ಚಕರು ಚಾಳುಕ್ಯ ದೊರೆಗಳ ಪೋಷಣೆಯಲ್ಲಿದ್ದರು. ಜೀರ್ಣೋದ್ಧಾರ ಮತ್ತು ದಾನ–ದತ್ತಿ ನೀಡಿಕೆಯು ಸೋಮನಾಥ ದೇವಾಲಯಕ್ಕೆ ಸೀಮಿತವಾಗಿರದೆ ಹಾಳಾಗುತ್ತಿದ್ದ ಇತರೆ ದೇವಾಲಯಗಳಿಗೂ ಸಂಬಂಧಿಸಿತ್ತು. ಇದು ಟರ್ಕೊ–ಪರ್ಷಿಯನ್ ಆಕರಗಳಲ್ಲಿ ಟರ್ಕಿಷ್ ದಂಡನಾಯಕರ ವಿಗ್ರಹಭಂಜನೆಯ ಚಟುವಟಿಕೆಗಳ ವಿವರಣೆಗೆ ಸಂವಾದಿಯಾಗಿ ಕಂಡುಬರುವುದನ್ನು ಥಾಪರ್ ಗಮನಿಸುತ್ತಾರೆ. ಚಾಳುಕ್ಯ ದೊರೆಯ ದೇವಾಲಯ ಜೀರ್ಣೋದ್ಧಾರವು ಆತನ ಸಾರ್ವಭೌಮಾಧಿಕಾರದ ವಿಸ್ತರಣೆಯ ಸಂಕೇತವಾಗಿತ್ತು. ದೇವಾಲಯ ಲೂಟಿ ಮತ್ತು ವಿಗ್ರಹ ನಾಶದ ಮೂಲಕ ರಾಜಕೀಯ ಪ್ರಾಮಾಣ್ಯವನ್ನು ಪಡೆಯಲೆತ್ನಿಸಿದ ಮಹಮ್ಮದನ ಕ್ರಿಯೆಗೆ ಇದು ತದ್ವಿರುದ್ಧವಾಗಿದ್ದು, ದೇವಾಲಯ ನಾಶ ಮತ್ತು ಜೀರ್ಣೋದ್ಧಾರಗಳು ಗತದ ರಾಜಕಾರಣದಲ್ಲಿ ರಾಜಕೀಯ ಪ್ರಾಮಾಣ್ಯ ಹಾಗೂ ಪ್ರತಿಪ್ರಾಮಾಣ್ಯದ ಸಂಕೇತಿಗಳಾಗಿರಬಹುದೆಂದು ಅವರು ಸೂಚಿಸುತ್ತಾರೆ.

ಸಂಸ್ಕೃತ ಶಾಸನಗಳಲ್ಲಿ ಮಹಮ್ಮದನ ದಾಳಿಯ ಬಗೆಗೆ ಉಲ್ಲೇಖವಿಲ್ಲ. ಈ ಮೌನಕ್ಕೆ ಅದು ಮುಜುಗರದ ಸಂಗತಿಯಾಗಿದ್ದುದು ಭಾಗಶಃ ಕಾರಣವಾಗಿದ್ದರೆ. ಓರ್ಮುಜ್‌ನ ಶ್ರೀಮಂತ ವರ್ತಕನೊಬ್ಬನೊಂದಿಗೆ ಸೋಮನಾಥದ ಪ್ರತಿಷ್ಠಿತ ವರ್ಗವು ಹೊಂದಿದ್ದ ಸಂಬಂಧವು ಒಂದು ಕಾರಣವಾಗಿರಬಹುದೆಂದು ಥಾಪರ್ ತರ್ಕಿಸುತ್ತಾರೆ. ಸೋಮನಾಥ ದೇವಾಲಯದ ಒಡೆತನಕ್ಕೆ ಸೇರಿದ ಭೂಮಿಯಲ್ಲಿ ಮಸೀದಿಯೊಂದನ್ನು ನಿರ್ಮಿಸಲು ದೇವಾಲಯದ ಪ್ರಭಾವಿ ಆಡಳಿತ ಸಮಿತಿಯ ಅಂಗೀಕಾರದೊಂದಿಗೆ ಈ ವರ್ತಕನು ಭೂಮಿಯನ್ನು ಪಡೆದಿದ್ದನ್ನು ಮಹಮ್ಮದನ ದಾಳಿಯ ಇನ್ನೂರು ವರ್ಷಗಳ ನಂತರದಲ್ಲಿ ಹಾಕಿಸಲಾದ ಶಾಸನವೊಂದು ದಾಖಲಿಸಿದೆ. ಈ ಶಾಸನವು ಪರ್ಷಿಯಾದ ಶ್ರೀಮಂತ ವರ್ತಕನೊಬ್ಬನ ಅಗತ್ಯಗಳನ್ನು ಪೂರೈಸುವ ಸೋಮನಾಥದ ಸ್ಥಳೀಯರ ನಿಲುವುಗಳನ್ನು ಗ್ರಹಿಸಲು ನೆರವಾಗುವುದೆಂದು ಥಾಪರ್ ಭಾವಿಸುತ್ತಾರೆ.

ಸೋಮನಾಥ ಮತ್ತು ಸುತ್ತ-ಮುತ್ತಲಿನಲ್ಲಿ ದೊರೆತಿರುವ ಸಂಸ್ಕೃತ ಶಾಸನಗಳು ಈ ಕಾಲಘಟ್ಟದ ಸಂಕೀರ್ಣ ವಾಸ್ತವವನ್ನು ಮುಂದಿಡುತ್ತವೆ. ಇಲ್ಲಿನ ಸಂಘರ್ಷಗಳಲ್ಲಿ ಒಬ್ಬ ಕಾರಣಕರ್ತನನ್ನಾಗಲೀ ಅಥವಾ ಒಬ್ಬನೇ ಶತ್ರುವನ್ನಾಗಲೀ ಗುರುತಿಸಲಾಗದು. ಸಾಮಾಜಿಕ ಶ್ರೇಣೀಕರಣದಲ್ಲಿ ವಿವಿಧ ಸ್ತರಗಳಲ್ಲಿದ್ದ ಇಲ್ಲಿನ ಹಲವಾರು ಗುಂಪುಗಳು ಇನ್ನಿತರ ಗುಂಪುಗಳೊಂದಿಗೆ ತಮ್ಮದೇ ಆದ ಸಂಬಂಧವನ್ನು ಹೊಂದಿದ್ದವು. ಅಧಿಕಾರ ಮತ್ತು / ಅಥವಾ ಆರ್ಥಿಕ ಸಂಪನ್ಮೂಲಗಳಿಗಾಗಿ ಈ ಗುಂಪುಗಳ ನಡುವೆ ಪೈಪೋಟಿಯಿದ್ದು, ಇವುಗಳ ನಡುವಿನ ಮೈತ್ರಿ ಮತ್ತು ಶತ್ರುತ್ವಗಳು ಬದಲಾಗುವಂತಹವಾಗಿದ್ದವು. ವಸ್ತುಸ್ಥಿತಿ ಹೀಗಿರುವಾಗ ಈ ಬಗೆಗೆ ನಾವು 'ಮುಸ್ಲಿಮ'ರು ಸೃಷ್ಟಿಸಿದ ಘಟನೆಗೆ 'ಹಿಂದೂ'ಗಳ ಪ್ರತಿಕ್ರಿಯೆ ಎಂಬಂತಹ ಗ್ರಹಿಕೆಗಳನ್ನು ಮುಂದಿಡದೇ ಸಾಮಾಜಿಕ ಗುಂಪುಗಳು ಮತ್ತು ನಿರ್ದಿಷ್ಟ ಸಂದರ್ಭಗಳಿಗೆ ಸಂಬಂಧಿಸಿ ಇಲ್ಲಿ ನಡೆದ ಕ್ರಿಯೆ ಮತ್ತು ಪ್ರತಿಕ್ರಿಯೆಗಳನ್ನು ಪರಿಶೀಲಿಸುವುದು ಸೂಕ್ತವೆಂಬುದು ಥಾಪರ್ ಅವರ ಅಭಿಮತ.

ಜೈನಪಠ್ಯಗಳು ಮುಂದಿಡುವ ಕಥನವು ಟರ್ಕೊ-ಪರ್ಷಿಯನ್ ಆಕರಗಳು ಮತ್ತು ಶಾಸನಗಳಿಗಿಂತ ಭಿನ್ನವಾದುದು. ರಾಜಾಸ್ಥಾನದೊಂದಿಗಾಗಲೀ ಅಥವಾ ರಾಜಪೋಷಣೆಗಾಗಿ ಜೈನರು ಮತ್ತು ಶೈವರ ನಡುವೆ ಇದ್ದ ಪೈಪೋಟಿಯೊಂದಿಗಾಗಲೀ ಸಂಬಂಧವಿರದ ವರ್ತಕ ಸಮುದಾಯದ ಗ್ರಹಿಕೆಗಳನ್ನು ಇವು ಮುಂದಿಡುತ್ತವೆ. ಮಹಮ್ಮದನ ದಾಳಿಯ ಬಗೆಗೆ ಇಲ್ಲಿ ಉಲ್ಲೇಖವಿರದಿದ್ದರೂ ಈ ಕಾಲದ ವಾಸ್ತವದ ಮತ್ತೊಂದು ಮುಖವನ್ನು ಇವು ಚಿತ್ರಿಸುತ್ತವೆ ಎಂದು ಜೈನ ವಿದ್ವಾಂಸರು ಬರೆದ ಜೀವನ ಚರಿತ್ರೆಗಳು ಮತ್ತು ವೃತ್ತಾಂತಗಳನ್ನು ಪರಿಶೀಲಿಸಿ ಥಾಪರ್ ಹೇಳುತ್ತಾರೆ. ಚಾಳುಕ್ಯರು, ಜೈನ ವರ್ತಕ ಮತ್ತು ಸಿಂಧ್‌ನ ಸುನ್ನಿ ಮುಸ್ಲಿಮರ ನಡುವಣ ಸಂಘರ್ಷವನ್ನೂ, ಈ ಸಂದರ್ಭದಲ್ಲಿ ಸ್ಥಳೀಯವಾಗಿ ನೆಲೆನಿಂತಿದ್ದ ಮುಸ್ಲಿಂ ಸಮುದಾಯಗಳು ಜೈನ ವರ್ತಕರನ್ನು ಬೆಂಬಲಿಸಿದ್ದನ್ನು ಇವು ದಾಖಲಿಸಿವೆ. ಇದು ಈ ಕಾಲಘಟ್ಟದ ಸಂಕೀರ್ಣ ರಾಜಕಾರಣವನ್ನು ಸೂಚಿಸುತ್ತದೆ. ಮಿತ್ರತ್ವ ಮತ್ತು ಶತ್ರುತ್ವಗಳು ಹಿಂದೂ ಮತ್ತು ಮುಸ್ಲಿಂ ಎಂಬ ಅಸ್ಮಿತೆಗಳನ್ನು ಆಧರಿಸಿರದೆ, ಪ್ರತಿಯೊಂದು ಪಂಥ ಮತ್ತು ಸಮುದಾಯದ ಅಸ್ಮಿತೆ ಹಾಗೂ ಅಗತ್ಯಗಳನ್ನು ಆಧರಿಸಿದ್ದವು ಎಂದು ಥಾಪರ್ ವಿವರಿಸುತ್ತಾರೆ.

ಸೋಮನಾಥದ ದಾಳಿಯ ನಂತರದ ಕಾಲಾವಧಿಯಲ್ಲಿ ರಚಿತವಾದ ಜೈನವೃತ್ತಾಂತಗಳನ್ನು ರಜಪೂತ ಮಹಾಕಾವ್ಯಗಳು ಮತ್ತಿತರ ಪಠ್ಯಗಳಲ್ಲಿ ಮಹಮ್ಮದನ ದಾಳಿಯ ಪರಿಣಾಮವಾದ ಹಿಂದೂ ಯಾತನೆಯ ಉಲ್ಲೇಖವಾಗಲೀ ಅಥವಾ ಅದರ ಪ್ರತಿಫಲನವಾಗಲೀ ಕಾಣಸಿಗದು. ಶೈವ ಬರಹಗಾರರ ಕೃತಿಗಳಲ್ಲಿ ಸೋಮನಾಥದ ಮೇಲೆ ಮಹಮ್ಮದನ ದಾಳಿಯ ನಂತರ ನಡೆದ ಉತ್ಪಾತವು ದಾಖಲಾಗಿಲ್ಲ. ಜೈನ ವೃತ್ತಾಂತಗಳ ಸಂಖ್ಯೆ ಮತ್ತು ಇವುಗಳು ಕಟ್ಟಿಕೊಡುವ ಗುಜರಾತಿನ ವಿಸ್ತೃತವಾದ ಚರಿತ್ರೆಯ ಹಿನ್ನೆಲೆಯಲ್ಲಿ ಸೋಮನಾಥದ ಘಟನೆಯ ಬಗೆಗೆ ಅತ್ಯಂತ ಕಡಿಮೆ ಉಲ್ಲೇಖಗಳಿರುವುದು, ವಾಸ್ತವದಲ್ಲಿ ಅದು ಟರ್ಕೊ-ಪರ್ಷಿಯನ್ ಆಕರಗಳು ಹೇಳುವಷ್ಟು ಮಹತ್ವದ ಘಟನೆಯಾಗಿತ್ತೆ ಎಂಬ ಪ್ರಶ್ನೆಯನ್ನೆತ್ತುತ್ತದೆ ಎಂದು ಥಾಪರ್ ಭಾವಿಸುತ್ತಾರೆ.

ಸೋಮನಾಥದ ಬಗೆಗಿನ ಪ್ರಚಲಿತ ಗ್ರಹಿಕೆಗಳು ರೂಪುಗೊಂಡಿದ್ದು ವಸಾಹತುಶಾಹಿ ಕಾಲಘಟ್ಟದಲ್ಲಿ. ಥಾಪರ್‌ರವರು ನೆನಪಿನ ನಿರ್ಮಾಣ ಮತ್ತು ಚರಿತ್ರೆ ರಚನೆಯ ನಡುವಣ ಸಂಬಂಧಗಳನ್ನು ವಿಶ್ಲೇಷಿಸುತ್ತಾ ಇದನ್ನು ಯೂರೋಪಿನ ಧರ್ಮಯುದ್ಧಗಳ ಹಿನ್ನೆಲೆ ಹಾಗೂ 18 ಮತ್ತು 19ನೇ ಶತಮಾನಗಳಲ್ಲಿ ಭಾರತದಲ್ಲಿ ಸಾಮ್ರಾಜ್ಯವನ್ನು ಸ್ಥಾಪಿಸಲೆತ್ನಿಸಿದ ವಸಾಹತುಶಾಹಿ ರಾಜಕಾರಣದ ಸಂದರ್ಭದಲ್ಲಿಟ್ಟು ಪರಿಶೀಲಿಸುತ್ತಾರೆ. ಟರ್ಕೊ - ಪರ್ಷಿಯನ್ ಆಕರಗಳನ್ನು ವಾಸ್ತವ ಚರಿತ್ರೆಯೆಂದು ಬಿಂಬಿಸಿ ಇನ್ನಿತರ ಆಕರಗಳನ್ನು ಕಡೆಗಣಿಸುವ ಮೂಲಕ ವಸಾಹತುಶಾಹಿ ನೋಟವು ಈ ಘಟನೆಗೆ ಇನ್ನಿಲ್ಲದ ಪ್ರಾಮುಖ್ಯತೆಯನ್ನು ನೀಡಿತು.

ಮಹಮ್ಮದನ ದಾಳಿಯಿಂದ ಹಿಂದೂ ಮನಸ್ಸಿಗೆ ಆಘಾತವಾಯಿತೆಂದು ಕಟ್ಟಿಕೊಳ್ಳಲಾದ ನೆನಪು ಆಯ್ಕೆಗೆ ಸಂಬಂಧಿಸಿದ್ದು. ಇದು ಹಿಂದೂ ರಾಜರು ಹಿಂದೂ ದೇವಾಲಯಗಳ ಮೇಲೆ ದಾಳಿ ಮಾಡಿದ್ದನ್ನು ಕಡೆಗಣಿಸುತ್ತದೆ. ವಸಾಹತುಶಾಹಿ ನಿಲುವಿಗೆ 1920ರಲ್ಲಿ ಬೆಳೆದ ಕೋಮುವಾದಿ ರಾಜಕಾರಣವು ಪುಷ್ಟಿನೀಡಿತು. ಇದು 19ನೇ ಶತಮಾನದ ಕೊನೆಯಲ್ಲಿ ಬೆಳೆದುಬಂದ ಎಲ್ಲರನ್ನೂ ಒಳಗೊಳ್ಳುವ ವಸಾಹತುಶಾಹಿ ವಿರೋಧಿ ರಾಷ್ಟ್ರೀಯತೆಯನ್ನು ದುರ್ಬಲಗೊಳಿಸಿದ್ದೇ ಅಲ್ಲದೆ 20ನೇ ಶತಮಾನದ ಕೋಮುಸಿದ್ಧಾಂತಗಳು ಮತ್ತು ಮತೀಯ ರಾಷ್ಟ್ರೀಯತೆಯ ಬೆಳವಣಿಗೆಗೆ ದಾರಿ ಮಾಡಿತು. ಇದರಿಂದ ಪರಸ್ಪರ ಪ್ರತ್ಯೇಕವಾಗುಳಿದ ಏಕಾಕೃತಿಯ ಸಮುದಾಯಗಳ ಕಲ್ಪನೆ ರೂಪುಗೊಂಡಿತು.

1951ರಲ್ಲಿ ಕೇಂದ್ರ ಮಂತ್ರಿ ಕೆ. ಎಂ. ಮುನ್ಷಿ ಅವರು ಸೋಮನಾಥ ದೇವಾಲಯವನ್ನು ಪುನರ್‌ನಿರ್ಮಿಸಿದ್ದು, ಪ್ರಾದೇಶಿಕ ಅಥವಾ ನಿರ್ದಿಷ್ಟ ಘಟನೆಯೊಂದಕ್ಕೆ ರಾಷ್ಟ್ರೀಯ ಪ್ರಾಮುಖ್ಯತೆಯನ್ನು ಕೊಟ್ಟಿತು. ಇದು ಇತ್ತೀಚಿನ ವರ್ಷಗಳಲ್ಲಿ ರಾಜ್ಯ ಮತ್ತು ಸಮಾಜದ ಜಾತ್ಯಾತೀತ ಸ್ವರೂಪಕ್ಕೆ ಸವಾಲೆಸದಿರುವ ಕೋಮು ರಾಜಕಾರಣ ಬಲಗೊಳ್ಳಲು, ಬಾಬ್ರಿ ಮಸೀದಿಯ ಧ್ವಂಸಕ್ಕೆ ಕಾರಣವಾದ ರಥಯಾತ್ರೆಗಳ ಮೂಲಕ ಜನರ ಸಂಘಟನೆಗೆ ಮುಂದಾದ 'ಹಿಂದುತ್ವ' ರಾಜಕಾರಣ ಬೆಳೆಯಲು ಹಾಗೂ ಗುಜರಾತಿನಲ್ಲಿ 2002ರಲ್ಲಿ ನಡೆದ ನರಮೇಧದವರೆಗೆ ತನ್ನ ಪ್ರಭಾವವನ್ನು ಬೀರಿದೆ.

ನಮಗೆ, ಕಳೆದ ನೂರು ವರ್ಷಗಳಲ್ಲಿ ಸಮುದಾಯಗಳ ನಡುವಣ ವೈಷಮ್ಯದಿಂದ ಸಂಭವಿಸಿದ ಆಘಾತಗಳ ಅರಿವಿದೆ. ಇವುಗಳ ಮೂಲ ಸಮಕಾಲೀನ ಸಂದರ್ಭದಲ್ಲಿದೆಯೇ ಹೊರತೂ ಇದು ಒಂದು ಸಾವಿರವರ್ಷಗಳ ಹಿಂದೆ ನಡೆದಿದ್ದರ ಪ್ರತಿಫಲನವಲ್ಲ. ವರ್ತಮಾನದ ಅನುಭವಗಳಿಂದ ದಕ್ಕಿದ್ದನ್ನು ಗತಕ್ಕೆ ಆರೋಪಿಸುವುದು ಚಾರಿತ್ರಿಕವಾಗಿ ಅಸಾಧು ಎನಿಸಬಲ್ಲದು. ನಾವು ಗತವನ್ನು ಹೇಗೆ ನಿರೂಪಿಸುತ್ತೇವೆ ಎಂಬುದರ ನಿರಂತರ ಮರು-ಪರಿಶೀಲನೆ ಹಾಗೂ ಮರು-ಮೌಲ್ಯೀಕರಣಗಳು ಭಾರತದ ಗತಗಳ ಬಗೆಗೆ ಹೆಚ್ಚು ಖಚಿತ ಮತ್ತು ಹೆಚ್ಚು ಸೂಕ್ಷ್ಮ ಒಳನೋಟಗಳನ್ನು ನೀಡಬಲ್ಲವು ಎಂದು ಥಾಪರ್ ಹೇಳುತ್ತಾರೆ. ಅವರ ಸೋಮನಾಥ ಕೃತಿಯು ಇದಕ್ಕೆ ಅತ್ಯುತ್ತಮ ನಿದರ್ಶನ.

**ಆಕರ ಸೂಚಿ ಮತ್ತು ಕೊನೆ ಟಿಪ್ಪಣಿಗಳು**


1. *Tony Ponton, A critical Essay of the Impact of Postmodernism in the Historical Profession, MU online historial journal,* Marshall University, reprinted in www.kooriweborg/foley/resources/sotry27.html.

2. Shahid Amin, 1995, *Event, Metaphor, Memory: Chaurichoura 1922-1992. OUP,* Delhi.

3. Romila Thapar, 2004, *Somanatha – The Many voices of a history,* Pengiun books India, New Delhi, Preface.

4. *The United Kingdom House of Commons debate.* 1948, March 1943. The Somnath (Prabhas Pattan) Proclamation, Junagadh.

5. Kabir Altaf, July 15, 2004. *Revisiting Somnath – A Review, South Asian IdeaWeblog,* https://thesouthasianidea.wordpress.com/2014/07/15/revisitingsomnath-areview.

6. Champakalakshmi,April.27,2004,*Perspectives of a History,The Hindu Online Edition,* www.thehindu.com/br/2004/04/27/stories//2004042700121600.htm


■

# ತಾಳಗುಂದದಲ್ಲಿ ದೊರೆತಿರುವ ತುಂಡುತುಕಡಿ (Mutilated Records) ಶಾಸನಗಳ ಪಠ್ಯದ ಪುನರಾವಲೋಕನ ಆಗಬೇಕು

**ಸೀತಾರಾಮ ಜಾಗೀರ್‌ದಾರ್**
ಮನೆ ನಂ.406/ಜಿ.1 'ಕಲ್ಲು'
ಮೇನ್-3, ಕ್ರಾಸ್-7
ಸರಸ್ವತೀಪುರಂ,
ಮೈಸೂರು 570009.

ಇತಿಹಾಸ ದರ್ಪಣ ತ್ರೈಮಾಸಿಕ ಪತ್ರಿಕೆಯ ಪುಸ್ತಕ: 31-32 (ಸಂಯುಕ್ತ ವಿಶೇಷ ಸಂಚಿಕೆ) ಅಕ್ಟೋಬರ್ 2016 - ಮಾರ್ಚ್ 2017ರ ಪುಸ್ತಕದಲ್ಲಿ "ತಾಳಗುಂದದಲ್ಲಿ ದೊರೆತಿರುವ ಉತ್ಖನನದಲ್ಲಿನ ವಸ್ತುಗಳ ಎಂದರೆ 'ಉತ್ಖನನದ ವರದಿ' ಒಂದು ಸಂಕ್ಷಿಪ್ತ ರೂಪದ ಲೇಖನ ಪ್ರಕಟವಾಗಿದೆ. ಲೇಖನವನ್ನು ಬರೆದ ಲೇಖಕರು ಅಭಿನಂದನೀಯರು. ಈ ಲೇಖನದಲ್ಲಿ ಉತ್ಖನನದಲ್ಲಿ ತೋರಿದ ಉತ್ಖನನದ ಪ್ರಾವೀಣ್ಯತೆ ಮೆಚ್ಚುವಂತಹದು; ಆದರೆ ಶಾಸನ ವಿಷಯಕ್ಕೆ ಬಂದಾಗ್ಗ ಆ ಮಾತುಗಳನ್ನು ಹೇಳುವಂತಿಲ್ಲ. ಏಕೆಂದರೆ ಸಂಪೂರ್ಣ ಶಾಸನಗಳನ್ನು ಪ್ರಕಟಿಸಿಲ್ಲ. ಅವರೇ ಸೂಚಿಸಿದ

1. ಬಾದಾಮಿ ಚಾಳುಕ್ಯ ಚಕ್ರವರ್ತಿ ವಿನಯಾದಿತ್ಯನ ಶಾಸನ ದೊರಕಿದೆ. ಪ್ರಕಟವಾಗಿಲ್ಲ (ಇಲ್ಲಿ)

2. ಕಳಚುರಿ ಚಕ್ರವರ್ತಿ ಸಂಕಮನ ಶಾಸನ ದೊರಕದೆ ಇವುಗಳ ಸಂಪೂರ್ಣ ಪಾಠವನ್ನು ಇಲ್ಲಿ ಕೊಡಬೇಕಿತ್ತು. 1

ಪ್ರಸ್ತುತ ಪ್ರಕಟಿಸಿರುವ ಶಾಸನಗಳು

ತುಂಡುತುಕಡಿಗಳು. ಕೇಂದ್ರ ಸರ್ಕಾರದ್ದೇ ಶಾಸನ ಇಲಾಖೆ ಇರುವಾಗ ಆ ವಿಭಾಗದ ಸಹಾಯ ಪಡೆದಾದರೂ ಎಲ್ಲ ಶಾಸನಗಳನ್ನು ಒಂದೆಡೆ ಪ್ರಕಟಿಸಬೇಕಿತ್ತು. ಖಾಸಗಿ ಆಗಿ ಯಾವುದೇ ವಿದ್ವಾಂಸರನ್ನು ವಿಚಾರಿಸಿ ಅವರ ಮೇಲೆ ಗೂಬೆ ಕೂರಿಸುವುದು ಸರಿಯಲ್ಲ. ಎಸ್.ಎಚ್.ರಿತ್ತಿಯವರು2 ತಮಗೆ ಸಂಬಂಧಿಸಿದ ವಿಷಯಕ್ಕೆ ಅವರೇ ಲೇಖಕರನ್ನು ಪ್ರಶ್ನಿಸಬೇಕು. ಆ ಶಾಸನದ ಬಗೆಗೆ ಲೇಖನ ಬರೆಯಬೇಕು  ಬಿಟ್ಟಿದರೆ. ಇನ್ನು ಲಿಪಿ ಸ್ವರೂಪದಿಂದ ಕಾಲ ನಿರ್ಣಯ ಒಮ್ಮೊಮ್ಮೆ 400 ವರ್ಷಗಳವರೆಗೆ ವ್ಯತ್ಯಾಸ ಬರಬಹುದು. ಅರ್ಥಾತ್ ಆ ಕಾಲ ನಿರ್ಣಯ ಖಚಿತವಾದುದಲ್ಲ.

ಲೇಖನದ ಪು.147ರಲ್ಲಿ ಹಲ್ಮಿಡಿ ಶಾಸನಕ್ಕಿಂತ ಪ್ರಾಚೀನ ಅಷ್ಟೇ ಅಲ್ಲ. ಅವರು ಸಂಶೋಧಿಸಿರುವ ಶಾಸನ 'ಕನ್ನಡ ಭಾಷೆಯ ಪ್ರಥಮ ಶಾಸನ' ಎಂದೂ ಹೇಳಿದ್ದಾರೆ. ಇದರ ಕಾಲ ನಿರ್ಣಯಕ್ಕೆ ಕಂಪ್ಯೂಟರ್ ಅಡೋಬ ಫೋಟೋ ಶಾಪ್' ತಂತ್ರಜ್ಞಾನವನ್ನು ಬಳಸಿದುದಾಗಿ ಬರೆದಿದ್ದಾರೆ. ಮಷೀನ್‌ಗಳು ನಾವು ಏನನ್ನು ಲೋಡ್ (*Load*) ಮಾಡುತ್ತೇವೆಯೋ ಅದನ್ನೇ ಡೌನ್‌ಲೋಡ್ ಮಾಡಿದಾಗ ತಿಳಿಸುತ್ತವೆ. ಈ ವಿಧಾನವನ್ನು ಸೃಜಿಸಿದ ವ್ಯಕ್ತಿಗಳು ನೂರು (100) ಶಾಸನಗಳನ್ನೂ ಓದಿ ಪ್ರಕಟಿಸಿಲ್ಲ. ಅರ್ಥಾತ್ ಇವರ ಜ್ಞಾನ ಅನುಭವದ ಅಭಿವ್ಯಕ್ತಿ ಅಲ್ಲ. ಸಹಸ್ರಾರು ಶಾಸನಗಳನ್ನು ಓದಿ ಪ್ರಕಟಿಸಿದವರು ಇದ್ದಾರೆ. ಅಂತಹ ವ್ಯಕ್ತಿಗಳಲ್ಲಿ ಶ್ರೀನಿವಾಸ ರಿತ್ತಿಯವರು ಒಬ್ಬರು. ಅವರು ಶಾಸನ ನೋಡಿ ತಮ್ಮ ಅಭಿಪ್ರಾಯ 5–6ನೇ ಶತಮಾನದ್ದು ಎಂದು ಹೇಳಿದ್ದರೆ ತಪ್ಪೇನಿಲ್ಲ. ಈ ಲೇಖನದ ಲೇಖಕರು "ಅವೈಜ್ಞಾನಿಕ ಅಭಿಪ್ರಾಯ" ಎಂದು ಹೇಳಿರುವುದು ಬಾಲಿಶ. ಏಕೆಂದರೆ ಇವರು ಓದಿದ, ನೀಡಿದ, ಪಠ್ಯ (*Text*) ತಪ್ಪುಗಳಿಂದ ಕೂಡಿದೆ. ಕೆಳಗೆ ಅವರೇ ಕೊಟ್ಟ ಫೋಟೋದಿಂದ ಶುದ್ಧ ಪಾಠವನ್ನು ಕೊಟ್ಟಿರುವೆ. ದಯವಿಟ್ಟು ಪರಿಶೀಲಿಸಿ. ಮತ್ತೆ ಲೇಖಕರ ಪಾಠದ ಜೆರಾಕ್ಸ್ (*Xerox*) ಪ್ರತಿಯು ಮುಂದಿನ ಪುಟದಲ್ಲಿದೆ. ನೋಡಿರಿ.

**ತಾಳಗುಂದ ಸಿಂಹಕಟಾಂಜನದ ಮೇಲೆ ಇರುವ ಶಾಂತಿವರ್ಮನ ಶಾಸನ**

**ತುಂಡು (1)**

**ಪಠ್ಯ:**

1. ...... ನಯವಿನಯಸತ್ವ ಸಂಪನ್ನಃ
2. ......[ರಾಗಾನ್ತಃ] ಜ್ಯೇಷ್ಠೋವರಿಷ್ಠಸ್ಸು[_]ತಃ

* 'ಸುತಃ' ಎಂದು ಓದಿದ್ದಾರೆ. ಅದರ ಇಲ್ಲಿ 'ಸು_ತಃ' ಎಂಬ ಪಾಠವಿದೆ. 'ಸು_' ಎಂಬಲ್ಲಿ 'ಸ' ಅಕ್ಷರ ಛಿದ್ರದಿಂದ ಕೂಡಿದೆ (ಪುಟ–140).



(ಶಾಸನ-1) ಮತ್ತೆ ಕಲ್ಲಿನ ಪಕ್ಕೆಯಾಗಿ ಒಡೆದು ಹೋಗಿದೆ



(ಶಾಸನ-2)

ಪಠ್ಯ:

1. ......[ಪುತ್ರೋ]ಹರಿವರ್ಮ್ಮ...
2. ......ಹಣಾರ್ತ್ಥಂ ಸ್ಥಾನಿಕ* ...
3. ......ವೇದಪಾರಗೇಭ್ಯಃ ಉತ್ತರಮಾ...
4. ......[ಪಾ*]ಲಯತಿ ಸಚಪುಣ್ಯ.....
5. .......[ಮ]ಹಾಪಾತಕಸ.....

---

*'ಸ್ಥಾನೇಕ' ಎಂದು ತಪ್ಪು ಓದಿದ್ದಾರೆ.

**ಕಾಲ–2 ಈ :** ಹರಿವರ್ಮ, ಮೇಲಿನ ಸ್ತರದಲ್ಲಿ ಚೂರಿಟ್ಟಿಗೆ ಮತ್ತು ತ್ರುಟಿತ ಶಿಲೆಗಳ ನೆಲಹಾಸಿನಲ್ಲಿ ಎರಡು ಕದಂಬ ಪೇಟಿಕಾಶಿರ ಲಿಪಿಯನ್ನು ಉಳ್ಳಪಾಟಿ ಕಲ್ಲಿನ ಚೂರುಗಳು ದೊರೆತಿದ್ದು ಪಾಠ ಇಂತಿದೆ (ಚಿತ್ರ–5) (ಪು.140).

**ಒಂದನೆಯ ತುಂಡು:**

1. ನಯ ವಿನಯ ಸತ್ವ ಸಮ್ಪನ್ನಃ
2. [ರಾಗಾ*]ನ್ತಃ ಜ್ಯೇಷ್ಠೋ ವರಿಷ್ಠಸುತಃ

**ಎರಡನೆಯ ತುಂಡು:**

1. .......[ಪು*]ತ್ರಾ ಹರಿವ[ರ್ಮ್ಮ]....
2. .......[ನಿರ್ವ*]ಹಣಾರ್ತ್ಥಂ ಸ್ಥಾನೇಕ ~ ...
3. .......ವೇದಪಾರಗೇಭ್ಯಃ ಉತ್ತರಮಾ.....
4. ........ಲಯತಿಸಚಪುಣ್ಯ.....
5. ........ಹಾಪಾತಕ ಸ....

(1) 'ಜ್ಯೇಷ್ಠ' ಹಾಗೂ 'ವರಿಷ್ಠಸುತಃ' ಎಂಬ ಪಾಠ ಸೃಷ್ಟಿಯು ಲೇಖಕರ ತಪ್ಪು ಓದುವಿಕೆಯಿಂದ ಆಗಿದೆ. ತತ್ಕಾರಣ ಇಲ್ಲಿ ದ್ವಿರುಕ್ತಿ ದೋಷ ಕೂಡ ಆಗಿದೆ. "ಜ್ಯೇಷ್ಠೋ ವರಿಷ್ಠಸ್ಸ್ತುತಃ" ಎಂಬ ನಿಜಪಾಠದಲ್ಲಿ (*Original text*) ಹರಿವರ್ಮ್ಮನು ಜ್ಯೇಷ್ಠಪುತ್ರನಾಗಿದ್ದು ವರಿಷ್ಠರಿಂದ (ಉತ್ತಮಜನರಿಂದ) ಸ್ತುತಿಸಲ್ಪಟ್ಟ ವ್ಯಕ್ತಿ ಎಂಬುದು ಸ್ಪಷ್ಟವಾಗಿ ಆತನ ಹಿರಿಮೆ ಗರಿಮೆಗಳನ್ನು ತಿಳಿಸುತ್ತದೆ. ಮೊದಲನೆಯ ಪಂಕ್ತಿಯಲ್ಲಿ ಬಂದಿರುವ 'ನಯವಿನಯ ಸಮ್ಪನ್ನಃ' ಎಂಬ ಗುಣಗಳನ್ನು ಇಲ್ಲಿ ಜೋಡಿಸಿಕೊಳ್ಳಬೇಕು.

(2) ಎರಡನೆಯ ತುಂಡಿನಲ್ಲಿ ಬಂದಿರುವ ಲೇಖಕರ ಪಾಠ 'ಪುತ್ರಾ' ಇದು ಸ್ತ್ರೀಲಿಂಗವಾಚಿ ಆಗಿದ್ದು ಮಗಳು ಎಂಬ ಅಪಾರ್ತ್ಥಕ್ಕೆ ಎಡೆಕೊಟ್ಟಿದೆ. 'ಪುತ್ರೋ' ಎಂದಾಗ ಮಗನೆಂದು ಸರಿಯಾದ ಅರ್ಥ ನೀಡುತ್ತದೆ. ಹರಿವರ್ಮ್ಮನು ಮಗನೆ ಹೊರತು ಮಗಳು ಅಲ್ಲ.

(3) ಎರಡನೆಯ ತುಂಡಿನ ಎರಡನೆಯ ಪಂಕ್ತಿಯ ಕೊನೆಯ ಶಬ್ದ 'ಸ್ಥಾನೀಕ' ಎಂದು ಲೇಖಕರು ಓದಿದ್ದಾರೆ. ಆದರೆ ಅದು ವಾಸ್ತವದಲ್ಲಿ 'ಸ್ಥಾನಿಕ' ಎಂದಿದ್ದು ದೇವಸ್ಥಾನದ ಮುಖ್ಯ ಅರ್ಚಕರನ್ನು ಸೂಚಿಸುತ್ತದೆ.


– ಈ ಎರಡು ತುಂಡು, ತುಂಡಾಗಿದ್ದರೂ ಲೇಖಕರು ಗುರುತಿಸಿರುವಂತೆ ಒಂದೇ ಶಾಸನದ ಅವಿಭಾಜ್ಯ ಅಂಗಗಳು. ಪೇಟಿಕಾಶಿರದ (*Box-headed*) ಶೈಲಿ – ಅಕ್ಷರಗಳ ವಲಿನ ಒಂದೇ ಆಗಿವೆ. ಶಾಸನವನ್ನು ಕಂಡು ಓದಿದವರು ಪ್ರಶಂಸೆಗೆ ಅರ್ಹರು.

ಚಿತ್ರ–8ರಲ್ಲಿ ಬಂದಿರುವ ಶಾಸನದ ಲಿಪಿ ಇವುಗಳಿಗೆ ಸಮನಾಗಿಲ್ಲ. ಅದು ಹರಿವರ್ಮ್ಮನ ಅನಂತರದ ಕಾಲದ್ದು. ಅದರ ಪಾಠವನ್ನ ಲೇಖಕರು ಸರಿಯಾಗಿ ಕೊಟ್ಟಿಲ್ಲ. ಮುಂದೆ ಫೋಟೋ ಹಾಗೂ ಶುದ್ಧಪಾಠವನ್ನು ಕೊಟ್ಟಿದೆ.

**ಇತಿಹಾಸ ದರ್ಪಣ:** 31–32 (ಸಂ.ವಿ. ಸಂಚಿಕೆ) ಅಕ್ಟೋಬರ್ 2016–ಮಾರ್ಚ್ 2017

**ಚಿತ್ರ–8, ಪು.146: ಶುದ್ಧಪಾಠ:**

1. ಮಹಾ [ದೇವ್ಯಾ]............
2. ಗುಳ್ಗಲು ಮುಲ್ಯ ಕ್ಷೇತ್ರಂ ಚಟ್ಟಾದಿತ್ಯ..............



'ಇತಿಹಾಸ ದರ್ಪಣ'ದ ಲೇಖನದಲ್ಲಿ ಬಂದಿರುವ ಚಿತ್ರ–8
ಚಿತ್ರಕೃಪೆ: ಎಂ.ಜಿ.ಮಂಜುನಾಥ (ಪ್ರಜಾವಾಣಿ ಪತ್ರಿಕೆಯಿಂದ ಡೌನ್ ಲೋಡ್ ಮಾಡಿದೆ)

ಚಿತ್ರ–8ರಲ್ಲಿ ಬಂದಿರುವ ಶಾಸನವೂ ಅವರೇ ಸೂಚಿಸಿರುವಂತೆ ಸಿಂಹಕಟಾಂಜನದ ಕಲ್ಲಿನಲ್ಲಿ ಸಿಂಹದ ತೆರೆದ ಬಾಯಿಯ ಮುಂದೆ ಟಂಕೋತ್ಕೀರ್ಣ ಮಾಡಲಾಗಿದೆ. ದುರ್ದೈವ ಶಾಸನದ ಆರಂಭದ ಭಾಗದಲ್ಲಿ ಕಲ್ಲಿನ ಚೆಕ್ಕೆ ಎದ್ದು ಹೋಗಿದೆ. ದಾನಕೊಟ್ಟ ವ್ಯಕ್ತಿಯ ವಿವರಗಳು ನಾಶವಾಗಿಹೋಗಿವೆ. ಉಳಿದಿರುವ ಭಾಗವು ಇಂತಿದೆ:

**ಶಾಸನ ಪಾಠ**

1. ಮಹಾ [ದೇವ್ಯಾ]........
2. ಗುಳ್ಗಲು ಮುಲ್ಯಕ್ಷೇತ್ರಂ ಚಟ್ಟಾದಿತ್ಯ........

–ಇದೂ ಒಂದು ತುಂಡು ತ್ರುಟಿತ ಶಾಸನ (*Mutilatied Record*) ಆರಂಭದ ಭಾಗ ಚೆಕ್ಕೆ ಎದ್ದುಹೋಗಿದ್ದು ಕಟಾಂಜನಕಲ್ಲು ಒಡೆದೂ ಹೋಗಿದೆ. ಹೀಗಾಗಿ ಶಾಸನದ ಪೂರ್ವಭಾಗದಲ್ಲಿನ ವಿವರಗಳು ನಾಶವಾಗಿ ಹೋಗಿದ್ದರೂ ಅರ್ಥಸ್ಪಷ್ಟವಿದೆ. ಮಹಾದೇವಿ (ರಾಜನ ಹಿರಿಯರಾಣಿ) ಒಬ್ಬಳು ಆದಿತ್ಯ ಎಂಬ ಛಾತ್ರನಿಗೆ ಗುಳ್ಗುಲು (ಗುಲಿಕಾ ನಾಣ್ಯ) ಬೆಲೆಯ ಭೂಮಿಯನ್ನು ದಾನವಾಗಿ ಇತ್ತಿದ್ದಾಳೆ. 'ಳ' ಅಕ್ಷರ ಕೆಲವೊಮ್ಮೆ 'ದ' ಅಕ್ಷರದಂತೆ ಇರುತ್ತಿತ್ತು (ನೋಡಿ: ಎ.ವಿ.ಎನ್., ದೇವರಕೋಡಾರೆಡ್ಡಿ ಮತ್ತು ಎಂ.ಜಿ.ಮಂಜುನಾಥ ಹಾಗೂ ಸಿ.ಶಿವರಾಮಮೂರ್ತಿ ಮೊದಲಾದವರ ಲಿಪಿಶಾಸ್ತ್ರ ಕೃತಿಗಳು. 'ಗುಲಿಕಾ+ಗುಲಿಕಾ4> ಗುಳಿಕಾ + ಗುಳಿಕಾ = ಗುಳ್ಗುಲು ಆಗಿದೆ. ಲೇಖಕರ ಲೇಖನದಲ್ಲಿ ಈ ಶಾಸನದ ಪಾಠ ಹೀಗಿದೆ.

1. ಮ[ಹಾದೇ*]..........

2. ಗುದ್ಗುಲು ಮೂಲ್ಯಕ್ಷೇತ್ರ ಚನ್ದ್ರಾದಿತ್ಯ (ಇತಿಹಾಸ ದರ್ಪಣ, ಪು.154).

– ಈ ಪಾಠ ಹಾಗೂ ಇಲ್ಲಿನ ವಿವರಣೆ ಏನೆಲ್ಲವೂ ತಪ್ಪು ಎಂದು ಶಾಸನ ಪರಿಶೀಲಿಸಿದರೆ ಸುಸ್ಪಷ್ಟ. ಅಗುಳಿನಲ್ಲಿ ಅಳೆಯುವದಾದರೆ ಈ ಲೇಖಕರಿಗೆ ಶಾಸನಗಳನ್ನು ಸರಿಯಾಗಿ ಓದಲು ಬರದು. ಈ ಲೇಖನದಲ್ಲಿ ಇರುವ ಯಾವ ಶಾಸನವೂ ಹಲ್ಮಿಡಿಯಲ್ಲಿರುವ ಕಾಕುಸ್ಥವರ್ಮ್ಮನ ಶಾಸನಕ್ಕಿಂತ ಪ್ರಾಚೀನವಲ್ಲ.

---

**ಆಕರ ಸೂಚಿ ಮತ್ತು ಟಿಪ್ಪಣಿಗಳು**

1. ಇತಿಹಾಸ ದರ್ಪಣ, ಪುಸ್ತಕ: 31–32, ಪು.142.

2. ಅದೇ. ಪು.147.

3. (1) ಭಾರತೀಯ ಪ್ರಾಚೀನ ಲಿಪಿಮಾಲಾ (ಲೇ. ದಿ.ಗೌರಿಶಂಕರ ಓಝಾ) ಮುನ್ನುಡಿ.

   (2) The [F*]utility And [F] Utility of Paleography In Dating undeted inscriptions (Au. Dr. K.V. Ramesh) – *Studies In Indian Epigraphy*. Volume: 3, Pp.156-162.

4. ಗುಲಿಕಾ ಇದು ವರಾಹಗದ್ಯಾಣದಂತಹ ಚಿನ್ನದ ನಾಣ್ಯ. *Cf.* ಡಿ.ಸಿ.ಸರ್ಕಾರ: **ಇಂಡಿಯನ್ ಎಪಿಗ್ರಾಫಿಕಲ್ ಗ್ಲಾಸರಿ.**

■

[ಇತಿಹಾಸ ದರ್ಪಣ ಪುಸ್ತಕ: 31–32ರಲ್ಲಿ ಪ್ರಕಟವಾಗಿರುವ 'ಗವಿ/ಕಲ್ಲಾಸರೆಯಲ್ಲಿ ಪ್ರಾಚೀನ ಕರ್ನಾಟಕ ಸಂಸ್ಕೃತಿ' ಲೇಖನದ ಟಿಪ್ಪಣಿ ಮತ್ತು ಆಕರ ಸೂಚಿಯು ಕಣ್ತಪ್ಪಿನಿಂದ ತಪ್ಪಾಗಿ ಪ್ರಕಟವಾಗಿರುತ್ತವೆ. ಆಗಿರುವ ಪ್ರಮಾಧಕ್ಕೆ ವಿಷಾಧಿಸುತ್ತಾ, ಸದರಿ ಲೇಖನದ ಟಿಪ್ಪಣಿಗಳನ್ನು ಕೆಳಕಂಡಂತೆ ಓದಿಕೊಳ್ಳಬೇಕೆಂದು ಮಾನ್ಯ ಓದುಗರಲ್ಲಿ ವಿನಂತಿಸುತ್ತೇವೆ – ಸಂ.]

---

**ಆಕರ ಸೂಚಿ ಮತ್ತು ಕೊನೆ ಟಿಪ್ಪಣಿಗಳು**

1. Henwood, W.G. 1856. *Edinburgh New Philosophical Journal 204-205.*

2. Wakankar, V.S. 1973. *Rock Paintings of India.* Ph.D. Dissertation. Pune: Deccan College, Post Graduate and Research Institute.

3. Wakankar, V.S. 1975. 'Bhimbetka - The Prehistoric Paradise', *Prachya Pratibha 3(2): 7-29.*

4. Fawcett, F. 1892. 'Prehistoric Rock Paintings near Bellary', South India, *Asiatic Quarterly Review* (New Series) III: 147-157.

5. Munn. L. 1934. 'Prehistoric and Protohistoric Finds', *The Journal Hyderabad Geological Society* I (2): 121-135.

6. Munn,L. 1935. 'Prehistoric and Protohistoric Finds of the Raichur and Shorapur Districts of H. E. H, the Nizam's State', *Man in India* XV(4): 225-250.

7. Allchin, F.R. 1960. *Piklihal Excavation.* Hyderabad: Andhra Pradesh Government Publications.

8. Allchin, F.R. and B. Allchin 1994-95. 'Rock art of North Karnataka', *Bulletin of the Deccan College,* Post-Graduate and Research Institute 54-55: 313-39.

9. ಸುಂದರ ಅ., 1994, **ಕರ್ನಾಟಕ ಪ್ರಾಗಿತಿಹಾಸ ಕಾಲದ ಕಲೆ**, ಕರ್ನಾಟಕ ಲಲಿತ ಕಲಾ ಅಕಾಡೆಮಿ, ಬೆಂಗಳೂರು.

10. ಸುಂದರ ಅ. (ಸಂ), 1997, **ಕರ್ನಾಟಕ ಚರಿತ್ರೆ ಸಂ. 1.**, ಕನ್ನಡ ವಿಶ್ವವಿದ್ಯಾಲಯ. ಹಂಪಿ, ವಿದ್ಯಾರಣ್ಯ 583, 276.

11. ಸುಂದರ ಅ., 1974, "**ಕರ್ನಾಟಕದಲ್ಲಿಯ ಪ್ರಾಗೈತಿಹಾಸಿಕ ವರ್ಣಚಿತ್ರಗಳು**", ಸಪಚಂಚಯು. ಶ್ರೀ ಸದಾಶಿವ ಒಡೆಯರ 50 ನೇ ಹುಟ್ಟುಹಬ್ಬ ಉತ್ಸವ ಸಮಿತಿ, ಚೌಡಯ್ಯ ದಾನಾಪುರ.

12. ಸುಂದರ ಅ., 1987, **“ಪ್ರಾಗೈತಿಹಾಸಿಕ ಗವಿವರ್ಣ ಮತ್ತು ಬಯಲು ಬಂಡೆ ಚಿತ್ರಗಳು, ಕರ್ಣಾಟಕ”**, *ಹರತಿಸಿರಿ, ವಾಲ್ಮೀಕಿ ಸಾಹಿತ್ಯ ಸಂಪದ, ಹರ್ತಿಕೋಟೆ.*

13. ಸುಂದರ ಅ. 1993, **“ವಿಶಿಷ್ಟ ವರ್ಣಚಿತ್ರ ಕಲೆಯ ಆಗರ ಬಾದಾಮಿ”**, *ಚಿತ್ರಕಲಾ ಪ್ರಪಂಚ*, ಲಲಿತಕಲಾ ಅಕಾಡೆಮಿ, ಬೆಂಗಳೂರು.

14. ಸುಂದರ ಅ. 1995, **“ಶಿವಮೊಗ್ಗ ನಗರ ಪ್ರದೇಶದಲ್ಲಿ ಮಹತ್ವದ ಪ್ರಾಗಿತಿಹಾಸದ ಸಾಂಸ್ಕೃತಿಕ ಕುರುಹುಗಳು”**, *ವಜ್ರಪಥ.*

15. Sundara, A. 2014. Some Insights into Rock Art Research in Karnataka, *Purakala* 24: 27-42.

16. ಶರಣಬಸಪ್ಪ ಕೋಲ್ಕಾರ, 2010, **“ಶಿಲಾಯುಗದ ಗವಿಚಿತ್ರಗಳು”**, ಬಸವ ಪ್ರಕಾಶನ ಮತ್ತು ಪುಸ್ತಕ ವ್ಯಾಪಾರಿಗಳು, ಗುಲಬರ್ಗಾ.

17. Mohana, R. 2013. 'Newly Discovered Rock Art Sites in North Karnataka, India.' In: Anura Manatunga and Chamindi Dilkushi Senaratne Wettewe (Eds.) *Asian Art, Culture and Heritage.* Pp. 191-198. International Association for Asian Heritage, Centre for Asian Studies, University of Kelaniya, Sri Lanka.

18. ಮೋಹನ ಆರ್. 2016. **‘ಹಿರೇಗುಡ್ಡ: ಮನುಕುಲ ಪೂರ್ವ ಸಂಸ್ಕೃತಿಯ ಪ್ರತಿಬಿಂಬಕ’**. *ಇತಿಹಾಸ ದರ್ಪಣ* ಸಂ. 29 (ಏಪ್ರಿಲ್–ಜೂನ್): 11–18.

19. ಮೋಹನ ಆರ್. 2016. **‘ಮಲಪ್ರಭಾ ನದಿ ತೀರದ ಪ್ರಾಗಿತಿಹಾಸ ವರ್ಣಚಿತ್ರ ನೆಲೆಯ (ಕೆಂದೂರು) ಅನ್ವೇಷಣೆ ಮತ್ತು ಅದರ ಮಹತ್ವ’**. *ಇತಿಹಾಸ ದರ್ಶನ* 31: 15–18.

20. ಮೋಹನ ಆರ್. 2016. **‘ಕನ್ನೇರ್‌ಗವಿ ಗುಡ್ಡ: ಶಿಲಾಯುಗ ಚಿತ್ರಕಲೆಯ ನೆಲೆ’**. *ಇತಿಹಾಸ ದರ್ಪಣ* ಸಂ. 28 (ಜನವರಿ–ಮಾರ್ಚ್): 9–20.

21. ಮೋಹನ ಆರ್. 2015. **‘ಹಂಸನೂರು : ಪ್ರಾಗೈತಿಹಾಸಿಕ ವರ್ಣಚಿತ್ರಕಲೆನೆಲೆಯ ಅನ್ವೇಷಣೆ’**. *ಇತಿಹಾಸ ದರ್ಪಣ* ಸಂ. 24(ಜನವರಿ–ಮಾರ್ಚ್): 11–16.

22. Mohana, R. 2015. *'Reading Rock Art: Interreting Temporal and Geographic Variability in the Lower Malaprabha Basin, Karnataka.* Ph.D thesis submitted to the Deccan College, Post Graduate and Research Institute, Pune.

23. Mohana, R.2014. 'Cupules in Karnataka: Their Significance', *Bulletin of the Deccan College*, Post Graduate and Research Institute 74: 1724.

24. Mohana, R.2014. 'Further Discovery of Rock-at at Tatakoti (Badami), North Karnataka'. In: Ajit Kumar (ed.) *Rock Art: Recent Researches*

*and New Perspectives (Festschrift to Yashodhar Mathpal)*, pp. 416-425. Delhi: New Bharatiya Book Corporation.

25. Mohana, R. 2017. 'A Multidisciplinary Approach to the Study of Rock Art: A Case Study of Karnataka', In: B.L. Malla and Dwipen Benzbaruah (Eds.) *Cultural Ecology: Prehistory and Ethno-archaeological context of Indian Rock Art* Pp. 143-158, Published by Indira Gandhi National Center for the Arts, New Delhi and Aryan Books International.

26. ಶ್ರೀಶೈಲ ಆರಾಧ್ಯ ಎಚ್., 1987, **"ಚಿತ್ರದುರ್ಗ ಪರಿಸರದ ಪ್ರಾಗೈತಿಹಾಸ ಚಿತ್ರಗಳು"**, ಹರತಿಸಿರಿ, ವಾಲ್ಮೀಕಿ ಸಾಹಿತ್ಯ ಸಂಪದ, ಹರ್ತಿಕೋಟೆ.

27. ಲಕ್ಷ್ಮಣ್ ತೆಲಗಾವಿ, 2004. **'ಬೆಳಗಟ್ಟ ಗ್ರಾಮ ಪರಿಸರದ ಎದ್ದುಲುಬಂಡೆ ಬಯಲುಬಂಡೆ ರೇಖಾಕೃತಿಗಳು'**. *ಇತಿಹಾಸ ದರ್ಶನ* 19: 1–5.

28. ಲಕ್ಷ್ಮಣ್ ತೆಲಗಾವಿ, 2006. **ಚಿತ್ರದುರ್ಗ ಪರಿಸರದ ಕುಳಿಭರಿತ ಭೀಮನಗುಂಡು: ಪರಾತಾತ್ವಿಕ ಅಧ್ಯಯನ**. *ಇತಿಹಾಸ ದರ್ಶನ* 19: 1–14.

29. ತಿಪ್ಪೇಸ್ವಾಮಿ, ಎಸ್. 2006. **'ಸಂತೇಗುಡ್ಡದ ಗುಹಾ ವರ್ಣಚಿತ್ರಗಳು ಹಾಗೂ ಪ್ರಾಚ್ಯಾವಶೇಷಗಳು'**. *ಇತಿಹಾಸ ದರ್ಶನ* 21: 24–27.

30. ತಿಪ್ಪೇಸ್ವಾಮಿ, ಎಸ್. 2007. **'ಚಿತ್ರದುರ್ಗ ತಾಲ್ಲೂಕಿನ ಮತ್ತಷ್ಟು ಪ್ರಾಗೈತಿಹಾಸಿಕ ನೆಲೆಗಳು'**. *ಇತಿಹಾಸ ದರ್ಶನ* 22: 13–16.

31. Mohana, R.2016. Discovey of Cupule Site at Dharmapura, District Chitradurga, CentralKarnataka, *Arnava* IV(2): 11-19.

32. Mohana, R and A. Sundara (In Press.). *Petroglyphs in Chitradurga District, Karnataka, Peninsular India.*

33. Shetty Vasanth B. 1983. 'Prehistoric Rock Bruising from Dakshina Kannada': **QJMS.** Vol. LXXIV, NO.1 Jan-March, 15-18. and Murugeshi, T.2014. 'A Note on the Rock Art in Coastal Karnataka. In: Ajit Kumar (ed.) *Rock Art: Recent Researches and New Perspectives (Festschrift to Yashodhar Mathpal)*, pp. 425-432. Delhi: New Bharatiya Book .

34. Mohana, R and Hemant Dalavi. 2015. 'Geographical Distribution of Rock Art Sites in Karnataka'. Poster presented in National Conference on "Ancient Science and Technology: Retrospection and Aspirations (ASTRA-2015)" Organised by Deccan Education Society's Fergusson College, Pune on 10th-11th January.

■

## ಚಂದಾದಾರರಾಗ ಬಯಸುವಿರಾ?

'ಇತಿಹಾಸ ದರ್ಪಣ'ದ ಚಂದಾದಾರರಾಗ ಬಯಸುವವರು ನಿಮ್ಮ ಆಯ್ಕೆಯ ಚಂದಾ ಹಣವನ್ನು ಡಿ.ಡಿ /ಚೆಕ್/ ಎಂ.ಓ ಮೂಲಕ ಕೆಳಕಂಡ ವಿಳಾಸಕ್ಕೆ ಕಳುಹಿಸಿ ಕೊಡಬಹುದು.

– ಡಿ.ಡಿ ಕಳುಹಿಸಿಕೊಡುವವರು "EDITOR, ITIHASA DARPANA" ಹೆಸರಿಗೆ ಬೆಂಗಳೂರಿನಲ್ಲಿ ಸಂದಾಯವಾಗುವಂತೆ ಡಿ.ಡಿ.ಯನ್ನು ತೆಗೆಸಿ, ಅದನ್ನು ನಿಮ್ಮ ವಿಳಾಸವುಳ್ಳ ಪತ್ರದೊಂದಿಗೆ ನಮಗೆ ಕಳುಹಿಸಿ ಕೊಡಿ.

– **ಚೆಕ್** ಕಳುಹಿಸಿಕೊಡುವವರು ಚೆಕ್ಕನ್ನು "EDITOR, ITIHASA DARPANA" ಹೆಸರಿಗೆ ಬರೆದು, ಚೆಕ್ಕಿನ ಮೇಲ್ಭಾಗದ ಎಡಮೂಲೆಯಲ್ಲಿ **"ಅಕೌಂಟ್ ಪೇ"** ಎಂದು ನಮೂದಿಸಿ, ನಿಮ್ಮ ವಿಳಾಸದ ಪತ್ರದೊಂದಿಗೆ ಕಳುಹಿಸಿ. **ಬೆಂಗಳೂರಿನ ಹೊರಗಡೆಯ ಚೆಕ್ಕುಗಳಾಗಿದ್ದಲ್ಲಿ ಬ್ಯಾಂಕಿನ ಸೇವಾಶುಲ್ಕ ೩೦/– ರೂ.ಗಳನ್ನು** ಚಂದಾ ಹಣದ ಮೊತ್ತದಲ್ಲಿ ಸೇರಿಸಿ ಕಳುಹಿಸಿ ಕೊಡಬೇಕು.

– ಎಂ.ಓ ಮಾಡುವವರು ನಿಮ್ಮ ವಿಳಾಸವನ್ನು ಎಂ.ಓ ಅರ್ಜಿಯ ಮೇಲ್ಭಾಗದಲ್ಲಿರುವ ಸಂದೇಶ ಎಂಬ ಸ್ಥಳದಲ್ಲಿ ತಪ್ಪದೇ ನಿಮ್ಮ ವಿಳಾಸ ಬರೆಯಿರಿ. ಇ.ಎಂ.ಓ ಮಾಡಿದ್ದಲ್ಲಿ ಎರಡುದಿನಗಳ ನಂತರ ಕರೆಮಾಡಿ ನಿಮ್ಮ ವಿಳಾಸವನ್ನು ನಮಗೆ ತಿಳಿಸಿ.

– ಇಲ್ಲವಾದಲ್ಲಿ ಬೆಂಗಳೂರಿನ ಚಾಮರಾಜಪೇಟೆಯ ಅಪೆಕ್ಸ್ ಬ್ಯಾಂಕಿನ ಪ್ರಧಾನ ಶಾಖೆಯಲ್ಲಿರುವ "EDITOR, ITIHASA DARPANA" ಹೆಸರಿನ ಚಾಲ್ತಿಖಾತೆ **ಸಂ: 101 882 ಕ್ಕೆ** ಚಂದಾಹಣವನ್ನು ನಿಮ್ಮ ಹೆಸರಿನಲ್ಲಿ ಜಮಾ ಮಾಡಿ, ಸ್ವೀಕೃತಿಯ ನಕಲನ್ನು, ನಿಮ್ಮ ವಿಳಾಸದ ಪತ್ರದೊಂದಿಗೆ ನಮಗೆ ಕಳುಹಿಸಿಕೊಡಿ.

### ಚಂದಾ ವಿವರ

**ವಾರ್ಷಿಕ ಚಂದಾ** (ಅಂಚೆವೆಚ್ಚ ಸೇರಿ) – ೩೦೦/– ರೂ.ಗಳು. (**ಶಾಲಾಕಾಲೇಜು ಮತ್ತು ಸಂಘ ಸಂಸ್ಥೆಗಳಿಗೆ – ೫೦೦/–ರೂ.ಗಳು**)

**ದ್ವೈವಾರ್ಷಿಕ ಚಂದಾ** (ಅಂಚೆವೆಚ್ಚ ಸೇರಿ) – ೫೦೦/– ರೂ.ಗಳು. (**ಶಾಲಾಕಾಲೇಜು ಮತ್ತು ಸಂಘ ಸಂಸ್ಥೆಗಳಿಗೆ – ೯೦೦/–ರೂ.ಗಳು**).

**ಚಂದಾ ಕಳುಹಿಸಿಕೊಡಬೇಕಾದ ವಿಳಾಸ:**

**ಸಂಪಾದಕರು, 'ಇತಿಹಾಸ ದರ್ಪಣ',**
# ೩೩ ಎ, ಐ.ಟಿ.ಐ ಕಾಲೇಜು ಹತ್ತಿರ,
ಕೆಂಪೇಗೌಡನಗರ, ವಿಶ್ವನೀಡಂ – ಅಂಚೆ,
ಬೆಂಗಳೂರು–೫೬೦೦೯೧.
ಮೊ– ೭೮೨೯೪೦೪೦೬೩.

**The Editor, 'Itihasa Darpana'**
# 33 A, Near I.T.I College,
Kempegowda Nagara,
Vishwaneedam-Post,
Bengaluru- 560091.
Mob- 7829404063

**ITIHASA DARPANA** (Quarterly) : A Peer Reviewed Journal of Historical Research in Kannada, Book : 33-34, April 2017 - September 2017, Pages : 184, Edited by : Rajesh H.G.
# 33/A, Near I.T.I. College, Kempegowda Nagara, Vishwaneedam Post, Bengaluru-560 091.
Mob.: 7829404063. Email: itihasadarpana@gmail.com



ಗುಡೇಕೋಟೆ ಪರಿಸರದ ನವಶೋಧಿತ ಪ್ರಾಗಿತಿಹಾಸ ಕಾಲದ ವರ್ಣಚಿತ್ರಗಳು

(ಚಿತ್ರ: ಮಂಜನಾಯ್ಕ ಆರ್.)

ISSN 232-13590

ಮುಖಪುಟ ಚಿತ್ರ: ಮಾಡೇಶ್ವರ ಗ್ರಾಮದಲ್ಲಿ ದೊರೆತ ಹುಲುಕುಡಿ ನಾಡಪ್ರಭು ಬಾಯಿರಪ್ಪ ನಾಯಕನ ಶಾಸನ-(ಚಿತ್ರ: ಎಸ್.ವೆಂಕಟೇಶ್)

ಬೆಲೆ: ₹160/-